ಹಾವೇರಿ ಜಿಲ್ಲಾ ಕಾಳಾಮುಖ ಪರಂಪರೆ ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಕಮ್ಮಾರ ಚಾಮರಾಜ ಶೇಖಪ್ಪ

ಮಾರ್ಗದರ್ಶಕರು

ಡಾ. ಕಲವೀರ ಮನ್ವಾಚಾರ

ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೭

ಹಾವೇರಿ ಜಿಲ್ಲಾ ಕಾಳಾಮುಖ ಪರಂಪರೆ ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಕಮ್ಮಾರ ಚಾಮರಾಜ ಶೇಷಪ್ಪ

ಮಾರ್ಗದರ್ಶಕರು
ಡಾ. ಕಲವೀರ ಮನ್ವಾಚಾರ
ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬
೨೦೧೭

ಮಾರ್ಗದರ್ಶಕರ ದೃಢೀಕರಣ ಪ್ರಮಾಣಪತ್ರ

ಹಾವೇರಿ ಜಿಲ್ಲಾ ಕಾಳಾಮುಖ ಪರಂಪರೆ ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕಮ್ಮಾರ ಚಾಮರಾಜ ಶೇಷಪ್ಪ ಇವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ ಪದವಿಗಾಗಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

31/08/17

ದಿನಾಂಕ: 31-08-2017
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರು
ಡಾ.ಕಲವೀರ ಮನ್ವಾಚಾರ
ಪ್ರಾಧ್ಯಾಪಕರು

ಸಂಶೋಧಕರ ಪ್ರಮಾಣ ಪತ್ರ

ಹಾವೇರಿ ಜಿಲ್ಲಾ ಕಾಳಾಮುಖ ಪರಂಪರೆ ಸಾಂಸ್ಕೃತಿಕ ಅಧ್ಯಯನ ಎಂಬ ಮಹಾಪ್ರಬಂಧವನ್ನು **ಡಾ. ಕಲವೀರ ಮನ್ವಾಚಾರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಶಾಸನಶಾಸ್ತ್ರ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 31-8-2017

ಸ್ಥಳ : ವಿದ್ಯಾರಣ್ಯ

ಕಮ್ಮಾರ ಚಾಮರಾಜ ಶೇಷಪ್ಪ

ಸಂಶೋಧಕರು

ಪರಿವಿಡಿ

ಸಂಕ್ಷೇಪಗಳು

Epigraphia Indica	–	ಎಇಂ
Epigraphia Carnatica	–	ಎಕ
Karnataka Inscriptions	–	ಕಇ
South Indian Inscriptions	–	ಎಸ್ಐಐ
Indian Antiquary	–	ಇಆ್ಯಂ

ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟಗಳು – ಕವಿಹಂಶಾಸಂ

ಅಧ್ಯಾಯ : ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧ ಪೀಠಿಕೆ

೧.೨ ಅಧ್ಯಯನದ ಉದ್ದೇಶ

೧.೩ ಅಧ್ಯಯನದ ವಿಧಾನ

೧.೪ ಇದುವರೆಗಿನ ಅಧ್ಯಯನದ ಸಮೀಕ್ಷೆ

೧.೫ ಅಧ್ಯಯನದ ಸ್ವರೂಪ

೧.೬ ವ್ಯಾಪ್ತಿ

೧.೭ ಜಿಲ್ಲೆಯ ಐತಿಹಾಸಿಕ ಮತ್ತು ಧಾರ್ಮಿಕ, ಸಾಂಸ್ಕೃತಿಕಹಿನ್ನೆಲೆ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧ ಪೀಠಿಕೆ

ಭಾರತೀಯ ಸಾಂಸ್ಕೃತಿಕ ಪರಂಪರೆ ಅಭೂತ ಪೂರ್ವವಾದುದು. ಸಾವಿರಾರು ನದಿಗಳ ಸಂಗಮದ ಮಹಾನದಿಯಂತೆ ಭಾರತೀಯ ಸಂಸ್ಕೃತಿಯು ಸಮಷ್ಠಿಯನ್ನು ಪಡೆದುಕೊಂಡಿದೆ. ಈ ಸಂಸ್ಕೃತಿಯ ಮಹಾ ಪ್ರವಾಹದಲ್ಲಿ ಅತ್ಯಂತ ಪ್ರಮುಖವಾದ ಪಾತ್ರ ನಿರ್ವಹಿಸಿರುವುದು ಧರ್ಮಗಳು. ಮಾನವನ ಸಾಂಸ್ಕೃತಿಕ ಬದುಕಿನ ಜೀವನಾಡಿ ಧರ್ಮ. ಧರ್ಮವೇ ಭಾರತೀಯರ ಸಂಸ್ಕೃತಿಯ ಬದುಕಿಗೆ ಮಾರ್ಗದರ್ಶಿ. ಸಂಸ್ಕೃತಿಯೆನ್ನುವುದು ಸಮಾಜ ಸಮೂಹಗಳ ನಡೆ–ನುಡಿ ಆಚಾರ–ವಿಚಾರ ನಂಬಿಕೆ–ಆಚರಣೆಗಳ ಕ್ರೂಢೀಕೃತ ಮೊತ್ತ ಅದು ಇತಿಹಾಸವೂ ಹೌದು. ಸಂಸ್ಕೃತಿಯೂ ಹೌದು. [ಕಮ್ಮಾರ ಲಿಂಗರಾಜ(ಸಂ) 'ಸಂಸ್ಕೃತಿ ಪರಂಪರೆ' ಮುನ್ನುಡಿ ಪುಟ.೧೦] ಸಂಸ್ಕೃತಿ ಹುಟ್ಟಿಗೆ ಬಹುಮುಖಿ ಸ್ವರೂಪಗಳು ಧರ್ಮ, ಅರ್ಥ, ಕಾಮ, ಮೋಕ್ಷಗಳ ಹಾದಿಯ ಧೃಗು, ಜಲ, ಕಲೆ, ಸಾಹಿತ್ಯ, ಸಂಗೀತ, ಉತ್ಪಾದನಾ ವಿಧಾನಗಳು ವಿತರಣ ವ್ಯವಸ್ಥೆಗಳು, ಆಳುವವರು, ಆಳಿಸಿಕೊಳ್ಳುವವರು, ಪ್ರಕೃತಿ ಪರಿಸರ ಎಲ್ಲವೂ ಸಂಸ್ಕೃತಿಯೆಂಬ ತಾಯಿ ಬೇರಿನ ನೀರು ಗೊಬ್ಬರಗಳು ಈ ವಾಹಿನಿಗೆ ಮುಖ್ಯ ಸಚೇತಕ, ಪ್ರೇರಕ ಮನುಷ್ಯನೆ, [ಅದೇ ಪುಟ] ಕರ್ನಾಟಕ ತನ್ನ ಜೀವನದ ಎಲ್ಲಾ ಮುಖಗಳಲ್ಲಿ ಧರ್ಮವನ್ನು ಅಳವಡಿಸಿಕೊಂಡಿತು. ಪ್ರಾಚೀನ ಕಾಲದಿಂದಲೂ ವಿವಿಧ ಧರ್ಮಗಳು ಬೆಳೆದು ಬಂದು ಜನತೆಯ ಧಾರ್ಮಿಕ ಸಮನ್ವಯತೆ, ಸಹಿಷ್ಣುತೆಯನ್ನು ಅನುಸರಿಸದ ಧರ್ಮಗಳ ಅನುಯಾಯಿಗಳಿಗೆ ಧಾರ್ಮಿಕ ಸ್ವಾತಂತ್ರವನ್ನು ನೀಡಿ ಆ ಕಾಲದ ರಾಜ್ಯ ಆಡಳಿತದ ಮುಖ್ಯ ಲಕ್ಷಣವಾಗಿ ಧರ್ಮ ಸಮನ್ವಯತೆ ಪ್ರಭಾವ ಬೀರಿತು. ಸ್ವಧರ್ಮ ರಕ್ಷಣೆ ಮತ್ತು ಪರಧರ್ಮಸಹಿಷ್ಣುತೆ ಎನ್ನುವುದು ಅಂದಿನ ಕಾಲದ ಅರಸರ ಧ್ಯೇಯವಾಗಿತ್ತು. ಜೈನಧರ್ಮ ಬೌದ್ಧಧರ್ಮ, ವೈಷ್ಣವಧರ್ಮ, ಶೈವಧರ್ಮಗಳು ರಾಜನಿಂದ ಮನ್ನಣೆ ಪಡೆದಿದ್ದವು. ಹೀಗಾಗಿ ಹಾವೇರಿ ಜಿಲ್ಲೆಯ ಧಾರ್ಮಿಕ ಸ್ಥಿತಿಯನ್ನು ಸ್ಪಷ್ಟವಾಗಿ ಮತ್ತು ನಿಖರವಾಗಿ ಗುರುತಿಸಲು ಇಲ್ಲಿನ ಶಾಸನಗಳು ಆಧಾರವಾಗುತ್ತದೆ. 'ಶೈವ ಧರ್ಮದ ಪಂಥಗಳಾದ ಕಾಳಾಮುಖ ದರ್ಶನವು ಕೂಡಾ ರಾಜಕೀಯ ರಾಗದ್ವೇಷ ಮುಖ ನೋಡುವವರಿಗೆ ಸಂಸ್ಕೃತಿಯ ಸಮಸ್ಯೆಗಳು ಗೊತ್ತಾಗುವುದಿಲ್ಲ' ಎನ್ನುವ ಕಪಟರಾಳರ ಮಾತಿಗೆ ರಹಮತ್ ತರಿಕೇರಿಯವರು "ಇಂಥ ರಾಜಕಾರಣಕ್ಕೆ ಪ್ರತಿ ರಾಜಕಾರಣವನ್ನು

ಸೃಷ್ಟಿಸುವುದು. ಯಾವತ್ತೂ ವರ್ತಮಾನದ ಸವಾಲುಗಳು. ಇಂತಹ ಜಲ್ವಂತ ಸವಾಲುಗಳನ್ನು ಎತ್ತಿಕೊಳ್ಳಲು ಬೇಕಾದ ಶಕ್ತಿಯನ್ನು ದೃಷ್ಟಿಯನ್ನು ಜನ ಸಂಸ್ಕೃತಿಯಿಂದ ಪಡೆದುಕೊಳ್ಳುವುದು ಅಗತ್ಯ ಹೀಗಾಗಿ ಈ ಅಧ್ಯಯನಕ್ಕೆ ಒಂದು ವಿಶೇಷ ಮಹತ್ವ ಬರುತ್ತದೆ. ಬಹುಜನ ಸಂಸ್ಕೃತಿಯ ಧೋರಣೆಯನ್ನು ಸ್ಥಿರೀಕರಿಸಿದಾಗ ಮಾತ್ರ ಪ್ರತಿ ರಾಜಕಾರಣಕ್ಕೆ ಪ್ರಭುತ್ವೀಯ ಸಂಸ್ಕೃತಿಯನ್ನು ಎದುರಿಸುವ ಸಾಮರ್ಥ್ಯ ಬರುತ್ತದೆ.

ವೈದಿಕ ಸಿದ್ಧಾಂತ ತನ್ನದೇ ಆದ ದಾರ್ಶನಿಕತೆಯನ್ನು ಸ್ವಯಂ ಘೋಷಿಸಿಕೊಂಡು ಬಹುತ್ವದ ಸಮುದಾಯಗಳಿಗೆ ನಿತ್ಯ ನಾರಕತ್ವವನ್ನು ಆರೋಪಿಸುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ಕಾಳಾಮುಖದಂಥ ಧರ್ಮ, ನಿರಪೇಕ್ಷ ಸಾಂಖ್ಯ ಲೋಕಾಯತ ಮೊದಲಾದ ನೈಷ್ಟಿಕದರ್ಶನಗಳು ಮಾತ್ರವೇ ಬಹುಹಿತಕಾರಿ ನಾಳಿನೆಡೆಗೆ ಕೊಂಡೊಯ್ಯಬಲ್ಲವು ಮತ್ತು ಭೌತಿಕ ಅತಿವಾಸ್ತವ ಬದುಕನ್ನು ಪರಿಚಯಿಸಬಲ್ಲವು ವಾಸ್ತವವಾದಿ ನೆಲೆಗಟ್ಟಿನ ಮೇಲೆ ಸಮಾಜದ ಜಡತ್ವವನ್ನು ಧಿಕ್ಕರಿಸಿ ಚಲನಶೀಲ ಸಮಾಜಮುಖಿ ಸಿದ್ಧಾಂತಗಳನ್ನು ಹೆಣೆಯುತ್ತಲೇ ಶ್ರಮ ಸಂಸ್ಕೃತಿಯ ಆದರ್ಶವನ್ನು ಬಿತ್ತುವ ಈ ಸಂಸ್ಕೃತಿಯ ಅತ್ಯಂತ ಮಹತ್ವದ್ದೆನಿಸುತ್ತದೆ.

೧.೨ ಅಧ್ಯಯನದ ಉದ್ದೇಶ

ಕರ್ನಾಟಕದ ಪ್ರಾಚೀನ ಇತಿಹಾಸದಲ್ಲಿ ಎಂಟರಿಂದ ಹನ್ನೆರಡನೆಯ ಶತಮಾನವು ಸಂಕೀರ್ಣತೆಯ ಕಾಲಘಟ್ಟವಾಗಿದೆ. ಸಮಾಜದಲ್ಲಿ ನಡೆದ ಅನೇಕ ತಲ್ಲಣಗಳು, ಸಂಘರ್ಷಗಳು ಈ ಘಟ್ಟದಲ್ಲಿ ಮಡುಗಟ್ಟುವುದನ್ನು ನೋಡುತ್ತಾ ಹೋಗುತ್ತೇವೆ. ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕಸ್ಥಿತಿಗಳು ಒಂದುಹಂತದಿಂದ ಇನ್ನೊಂದು ಹಂತಕ್ಕೆ ಜಿಗಿಯುವ ವ್ಯವಸ್ಥೆಯಲ್ಲಿ ಕಾಣುತ್ತದೆ. ರಾಜಕೀಯ ನೋಡುವುದಾದರೆ, ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಚಾಲುಕ್ಯ ಚಕ್ರವರ್ತಿಗಳ ಪ್ರಭಲವಾದ ರಾಜಕೀಯ ಸಂಘಟನೆಯು ಈ ಕಾಲದಲ್ಲಿ ಕಂಡುಬರುವುದು. ಈ ಸಾಮ್ರಾಜ್ಯಗಳ ಇಳಿಮುಖವಾಗುವ ಕಾಲಘಟ್ಟವೂ ಆಗಿದೆ, ದಕ್ಷಿಣಾಪಥೇಶ್ವರ ಬಿರುದು ಹೋಗಿ ಚಿಕ್ಕ ಚಿಕ್ಕ ಸಾಮ್ರಾಜ್ಯಗಳ ಚಕ್ರವರ್ತಿಗಳು ರೂಪುಗೊಳ್ಳುವುದು ಈ ಕಾಲದ ವೈಶಿಷ್ಟ್ಯವಾಗಿದೆ. ಅಂದರೆ ಚಾಲುಕ್ಯರು, ಯಾದವರು, ಹೊಯ್ಸಳ ಮುಂತಾದ ರಾಜರುಗಳು ಕರ್ನಾಟಕವನ್ನು ಆಳಿದ್ದರು. ಅಂದರೆ ಸಾಮ್ರಾಜ್ಯಗಳು ಹೋಗಿ ಸ್ಥಳೀಯರ ಆಡಳಿತಕ್ಕೆ ಒಳಪಡುವಂತಹ ವ್ಯವಸ್ಥೆ ಈ ಕಾಲಘಟ್ಟದ್ದಾಗಿದೆ.

ಇನ್ನೊಂದು ಪ್ರಮುಖವಾದ ಸ್ಥಿತ್ಯಂತರದ ಆರ್ಥಿಕ ಪರಿಸ್ಥಿತಿ, ಶಾತವಾಹನರ ಕಾಲದಲ್ಲಿ ಆರ್‌ಎಸ್ ಶರ್ಮಾರವರು ಅಭಿಪ್ರಾಯಿಸುವಂತೆ ಉತ್ತರಭಾರತದಲ್ಲಿ ಯಾವತ್ತೂ ಪ್ರವೇಶ ಪಡೆಯದಷ್ಟು ವ್ಯಾಪಾರಿವರ್ಗವು ಕರ್ನಾಟಕವನ್ನು ಪ್ರವೇಶಿಸಿತ್ತು. ಅದರ ಫಲವಾಗಿ ಕರ್ನಾಟಕದ ರಾಜಕೀಯದಲ್ಲಿ ಆ ವ್ಯಾಪಾರಿವರ್ಗ ಆಡಳಿತದಲ್ಲಿ ಮತ್ತು ಸೈನ್ಯದಲ್ಲಿ ಪ್ರಭಲವಾದ ಸ್ಥಾನವನ್ನು ಪಡೆದುಕೊಂಡಿತ್ತು. ನಂತರದ ಕಾಲಘಟ್ಟದಲ್ಲಿ ವ್ಯಾಪಾರಿವರ್ಗದ ಇಳಿಮುಖ ಹೊಂದುವುದನ್ನು, ಜೊತೆಜೊತೆಯಲ್ಲೆ ಸ್ಥಳೀಯ ವ್ಯಾಪಾರಿವರ್ಗಗಳು ಮೇಲ್ಮುಖಚಲನೆಗೊಳ್ಳುವುದನ್ನು ನೋಡಬಹುದು. ಇದರ ಪರಿಣಾಮ ಬಹುಮುಖೀಯ ಪರಿಣಾಮಗಳು ಆ ಕಾಲಘಟ್ಟದ ರಾಜಕೀಯದಲ್ಲಿ ಉಂಟುಮಾಡುತ್ತವೆ. ಇದರ ಜೊತೆಜೊತೆಯಲ್ಲಿ ಪಶುಪಾಲಕರು ಹಾಗೂ ಕೃಷಿ ವ್ಯವಸ್ಥೆ ಅತ್ಯಂತ ಶೀಘ್ರವಾಗಿ ವೃದ್ಧಿಯಾಗುವುದನ್ನು ನೋಡುತ್ತೇವೆ. ಪರಿಣಾಮ ಆರ್ಥಿಕವಾಗಿ ಸಮಾಜದಲ್ಲಿ ಒಂದು ವರ್ಗ ರೂಪುಗೊಳ್ಳುತ್ತಾ ಹೋಗುತ್ತದೆ. ಇದರ ಪರಿಣಾಮ ಸಾಮಾಜಿಕ, ಧಾರ್ಮಿಕ, ಪರಿಸ್ಥಿತಿ ಪಲ್ಲಟಗಳು ಕಾರಣೀಭೂತವಾಗುತ್ತವೆ. ಅಂದರೆ ಒಂದುಕಾಲದಲ್ಲಿ ಬೌದ್ಧ ಮತ್ತು ಜೈನ ಧರ್ಮವು ವ್ಯಾಪಾರಿಗಳ ಜೊತೆಜೊತೆಯಲ್ಲಿಯೇ ಪ್ರವೇಶ ಕೊಡುವುದು ಸಮಾಜದಲ್ಲಿ ಪ್ರಭಲವಾದ ಧಾರ್ಮಿಕ ಔನತ್ಯವನ್ನು ಪಡೆಯುವುದು ಈ ಕಾಲಘಟ್ಟವಾದರೆ ಅದರ ವಿರುದ್ಧವಾಗಿ ಸ್ಥಳೀಯ ಆಚರಣೆಗಳು ಮೇಲ್ಮುಖವಾಗಿ ಚಲನೆಗೊಳ್ಳುತ್ತ ಹೋಗುತ್ತವೆ. ಒಂದು ಕಾಲದಲ್ಲಿ ಅತ್ಯಂತ ನಿಷ್ಕೃಷ್ಟ ತಾಂತ್ರಿಕರೆಂದು, ಅಶ್ಲೀಲರೆಂದು, ಅನಾಗರಿಕರೆಂದು ಆಚರಣೆಗಳ ಪಂಥಗಳಾದ ಕಾಳಾಮುಖ, ಕಾಪಾಲಿಕ, ಪಾಶುಪತ, ಶಾಕ್ತ ಪಂಥಗಳ ಸಮಾಜದಲ್ಲಿ ಅತ್ಯಂತ ಪ್ರಭಾವಶಾಲಿಗಳುಳ್ಳ ಧಾರ್ಮಿಕಪಂಥಗಳಾಗಿ ಸಾಗುತ್ತವೆ. ಅವು ಸ್ಥಳೀಯ ನೆಲೆಯಲ್ಲಿ ಹಿಂದೂಡಲ್ಪಟ್ಟ ಕಡೆಗಣಿಸಲಾರದ ಅವರ ಸ್ಥಿತಿಗಳಿಗಳು ಈ ಕಾಲಘಟ್ಟದಲ್ಲಿ ಗೌರವಾನ್ವಿತ ಸ್ಥಾನ ಪಡೆಯುವುದು, ಜೈನರನ್ನು ಹಿಂದಿಕ್ಕಿದವು ಬೌದ್ಧದವರನ್ನು ಹೊರಗಟ್ಟುವವು, ಈ ಕಾಲದ ಅತ್ಯಂತ ಗುರುತಿಸುವ ಅಂಶಗಳಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಶಾಸನಗಳು, ಪರೋಕ್ಷವಾಗಿ ಸೂಚಿಸುತ್ತವೆ. ಅಬ್ರಾಹ್ಮಣ್ಯ ಸಂಸ್ಕೃತಿಯಿಂದ ರೂಪುಗೊಂಡ ಈ ಸಂಸ್ಥೆಗಳು ಜನರಲ್ಲಿ ಅತ್ಯಂತ ಗೌರವಾನ್ವಿತ ಪೂಜ್ಯಸ್ಥಾನವನ್ನು ಪಡೆಯಲು ಇಂತಹ ಪಲ್ಲಟಗಳು ಕಾರಣವಾಗಿವೆ. ಮಧ್ಯಕರ್ನಾಟಕದ ಅದರಲ್ಲಿ ವಿಶೇಷವಾಗಿ ತುಂಗಭದ್ರಾ ಆಜುಬಾಜಿನ ಪ್ರದೇಶಗಳಲ್ಲಿ ಆರ್ಥಿಕವಾಗಿ ರಾಜಕೀಯವಾಗಿ ಹಾಗೂ ಧಾರ್ಮಿಕವಾಗಿ ಅತ್ಯಂತ ಸಮೃದ್ಧವಾದ ಪ್ರದೇಶ. ಈ ಪ್ರದೇಶದಲ್ಲಿ ಕಾಳಾಮುಖ ಪರಂಪರೆ ಬಳ್ಳಿಗಾವಿಯನ್ನು ಪ್ರಧಾನ ಕೇಂದ್ರವಾಗಿಟ್ಟುಕೊಂಡು ಈ ಪ್ರದೇಶದಲ್ಲಿ ಸುಮಾರು ೯ನೆಯ ಶತಮಾನಗಳಿಂದ ಸುಮಾರು ೧೨ನೆಯ

ಶತಮಾನದಲ್ಲಿಯವರೆಗೆ ಬಲಿಷ್ಠವಾಗಿ ತನ್ನ ಪ್ರಾಬಲ್ಯವನ್ನು ಮೊರೆಯಿತು. ಅದರ ಪರಿಣಾಮವಾಗಿ ಈ ಪ್ರದೇಶವು ಕಾಳಾಮುಖ ದೇವಾಲಯಗಳನ್ನು ಹೊಂದಿದ್ದು ಸುಮಾರು ೮೯ ಶಾಸನೋಕ್ತ ಯತಿಗಳು, ಸುಮಾರು ೩೭ ತ್ರಿಕೂಟ ಮತ್ತು ಏಕಕೂಟ, ದೇವಾಲಯಗಳು ಕಂಡುಬರುತ್ತವೆ. ಲಕುಲೀಶನ ವಿಗ್ರಹಗಳು, ಅವರು ಆರಾಧಿಸುವ ಸಪ್ತಮಾತೃಕಾ ವಿಗ್ರಹಗಳು, ಭೈರವನ ವಿಗ್ರಹಗಳು ಮತ್ತು ಅಧಿಕ ಕಲ್ಲೇಶ್ವರ ದೇವಾಲಯಗಳು ಕಂಡುಬರುತ್ತವೆ. ಶಿರಸ್ಸು ಪವಾಡದ ಐತಿಹ್ಯಗಳು ಇತ್ಯಾದಿ ಗೋಚರಿಸುತ್ತವೆ. ಶೈವಧರ್ಮ ಹಾವೇರಿ ಜಿಲ್ಲೆಯಾದ್ಯಂತ ಮಹತ್ವ ಪಡೆದಿದ್ದು ಕಾಳಾಮುಖದಂತಹ ಪಂಥಗಳ ಪರಂಪರೆ ಸಾಂಸ್ಕೃತಿಕವಾಗಿ ಅಚ್ಚಳಿಯದೆ ದೇವಾಲಯ ಶಾಸನಗಳಲ್ಲಿ ಉಳಿದುಬಂದಿದೆ. ಆ ಕಾರಣಕ್ಕಾಗಿ ಈ ಪ್ರದೇಶದ ಅಧ್ಯಯನಕಾರರಿಗೆ ಕನ್ನೆನೆಲೆಯೂ ಹೌದು, ಹಾಗೆಯೆ ಸಂಕೀರ್ಣವಾದ ಸಮಸ್ಯೆಗಳ ನೆಲೆಯೂ ಹೌದು. ಈ ಹಿನ್ನೆಲೆಯಲ್ಲಿ ಶಾಸನ ಮತ್ತು ಐತಿಹ್ಯಗಳನ್ನು ಮುಖಾಮುಖಿಯಾಗಿಟ್ಟುಕೊಂಡು ಅಧ್ಯಯನ ನಡೆಸಲು ಉದ್ದೇಶಿಸಲಾಯಿತು. ಅವೈದಿಕ ಸಂಸ್ಕೃತಿ ಕಾಳಾಮುಖ ಪರಂಪರೆಯು ಈ ಪ್ರದೇಶದಲ್ಲಿ ಹೇಗೆ ರೂಪಗೊಂಡಿದೆ. ಶಾಸನಗಳು ಯಾವರೀತಿ ಅವುಗಳನ್ನು ಕಟ್ಟಿಕೊಡುತ್ತವೆ. ಹಾಗೆಯೆ ಐತಿಹ್ಯಗಳು ಹೇಗೆ ಮುಖಾಮುಖಿಯಾಗುತ್ತವೆಂಬುದಾಗಿ ಗುರಿ ಹೊಂದಲಾಗಿದೆ. ಇಲ್ಲಿರುವ ಅಬ್ಬಲೂರು, ಚಿಕ್ಕಮಾಗಡಿ, ಬಂದಳಿಕೆ, ರಟ್ಟಿಹಳ್ಳಿ, ನೆಶ್ವಿ, ಹರಳಹಳ್ಳಿ, ಕುಮ್ಮೂರು, ತಿಳವಳ್ಳಿ, ಹಾವೇರಿ, ಹಾನಗಲ್ಲು, ಚೌಡದಾನಪುರ, ಕಲಕೇರಿ, ಅಸುಂಡಿ, ಅಂತರವಳ್ಳಿ ಮುಂತಾದ ಪ್ರದೇಶಗಳ ವ್ಯಾಪ್ತಿಯು ಗ್ರಾಮೀಣ ಪ್ರದೇಶಗಳ ಐತಿಹ್ಯಗಳು ಹೇಗೆ ಬಾಯಿಂದ ಬಾಯಿಗೆ ಹರಿದಾಡಿ ಐತಿಹಾಸಿಕವಾಗಿ ಮಹತ್ವವನ್ನು ಪಡೆದುಕೊಂಡಿವೆ ಎಂಬುದನ್ನು ಅಧ್ಯಯನ ಮಾಡಲು ಸೂಕ್ತವಾದ ವಿಷಯವಾಗಿರುವುದರಿಂದ ಹಾಗೂ ಮುಂದಿನ ಅಧ್ಯಯನಕಾರರಿಗೆ ಮಾರ್ಗದರ್ಶಿಯಾಗುವ ಕಾರಣ ಈ ಅಧ್ಯಯನ ಕೈಗೊಳ್ಳಲಾಗಿದೆ.

೧.೩ ಅಧ್ಯಯನದ ವಿಧಾನ

ಐತಿಹ್ಯಗಳನ್ನು ಅಥವಾ ಸ್ಥಳೀಯ ಪುರಾಣಗಳು ಇಂದು ಐತಿಹಾಸಿಕ ಅಧ್ಯಯನದ ಆಕರವಾಗಿ ತೆಗೆದುಕೊಳ್ಳಲೇಬೇಕೆಂಬ ಹಲವಾರು ವಿದ್ವಾಂಸರ ಅಭಿಪ್ರಾಯಗಳಿವೆ. ಐತಿಹ್ಯಗಳು ಚರಿತ್ರೆಯ ಆಕರಗಳ ಒಳವಿನಲ್ಲಿ ಅಂತರ್ಗತ ಮಾಡಿಕೊಳ್ಳುವವು ಕಾಲಕಾಲಕ್ಕೆ ಭಿನ್ನ ಭಿನ್ನ ಅಂಶಗಳನ್ನು ತಮ್ಮಲ್ಲಿ ಒಳಗೊಂಡಿರುತ್ತವೆ. ಆದರೆ ಮೂಲ ವಿಷಯ ವಸ್ತು ಹಾಗೆಯೇ ಇರುತ್ತವೆ, ಇದನ್ನು ಚಾರಿತ್ರಿಕ ದಾಖಲೆಗಳನ್ನು

ಹೋಲಿಸಿದಾಗ ಈ ಐತಿಹ್ಯಗಳ ಆಂತರ್ಯವನ್ನು ಮೂಲಧಾತು ನಮಗೆ ದೊರಕುತ್ತದೆ ಈ ಹಿನ್ನೆಲೆಯಲ್ಲಿ ವೈದಾನಿಕತೆಯನ್ನು ರೂಪಿಸಿಕೊಳ್ಳಬಹುದಾಗಿದೆ. ಚಾರಿತ್ರಿಕ ಅಧ್ಯಯನದಲ್ಲಿ ವಿಮರ್ಶಾತ್ಮಕ ನೆಲೆಯಲ್ಲಿ ತಳಸಮುದಾಯ (ಹಿಂದೆಸರಿದ) ಸಮುದಾಯಗಳ ಇತಿಹಾಸಗಳ ಅಧ್ಯಯನವನ್ನು ಇಂದು ಕೈಗೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಯಾವುದು ಇತಿಹಾಸವಲ್ಲದವನ್ನು ನಾವು ನಿರಾಕರಿಸುತ್ತೇವೆ. ಇತಿಹಾಸದ ಅಡಿಯಲ್ಲಿ ತಂದು ಅವುಗಳನ್ನು ಮರುಚರ್ಚೆಗೆ ಒಳಪಡಿಸಬೇಕಾದುದು. ಈ ಹಿನ್ನೆಲೆಯಲ್ಲಿ ಚಾರಿತ್ರಿಕ ವಿಶ್ಲೇಷಣಾತ್ಮಕವಾದವನ್ನು ಇಟ್ಟುಕೊಂಡು ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ನನ್ನ ಸಂಶೋಧನೆಯ ಶೀರ್ಷಿಕೆಗೆ ಅನುಸಾರವಾಗಿ ಹಾವೇರಿ ಜಿಲ್ಲೆಯಲ್ಲಿ ಕಂಡುಬರುವ ಶಾಸನಗಳನ್ನು ದೇವಾಲಯಗಳನ್ನು ಆಧಾರವಾಗಿಟ್ಟುಕೊಂಡು ಕ್ಷೇತ್ರ ಕಾರ್ಯವನ್ನು ಮಾಡಿ ಆಯಾ ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿ ದೊರೆಯುವ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ನಂತರ ಅವುಗಳನ್ನು ಗ್ರಾಮ ಸ್ಥಳ, ಕಾಲ, ಯತಿಗಳು, ಅರಸರನ್ನು ಒಳಗೊಂಡ ಮಾಹಿತಿಯನ್ನು ಕುರಿತು ಪಟ್ಟಿಯನ್ನು ತಯಾರಿಸಿಕೊಂಡಿದ್ದು ಜೊತೆಗೆ ಅಲ್ಲಿ ಕಂಡುಬರುವ ದೇವಾಲಯಗಳು, ಶಿಲ್ಪಗಳು ಹಾಗೂ ಶಾಸನಗಳಲ್ಲಿ ಉಲ್ಲೇಖವಾದ ವಿವರಗಳನ್ನು ಛಾಯಾಚಿತ್ರಗಳೊಂದಿಗೆ ಸಂಗ್ರಹಿಸಲಾಗಿದೆ. ಇದರೊಂದಿಗೆ ಶಾಸನಗಳಲ್ಲಿ ದೊರೆತ ಮಾಹಿತಿಯನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಿ ವಿಷಯವನ್ನು ಸಂದರ್ಭೋಚಿತವಾಗಿ ಬಳಸಿಕೊಂಡಿದ್ದೇನೆ. ಹಾವೇರಿ ಜಿಲ್ಲೆಯಲ್ಲಿಯ ಕಾಳಾಮುಖ ಪರಂಪರೆಗೆ ನೆರೆಯ ಶಿಕಾರಿಪುರ ತಾಲೂಕಿನ ಬಳ್ಳಿಗಾವೆಯ ಪರಂಪರೆಯು ಪ್ರಮುಖವಾಗಿ ಪ್ರಭಾವ ಬೀರಿರುವುದರಿಂದ ಅಲ್ಲಿಯ ಶಾಸನಗಳ ಮತ್ತು ಯತಿಗಳ ವಿವರವನ್ನು ಇಲ್ಲಿ ಸಂದರ್ಭೋಚಿತವಾಗಿ ಬಳಸಿಕೊಂಡಿದ್ದೇನೆ. ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ಸೌತ್ ಇಂಡಿಯನ್ ಇನ್ಸ್ಕ್ರಿಪಷನ್ ಸಂಪುಟಗಳು ಹಾಗೂ ಧಾರವಾಡ ಜಿಲ್ಲಾ ಗ್ಯಾಜಿಟಿಯರ್, ಕರ್ನಾಟಕ ಇನ್ಸ್ಕ್ರಿಪಷನ್ ೧,೪,೫,೬, ಎಪಿಗ್ರಪಿಯಾ ಕರ್ನಾಟಕ, ಎಪಿಗ್ರಪಿಯಾ ಇಂಡಿಕಾ, ನಿಯತಕಾಲಿಕೆಗಳು ಹಾಗೂ ಇತಿಹಾಸದರ್ಶನ ಇವುಗಳಲ್ಲಿ ಮಾಹಿತಿ ಉಲ್ಲೇಖಗಳು ಲಭ್ಯವಿದ್ದರೂ ಇವುಗಳು ಒಂದೆಡೆ ದೊರೆಯುವುದಿಲ್ಲ. ಈ ಹಿನ್ನೆಲೆಯಿಂದ ಅವುಗಳನ್ನು ಒಟ್ಟುಗೂಡಿಸುವುದರೊಂದಿಗೆ ಮಾಹಿತಿಯನ್ನು ಅನುಸರಿಸಿ ಆಧಾರವಾಗಿಸಿಕೊಂಡು ಹೊಸ ಹೊಸ ವಿಷಯಗಳನ್ನು ಹೊರತರುವ ಪ್ರಯತ್ನ ಮಾಡಲಾಗಿದೆ.

೧.೪ ಅಧ್ಯಯನ ಸಮೀಕ್ಷೆ

ಪ್ರಾಚೀನ ಕಾಲದಿಂದಲೂ ಶೈವ ಧರ್ಮದ ಮತ್ತು ಅದರ ಶಾಖೆಗಳ ಕುರಿತು ವಿವಿಧ ವಿದ್ವಾಂಸರು ಅಧ್ಯಯನ ನಡೆಸಿದ್ದಾರೆ. ಪ್ರಾಚೀನ ಶೈವವನ್ನು ಕುರಿತು ಅಧ್ಯಯನದಲ್ಲಿ ಚರ್ಚಿಸುತ್ತಾ ಕಾಳಾಮುಖ, ಪಾಶುಪತ, ಕಾಪಾಲಿಕ, ಮಹಾವ್ರತ ಪಂಥಗಳನ್ನು ವಿಶ್ಲೇಷಿಸಿದ್ದಾರೆ. ಸಾಂದರ್ಭಿಕವಾಗಿ ಕಾಳಾಮುಖ ಪಂಥವನ್ನು ಚರ್ಚಿಸಿದ್ದಾರೆ. ಕೆಲವು ಕೃತಿಗಳಲ್ಲಿ ಕಾಳಾಮುಖರ ಪಂಥದ ವಿಷಯಗಳನ್ನು ನೇರವಾಗಿ ವಿವರಿಸಿದ್ದಾರೆ. ಎಸ್.ಸಿ. ನಂದಿಮಠರ 'ಕನ್ನಡ ನಾಡಿನ ಧರ್ಮಗಳು' ಭಾಗ-೨ ಕೃತಿಯಲ್ಲಿ ಕರ್ನಾಟಕದ ಧರ್ಮಗಳೆಂಬ ವಿಭಾಗದಲ್ಲಿ ಶೈವ ಧರ್ಮದ ವಿವರಣೆಯೊಂದಿಗೆ ಕಾಳಾಮುಖ ಪಂಥದ ಬಗ್ಗೆ ಹೇಳಿರುವರು. 'ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ' ಕೃತಿಯಲ್ಲಿ ಮಂಜುನಾಥ.ಸಿ.ಯು ಶೈವ ಧರ್ಮದ ಶಾಖೆಗಳ ಕುರಿತು ಪ್ರಸ್ತಾಪಿಸುತ್ತ ಕಾಳಾಮುಖರ ಕುರಿತು ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. 'ಪಾಶುಪತ ಆಗಮಗಳು' ಎಂಬ ಕೃತಿಯಲ್ಲಿ ಹನುಮಂತರಾವ್ ಜಿ. ರವರು ಶೈವ ಪಂಥವಾದ ಪಾಶುಪತ ತತ್ವಗಳು ಅಚರಣೆಗಳು ವಿಧಿ ವಿಧಾನ ಕುರಿತು ಮಾತ್ರ ವಿವರಿಸಿದ್ದಾರೆ. ಭಂಡಾರ್ಕರ್ ಆರ್.ಜಿ ಯವರ ' ವೈಷ್ಣವಿಸಿಂ ಶೈವಿಸಂ ಆ್ಯಂಡ್ ಮೈನರ್ ರಿಲಿಜಿಯಸ್ ಸಿಸ್ಟಮ್' ಕೃತಿಯಲ್ಲಿ ರುದ್ರ ಶಿವ ಕಲ್ಪನೆ ಲಿಂಗಪೂಜೆ, ಶಿವನ ವರ್ಣನೆ, ಶೈವ ಪದ್ಧತಿ, ಕಾಪಾಲಿಕ, ಕಾಳಾಮುಖ, ಕಾಶ್ಮೀರಿಶೈವಧರ್ಮ,ಇತ್ಯಾದಿ ಮಾಹಿತಿಗಳು ಉಪಲಬ್ದವಿವೆ.

ನನ್ನ ಸಂಶೋಧನಾ ಶೀರ್ಷಿಕೆಗೆ ಸಂಬಂಧಿಸಿದಂತೆ ಮುಖ್ಯವಾಗಿ 'ಸೌತ್ ಇಂಡಿಯನ್ ಇನ್ಸಕ್ರಿಪಶನ್ಸ್ ವ್ಯಾಲುಂ' ೧೮, ೨೦, ೨೨ ಪಬ್ಲಿಷಡ್ ಬೈ ದಿ ಡೈರಕ್ಟರ ಜನರಲ್ ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ ನ್ಯೂ ಡೆಲ್ಲಿ ೧೧ 'ಕರ್ನಾಟಕ ದೇವಾಲಯಗಳ ಕೋಶ.' ಹಾವೇರಿ ಜಿಲ್ಲೆ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೧೯೯೯ ಡಿ.ಜಿ.ಕುಲ್ಕರ್ಣಿ 'ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು' ೨೦೦೭-೦೮ ಹನುಮಾಕ್ಷಿ ಗೋಗಿಯವರ 'ಅನುಶಾಸನ' ೨೦೦೨ ಭೋಜರಾಜ ಪಾಟೀಲ 'ನಾಗರಖಂಡ ೭೦ ಒಂದು ಅಧ್ಯಯನ' ೧೯೯೫. ಕಡಪಟ್ಟಿ.ಎನ್.ಎಮ್ ರವರ 'ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ' ಜೆ.ಎಂ.ನಾಗಯ್ಯ 'ಕಲಕೇರಿ' ೧೯೯೫ 'ಧಾರವಾಡ ಜಿಲ್ಲೆಯ ಶಾಸನ ಸೂಚಿ' ಎಂ.ಎಂ ಕಲ್ಬುರ್ಗಿ (ಸಂ) ೧೯೭೫ ಚೆನ್ನಕ್ಕ ಪಾವಟೆ 'ಬಂಕಾಪುರ ಶೋಧ' ೧೯೯೦ 'ಹಾನುಗಲ್ಲು ಕದಂಬರು' ೧೯೯೦ 'ಧಾರವಾಡ ಜಿಲ್ಲಾ ಗ್ಯಾಸೆಟಿಯರ್' ಕರ್ನಾಟಕ ರಾಜ್ಯ ಗ್ಯಾಸೆಟಿಯರ್ 'ಹಿರೇಕೆರೂರು ಪ್ರದೇಶದ

ಮೂರ್ತಿ ಶಿಲ್ಪ' ೧೯೯೮ 'ಹಾವೇರಿ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನ' ೧೯೯೭ ರಮೇಶ ಪಾಟೀಲ, ಸಾಲಿಮಠ ಸುರೇಶ, 'ರಾಣೇಬೆನ್ನೂರ ಪ್ರದೇಶದ ದೇವಾಲಯಗಳು ಒಂದು ಅಧ್ಯಯನ' ೨೦೦೮ 'ಬಸವರಾಜ ಅರಿಶಿಣಗುಪ್ಪೆ ತಿಳುವಳ್ಳಿ ಪ್ರದೇಶದ ದೇವಾಲಯಗಳು ಒಂದು ಅಧ್ಯಯನ' ೧೯೯೮ ಸೊಟ್ಟಮ್ಮನವರ ವಿ.ಜಿ. 'ರಾಣೇಬೆನ್ನೂರು ಪ್ರದೇಶದ ದೇವಾಲಯಗಳು ಒಂದು ಅಧ್ಯಯನ' ವಿನೋದಾ ಪಾಟೀಲ 'ಪಾನಂಗಲ್ಲಯೂರು ಸಾಂಸ್ಕೃತಿಕ ಅಧ್ಯಯನ' ನವಲಗುಂದ ಗುರುರಾಜರವರ 'ಶಿಗ್ಗಾವಿ ತಾಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ೨೦೦೮

ಕಾಳಾಮುಖರ ಕುರಿತು ಬ್ರಹ್ಮಶಿವನ 'ಸಮಯ ಪರೀಕ್ಷೆ' ನಿಜಗುಣ ಶಿವಯೋಗಿಗಳು 'ವಿವೇಕಚಿಂತಾಮಣಿ' ನಯಸೇನನ 'ಧರ್ಮಾಮೃತ', ಬಸವಪ್ರಭು 'ಶಿವತತ್ವ ರತ್ನಾಕರ' ಸಾಹಿತ್ಯ ಕೃತಿಗಳಲ್ಲಿ ವಿವರಗಳಿವೆ. ಮತ್ತು ಕಪಟರಾಳ ಕೃಷ್ಣರಾಯರ 'ಕರ್ನಾಟಕ ಲಾಕುಳ ಶೈವರ ಇತಿಹಾಸ' ಕೃತಿಯು ಲಾಕುಳ ಶೈವರ ಬಗ್ಗೆ ಮಾಹಿತಿ ನೀಡುವ ಮೊದಲ ಕೃತಿಯಾಗಿದೆ. ಹನ್ನೊಂದು ಹನ್ನೆರಡನೇ ಶತಮಾನದಲ್ಲಿರುವ ಶಾಸನದಲ್ಲಿಯ ಉಲ್ಲೇಖ. ಈಗಿನ ದೇವಾಲಯ ಮಠಗಳು ಸ್ಥಾನಾಚಾರ್ಯರು ರಾಜಗುರುಗಳ ತಪಸ್ಸು ಅನೇಕ ಯತಿಗಳ ಕುರಿತು ವಿವರಣೆ ನೀಡಿದ್ದಾರೆ. ಕರ್ನಾಟಕದಲ್ಲಿರುವ ಲಕುಲೀಶನ ಮೂರ್ತಿಗಳ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಲಾಕುಳ ಸಿದ್ಧಾಂತದ ಕುರಿತು ವಿವರಣೆ ನೀಡಿರುತ್ತಾರೆ.

'ಧಾರವಾಡ ಜಿಲ್ಲೆಯ ಕಾಳಾಮುಖ ದೇವಾಲಯಗಳು' ವಸುಂಧರ ಫಿಲಿಯೋಜಾರವರ ಹಳೆಯ ಧಾರವಾಡ ಜಿಲ್ಲೆಯ ಪಾಶುಪತ ಮತ್ತು ಕಾಳಾಮುಖ ದೇವಾಲಯಗಳನ್ನು ಗುರುತಿಸಿದ್ದಾರೆ. ಪಾಶುಪತದ ವ್ರತದ ನಿಯಮಗಳಾದ ತೊಂಬತ್ತೆಂಟನ್ನು ವರ್ಣಿಸಿದ್ದಾರೆ. ಕಾಳಾಮುಖದ ಕುರಿತು ಹೆಚ್ಚಿನ ವಿವರಣೆ ನೀಡಿಲ್ಲ. ಇವರ ಇನ್ನೊಂದು ಕೃತಿಯಾದ 'ಕರ್ನಾಟಕದಲ್ಲಿ ಲಾಕುಳ ಶೈವ ಜಕ್ಕಣಾಚಾರ್ಯರು' ಇದರಲ್ಲಿ ಪಾಶುಪತ ಮತ್ತು ಕಾಳಾಮುಖ ಎರಡೂ ಒಂದೇ ಎಂದೂ ಮತ್ತು ಪಂಪಮಹಾತ್ಮೆಯ ಆಧಾರದ ಮೂಲಕ ಕಲಾಮುಖರು, ಕಲೆಯ ಆರಾಧಕರೆಂಬುವರು ಕಾಳಾಮುಖರೆಂದು ವಿವರಿಸಿದ್ದಾರೆ.

ಎಸ್.ಎಸ್.ಹಿರೇಮಠರ 'ಕಾಳಾಮುಖ ದರ್ಶನ' ಕೃತಿಯಲ್ಲಿ ದಕ್ಷಿಣಭಾರತದ ನ್ಯಾಯ- ವೈಶೇಷಿಕರೇ ಕಾಳಾಮುಖರಾಗಿ ರೂಪಾಂತರಗೊಂಡಿರಬೇಕೆಂದು ವಿವರಿಸುತ್ತ, ಪರ್ವತಾವಳಿ, ಸಿಂಹಪರ್ಷೆ ಕುರಿತು ವಿವರಣೆ ನೀಡಿರುತ್ತಾರೆ. ಎಸ್.ವಿ. ಪಾಠಕರವರು 'ಹಿಸ್ಟ್ರಿ ಆಫ್ ಶೈವಕಲ್ಟ್ ಇನ್ ನಾರ್ಥನ್ ಇಂಡಿಯಾ (ಕ್ರಿ.ಶ ೭೦೦ ರಿಂದ ೧೨೦೦)

ಗ್ರಂಥವು ಶಾಸನಗಳನ್ನವಲಂಬಿಸಿ ಶೈವಧರ್ಮದ ಕುರಿತು ಹೇಳುತ್ತ ಪಾಶುಪತ, ಕಾಳಾಮುಖ, ಶೈವಸಿದ್ಧಾಂತಗಳ ಕುರಿತು ಸಾಕಷ್ಟು ಮಾಹಿತಿ ನೀಡುತ್ತದೆ.

'ದಿ ಕಾಪಾಲಿಕಾ ಆಂಡ್ ಕಾಳಾಮುಖಾಸ್, ಟೂ ಲಾಸ್ಟ್ ಶೈವಾ ಸೆಕ್ಟ್' ಕೃತಿಯಲ್ಲಿ ಡೆವಿಡ್. ಲಾರೆಂಜ್ ರವರು ಕಣ್ಮರೆಯಾದ ಎರಡು ಶೈವ ಪಂಥಗಳ ಕುರಿತು ಶಾಸನಗಳೊಂದಿಗೆ ಶಕ್ತಿ ಪರಿಷತ್ತಿನ ಮತ್ತು ಸಿಂಹಪರಿಷತ್ತಿನ ವಿವರ ನೀಡಿದ್ದಾರೆ. ಕಾಪಾಲಿಕ ಮತ್ತು ಕಾಳಾಮುಖ ಸಂಪ್ರದಾಯಗಳನ್ನು ಕೇಂದ್ರವಾಗಿರಿಸಿಕೊಂಡು ಶೈವ ಪಂಥದ ಕುರಿತು ವಿವಿಧ ವಿಚಾರಗಳನ್ನು ವಿಶ್ಲೇಷಿಸಿದ್ದಾರೆ. ಎಂ. ಚಿದಾನಂದಮೂರ್ತಿಯವರು 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಗ್ರಂಥದಲ್ಲಿ ಶಾಸನಗಳಾಧಾರದಿಂದ ಶೈವಧರ್ಮದ ಪ್ರಾಚೀನತೆ ತಿಳಿಸುತ್ತ ಪಾಶುಪತ, ಕಾಳಾಮುಖ, ಲಾಕುಳಶೈವರು ಮತ್ತು ದೇವಾಲಯಗಳ ಕುರಿತು ಚರ್ಚಿಸಿದ್ದಾರೆ.

ಈ ಎಲ್ಲಾ ಪರಾಮರ್ಶನ ಗ್ರಂಥಗಳ ಅಧ್ಯಯನವನ್ನು ಗಮನಿಸಿದಾಗ ನನ್ನ ಶೀರ್ಷಿಕೆಗೆ ಸಂಬಂಧಿಸಿದಂತೆ ಅತ್ಯಲ್ಪ ವಿಷಯಗಳು ಉಲ್ಲೇಖಗೊಂಡಿವೆ ಆದರೆ ಅದರ ಬಗ್ಗೆ ಸಂಪೂರ್ಣ ಅಧ್ಯಯನ ನಡೆದಿಲ್ಲ. ಕೆಲವು ಗ್ರಂಥಗಳಲ್ಲಿ ಶೈವಧರ್ಮದ ಪಂಥಗಳಾದ ಕಾಪಾಲಿಕ ಕಾಳಾಮುಖ ಪಾಶುಪತ, ಮಹಾವ್ರತಕ್ಕೆ ಸಂಬಂಧಿಸಿದ ಅಧ್ಯಯನವಾಗಿದ್ದರೂ ಹಾವೇರಿ ಜಿಲ್ಲೆಯ ಕುರಿತು ವಿವರಣಾತ್ಮಕವಾದ ಅಧ್ಯಯನ ನಡೆದಿಲ್ಲವೆಂದರೆ ತಪ್ಪಾಗಲಾರದು, ಆದ್ದರಿಂದ ನಾನು ಹಾವೇರಿ ಜಿಲ್ಲೆಯ ಶೈವ ಪರಂಪರೆಯ ಶಾಸನಗಳು, ದೇವಾಲಯಗಳು, ಯತಿ, ಪರಂಪರೆ, ಶಿಲ್ಪಗಳ ಮತ್ತು ಆಚರಣೆಗಳ ಕುರಿತು ಕ್ಷೇತ್ರ ಕಾರ್ಯ ಕೈಗೊಂಡು ಸಂಶೋಧನೆ ಮಾಡಿ ಈ ಎಲ್ಲಾ ಮಾಹಿತಿ ಸಂಗ್ರಹಿಸಿ ಪರಿಶೀಲಿಸಿ, ವಿಶ್ಲೇಷಿಸಿ ಅಧ್ಯಯನ ಮಾಡಿ ಮಾಹಿತಿ ನೀಡಿ ಪ್ರಸ್ತುತ ಅಧ್ಯಯನದಲ್ಲಿ ಜಿಲ್ಲೆಯ ಕಾಳಾಮುಖರ ಪರಂಪರೆ ಮತ್ತು ಸಂಸ್ಕೃತಿಯ ಅಧ್ಯಯನ ಮಾಡುವ ಪ್ರಯತ್ನ ಮಾಡಲಾಗಿದೆ.

೧.೫ ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳಲ್ಲಿ ಮೊದಲನೆಯ ಅಧ್ಯಾಯವು ಪೀಠಿಕೆಯಾಗಿದ್ದು ಅದರಲ್ಲಿ ಅಧ್ಯಯನದ ಉದ್ದೇಶ ಸ್ವರೂಪ, ವ್ಯಾಪ್ತಿ, ಜಿಲ್ಲೆಯ ಐತಿಹಾಸಿಕ ಧಾರ್ಮಿಕ ಹಿನ್ನೆಲೆ ಹಾಗೂ ಇದುವರೆಗೂ ನಡೆದಿರುವ ಅಧ್ಯಯನಗಳ ಬಗ್ಗೆ ಮಾಹಿತಿಯನ್ನು ಒಳಗೊಂಡಂತೆ ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯವು ಶೈವಪರಂಪರೆಗೆ ಸಂಬಂಧಿಸಿದ್ದು, ಇಲ್ಲಿ ಶೈವ ಪಂಥಗಳಾದ ಪಾಶುಪತ, ಕಾಪಾಲಿಕ, ಕಾಳಾಮುಖ, ಹಾಗೂ ಶೈವ ಪರಂಪರೆಯ ಆದಿಶೈವ, ಶುದ್ಧಶೈವ, ಮಿಶ್ರಶೈವ, ಕಾಶ್ಮೀರಶೈವ, ಶಾಕ್ತರು/ಕೌಳ ಕುರಿತು ವಿಷಯವನ್ನು ವಿವರಿಸಲಾಗಿದೆ.

ಮೂರನೆಯ ಅಧ್ಯಾಯವು ಕರ್ನಾಟಕದಲ್ಲಿ ಕಾಳಾಮುಖರು ಅವರ ಪರಂಪರೆಗಳಾದ ಶಕ್ತಿಪರಿಷೆ, ಸಿಂಹಪರಿಷೆ, ಕಿಟ್ಟಗಾವಿ, ಸಿಂಹಪರಿಷೆಯ ಯತಿಗಳ ಪರಂಪರೆ ಇತ್ಯಾದಿ ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಜಿಲ್ಲೆಯ ಕಾಳಾಮುಖ ದೇವಾಲಯಗಳು ಮತ್ತು ಶಾಸನಗಳು, ದೇವಾಲಯ ಸಂಸ್ಕೃತಿ ಮತ್ತು ಯತಿಗಳು, ಸಪ್ತಮಾತೃಕೆಯರು, ಭೈರವ, ಸರಸ್ವತಿ, ಸೂರ್ಯಾರಾಧನೆ, ಶಿಲ್ಪಗಳು, ಮುಂತಾದ ಆಚರಣೆಗಳನ್ನು ಕುರಿತು ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಚಲನಶೀಲ ಸಮಾಜ ಮತ್ತು ಕಾಳಾಮುಖರ ಅಸ್ತಿತ್ವದಲ್ಲಿ ಬಳ್ಳಿಗಾವೆಯ ಪರಿಸರದಲ್ಲಿ ಕಂಡುಬರುವ ಕಾಳಾಮುಖಯತಿಗಳ ಪರಂಪರೆ. ಶಾಸನಗಳಲ್ಲಿ ಅವರ ವರ್ಣನೆ, ಮತ್ತು ಆಚರಣೆಗಳ ಕುರಿತ ಮಾಹಿತಿಯನ್ನು ಪ್ರಚುರಪಡಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಕಾಳಾಮುಖರ ಇಂದಿನ ಅಸ್ತಿತ್ವವಿರುವ ಕುರಿತು ಜಿಲ್ಲೆಯಲ್ಲಿ ಅಲ್ಲಲ್ಲಿ ಉಳಿದುಕೊಂಡು ಬಂದಿರುವ ಕಾಳಾಮುಖ ಪರಂಪರೆ ಮತ್ತು ವೀರಮಾಹೇಶ್ವರ ಪುರವಂತಿಕೆ, ಗುಗ್ಗಳ ಆಚರಣೆ ಬಗ್ಗೆ ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು ಮೇಲೆ ತಿಳಿಸಿದ ಎಲ್ಲಾ ಅಧ್ಯಯನಗಳ ಕೂಲಂಕುಷ ಮಾಹಿತಿಯನ್ನು ಇಲ್ಲಿ ಚರ್ಚಿಸಲಾಗಿದ್ದು, ಕೊನೆಯಲ್ಲಿ ಗ್ರಂಥಋಣ ಮತ್ತು ಛಾಯಾಚಿತ್ರಗಳನ್ನು ಒಳಗೊಂಡಂತೆ ಈ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೧.೬ ವ್ಯಾಪ್ತಿ

ಸಂಶೋಧನೆ ಯಶಸ್ಸು ಪಡೆಯಲು ಆ ಸಂಶೋಧನೆಗೆ ವ್ಯಾಪ್ತಿ ಅಥವಾ ಮಿತಿ ಇರುವುದು ಮುಖ್ಯ ಒಂದು ನಿರ್ದಿಷ್ಟ ಹಾಗೂ ಉದ್ದೇಶಪೂರಿತವಾದ ಸಂಶೋಧನೆ ಸಂಶೋಧಕನಿಗೆ ಗೊಂದಲ ನಿವಾರಿಸುತ್ತದೆ. ನಿರ್ದಿಷ್ಟ ವ್ಯಾಪ್ತಿಯಲ್ಲಿ ರೂಪಗೊಂಡ

ಸಂಶೋಧನೆ ಮಾತ್ರ ಕ್ರಮಬದ್ಧವಾದ ಹಾಗೂ ಸ್ಪಷ್ಟವಾದ ಅಧ್ಯಯನವನ್ನು ಕಟ್ಟಿಕೊಡಲು ಸಾಧ್ಯ. ಪ್ರಸ್ತುತ ಅಧ್ಯಯನದ ಶೀರ್ಷಿಕೆಯಲ್ಲಿ ಸೂಚಿಸಿರುವಂತೆ ಸಂಶೋಧನೆಯು ಹಾವೇರಿ ಜಿಲ್ಲೆಯ ಭೂಪ್ರದೇಶಕ್ಕೆ ಸೀಮಿತವಾಗಿದ್ದು ಜಿಲ್ಲೆಯ ಏಳು ತಾಲೂಕುಗಳಲ್ಲಿ ಕಂಡು ಬರುವ ಶಾಸನ, ದೇವಾಲಯಗಳನ್ನು ಐತಿಹ್ಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಜಿಲ್ಲೆಯ ಶಾಸನಗಳು ಆಧುನಿಕ ಗಡಿರೇಖೆಯಾದ ಹಾವೇರಿ ಜಿಲ್ಲೆಯ ವ್ಯಾಪ್ತಿಯನ್ನು ಮೀರಿ ನಿಂತಿವೆ. ಪ್ರಾಚೀನ ಕರ್ನಾಟಕದ ಪ್ರಾಂತಗಳಾದ ನಾಗರಖಂಡ ೭೦ ರ ನೆರೆಯ ಜಿಲ್ಲೆಯ ಬಳ್ಳಿಗಾವೆಯ ಪ್ರಭಾವ ಹೆಚ್ಚಾಗಿ ಬೀರಿರುವುದರಿಂದ ಅಲ್ಲಿಯ ಮತ್ತಿತರ ಪ್ರದೇಶ ಶಾಸನಗಳನ್ನು ಸಾಂದರ್ಭಿಕವಾಗಿ ಬಳಸಿಕೊಳ್ಳಲಾಗಿದೆ. ಹೀಗಾಗಿ ಸಂಶೋಧನ ಪ್ರಬಂಧದ ಶೀರ್ಷಿಕೆಗೆ ಅನುಗುಣವಾಗಿ ಹಾವೇರಿ ಜಿಲ್ಲೆಯ ಕಾಳಾಮುಖರ ಶಾಸನಗಳು ಪರಂಪರೆಯನ್ನು ಆಧಾರವಾಗಿಟ್ಟುಕೊಂಡು ಅಧ್ಯಯನವನ್ನು ಮಿತಿಗೊಳಿಸಿ ಪ್ರಬಂಧವನ್ನು ಸಿದ್ಧಗೊಳಿಸಲಾಗಿದೆ.

೧.೭ ಜಿಲ್ಲೆಯ ಐತಿಹಾಸಿಕ ಮತ್ತು ಧಾರ್ಮಿಕ, ಸಾಂಸ್ಕೃತಿಕ ಹಿನ್ನೆಲೆ

ಅವಿಭಜಿತ ಧಾರಾವಾಡ ಜಿಲ್ಲೆಯ ಒಂದು ತಾಲೂಕಾಗಿದ್ದ ಹಾವೇರಿ ಕ್ರಿ.ಶ ೧೯೯೭ ಅಗಸ್ಟ ೨೪ ರಂದು ಒಂದು ಜಿಲ್ಲೆಯಾಗಿ ರೂಪಗೊಂಡಿತು. ಹಾವೇರಿ ಜಿಲ್ಲೆಯು ಮಧ್ಯಕರ್ನಾಟಕದಲ್ಲಿ ೧೪.೨೮ ಮತ್ತು ೧೪.೫೯ ಅಕ್ಷಾಂಶ ಮತ್ತು ೭೫.೦೭ ಮತ್ತು ೭೫.೩೮ ರೇಖಾಂಶಗಳ ಮಧ್ಯದಲ್ಲಿದ್ದು ಉತ್ತರ ಕರ್ನಾಟಕದ ಹೆಬ್ಬಾಗಿಲು ಎನಿಸಿದೆ. ಈ ಜಿಲ್ಲೆಯನ್ನು ಉತ್ತರದಲ್ಲಿ ಧಾರವಾಡ, ಗದಗ, ಜಿಲ್ಲೆಗಳೂ ಪೂರ್ವದಲ್ಲಿ ಬಳ್ಳಾರಿ, ದಾವಣಗೆರೆ ಜಿಲ್ಲೆಗಳೂ ಪಶ್ಚಿಮದಲ್ಲಿ ಉತ್ತರಕನ್ನಡ ಜಿಲ್ಲೆಯು ದಕ್ಷಿಣದಲ್ಲಿ ಶಿವಮೊಗ್ಗ, ದಾವಣಗೆರೆ ಜಿಲ್ಲೆಗಳು ಸುತ್ತುವರಿದಿವೆ. ಬೆಳಗಾವಿ ವಿಭಾಗಕ್ಕೆ ಸೇರಿದ ಈ ಜಿಲ್ಲೆಗೆ ಶಿಗ್ಗಾವಿ, ಹಾವೇರಿ, ಸವಣೂರು, ಬ್ಯಾಡಗಿ, ಹಾನಗಲ್ಲು, ಹಿರೇಕೆರೂರು ಮತ್ತು ರಾಣೆಬೆನ್ನೂರು ಹೀಗೆ ಏಳು ತಾಲೂಕುಗಳು ಸೇರಿವೆ. ಇವುಗಳಲ್ಲಿ ೧೯ ಹೋಬಳಿಗಳು, ೬೯೮ ಗ್ರಾಮಗಳು, ೭ ಪುರಸಭಾ ಆಡಳಿತವಿರುವ ಪಟ್ಟಣಗಳನ್ನೊಳಗೊಂಡಿದ್ದು, ೨೮೨೮ ಚ.ಕಿ.ಮಿ .ವಿಸ್ತೀರ್ಣ ಹೊಂದಿದೆ. ರಾಜ್ಯದ ಒಟ್ಟು ವಿಸ್ತೀರ್ಣದ ಶೇ೨.೫೩ ರಷ್ಟು ಇದೆ. ಹಾನಗಲ್ಲು ತಾಲೂಕು ಅತಿ ಹೆಚ್ಚು ಗ್ರಾಮಗಳನ್ನು(೧೬೬)ಹೊಂದಿರುವ, ಸವಣೂರು ಅತೀ ಕಡಿಮೆ ಗ್ರಾಮಗಳನ್ನು(೬೭)ಹೊಂದಿದ ತಾಲೂಕುಗಳಾಗಿವೆ. ಉಳಿದಂತೆ ಬ್ಯಾಡಗಿ ೭೧, ಹಾವೇರಿ ೯೮ ಹಿರೇಕೆರೂರು ೧೩೩, ರಾಣೆಬೆನ್ನೂರು

೧೧೧, ಶಿಗ್ಗಾವಿ ೧೦೨ ಗ್ರಾಮಗಳನ್ನು ಹೊಂದಿದೆ. ಹೀಗೆ ಅಸ್ಥಿತ್ವಕ್ಕೆ ಬಂದ ಹಾವೇರಿ ಜಿಲ್ಲೆಯ ಐತಿಹಾಸಿಕ ಹಿನ್ನಲೆಯನ್ನು ಅವಲೋಕಿಸೋಣ.

ಜಿಲ್ಲೆಯ ಪ್ರಾಗೈತಿಹಾಸ

ಪ್ರಾಗೈತಿಹಾಸಿಕ ಕಾಲದಲ್ಲಿ ಶಿಲಾಯುಗದ ಮಾನವರು ಈ ಭಾಗದಲ್ಲಿ ವಾಸವಾಗಿರುವ ಕುರುಹುಗಳು ಸಾಕಷ್ಟು ಈ ಜಿಲ್ಲೆಯಲ್ಲಿ ದೊರೆತಿವೆ. ಇಲ್ಲಿ ಹರಿಯುವ ತುಂಗಭದ್ರಾ, ವರದಾ ನದಿಗಳು ಪ್ರಾಗೈತಿಹಾಸಿಕ ನೆಲೆಗಳಿಗೆ ಕಾರಣೀಭೂತವಾಗಿವೆ. ಹಿರೇಕೆರೂರು ತಾಲೂಕಿಗೆ ಸೇರಿದ ಹಳ್ಳೂರು, ನಾಗವಂದ, ಭೈರನಪಾದ, ಗುಡ್ಡದಮಾದಾಪುರ, ಶಿರಗಂಬಿ ಪ್ರಾಗೈತಿಹಾಸಿಕ ನೆಲೆಗಳಾಗಿವೆ. ಇವುಗಳ ಇಡಿಯಾದ ಕಾಲವನ್ನು ೧೫೦,೦೦೦ ವರ್ಷಗಳ ಈಚಿನಿಂದ ಪೂರ್ವದಲ್ಲಿಯ ಸಮಯವೆಂದು ನಿರ್ಧರಿಸಲಾಗಿದೆ. (ಇಲ್ಲಿ ೨೦೦೦ ವರ್ಷಗಳ ಹಿಂದಿನ ಕಾಲದ ವಸ್ತುಗಳು ದೊರೆತಿವೆ). ಕ್ರಿ.ಶ ೧೯೬೦ರ ದಶಕದಲ್ಲಿ ಹಳ್ಳೂರಿನಲ್ಲಿ ನಡೆದ ಉತ್ಖನನವು ಮಹತ್ವದ ಪುರಾವೆಯನ್ನು ನೀಡಿರುವುದು ಗಮನಾರ್ಹ. ಇಲ್ಲಿ ಮಾನವನು ಮೊದಲ ಬಾರಿಗೆ ರಾಗಿಯನ್ನು ಬಳಸಿರುವುದಕ್ಕೆ ಸಾಕ್ಷಾಧಾರ ದೊರೆತಿದೆ.[ಮಹದೇವ.ಸಿ, ವಾಸುದೇವನ್, ರಮೇಶ ನಾಯ್ಕ,; ಕರ್ನಾಟಕ ದೇವಾಲಯ ಕೋಶ ಹಾವೇರಿ ಜಿಲ್ಲೆ, ಪ್ರಸ್ತಾವನೆ ಪುಟ.೯] ದೊರೆತ ಕಲ್ಲಿನ ಆಯುಧಗಳು ಶಿಲಾಯುಗಕ್ಕೆ ಸಂಬಂಧಿಸಿವೆ. ಇಲ್ಲಿ ದೊರೆತ ಕಬ್ಬಿಣದ ಉಪಕರಣಗಳು ಇತಿಹಾಸ ಪೂರ್ವ ಕಾಲದ ಮಾನವನು ದಕ್ಷಿಣ ಭಾರತದಲ್ಲಿ ಬಹು ಹಿಂದೆಯೆ ಸುಮಾರು ಕ್ರಿ.ಶ.ಪೂರ್ವ ೧೨೦೦ರ ಸುಮಾರಿಗೆ ಕಬ್ಬಿಣದ ಬಳಕೆಯನ್ನು ಅರಿತಿರುವುದಕ್ಕೆ ಸಾಕ್ಷಿ ಹೇಳುತ್ತವೆ. ಇಲ್ಲಿ ದೊರೆತ ಗಡಿಗೆಗಳಲ್ಲಿ ತುಂಬಿಟ್ಟ ರಾಗಿಯು ಅತ್ಯಂತ ಪ್ರಾಚೀನ ಕಾಲದಲ್ಲಿಯೇ ಈ ಭಾಗದ ಜನರು ವ್ಯವಸಾಯವನ್ನು ಕೈಗೊಂಡಿದ್ದಲ್ಲದೆ ರಾಗಿ ಬೆಳೆದುದಕ್ಕೆ ಸಾಕ್ಷಿ ಹೇಳುತ್ತದೆ.

ಬ್ಯಾಡಗಿ ತಾಲೂಕು ಮೋಟೆಬೆನ್ನೂರು ಬಳಿಯ ಬಾಚಿಗುಡ್ಡದಲ್ಲಿಯ ಕಲ್ಲಿನ ಆಯುಧಗಳು ಮತ್ತು ಹಿಂದಿನಕಾಲದ ಸಂಸ್ಕೃತಿಗಳ ಮಡಿಕೆ, ಕುಡಿಕೆಗಳೂ ದೊರೆತಿವೆ. ಸವಣೂರು ತಾಲೂಕಿನ ಜಲ್ಲಾಪುರವನ್ನು ಶಿಲಾಯುಗದ ನೆಲೆಯೆಂದು ಗುರುತಿಸಲಾಗಿದೆ. ಹಾನಗಲ್ಲು ತಾಲೂಕು ವರ್ದಿಯಲ್ಲಿ ಹಳೆಶಿಲಾಯುಗದ ಸಲಕರ'ಣೆಗಳು ದೊರೆತಿವೆ. ರಾಣೆಬೆನ್ನೂರು ತಾಲೂಕು ನದಿಹರಳಹಳ್ಳಿಯಲ್ಲಿ ಸೂಕ್ಷ್ಮಶಿಲಾಯುಗಧ (ಮೈಕ್ರೋಲಿತ್ಸ್) ಅವಶೇಷಗಳು ದೊರೆತಿವೆ. ಕಬ್ಬಿಣಯುಗದ ಬೃಹತ್ ಶಿಲಾ (ಮೆಗಾಲಿಥಿಕ್) ಸಂಸ್ಕೃತಿಯ ಮಡಿಕೆ ಕುಡಿಕೆಗಳು ಹಳ್ಳೂರು, ಪುರದಕೇರಿ, ಹಾದರಗೇರಿ (ಇಂದಿನ ಹರನಗಿರಿ)ಯಲ್ಲಿ

ಲಭ್ಯವಾಗಿವೆ. ಈ ಮಡಿಕೆಗಳ ಮೇಲೆ ತಿಳಿ ಬಿಳಿಬಣ್ಣದ ಚಿತ್ರಗಳಿವೆ. ಜನರಿಗೆ ಕುದುರೆ ಅಪರಿಚಿತವಾಗಿತ್ತು ಎಂಬುದು ತಿಳಿಯುತ್ತದೆ. [ಪಾಟೀಲ್ ಭೋಜರಾಜ.; (ಜಿಲ್ಲಾ ಸಂ) ಕರ್ನಾಟಕ ಗ್ರಾಮ ಚರಿತ್ರೆ ಕೋಶ ಹಾವೇರಿ. ಜಿಲ್ಲಾ ಸಂಪುಟ–೨, ಪುಟ, ೧]

ಬೃಹತ್ ಶಿಲಾಯುಗದ ಜನರ ಕಲ್ಮನೆಗಳು, ಶಿಲಾವೃತ್ತಗಳು ಈ ಜಿಲ್ಲೆಯಲ್ಲಿ ಕಂಡು ಬಂದಿವೆ. ರಾಣೆಬೆನ್ನೂರು ತಾಲೂಕು ಅಸುಂಡಿ, ಕೋಟಿಹಾಳ, ಕೂಸನೂರು ಹಾಗೂ ಮಲಕನಹಳ್ಳಿಗಳಲ್ಲಿಯೂ, ಹಾವೇರಿ ತಾಲೂಕು ಬೆನಕನಹಳ್ಳಿ ಅಗಡಿಗಳಲ್ಲಿಯೂ, ಬ್ಯಾಡಗಿ ತಾಲೂಕು ಮೋಟೇಬೆನ್ನೂರು, ಕದರಮಂಡಲಗಿಗಳಲ್ಲಿ ಇಂಥ ಗೋರಿಗಳಿವೆ. ಇವುಗಳನ್ನು ಸ್ಥಳೀಯರು ಪಾಂಡವರ ಕಟ್ಟೆ, ಸಿದ್ದರಕಟ್ಟೆ ಎಂದೆಲ್ಲಾ ಕರೆಯುತ್ತಾರೆ. ಇವುಗಳ ಕಾಲಮಾನ ಕ್ರಿ.ಪೂ.೧೧೦೦ ರಿಂದ ಕ್ರಿ.ಪೂ.೩೦೦. ಎಂದು ಊಹಿಸಲಾಗಿದೆ. [ಅದೇ, ಪುಟ, ೩೪]

ಪೌರಾಣಿಕ ಹಿನ್ನೆಲೆ

ಹಾವೇರಿ ಜಿಲ್ಲೆಯ ಅನೇಕ ಗ್ರಾಮಗಳು ತಮ್ಮ ಊರ ಹೆಸರಿನೊಂದಿಗೆ ರಾಮಾಯಣ, ಮಹಾಭಾರತಗಳ ಪೌರಾಣಿಕ ವ್ಯಕ್ತಿಗಳೊಡನೆ ಇಲ್ಲವೆ ಘಟನೆಗಳೊಂದಿಗೆ ತಳುಕು ಹಾಕಿಕೊಂಡಿವೆ. ಹಾನಗಲ್ಲು, ಮಹಾಭಾರತ ಕಥೆಯಲ್ಲಿ ಬರುವ ವಿರಾಟರಾಜನ ರಾಜಧಾನಿ ಎಂಬ ನಂಬಿಕೆ ೧೨ನೇ ಶತಮಾನದ ಶಾಸನಗಳಲ್ಲಿ ವ್ಯಕ್ತವಾಗಿದೆ. ಹಾವೇರಿಯ ಪಟ್ಟಣವನ್ನು ನಳಮಹಾರಾಜನು ಸ್ಥಾಪಿಸಿದನೆಂದು ಅಲ್ಲಿಯ ಒಂದು ಶಾಸನ ಉಲ್ಲೇಖಿಸುತ್ತದೆ. ಹಿರೇಕೆರೂರು ತಾಲೂಕು ಕಡೂರು ಗ್ರಾಮದ ಒಂದು ಶಾಸನವು ಊರ ಹೆಸರಿನ ಬಗೆಗೆ ಪೌರಾಣಿಕ ಕಥೆಯೊಂದನ್ನು ನಮ್ಮೆದುರು ಇಡುತ್ತದೆ. ಪರುಶುರಾಮ ತನ್ನ ತಂದೆ ಜಮದಗ್ನಿ ಮಹರ್ಷಿಗಳ ಸಾವಿಗೆ ಕಾರಣವಾದ ಸಹಸ್ರಾರ್ಜುನ (ಕಾರ್ತ್ಯವೀರ)ನ ಸಹಸ್ರ ತೋಳುಗಳನ್ನು ಇಲ್ಲಿಯೇ ಕಡಿದು ಹಾಕಿದ್ದರಿಂದ ಕಡೂರು ಆಯಿತಂತೆ. ಹಾನಗಲ್ಲು ತಾಲೂಕಿನ 'ದಶರಥಕೊಪ್ಪ'ವು ಶ್ರೀರಾಮ ಚಂದ್ರನ ತಂದೆಯ ಹೆಸರನ್ನು ಹೊಂದಿದೆ. ಅಲ್ಲದೆ ಈ ಊರಲ್ಲಿ ದಶರಥ ಮಹಾರಾಜನ ದೇವಾಲಯವೂ ಇದೆ. ಹಾನಗಲ್ಲ ತಾಲೂಕಿನ 'ತುರುಬಿಗುಡ್ಡ'ವು ವಿರಾಟರಾಯನ ತುರುಮಂದೆಯನ್ನು ಮೇಯಿಸಲು ಈ ಗುಡ್ಡದಲ್ಲಿ ತರುಬುತ್ತಿದ್ದುದರಿಂದ ತರುಬಿಗುಡ್ಡವು ಮುಂದೆ ತುರುಬಿಗುಡ್ಡವಾಯಿತಂತೆ. ಅದರಂತೆ ಹಿರೇಕೆರೂರು ತಾಲೂಕು ಸೀತಿಕೊಂಡವು ಶ್ರೀರಾಮನಚಂದ್ರನು ಸೀತಾದೇವಿಯ ಸತ್ವಪರೀಕ್ಷೆಗೆ ಇಲ್ಲಿ 'ಅಗ್ನಿಕುಂಡ' ನಿರ್ಮಿಸಿದ್ದನಂತೆ. ಆ 'ಸೀತಾಕೊಂಡ'ವೇ 'ಸೀತಿಕೊಂಡ'

ಎಂದಾಯಿತು. ಇದಕ್ಕೆ ಸಮೀಪದ ಶ್ರೀರಾಮನಕೊಪ್ಪ ಗ್ರಾಮವು ಶ್ರೀರಾಮನು ಬಂದುಹೋದ ಹಳ್ಳಿಯಂತೆ. ಇಂತಹ ಐತಿಹ್ಯಗಳು ಹಾವೇರಿ ಜಿಲ್ಲೆಯ ಒಂದೊಂದು ತಾಲೂಕಿನಲ್ಲಿಯೂ ಸಾಕಷ್ಟು ಕಂಡುಬರುತ್ತವೆ. ನವಾಬರ ಆಡಳಿತದಲ್ಲಿದ್ದ ಫಕೀರನಂದಿಹಳ್ಳಿ ಗ್ರಾಮದಲ್ಲಿ ಫಕೀರರು ಹಾಗೂ ಸೂಫೀ ಸಂತರು ಓಡಾಡಿದ ಬಗ್ಗೆ ಐತಿಹ್ಯಗಳಿವೆ. [ಅದೇ, ಪುಟ, ೩೪]

ಇತಿಹಾಸ ಪೂರ್ವಕಾಲ ; ಹಾಗೂ ಐತಿಹ್ಯಗಳು

ಪ್ರಾಚೀನ ಕಾಲದಲ್ಲಿ ಕುಂತಳ ದೇಶದ ಭಾಗವಾಗಿದ್ದ ಈ ಜಿಲ್ಲೆಯು ಹಿರೇಕೆರೂರು ತಾಲೂಕಿನ ಹಳ್ಳೂರು ಮತ್ತು ಕುಡಪಲಿ ಗ್ರಾಮಗಳು ಇತಿಹಾಸ ಪೂರ್ವಕಾಲಕ್ಕೆ ಸೇರಿದವುಗಳಾಗಿವೆ. ಸುಮಾರು ಕ್ರಿ.ಪೂ.೧೨೦೦ರ ಸುಮಾರಿಗೆ ಕಬ್ಬಿಣದ ಆಯುಧೋಪಕರಣಗಳನ್ನು ದಕ್ಷಿಣ ಭಾರತದಲ್ಲಿ ಬಳಸಿರುವುದನ್ನು ಕಾಣಬಹುದು. ಪ್ರಾಗ್ಯೈತಿಹಾಸಿಕ ಕಾಲಕ್ಕೆ ಸಂಬಂಧಿಸಿದಂತೆ ೧೯೬೦ರ ದಶಕದಲ್ಲಿ ಹಳ್ಳೂರಿನಲ್ಲಿ ನಡೆದ ಉತ್ಖನನದಲ್ಲಿ ಮಾನವನು ಮೊದಲ ಬಾರಿಗೆ ರಾಗಿಯನ್ನು ಬಳಸಿರುವುದಕ್ಕೆ ಸಾಕ್ಷ್ಯಾಧಾರಗಳು ದೊರೆತಿವೆ. ಈ ನೆಲೆಯ ಕಾಲವನ್ನು ಕ್ರಿ.ಪೂ. ೧೦೦೦ ವರ್ಷಗಳೆಂದು ನಿರ್ಧರಿಸಲಾಗಿದೆ. ಇದೇ ರೀತಿ ಕುಡುಪಲಿ ಗ್ರಾಮದಲ್ಲಿ ಶಾತವಾಹನರ ಕಾಲದ ಅವಶೇಷಗಳು ದೊರೆತಿದ್ದು ಅವುಗಳಲ್ಲಿ ಮಡಿಕೆ ಚೂರುಗಳು ಪ್ರಮುಖವಾಗಿದ್ದು, ಹಿರೇಕೆರೂರು ತಾಲೂಕಿನ ತಡಕನಹಳ್ಳಿ, ಮೇದೂರು, ಕಮಲಾಪುರ ಹಾಗೂ ಹಾನಗಲ್ ತಾಲೂಕಿನ ಗುಡಗುಡಿ ಗ್ರಾಮಗಳಲ್ಲಿ ಬೃಹತ್‌ಶಿಲಾಯುಗದ ಕಾಲಕ್ಕೆ ಸೇರಿದ ಅವಶೇಷಗಳು ಕಂಡುಬರುತ್ತವೆ.

ಬೃಹತ್‌ಶಿಲಾಯುಗದ ಜನರು ಭಾರೀಗಾತ್ರದ ಕಲ್ಲು ಚಪ್ಪಡಿಗಳನ್ನು ಬಳಸಿ ಮೇಜಿನಂತೆ ಕಾಣುವ ಕಲ್ಮನೆಗಳನ್ನು ಹಾಗೂ ಶಿಲಾವೃತ್ತಗಳು ಜಿಲ್ಲೆಯಲ್ಲಿ ಹಲವು ಗ್ರಾಮಗಳಲ್ಲಿ ಕಂಡುಬಂದಿವೆ. ಅವುಗಳಲ್ಲಿ ಹಿರೇಕೆರೂರು ತಾಲೂಕಿನ ನೆಶ್ವಿ ಗ್ರಾಮದಲ್ಲಿ [ಮನ್ಸಾಬಾರ್ ಕಲವೀರ, ಡೆಕ್ಕನ್ ಹೆರಾಲ್ಡ್, ನ್ಯೂಜ್ ಪೇಪರ್.] ಬೃಹತ್‌ಶಿಲಾಯುಗದ ಎರಡು ಸಮಾಧಿಗಳು ಕಂಡುಬರುತ್ತವೆ. ಎಂದಿರುವರು. ಇವು ೨೦೦೦ ವರ್ಷಗಳ ಹಿಂದಿನವು ಎಂದು ಗೊತ್ತಾಗುತ್ತದೆ ಹಾಗೂ ಅಸುಂಡಿ, ಕೋಟಿಹಾಳ, ಕುಸೂನೂರು, ಮಲಕನಹಳ್ಳಿ, ರಾಣೆಬೆನ್ನೂರು ತಾಲೂಕಿನ ಬೆನಕನಹಳ್ಳಿ, ಬ್ಯಾಡಗಿ ತಾಲೂಕಿನ ಮೋಟೆಬೆನ್ನೂರು, ಕದರಮುಂಡಲಗಿ ಹಾಗೂ ಹಿರೇಕೆರೂರು ಮುಂತಾದಕಡೆ ಇಂತಹ ಕಲ್ಮನೆಯಂಥ ಗೋರಿಗಳಿವೆ. ಶಿಲೆಯ ಹಲಗೆಗಳನ್ನು ಬಳಸಿ ಮಾಡಿದ ಈ ಬೃಹತ್‌ಕಲ್ಮನೆ

ಸಮಾಧಿಗಳನ್ನು ಪಾಂಡವರ ಕಟ್ಟಿ, ಸಿದ್ಧರ ಕಟ್ಟಿ, ಎಂದೆಲ್ಲಾ ಕರೆಯುತ್ತಾರೆ. ಇದಲ್ಲದೆ ದೊಡ್ಡ ದೊಡ್ಡ ಕಲ್ಲುಗಳಿಂದ ರಚಿಸಿದ ಶಿಲಾವೃತ್ತಗಳೂ ಇವೆ. [ಶಿವತಾರಕ್ ಕೆ.ಬಿ.; 'ಕರ್ನಾಟಕದ ಪುರಾತತ್ವ ನೆಲೆಗಳು' ಪುಟ, ೬೨೯–೪೪]

ಹಾವೇರಿ ಜಿಲ್ಲೆ ವಿವಿಧ ಆಳರಸರ ಆಳ್ವಿಕೆಗೆ ಒಳಪಟ್ಟಿರುವುದನ್ನು ಹಲವು ಆಧಾರಗಳಿಂದ ಗಮನಿಸಬಹುದು. ಅಂಥ ಅರಸು ವಂಶಗಳೆಂದರೆ –

ಶಾತವಾಹನರು ; ಮೌರ್ಯರ ಪತನದ ನಂತರ ವಿಶಾಲ ಸಾಮ್ರಾಜ್ಯ ಕಟ್ಟಿದ ಶ್ರೇಯಸ್ಸು ಶಾತವಾಹನರಿಗೆ ಸಲ್ಲುತ್ತದೆ. ಇವರು ಮೊದಲಬಾರಿಗೆ ದಕ್ಷಿಣದಲ್ಲಿ ವಿಶಾಲ ಸಾಮ್ರಾಜ್ಯದ ನಿರ್ಮಾತೃಗಳು ಹೌದು, ಈ ಅರಸುಮನೆತನಕ್ಕೆ ಹಾವೇರಿ ಜಿಲ್ಲೆಯ ಪ್ರದೇಶಗಳು ಅವರ ಅಧೀನಕ್ಕೆ ಒಳಪಟ್ಟಿರುವ ಕೆಲವು ಪ್ರದೇಶಗನ್ನು ಗಮನಿಸಬಹುದು. ಡಾ. ಶ್ರೀನಿವಾಸ ಪಾಡಿಗಾರ ಹೇಳುವಂತೆ, ಶಾತವಾಹನರ ಕಾಲದಲ್ಲಿ ಅನೇಕ ಸಂಖ್ಯೆಯಲ್ಲಿ ನಗರಗಳು ಅಸ್ತಿತ್ವಕ್ಕೆ ಬಂದವು. ಹಾವೇರಿ ಜಿಲ್ಲೆಯ ಸಂಗೂರು, ಹೊಸರಿತ್ತಿ, ಹಳ್ಳಿಹಾಳ, ತಡಸ, ಸಿಡೇನೂರು, ಆಣೂರು, ಕದರಮುಂಡಲಗಿ, ಮೋಟೆಬೆನ್ನೂರು, ಹೊನ್ನತ್ತಿ, ಮುದೇನೂರು, ಕೂನಬೇವು, ಇಟಗಿ, ನಿಟ್ಟೂರು, ಶಂಕರನಹಳ್ಳಿ ಮುಂತಾದ ಕಡೆ ಶಾತವಾಹನರ ಕಾಲದ ಅವಶೇಷಗಳು ಕಂಡುಬರುತ್ತವೆ.

ಅಲೆಕ್ಸಾಂಡ್ರಿಯಾದ ಗ್ರೀಕ್ ಭೂಗೋಳ ತಜ್ಞ ಟಾಲಮಿಯ(ಕ್ರಿ.ಶ.೧೩೦) ಉಲ್ಲೇಖಿಸುವ ಊರುಗಳಲ್ಲಿ ಜಿಲ್ಲೆಯ ಅಕ್ಕಿಆಲೂರು, ಮುಳಗುಂದ ಸೇರಿದ್ದು, ಅವು ಅಗ ಭಾರತ ಮತ್ತು ರೋಮ್‌ಗಳ ಮಧ್ಯ ನಡೆದ ಸಮೃದ್ಧ ವ್ಯಾಪಾರದಲ್ಲಿ ಈ ಜಿಲ್ಲೆಯ ಪಾಲನ್ನು ಕಾಣಬಹುದು. ಮತ್ತು ಹಾನಗಲ್ ತಾಲೂಕಿನ ಅಕ್ಕಿಆಲೂರಲ್ಲಿ ರೋಮನ್ ನಾಣ್ಯಗಳು ದೊರೆತಿರುವುದು ಇದಕ್ಕೆ ಪೂರಕವಾಗಿದೆ. ಒಟ್ಟಾರೆ ಶಾತವಾಹನರ ಕಾಲದಲ್ಲಿ ಕೈಮಗ್ಗದ ಉದ್ಯಮಕ್ಕೆ ಈ ಪ್ರದೇಶ ಪ್ರಸಿದ್ಧವಾಗಿತ್ತು ಎಂಬುದನ್ನು ಗಮನಿಸಬಹುದಾಗಿದೆ. [ಕಾಮತ್ ಸೂರ್ಯನಾಥ (ಸಂ); ಧಾರವಾಡ ಜಿಲ್ಲಾ ಗ್ಯಾಸೆಟಿಯರ್, ಪುಟ ೫೪.] ಅಂದರೆ ಈ ಪ್ರದೇಶ ವ್ಯಾಪಾರಕ್ಕೆ ಪ್ರಸಿದ್ದವಾಗಿದ್ದು, ನಗರಗಳ ವಿವರಗಳನ್ನು ಗಮನಿಸಿದರೆ, ಶಾತವಾಹನರ ಆಳ್ವಿಕೆಯಲ್ಲಿ ಹಾವೇರಿ ಭಾಗದಲ್ಲಿ ಉತ್ತಮ ಆರ್ಥಿಕಸ್ಥಿತಿಯಿತ್ತು ಎಂಬುದನ್ನು ಅರಿಯಬಹುದು.

ಕದಂಬರು : ಉತ್ತರಕನ್ನಡ ಜಿಲ್ಲೆಯ ಬನವಾಸಿಯಿಂದ ಕ್ರಿ.ಶ. ಸುಮಾರು ೩೨೫ ರಿಂದ ಆಳಲು ಆರಂಭಿಸಿದ ಮಯೂರ ಶರ್ಮನಿಂದ ಕದಂಬವಂಶ ಸ್ಥಾಪನೆಯಾಯಿತು. [ಅದೇ ಪುಟ ೫೪] ಕ್ರಿ.ಶ. ೪ನೇ ಶತಮಾನದಿಂದ ೬ನೇ ಶತಮಾನದವರೆಗೆ

ಬನವಾಸಿಯನ್ನು ರಾಜಧಾನಿ ಮಾಡಿಕೊಂಡು ಕುಂತಳನಾಡನ್ನು ಆಳಿದವರು, ಬನವಾಸಿ ಕದಂಬರು, ಆದಿಕದಂಬರು ಎಂದು ಹೆಸರಾದವರು. ಇವರಿಗೆ ಸಂಬಂಧಿಸಿದಂತೆ ಮೂರು ತಾಮ್ರ ಪಟಗಳು ದೇವಗಿರಿ(ಹಾವೇರಿ ತಾಲೂಕು)ಯಲ್ಲಿಯೂ, ಒಂದು ತಾಮ್ರಪಟ ಬ್ಯಾಡಗಿ ತಾಲೂಕು ಮುತ್ತೂರಿನಲ್ಲಿಯೂ ದೊರೆತಿವೆ.

ಮಯೂರವರ್ಮನಿಂದ ಐದನೇಯವನಾದ ಅರಸನು ಕಾಕುಸ್ಥವರ್ಮ, ಇವನ ಮೂವರು ಮಕ್ಕಳಲ್ಲಿ ಹಿರಿಯವನು ಬನವಾಸಿಯಿಂದ ರಾಜ್ಯಭಾರಮಾಡಿದರೆ, ಮೂರನೆಯವನಾದ ೧ನೇ ಕೃಷ್ಣವರ್ಮನು ಅಣ್ಣನಿಂದ ದೂರವಾಗಿ ಪ್ರತ್ಯೇಕರಾಜ್ಯ ಆಡಳಿತ ಪ್ರಾರಂಭಿಸಿದನು. ಇದಕ್ಕಾಗಿ ಅವನು ಆರಿಸಿಗೊಂಡು ರಾಜಧಾನಿ ಸ್ಥಾಪಿಸಿದ ಊರು ಹಾವೇರಿ ತಾಲೂಕಿನ ದೇವಗಿರಿ. ಈ ಊರಿಗೆ ತ್ರಿಪರ್ವತವೆಂದೂ ಕರೆಯಲಾಯಿತು. ೧ನೇ ಕೃಷ್ಣವರ್ಮನಿಂದ ಪ್ರಾರಂಭವಾದ ಈ ಶಾಖೆ ಮುಂದೆ ಆರು ತಲೆಮಾರುಗಳವರೆಗೆ ಇಲ್ಲಿಂದಲೆ ಆಡಳಿತ ನಡೆಸಿತು. ಕ್ರಿ.ಶ.೫೧೬ ರಿಂದ ೫೪೦ರ ವರೆಗೆ ಆಳಿದ ೨ನೇ ಕೃಷ್ಣವರ್ಮನು ಮೂಲವಂಶದ ಹರಿವರ್ಮನನ್ನು ಸೋಲಿಸಿ ತನ್ನ ರಾಜಧಾನಿ ಬನವಾಸಿಗೆ ಸ್ಥಳಾಂತರಿಸಿದನು. ಆದರೆ ಅವನ ಮೊಮ್ಮಕ್ಕಳು ಇಲ್ಲಿಯೇ ಉಳಿದರು.

ಬಾದಾಮಿ ಚಾಲುಕ್ಯರು : ಕ್ರಿ.ಶ. ೫೭೮ ರಿಂದ ೭೫೭ರ ವರೆಗೆ ಕನ್ನಡ ನಾಡನ್ನು ಆಳಿದ ಬಹು ಪ್ರತಿಷ್ಠಿತ ಪ್ರಾಚೀನ ಅರಸು ಮನೆತನವಿದು. ಇಂಥ ಪ್ರಾಚೀನತಮ ರಾಜಮನೆತನದ ಬಗೆಗೆ ದಾಖಲೆಗಳು ದೊರೆಯುವುದು ಬಹು ಅಪರೂಪದ ಸಂಗತಿ. ಆದರೆ ಹಾವೇರಿ ಜಿಲ್ಲೆಯ ಸವಣೂರು, ಶಿಗ್ಗಾವಿ, ಅಕ್ಕಿಆಲೂರುಗಳಲ್ಲಿ ತಾಮ್ರಪಟಗಳು ದೊರೆತಿವೆ. ಉಳಿದಡೆಗಳಲ್ಲಿ ಸುಮಾರು ೧೭ ಶಾಸನಗಳು ಲಭಿಸಿದ್ದು [ಪಾಟೀಲ್ ಭೋಜರಾಜ: ಸಂ. ಕರ್ನಾಟಕ ಗ್ರಾಮಚರಿತ್ರೆ ಕೋಶ, ಪುಟ.೩೫] ಇವರ ಇತಿಹಾಸದ ಮೇಲೆ ಬೆಳಕು ಚೆಲ್ಲಿವೆ. ಹಾವೇರಿ ತಾಲೂಕಿನ ಗಣಜೂರು ಎಂಬ ಚಿಕ್ಕ ಗ್ರಾಮದಲ್ಲಿ ಬಾದಾಮಿ ಚಾಲುಕ್ಯರ ವಿಕ್ರಮಾದಿತ್ಯನ ಒಂದು, ವಿಜಯಾದಿತ್ಯನ ಒಂದು ಶಾಸನ ನಿಂತಿವೆ. ವಿಜಯಾದಿತ್ಯನ ಇನ್ನೊಂದು ಶಾಸನ ಶಿಗ್ಗಾವಿ ತಾಲೂಕಿನ ಬನ್ನಿಕೊಪ್ಪದಲ್ಲಿದೆ.

ಹರಿಹರದ ಒಂದು ತಾಮ್ರ ಶಾಸನವು ಕ್ರಿ.ಶ. ೬೯೫ರಲ್ಲಿ ಬಾದಾಮಿ ಚಾಲುಕ್ಯರ ಚಕ್ರವರ್ತಿ ವಿನಯಾದಿತ್ಯನು ಹಾವೇರಿ ತಾಲೂಕು ಕರಜಗಿಯಲ್ಲಿ ಬೀಡು ಬಿಟ್ಟಿದ್ದನೆಂದು ಹೇಳುತ್ತದೆ. ಈ ಅರಸು ಮನೆತನಕ್ಕೆ ಸಂಬಂಧಿಸಿದ ೦೩ ಶಾಸನಗಳು ಈ ತಾಲೂಕಿನಲ್ಲಿವೆ. ೨ನೇಯ ವಿಕ್ರಮಾದಿತ್ಯನ (ಸುಮಾರು ಕ್ರಿ.ಶ.೮) ಶಿಡೇನೂರು ಶಾಸನ

ಮಹತ್ವದ್ದು, ಚಿಕ್ಕನಂದಿಹಳ್ಳಿ ಗ್ರಾಮವೊಂದರಲ್ಲಿಯೆ ಇವರ ೦೨ ಶಾಸನಗಳಿವೆ. ಎರಡು ಬಾದಾಮಿ ಚಾಲುಕ್ಯರ ಕೊಕ್ಕುಳಿ ವಿಕ್ರಮಾದಿತ್ಯನಿಗೆ (ಸುಮಾರು ಕ್ರಿ.ಶ.೮)ಸೇರಿದುವು. ಮುಳಗುಂದ ನಾಡನ್ನಾಳುವ ದೋಸಿರಾಜಿಗರ ಸೇನಾವರಸನಿಂದ ದಾನ ಹಾಗೂ ಕಣ ಅರ್ಕದಿ ಎಂಬುವನ ಮರಣವೊಂದರ ವಿಷಯ. ಇನ್ನೊಂದು ಕಿರಿಯಣ ಎಂಬುವನ ಮರಣದ ಪ್ರಸ್ತಾಪಿಸಿದೆ. [ಅದೇ ಪುಟ,೩೪] ಈ ವಿಶಾಲ ಸಾಮ್ರಾಜ್ಯ ಮುಂದೆ ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲೂ ಮುಂದುವರಿಯಿತು. ಕರ್ಣಾಟಕದ ಪ್ರತಿಷ್ಠೆ ಅಖಿಲ ಭಾರತ ಮಟ್ಟದಲ್ಲಿ ಬೆಳೆದು ಚಾಳುಕ್ಯರ ಸೇನೆಯ ಕರ್ಣಾಟಕಬಲ ಎಂದು ಪ್ರಸಿದ್ಧಿಗೆ ಬಂತಷ್ಟೇ ಅಲ್ಲಾ 'ಕರ್ಣಾಟಬಲಂ ಅಜೇಯಂ' ಎಂಬ ಕೀರ್ತಿಗೆ ಭಾಜನವಾಯಿತು. [ಕಾಮತ್ ಸೂರ್ಯನಾಥ (ಸಂ); ಧಾರವಾಡ ಜಿಲ್ಲಾ ಗ್ಯಾಸೆಟಿಯರ್, ಪುಟ ೫೭]

ರಾಷ್ಟ್ರಕೂಟರು : ಬನವಾಸಿಯಿಂದ ಬಾದಾಮಿಗೆ ಸರಿದ ರಾಜಧಾನಿ ಅಲ್ಲಿಂದ ಮಾನ್ಯಖೇಟಕ್ಕೆ ಸರಿಯುವ ಮೂಲಕ ರಾಷ್ಟ್ರಕೂಟರು ಸಾಮ್ರಾಟರಾದರು. ರಾಷ್ಟಕೂಟರನ್ನು ಕುರಿತ ಶಾಸನಗಳು ಕರ್ನಾಟಕದಲ್ಲಿ ಸುಮಾರು ೭೦೦ ಇರಬಹುದಾದರೆ ಹಾವೇರಿ ಜಿಲ್ಲೆಯೊಂದೇ ೧೦೦ ರಷ್ಟು ಶಾಸನಗಳನ್ನು ಹೊಂದಿದ್ದು ಈ ಮನೆತನದ ಇತಿಹಾಸಕ್ಕೆ ಆಧಾರ ಒದಗಿಸುವ ಮೂಲಕ ದಾಖಲೆ ಸ್ಥಾಪಿಸಿದೆ. ರಾಷ್ಟ್ರಕೂಟರ ಆರಂಭಿಕ ಅರಸ ಅಕಾಲವರ್ಷ ೧ನೇ ಕೃಷ್ಣನನ್ನು ಕುರಿತ ದಾಖಲೆಗಳು ವಿರಳ, ಅದರಲ್ಲಿ ಕನ್ನಡ ಶಾಸನಗಳು ತೀರ ವಿರಳ, ಹೀಗಿರುವಾಗ ಈ ಜಿಲ್ಲೆಯ ಸವಣೂರು ತಾಲೂಕಿನ ಹತ್ತಿಮತ್ತೂರು ಗ್ರಾಮ ಒಂದು ಕನ್ನಡ ಶಾಸನವನ್ನು ಕಾಣಿಕೆಯಾಗಿತ್ತಿರುವದು.

ರಾಷ್ಟ್ರಕೂಟರ ಮಾಂಡಳಿಕ ಅರಸರಲ್ಲಿ ಸುಪ್ರಸಿದ್ಧರಾದವರು ಮಾಟೂರು ಹಾಗೂ ಚಲ್ಲಕೇತನ ವಂಶದವರು. ಇವರೀರ್ವರನ್ನು ಕುರಿತು ಇಲ್ಲಿಯ ಶಾಸನಗಳು ವಿವರ ಒದಗಿಸುತ್ತವೆ. ಚಲ್ಲಕೇತನ ವಂಶದವರು ರಾಷ್ಟ್ರಕೂಟರ ಅಮೋಘವರ್ಷ ನೃಪತುಂಗನ ಕಾಲಕ್ಕೆ ಬೆಳಕಿಗೆ ಬಂದವರು. ಈ ವಂಶದ ಮೂಲಪುರುಷ ಬಂಕೆಯ ಚಕ್ರವರ್ತಿಗೆ ಬಲಗೈಯಾಗಿದ್ದನು. ಈತನು ಬಂಕಾಪುರದವನು. ಈತನ ಹೆಸರೇ ಊರಿಗೆ ಬಂದಿದೆ. ಈ ವಂಶದವರು ಬಂಕಾಪುರವನ್ನು ರಾಜಧಾನಿ ಮಾಡಿಕೊಂಡು ಬನವಾಸಿ ಮಂಡಲದ ಆಡಳಿತ ನಡೆಸಿದರು. [ಪಾಟೀಲ್ ಭೋಜರಾಜ.; (ಸಂ) ಕರ್ನಾಟಕ ಗ್ರಾಮಚರಿತ್ರೆ ಕೋಶ, ಪುಟ,೩೬]

ಅಮೋಘವರ್ಷನ ಕಾಲದ ಶಿಗ್ಗಾವಿ ತಾಲೂಕು ಬರಡೂರು ಶಾಸನದಲ್ಲಿ ಬನವಾಸಿ- ೧೨೦೦೦ ವನ್ನು ಇಂದ್ರ(ಬೇರೆ ಶಾಸನಗಳಲ್ಲಿ ಇಂದಪ್ರಯ್ಯ) ಆಳುತ್ತಿದ್ದು ಕಿಮುಳೆಯಲ್ಲಿ ಇದ್ದ ಅಗ್ರಹಾರದ ಉಲ್ಲೇಖವಿದೆ. ಬನವಾಸಿ ನಾಡಿನ ಭೌಗೋಳಿಕ ವ್ಯಾಪ್ತಿಯನ್ನು ನದಿಹರಳಹಳ್ಳಿ ಶಾಸನ ಹೀಗೆ ಹೇಳಿದೆ.

'ದೊರೆವೆತ್ತ ತುಂಗಭದ್ರೆಯ ವರದೆಯ ಮಧ್ಯ ಪ್ರದೇಶದೊಳ್ಸೊಗಯಿಸುಗುಂ।
ಸಿರಿಯತವರ್ಮ್ಮನೆ ಸಂಖ್ಯಾ ಕರಮೆನೆ ಬನವಾಸೆದೇಶವತುಳ ವಿಳಾಸಂ'

ವರದಾ ಮತ್ತು ತುಂಗಭದ್ರಾ ನದಿಗಳ ನಡುವಿನ ಪ್ರದೇಶದ ಭೂಭಾಗ ಇದರಲ್ಲಿ ಸೇರಿತ್ತು. ಈಗಿನ ಹೊನ್ನಾಳಿ, ಹಿರೇಕೆರೂರು, ರಾಣೆಬೆನ್ನೂರು, ಬ್ಯಾಡಗಿ, ಹಾವೇರಿ, ಹಾನಗಲ್ಲ ಪ್ರದೇಶವಾಗಿದೆ. ಇದು ಮೂಲ ಬನವಾಸಿನಾಡು ಆಗಿರಲಿಕ್ಕಿಲ್ಲ. [ಹಿರೇಮಠ.ಚನ್ನಬಸವಯ್ಯ, 'ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು' ಪುಟ.೧೭೯]

ಕಲ್ಯಾಣ ಚಾಲುಕ್ಯರು : ಈ ಅರಸು ಮನೆತನದ ಬಗೆಗೆ ಹಾವೇರಿ ಜಿಲ್ಲೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಾಸನಗಳಿವೆ. ಇವುಗಳಲ್ಲಿ ಅತ್ಯಂತ ಮಹತ್ವದ ಒಂದು ಶಾಸನ ಹಿರೇಕೆರೂರು ತಾಲೂಕಿನ ಚಿಕ್ಕೇರೂರಿನ ಬಳರಿ ದೇವಾಲಯದ ಮುಂದಿನದು. ಕಾಲ ಕ್ರಿ.ಶ. ೯೯೫, ನೂರ್ಮಡಿ ತೈಲಪನು ಉತ್ತರದ ಮಾಳವರ ಪರಮಾರರ ದೊರೆ ಮುಂಜರಾಜನ ಮೇಲೆ ಏರಿಹೋಗಿ ಜಯಿಸಿದ ವಿಷಯವಿದೆ. ಕರ್ನಾಟಕದಲ್ಲಿ ಈ ವಿಷಯ ಹೇಳುವ ಶಾಸನ ಇದೊಂದೇ ಆಗಿದೆ. [ಕಾಮತ್ ಸೂರ್ಯನಾಥ (ಸಂ); ಧಾರವಾಡ ಜಿಲ್ಲಾ ಗ್ಯಾಸೆಟಿಯರ್,, ಪುಟ. ೬೬.] ಜಿಲ್ಲೆಯಲ್ಲಿ ಚಾಲುಕ್ಯರ ಮುಖ್ಯ ಪ್ರಾಂತಗಳೆಂದರೆ– ಪಾನುಂಗಲ್–೫೦೦(ಹಾನಗಲ್ ಕೇಂದ್ರ), ಬಾಸವೂರು–೧೪೦(ಬಾಸೂರು ಕೇಂದ್ರ), ರಟ್ಟಪಳ್ಳಿ–೭೦(ರಟ್ಟೀಹಳ್ಳಿ), ಇಟಗಿ–೩೦(ಇಟಗಿ) ಹೊನ್ನವತ್ತಿ–೧೨(ಹೊನ್ನತ್ತಿ), ಬೆಣ್ಣೆವೂರು–೧೨(ಮೋಟೆಬೆನ್ನೂರು), ಬಿನ್ನವೂರು–೧೨(ರಾಣೆಬೆನ್ನೂರು) ಹೀಗೆ ಮುಂತಾದ ಉಪ ವಿಭಾಗಗಳು [ಪಾಟೀಲ್ ಭೋಜರಾಜ: ಸಂ. ಕರ್ನಾಟಕ ಗ್ರಾಮಚರಿತ್ರೆ ಕೋಶ, ಪುಟ, ೩೬] ಜಿಲ್ಲೆಯಲ್ಲಿ ಉಲ್ಲೇಖವಾಗಿವೆ.

ಕಲಚೂರಿಗಳು : ಕಲ್ಯಾಣ ಚಾಲುಕ್ಯರ ಮಾಂಡಲಿಕರು ಹಾಗೂ ಸಂಬಂಧಿಗಳು. ಇವರು ಕ್ರಿಶ ೧೧೬೨ರಲ್ಲಿ ಅಧಿಕಾರಕ್ಕೆ ಬಂದರು, ಇವರಿಗೆ ಸಂಬಂಧಿಸಿದ ಆಧಾರಗಳು ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಾಣಬಹುದು. ಇವರ ಅವಧಿಯಲ್ಲಿ ಧಾರ್ಮಿಕ ಮತ್ತು

ಸಾಮಾಜಿಕ ಕ್ಷೇತ್ರಗಳಲ್ಲಿ ಗಮನಾರ್ಹ ಬದಲಾವಣೆಗೆ ಅಥವಾ ಕ್ರಾಂತಿಗೆ ಕಾರಣವಾದ ಈ ವಂಶಕ್ಕೆ ಸಂಬಂಧಿಸಿದ ಅಂಶಗಳನ್ನು ಜಿಲ್ಲೆಯಲ್ಲಿ ಕಾಣಬಹುದು.

ಇವರ ಆಳ್ವಿಕೆಯಲ್ಲಿ ಜೈನರ ವಿರುದ್ಧ ವಾದನಡೆಸಿ ಗೆದ್ದ ವೀರಶೈವ ಏಕಾಂತ ರಾಮಯ್ಯನಿಗೆ ಜಯಪತ್ರವನ್ನು ಬಿಜ್ಜಳನು ಕೊಟ್ಟುದಾಗಿ ಅಬಲೂರು ಶಾಸನ ಹೇಳುತ್ತದೆ. ಕ್ರಿ.ಶ. ೧೧೫೪ ರಲ್ಲೇ ಬಿಜ್ಜಳ ತಂತ್ರಪಾಲ ಬಲ್ಲರಸ ಹಾನಗಲ್ ತಾಲೂಕು ಗೆಜ್ಜೆಹಳ್ಳಿ ತೈಲೇಶ್ವರ ದೇವರಿಗೆ ದಾನ ನೀಡಿದ ಶಾಸನವಿದೆ. ಹಿಂದಣ ಕ್ರಿ.ಶ. ೧೧೪೬ರ ಕಾಗಿನೆಲ್ಲಿ ಬಂಡಾಯವನ್ನು ಗಮನಿಸಿದಾಗ ಈ ಪ್ರದೇಶ ಬಿಜ್ಜಳನ ವಶವಾಗಿತ್ತೇ ಎಂಬ ಸಂದೇಹ ಬರುತ್ತದೆ. ಹಾಗೂ ಮಂತಗಿಯಲ್ಲಿ ಕಲಿದೇವ ಸೆಟ್ಟಿಯು ಬಿಜ್ಜಳನ ಕಾಲದಲ್ಲಿ ಬಸದಿಯನ್ನು ಸ್ಥಾಪಿಸಿ ೨೪ ತೀರ್ಥಂಕರರನ್ನು ಪ್ರತಿಷ್ಠಾಪಿಸಿದ ಉಲ್ಲೇಖವಿದೆ. ಅಲ್ಲದೆ, ಹುಯಿಲುಗೋಳ(ಶಿಗ್ಗಾಂವ್ ಹತ್ತಿರ)ದ ವ್ಯಾಪಾರಿ ಶ್ರೇಣಿಗಳು ಆ ಊರ ಚಂಡೇಶ್ವರ ದೇವರಿಗೆ ದಾನ ನೀಡಿದ ವಿಚಾರ ಕ್ರಿ.ಶ. ೧೧೬೪ರ ಶಾಸನದಲ್ಲಿದೆ. ಬಿಜ್ಜಳನ ಕೊನೆಯ ಶಾಸನ ಕ್ರಿಶ ೧೧೬೮ ರಂತೆ ಹಿರೇಕೆರೂರು ತಾಲೂಕು ಎಮ್ಮಿಗನೂರಲ್ಲಿ ಕಾಮಗಾವುಂಡ ರಾಮೇಶ್ವರ ದೇವಾಲಯ ನಿರ್ಮಾಣ ಮಾಡಿದ. [ಕಾಮತ್ ಸೂರ್ಯನಾಥ (ಸಂ); ಧಾರವಾಡ ಜಿಲ್ಲಾ ಗ್ಯಾಸೆಟಿಯರ್, ಪುಟ. ೭೪–೭೫] ಈ ವಂಶದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯನ್ನೇ ಮಾಡಿದ ಬಸವಣ್ಣನ ನೇತೃತ್ವದಲ್ಲಿ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ದೋಷಗಳನ್ನು ತೊಳೆದು ಹೊಸ ರೂಪ ನೀಡಲು ಯತ್ನಸಿದ್ದು, ಅದಕ್ಕೇ ಪ್ರತಿರೋಧವಾಗಿ ಹಲವು ಜನತೆಯ ಮರಣವಾದರೂ, ಅಂದಿನ ಆ ಕ್ರಾಂತಿಯಿಂದ ಇಂದಿಗೂ ಅದರ ಪರಿಣಾಮ ಈ ಪ್ರದೇಶಗಳ ಮೇಲೆ ಆಗಿರುವುದನ್ನು ನಾವು ಕಾಣಬಹುದು.

ಹಾನಗಲ್ಲು ಕದಂಬರು : ಇವರು ಕಲ್ಯಾಣ ಚಾಲುಕ್ಯರ ಮಾಂಡಲಿಕರಾಗಿ ಹಾವೇರಿ ಜಿಲ್ಲೆಯಲ್ಲಿ ಸುಮಾರು ೮ನೇ ಶತಮಾನದಿಂದ ಸುಮಾರು ೧೨ನೇ ಶತಮಾನದವರೆಗೆ ಉತ್ತರ ಕರ್ನಾಟಕ ಭಾಗದಲ್ಲಿ ಆಳ್ವಿಕೆ ನಡೆಸಿದರು. ಇವರು ಆರಂಭದಲ್ಲಿ ರಾಷ್ಟ್ರಕೂಟರ ಕಾಲದಲ್ಲಿ ಬನವಾಸಿಯಿಂದ ಆಳ್ವಿಕೆ ಮಾಡುತ್ತಿದ್ದು. ಮುಂದೆ ಬನವಾಸಿ–೧೨೦೦೦, ಪ್ರಾಂತಕ್ಕೆ ಇವರ ಮೇಲೆ ಅಧಿಕಾರ ಚಲಾಯಿಸಲು ಒಬ್ಬ ಪ್ರತ್ಯೇಕ ಮಂಡಳೇಶ್ವರನನ್ನು ಬಳ್ಳಿಗಾಂವೆ(ಶಿವಮೊಗ್ಗ ಜಿ.)ಯಿಂದ ನೇಮಿಸಿದಾಗ, ಅದಕ್ಕೆ ಒಳಪಟ್ಟ ಪಾನುಂಗಲ್–೫೦೦ರ ಮೇಲೆ ಇದರ ಹೆಚ್ಚಿನ ಅಧಿಕಾರ ಹೊಂದಿದರು. ೬ನೇ ವಿಕ್ರಮಾದಿತ್ಯನು ೧೦೭೫ರಲ್ಲಿ ತೈಲನ ಚಿಕ್ಕಪ್ಪ ಶಾಂತಯದೇವನಿಗೆ ಅಧಿಕಾರ ಒಪ್ಪಿಸಿದ(ನೀರಲಗಿ ಶಾಸನ)

ಇವನ ಜೊತೆ ಇವನ ಮಗ ಎರಡನೇಯ ಮಗ ತೈಲನು ಬನವಾಸಿ, ಹಾನಗಲ್‌ಗಳನ್ನು ಆಳುತ್ತಿದ್ದನು. ಶಾಂತಿವರ್ಮ ಅಥವಾ ಶಾಂತಯ ಮುಂದೆ ಬಂಕಾಪುರದಲ್ಲಿ ಇರುತ್ತಿದ್ದನು.[ಅದೇ, ಪುಟ ೭೭.]

ಗುತ್ತಲದ ಗುತ್ತರು : ಕಲ್ಯಾಣ ಚಾಲುಕ್ಯರ ಮಾಂಡಲಿಕರಾಗಿ, ಕೆಲಕಾಲ ಸ್ವತಂತ್ರರಾಗಿ, ಮುಂದೆ ದೇವಗಿರಿಯ ಸೇವಣರ ಮಾಂಡಲಿಕರಾಗಿ ೧೨ನೇ ಶತಮಾನದ ಆದಿಭಾಗದಿಂದ ೧೩ನೇ ಶತಮಾನದ ಕೊನೆಯವರೆಗೆ ಹಾವೇರಿ ತಾಲೂಕಿನ ಗುತ್ತವೊಳಲ್ ಅಥವಾ ಗುತ್ತಲದಿಂದ ಆಳಿದ ರಾಜವಂಶ ಗುತ್ತರು. ತಮ್ಮನ್ನು ಮಗಧದ ಗುಪ್ತರ ಉತ್ತರಾಧಿಕಾರಿಗಳೆಂದೂ ಉಜ್ಜಯಿನೀಪುರವರಾಧೀಶ್ವರರೆಂದು ತಮ್ಮನ್ನು ತಾವು ಚಂದ್ರಗುಪ್ತಾನ್ವಯರೆಂದೂ ಕರೆದುಕೊಂಡ ಇವರ ಮೂಲ ಪುರುಷ ಮಾಗುಪ್ತ(ಮಹಾಗುಪ್ತ), ಹಾಗೂ ಆತನ ಮಗ ಗುತ್ತ ಎಂದು ಅವರ ಶಾಸನಗಳು ಹೇಳುತ್ತವೆ. ಬಹುಶಃ ಇವನು ಕಲ್ಯಾಣದ ಒಂದನೇಯ ಸೋಮೇಶ್ವರನ ಕಾಲದಲ್ಲಿ ಅಧಿಕಾರ ಹೊಂದಿದ್ದು ಹಾನಗಲ್ ಕದಂಬರಿಂದ ಕೆಲವೊಂದು ಪ್ರದೇಶಗಳನ್ನು ಗೆದ್ದುಕೊಂಡಿರಬೇಕು, ಅವನ ಮಗ ಮಲ್ಲಿದೇವನೇ ಖಚಿತವಾದ ದಿನಾಂಕವಿರುವ (೧೧೧೫) ಚೌಡದಾನಪುರ ಶಾಸನದಲ್ಲಿ ಉಲ್ಲೇಖಿತವಾದ ಅರಸನಾಗಿದ್ದು ಇವನು ಚಾಲುಕ್ಯರ ೬ನೇ ವಿಕ್ರಮಾದಿತ್ಯನ ಮಾಂಡಲಿಕ(ಬನವಾಸಿ– ೧೨೦೦೦ದ ಅಧಿಕಾರಿ) ಗೋವಿಂದರಸನ ಅಧೀನನಾಗಿದ್ದನೆಂದು ತಿಳಿಯುತ್ತದೆ. ಇವನು ವೀರನಾಗಿದ್ದು, ಅನೇಕ ಯುದ್ಧಗಳನ್ನು ಗೆದ್ದನೆಂದು ಶಾಸನಗಳು ಉಲ್ಲೇಖಿಸುತ್ತವೆ. ಅಲ್ಲದೆ ಇವನ ಅಧಿಕಾರಿಯಾಗಿದ್ದ ಜಟಾಚೋಳನಿಂದ ಚೌಡದಾನಪುರ ಮುಕ್ತೇಶ್ವರ ದೇವಾಲಯ ನಿರ್ಮಾಣವಾಯಿತು(೧೧೨೦). ಮಲ್ಲಿದೇವನ ಸೋದರ ಜೋಯಿದೇವನು ಇದೇ ಕಾಲದಲ್ಲಿ ಬೆಳಹುಗೆ–೭೦(ಬೆಳವಿಗೆ), ಹೊನ್ನತ್ತಿ–೧೨(ರಾಣೆಬೆನ್ನೂರು ಹತ್ತಿರ) ಹಾಗೂ ಬೆಣ್ಣೆಊರು–೧೨(ಮೋಟೆಬೆನ್ನೂರು)ಗಳ ಆಡಳಿತ ನೋಡಿಕೊಳ್ಳುತ್ತಿದ್ದನು. ಮಹಾಮಂಡಲೇಶ್ವರ ಎಂದೇ ಶಾಸನಗಳು ಬರೆದಿರುವ ಜೋಯಿದೇವನ ಮಂತ್ರಿಗಳಾದ ದೇಕಣ್ಣ ಮತ್ತು ನಾಕಣ್ಣ ಎಂಬುವವರು ಚಾಮೇಶ್ವರ ದೇವಾಲಯಕ್ಕೆ ಪನ್ನವರ್ತಿ(ಹೊನ್ನತ್ತಿ, ರಾಣೆಬೆನ್ನೂರು ತಾ॥) ಗ್ರಾಮವನ್ನು ದಾನಮಾಡಿದ ಸಂಗತಿಯೂ ಹೊನ್ನತ್ತಿ ಶಾಸನ(೧೧೨೪) ಉಲ್ಲೇಖಿಸುತ್ತದೆ.

ರಟ್ಟಪಳ್ಳಿ ಕಡಂಬರು : ತಮ್ಮ ಶಾಸನಗಳಲ್ಲಿ ಇವರು ತಮ್ಮನ್ನು 'ಕಡಂಬ' ಎಂದೇ ಕರೆದುಕೊಂಡಿರುವ ನೂರಂಬಾಡದ ಈ ಮಾಂಡಲಿಕರು ಕಲ್ಯಾಣ ಚಾಲುಕ್ಯರ

ಕಾಲದಲ್ಲಿ ತಲೆಯೆತ್ತಿ ರಟ್ಟಪಳ್ಳಿ-೭೦(ಹಿರೇಕೆರೂರು ತಾ॥) ಹಾಗೂ ಇಟ್ಟಗೆ-೩೦(ರಾಣೆಬೆನ್ನೂರು ತಾ॥) ಹೀಗೆ ೧೦೦ ಗ್ರಾಮಗಳನ್ನು ಒಳಗೊಂಡ ಪ್ರದೇಶದಲ್ಲಿ ಆಳುತ್ತಿದ್ದರು. ರಟ್ಟಿಹಳ್ಳಿ ಇವರ ಆಡಳಿತ ಕೇಂದ್ರವಾಗಿತ್ತು. ಚಾಲುಕ್ಯ ಸಾಮ್ರಾಟ ೨ನೇ ಜಯಸಿಂಹನ ಯಾವುದೋ ಶತ್ರುವನ್ನು ಸೋಲಿಸಿ ಶತ್ರುವಿನ ಒಂದು ಆನೆಯನ್ನು ವಶಪಡಿಸಿಕೊಂಡು ಅದನ್ನು ಚಕ್ರವರ್ತಿಗೆ ನೀಡಿದ್ದರಿಂದ ಈ ನೂರಂಬಾಡದ ಆಡಳಿತವನ್ನು ಬೀರದೇವನಿಗೆ ನೀಡಲಾಯಿತೆಂದು ಕ್ರಿ.ಶ. ೧೧೭೪ರ ಹಿರೇಕೆರೂರು ತಾಲೂಕು ಕಣವಿಸಿದ್ದಗೇರಿ ಶಾಸನ [ಕಇ. ಸಂ೬, ನಂ ೭] ದಿಂದ ತಿಳಿಯುತ್ತದೆ. ತಾವು ಶಾಖಾಚರೇಂದ್ರ (ಹನುಮಂತ) ಧ್ವಜರೆಂದೂ ಕಡಂಬೇಶ್ವರನ ಪಾದಪದ್ಮಾರಕರೆಂದೂ ಕರೆದುಕೊಂಡಿದ್ದು ಕಡಂಬೇಶ್ವರ ಮಂದಿರವು ರಟ್ಟಿಹಳ್ಳಿಯಲ್ಲಿಯ ದೇವಾಲಯವಾಗಿದೆ. ಈ ಬೀರದೇವನ ಸೋದರ ೧ನೇ ಕೇತರಸನ ಮಗ ನಾಮರಸ, ಹಾಗೂ ಮೊಮ್ಮಗ ೨ನೇ ಕೇತರಸ ಇವರುಗಳ ಉಲ್ಲೇಖವಿದ್ದು ಈ ೨ನೇ ಕೇತರಸನ ಸತಿ ಅತ್ತಿಮಬ್ಬೆಯೆಂದು ಇವನ ಆರು ಜನ ಪುತ್ರರಲ್ಲಿ ೨ನೇ ಬೀರದೇವನು ಮುಂದೆ ಅರಸನಾದನೆಂದು ಶಾಸನದಿಂದ ತಿಳಿಯುತ್ತದೆ.

ಹೊನ್ನಬೊಮ್ಮಿಸೆಟ್ಟಿ ಎಂಬುವವನು ರಟ್ಟಿಹಳ್ಳಿ ಕಡಂಬೇಶ್ವರ ದೇವಾಲಯದಲ್ಲಿ ಮಲ್ಲೇಶ್ವರ ಮತ್ತು ರಾಜೇಶ್ವರ ಲಿಂಗಗಳನ್ನು ಪ್ರತಿಷ್ಠಾಪಿಸಿ ಅವುಗಳ ಪೂಜಾದಿಗಾಗಿ ಕಡವೂರು (ಹಿರೇಕೆರೂರ ತಾ॥ ಕಡೂರು) ಎಂಬ ಗ್ರಾಮವನ್ನು ಕಾಳಾಮುಖ ಪಂಥದ ರಾಜಗುರು ಮೂಋಜಾವಿದೇವರಿಗೆ ಒಪ್ಪಿಸಿದ್ದನ್ನು ಶಾಸನ ಹೇಳಿದೆ.

ಬಂಕಾಪುರದ ಕದಂಬರು : ಅಲ್ಪಕಾಲ ಬಂಕಾಪುರದಿಂದ ಆಳ್ವಿಕೆಮಾಡಿದ ಕದಂಬ ಶಾಖೆಯೊಂದನ್ನು ಡಾ॥ ಬಾ.ರಾ.ಗೋಪಾಲರು ಗುರುತಿಸಿದ್ದಾರೆ. ಇವರು ಕಲ್ಯಾಣದ ಚಾಲುಕ್ಯರ ಮಾಂಡಲಿಕರಾಗಿದ್ದು, ಸತ್ಯಾಶ್ರಯನ ಸಮಕಾಲೀನರಾದ ಹಾನಗಲ್ ಕದಂಬರ ಚಟ್ಟಯದೇವನ ನಂತರ ಬನವಾಸಿ-೧೨೦೦೦ ಪ್ರಾಂತವನ್ನು ಮಯೂರಶರ್ಮ ಎಂಬಾತನು ಆಳುತ್ತಿದ್ದ ಇವನು ಚಟ್ಟಯದೇವನ ವಂಶಸ್ಥನಲ್ಲ, ಅರಿಕೇಸರಿ ಅಥವಾ ಹರಿಕಂತ ಎಂಬಾತನ ಮಗ. ಈ ಹರಿಕಂತದೇವನ ಎರೆಡು ಶಾಸನಗಳು ಸಿದ್ದಾಪುರ ತಾ॥ ಕೋಡಕಣಿಯಲ್ಲಿ ದೊರೆತಿವೆ. ಈತನ ಮಗ ಮಯೂರ ಶರ್ಮನು "ಪಾಂಥಿಪುರಾಧೀಶ್ವರ"(ಹಾನಗಲ್ ಮೂಲಸೂಚಿಸುತ್ತದೆ). ಎಂದು ಕರೆದುಕೊಂಡಿದ್ದು ಇವನು ಬಂಕಾಪುರದಿಂದ ಆಳುತ್ತಿದ್ದುದು ಖಚಿತ. ಈತ ಚಕ್ರವರ್ತಿ ೨ನೇ ಜಯಸಿಂಹನ ಸೋದರಿ ಅಕ್ಕಾದೇವಿಯನ್ನು ವರಿಸಿದ್ದ, ಇವನ ಶಾಸನಗಳು ಕ್ರಿ.ಶ.

೧೦೩೫ ರಿಂದ ಕಂಡುಬರುತ್ತಿದ್ದು, ಬನವಾಸಿ-೧೨೦೦೦ ಮತ್ತು ಪಾನುಂಗಲ್- ೫೦೦ ಗಳನ್ನು ಆಳುತ್ತಿದ್ದ. [ಅದೇ, ಪುಟ ೮೪.] ಹೀಗೆ ಚಿಕ್ಕ ಭಾಗವನ್ನು ಬಂಕಾಪುರದಿಂದ ಆಳ್ವಿಕೆ ಮಾಡಿದವರು ಬಂಕಾಪುರದ ಕದಂಬರು.

ದೇವಗಿರಿಯ ಸೇವಣರು : ೨ನೇ ಸಿಂಘಣನು ಸೇವುಣರ ವಂಶದಲ್ಲಿ ಗಣ್ಯದೊರೆ. ಇವನು ದಕ್ಷಿಣದಲ್ಲಿ ಗೋವೆಯ ಕದಂಬರನ್ನು ಸೋಲಿಸಿ ಕ್ರಿ.ಶ. ೧೨೧೩ರಲ್ಲಿ ಹೊಯ್ಸಳರಿಂದ ಲಕ್ಕುಂಡಿಯನ್ನು ಕಸಿದುಕೊಂಡ. ಬೆಳಗುತ್ತಿಯ ಸಿಂಧರನ್ನು ತನ್ನ ಮಾಂಡಳಿಕರನ್ನಾಗಿ ಮಾಡಿಕೊಂಡು ತುಂಗಭದ್ರೆಯವರೆಗೂ ರಾಜ್ಯ ವಿಸ್ತರಿಸಿದ, ಆದರೆ ಕ್ರಿ.ಶ. ೧೨೨೩-೧೨೩೫ರ ಮಧ್ಯ ಹೊಯ್ಸಳರ ನರಸಿಂಹನ್ನೊಂದಿಗೆ ತುಂಗಭದ್ರೆಯ ದಕ್ಷಿದಲ್ಲಿ ಯುದ್ಧಗಳು ನಡೆದವು. ಆದರೆ ಧಾರವಾಡ ಜಿಲ್ಲಾ ಪ್ರದೇಶದಲ್ಲಿ ಸಿಂಘಣನ ಹಿಡಿತಕ್ಕೆ ತೊಂದರೆಯಾಗಲಿಲ್ಲ. ರಟ್ಟಿಹಳ್ಳಿಯ ಒಂದು ಶಾಸನದಂತೆ, ಸೇವುಣರ ಕೊಂಕಣದಲ್ಲಿದ್ದ ಆರಿಯ ಮಲ್ಲಿಸೆಟ್ಟಿ ದ್ವಾರಸಮುದ್ರವನ್ನು ಗೆದ್ದು ಹೊಯ್ಸಳರ ನರಸಿಂಹನಿಗೆ ೧೨ ಆನೆಗಳನ್ನು ಗೆದ್ದುಕೊಟ್ಟನೆಂದು ಉಲ್ಲೇಖವಿದೆ. ಇವನ ಬೆಳ್ವಲ-೩೦೦, ಪುಲಿಗೇರಿ-೩೦೦ ಹಾಗೂ ಬನವಾಸಿ-೧೨೦೦೦ಗಳ ಮಾಂಡಲಿಕನಾಗಿರುವುದು ಕಂಡುಬಂದಿದೆ.

ಸಾತೇನಹಳ್ಳಿಯಲ್ಲಿ(ಹಿರೇಕೆರೂರು ತಾ॥) ಕ್ರಿ.ಶ. ೧೨೧೪ರಲ್ಲಿ ನಾಡಪ್ರಭು ಬೊಮ್ಮಿಸೆಟ್ಟಿಯು ಶಂಕರನಾರಾಯಣ ದೇವಾಲಯ ಕಟ್ಟಿಸಿದನು. ಹಾನಗಲ್ ಕದಂಬ ವಂಶದ ಮಲ್ಲಿದೇವನ ಪತ್ನಿ ಪದ್ಮಲದೇವಿ 'ಹುಲ್ಲುಂಗೂರು' ಇಂದಿನ ಹುಲಗೂರನಲ್ಲಿ (ಶಿಗ್ಗಾಂವ್ ತಾಲೂಕು) ಒಂದು ಅಗ್ರಹಾರವನ್ನು ಸ್ಥಾಪಿಸಿದಳು(೧೨೪೫), ಇದೆ ತಾಲೂಕಿನ ಚಿಕ್ಕಮಲ್ಲೂರಿನಲ್ಲಿ ಧವಳೇಶ್ವರ ದೇವಾಲಯಕ್ಕೆ ಹೊನ್ನಬೊಮ್ಮಿಸೆಟ್ಟಿ ಎಳಬಳ್ಳಿ ಗ್ರಾಮವನ್ನು ದಾನ ಮಾಡಿದನು. ಬಾಳಂಬೀಡ (ಹಿರೇಕೆರೂರು ತಾಲೂಕು) ಶಾಸನದಂತೆ ದಂಡನಾಯಕ ಬಾಚಯ್ಯ ಪಂಡರಂಗೇಶ್ವರನಿಗೆ ದಾನ ನೀಡಿದ ಶಾಸನವಿದೆ. ಹಾವೇರಿಯ ಸಿದ್ಧನಾಥ ದೇವಾಲಯಕ್ಕೆ ನೀಡಿದ ಮೂರು ದಾನಗಳನ್ನು ಉಲ್ಲೇಖಿಸುವ ಶಾಸನಗಳು ಸಿಂಘಣನ ಕಾಲದವು(೧೨೨೯-೩೧). ಸಿಂಗಣನ ಆಡಳಿತ ಜಿಲ್ಲೆಯಲ್ಲಿ ಭದ್ರವಾಗಿ ನೆಲೆಯಾಗಿ ಅನೇಕ ಜನಹಿತ ಕಾರ್ಯಗಳಿಗೆ ಬೆಂಬಲ ನೀಡಿದ ವಿವರ ಈ ಶಾಸನಗಳಿಂದ ತಿಳಿಯುತ್ತದೆ.

ಹೊಯ್ಸಳರು : ಹೊಯ್ಸಳರ ೨ನೇ ಬಲ್ಲಾಳ(೧೧೭೩-೧೨೨೦) ಇವನು ಕ್ರಿ.ಶ. ೧೧೭೭ರಲ್ಲಿ ಉಚ್ಚಂಗಿಯನ್ನು ಗೆದ್ದು, ಕ್ರಿ.ಶ. ೧೧೭೮ರಲ್ಲಿ ಹಾನಗಲ್‌ನ್ನು

ವಶಪಡಿಸಿಕೊಂಡ. ಹಿರೇಕೆರೂರು ತಾಲೂಕು ಸಾತೇನಹಳ್ಳಿಯಲ್ಲಿ ದೊರೆತ ಹಲವು ಶಾಸನಗಳಂತೆ ಆ ಕಾಲದ ಅದೇ ಊರ ಪರಿಸರದಲ್ಲಿ ಬೊಮ್ಮ ಎಂಬಾತನು ನಾಗರಖಂಡ-೭೦ನ್ನು ಹೊಯ್ಸಳ ಅಧಿಕಾರಿಯಾಗಿ ಆಳುತ್ತಿದ್ದು, ಆಗ ಅಲ್ಲಿ ಹರಿಹರೇಶ್ವರ ದೇವಾಲಯವನ್ನು ಕಟ್ಟಿದ ವಿಚಾರವಿದೆ.೧೨೦೪). ಸಾತೇನಹಳ್ಳಿ ದೊಡ್ಡ ವ್ಯಾಪಾರಿ ಕೇಂದ್ರವೆಂದು ಹೇಳಿದೆ, ಕ್ರಿ.ಶ. ೧೨೦೩ರ ಪರಿಸರದಲ್ಲಿ ಹೊಯ್ಸಳರಿಗೂ ಹಾನಗಲ್‌ನ ಕಾಮದೇವ ಕದಂಬ ಸೈನ್ಯಕ್ಕೂ ನಡೆದ ಉಗ್ರ ಕಾಳಗಕ್ಕೆ ಸಂಬಂಧಿಸಿದ ವೀರಗಲ್ಲುಗಳಿವೆ. [ಕಲಬುರ್ಗಿ ಎಂ ಎಂ.; ಕರ್ನಾಟಕ ಶಾಸನ ಸೂಚಿ, ಧಾರವಾಡ ಜಿಲ್ಲೆ, ಪುಟ ೭೨] ಹೀಗೆ ಜಿಲ್ಲೆಯು ತನ್ನದೆ ಆದ ಐತಿಹಾಸಿಕ ಮತ್ತು ಧಾರ್ಮಿಕ ಸಾಂಸ್ಕೃತಿಕ ಚರಿತ್ರೆಯನ್ನೊಳಗೊಂಡಿದೆ.

ಅಧ್ಯಾಯ ೨

ಶೈವ ಪರಂಪರೆಗಳು

೨.೧ ಪಾಶುಪತ

೨.೨ ಕಾಪಾಲಿಕ

೨.೩ ಕಾಳಾಮುಖ/ ಲಾಕುಳ

೨.೪ ಶೈವ

೨.೪.೧ ಆದಿಶೈವ

೨.೪.೨ ಶುದ್ಧ ಶೈವ

೨.೪.೩ ಮಿಶ್ರ ಶೈವ

೨.೪.೪ ಕಾಶ್ಮೀರ ಶೈವ/ತ್ರಿಕಸಿದ್ಧಾಂತ

೨.೫.೧ ಶಾಕ್ತರು/ಕೌಳರು

ಅಧ್ಯಾಯ – ಎರಡು

ಶೈವ ಪರಂಪರೆಗಳು

೨.೧ ಪಾಶುಪತ

ಶೈವ ಪಂಥಗಳಲ್ಲಿ ನಮಗೆ ಪ್ರಥಮ ಪ್ರವೇಶ ದೊರಕುವುದು. ಪಾಶುಪತದ ಮೂಲಕ. ಅಂದರೆ ಅದೇ ನಮ್ಮ ದೇಶದ ಅತ್ಯಂತ ಪ್ರಾಚೀನ ಶೈವಮತ ಸಿಂಧೂ ನಾಗರೀಕತೆಯಲ್ಲಿ ಅದರ ಸುಳುಹು ಸಿಗುತ್ತದೆ. ಇಲ್ಲಿಯ ಮುದ್ರೆಯ ಮೇಲಿನ ಯೋಗರೂಪಿ ಮಾನವಾ ಕೃತಿಯನ್ನು 'ಪಶುಪತಿ' ಎಂದೇ ಗುರುತಿಸಲಾಗಿದೆ. ಈ ಪಶುಪತಿಯನ್ನು ರುದ್ರನೆಂದು ಭಾವಿಸಲಾಗಿದೆ. ಅವನ ವಾಹನ ನಂದಿಯೇ [ಹಿರೇಮಠ ಎಸ್ಎಸ್.; 'ಪಾಶುಪತ ದರ್ಶನ' ಪುಟ. ೧೦] ವೇದೋತ್ತರ ಕಾಲದ ವೈದಿಕರಲ್ಲಿ ಋಗ್ವೇದದ ಪ್ರಖ್ಯಾತ ದೈವಗಳಾದ ಇಂದ್ರ, ಅಗ್ನಿ, ವರುಣರ ಮಹತ್ವ ಕಳೆದುಕೊಂಡು ಪ್ರಜಾಪತಿ, ವಿಷ್ಣು, ಪಶುಪತಿಯಾದ ರುದ್ರ ಮಹತ್ವದ ಸ್ಥಾನ ಗಳಿಸಿದರು. ಆರಂಭ ಕಾಲದ ವೈದಿಕರಲ್ಲಿ ರುದ್ರ ವೈರಿಗಳ ದೈವದ ಸ್ಥಾನದಲ್ಲಿ [ವೈರಿ ಬುಡಕಟ್ಟುಗಳ ದೈವ] ಇದ್ದಾನೆ. ಹಾಗಾಗಿ ಅಲ್ಲಿ ಅದು ಆರ್ಯೇತರ ದ್ರಾವಿಡ ದೈವ [ಅದೇ, ಪುಟ. ೧೧] ವಾಗಿರುವುದನ್ನು ತಿಳಿಸುತ್ತಾರೆ.

ಶೈವಧರ್ಮಕ್ಕೆ ಸಂಬಂಧಿಸಿದ ಖಚಿತವಾದ ಒಂದು ಧಾರ್ಮಿಕ ಪಂಥದ ಪ್ರಥಮ ಉಲ್ಲೇಖ ನಮಗೆ ಪತಂಜಲಿಯಲ್ಲಿ [ಕ್ರಿ.ಶ.೨ನೇ ಶತಮಾನ] ಸಿಗುತ್ತದೆ. ಆ ಪಂಥದ ಸದಸ್ಯರು ಶಿವಭಾಗವತರೆಂದು ಹೆಸರಾಗಿದ್ದರು ಮಹಾಭಾರತದ 'ನಾರಾಯಣೀಯ' ವಿಭಾಗದಲ್ಲಿ ಹೆಚ್ಚು ಪ್ರಖ್ಯಾತವಾದ ಪಾಶುಪತಪಂಥದ ಪ್ರಸ್ತಾಪವಿದೆ. ಈ ಶಾಖೆಯ ಧರ್ಮಗ್ರಂಥಗಳನ್ನು ಉಮಾಪತಿ ಶಿವನೆ ಸ್ವತಃ ಪ್ರಕಾಶ ಪಡಿಸಿದನೆಂದೂ ಹೇಳಲಾಗಿದೆ. ಅನಂತರ ಶಿವನ ಒಬ್ಬ ಅವತಾರವೆಂದು ಪರಿಗಣಿಸಲಾದ ಒಬ್ಬ ಮಾನವ ವ್ಯಕ್ತಿಯೇ ಈ ಪಂಥದ ಪ್ರವರ್ತಕನೆಂಬುದನ್ನು ಇದು ಸೂಚಿಸುತ್ತದೆ. 'ವಾಯುಪುರಾಣ' [೨೩] ಮತ್ತು 'ಲಿಂಗಪುರಾಣ' ಗಳಂತಹ [೨೪] ಉತ್ತರಕಾಲೀನ ಸಾಹಿತ್ಯದಲ್ಲಿ ಈ ಸೂಚನೆ ಇನ್ನಷ್ಟು ವಿಷಯ ಹೊಂದಿದೆ. ಈ ಪುರಾಣಗಳ ಅನುಸಾರ ಯದುವಂಶದಲ್ಲಿ ವಾಸುದೇವ ಜನ್ಮತಾಳಿದ ವೇಳೆಯಲ್ಲಿ ಶಿವನು ಮೃತದೇಹವೊಂದನ್ನು ಪ್ರವೇಶಿಸಿ ನಕುಲೀಶ[ಅಥವಾ ಲಕುಲೀಶ] ಎಂಬ ಹೆಸರಿನಲ್ಲಿ ಈಗ ಬರೋಡದ ಕರ್ವನ್ ಎಂದು ಗುರುತಿಸಲಾದ 'ಕಾಯಾವತಾರ' ಅಥವಾ 'ಕಾಯಾಪರೋಹಣ' ಎಂಬ ಹೆಸರಿನ ಸ್ಥಳದಲ್ಲಿ ಬ್ರಹ್ಮಚಾರಿಯಾಗಿ ಅವತರಿಸಿದ್ದ ಇವನಿಗೆ ನಾಲ್ವರು ಶಿಷ್ಯರು ಇವರು ಕುಶಿಕ,

ಗರ್ಗ, ಮಿತ್ರ ಹಾಗೂ ಕೌರುಷ್ಯ ಈ ಕಥೆಯನ್ನು ನಿರೂಪಿಸುವ ಎರಡು ಶಾಸನಗಳಿವೆ. ಈ ನಾಲ್ವರು ಶಿಷ್ಯರನ್ನು ಪಾಶುಪತ ಪಂತದ ನಾಲ್ಕು ಶಾಖೆಗಳ ಪ್ರವರ್ತಕರೆಂದು ಹೆಸರಿಸುತ್ತಾನೆ. ಮಥುರಾದಲ್ಲಿ ನಮಗೆ ಸಿಕ್ಕಿರುವ ವರ್ಷ ಆರವತ್ತೊಂದು [ಕ್ರಿ.ಶ.೩೮೦] ಕಾಲ ನಿರ್ಧರಿಸಲಾದ ಗುಪ್ತ ಚಕ್ರವರ್ತಿ ಎರಡನೇ ಚಂದ್ರಗುಪ್ತನ ಕುಶಿಕನ ಕಾಲ ಗುರುತಿಸಬಹುದು. ನಕುಲೀಶನ ಕಾಲವನ್ನು ಕ್ರಿ.ಶ.೭೫-೧೨೫ರ ನಡುವಣ ಕಾಲವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಸಾಂಪ್ರದಾಯಿಕ ದೃಷ್ಟಿಯಿಂದ ಹೇಳುವುದಾದರೆ, ಪಾಶುಪತ ಪದ್ಧತಿಯೂ ರುದ್ರ-ಶಿವ ಪಂಥದಲ್ಲಿ ಇದೇ ಸ್ಥಾನಹೊಂದಲು ಉದ್ದೇಶಿಸಿದೆ. ಇದಕ್ಕೆ ಅನುಸಾರವಾಗಿ ಪಾಶುಪತ ಶಾಖೆ ಉದಯವಾದುದು. ಕ್ರಿ.ಶ. ಎರಡನೇ ಶತಮಾನವೆಂದು ಭಂಡಾರಕರ್ ಅಭಿಪ್ರಾಯ ಪಡುತ್ತಾರೆ. ಅವರ ವಾದದಲ್ಲಿ ಸ್ವಲ್ಪ ಸತ್ಯವಿದೆಯೆಂಬುದನ್ನು ಒಪ್ಪಿಕೊಳ್ಳಲೇಬೇಕು. [ಭಟ್ಟಾಚಾರ್ಯ ಹರಿದಾಸ (ಸಂ), ಯುಗಯಾತ್ರಿ ಭಾರತೀಯ ಸಂಸ್ಕೃತಿ, ನಾಲ್ಕನೇಯ ಸಂಪುಟ, ಪುಟ. ೩] ಆಗಮಗಳೆಂದರೆ ಕೆಳವರ್ಗದಿಂದ ಬಂದಂತವುಗಳು ಶ್ರುತಿಗಳು ಮೇಲ್ವರ್ಗದವು, ಆಗಮಗಳಿಗೆ ಸಾಹಿತ್ಯವಿರಲಿಲ್ಲ ವೇದಗಳೆಂದರೆ ಇವು ಕವನಗಳು, ಶ್ಲೋಕಗಳ ಸಂಗ್ರಹಗಳು ಕಾಳಾಮುಖರು ಆ ಸಂದರ್ಭದಲ್ಲಿ ಅವುಗಳಿಗೆ ಶಿಷ್ಟಾಚಾರ ಒದಗಿಸಿದವರು, ಇವರು ದಕ್ಷಿಣಭಾರತದಲ್ಲಿ ಕಲೆ ವಾಸ್ತುಶಿಲ್ಪ ಇತ್ಯಾದಿಗಳನ್ನು ತಂದರು. ಇದು ಅಬ್ರಾಹ್ಮಣ್ಯ ಸಂಸ್ಕೃತಿ. ಆಗಮಗಳ ಆಧಾರದ ಮೇಲೆ ಶೈವ ಸಾಹಿತ್ಯ ವಿಶೇಷವಾಗಿ ಬೆಳೆದಿದೆ. ಈ ಸಾಹಿತ್ಯದಲ್ಲಿ ಪಾಶುಪತ ಸೂತ್ರ ತುಂಬ ಮುಖ್ಯವಾದುದು ಇದರ ಕಾಲ ಬಹುಶಃ ಕ್ರಿ.ಶ. ಎರಡನೆಯ ಶತಮಾನವಿರಬಹುದು, ಇದರ ಮೇಲೆ ಕೌಂಡಿನ್ಯನು ಭಾಷ್ಯ ಬರೆದಿರುತ್ತಾನೆ. ಕೌಂಡಿನ್ಯನ ಕಾಲ ಕ್ರಿ.ಶ.೪೦೦ ಎಂದು ತಿಳಿದು ಬಂದಿದೆ [ಹನುಮಂತರಾವ್. ಜಿ.; ಪಾಶುಪತ ಆಗಮಗಳು, ಪುಟ. ೧೨]

'ವ್ರತಂ ಪಾಶುಪತಂ ಶ್ರೌತಮಥರ್ವಶಿರಸಿ ಶ್ರುತಮ್' ಶ್ರುತಿಯಲ್ಲಿ ಪ್ರಸಿದ್ಧವಾದ ಪಾಶುಪತ ವ್ರತವು ಅರ್ಥರ್ವಣ ಶ್ರುತಿಯ ಶಿರೊಭಾಗದಲ್ಲಿರುವುದು ಸಂಕಲ್ಪ ಯಜ್ಞೋಪವೀತ, ಅಗ್ನಿಯಾಧನ, ವಿರಾಜಾ ಹೋಮಕ್ಕಾಗಿ ಮೂವತ್ತಾರು ತತ್ವಗಳ ಸ್ಮರಣೆ, ಹೋಮ, ಹವಿಷ್ಯಾನ್ನ, ಭೋಜನ, ರುದ್ರಾಗ್ನಿಯ ಉಪಸಂಹಾರ ಮಾಡಿ: ಜಟಿಲ, ಮುಂಡ, ಶಿಖಿ, ಏಕಜಟಿ, ಅಥವಾ ನಗ್ನವಾಗಿ, ಇಲ್ಲವೆ ಕಾಷಾಯ ವಸ್ತ್ರ, ಧರ್ಮ ಚೀರವಸ್ತ್ರ, ವಲ್ಕಲ ಉಟ್ಟು; ದಂಡ, ಮೇಖಲಾಯುಕ್ತಮಾಗಿ; ವಿರಜಾಗ್ನಿಭಸ್ಮದಿಂದ ಅಥರ್ವಣ ವೇದದಲ್ಲಿ ಅಗ್ನಿ ಇತ್ಯಾದಿ ಆರು ಮಂತ್ರಗಳಿಂದ ಭಸ್ಮಧಾರಣಮಾಡಿ; ಶಿವಯೋಗಾಭ್ಯಾಸಮಾಡುವುದು - ಇದರಂತೆ ಮೂರು ವೇಳೆ ಮಾಡುವುದು-ಇದಕ್ಕೆ

ಪಾಶುಪತವ್ರತವೆನ್ನುತ್ತಾರೆ. ಅನಂತರ ಪಂಚಮುಖ ಶಿವಲಿಂಗಮೂರ್ತಿಯ ಪೂಜೆಯನ್ನು ವಿಧಿವತ್ತಾಗಿ ಮಾಡಿ, ಆವರಣ ದೇವತೆಗಳ ಪೂಜೆ ಮಾಡಿ, ಗುರು ಪೂಜೆಮಾಡಿ, ಶಿವನ ಉದ್ವಾಸನ ಅಗ್ನಿಯ ವಿಸರ್ಜನ ಮಾಡುವುದು. ಇದರಂತೆ ಪ್ರತಿದಿನ ಮಾಡಿ ಆ ಲಿಂಗವನ್ನು ಗುರುವಿಗೆ ಕೊಡುವುದು, ಅಥವಾ ದೇವಾಲಯದಲ್ಲಿ ಸ್ಥಾಪಿಸುವುದು, ಇದರಂತೆ ದೇಹವಿರುವವರೆಗೆ ಅತ್ಯಂತಿಕೀ ದೀಕ್ಷೆ ಪಡೆದು ವ್ರತ ಮಾಡುವವನೇ ನೈಷ್ಠಿಕನು ಅವನೇ ಅತ್ಯಾಶ್ರಮಿ, ಮಹಾಪಾಶುಪತ ಎನಿಸಿಕೊಳ್ಳುತ್ತಾನೆ, ಅವನೇ ಮಹಾವ್ರತಿಯು. ಯತಿಯಾಗಿದ್ದು ನೈಷ್ಠಿಕನಾಗಿದ್ದರೆ ಯತಿ ಶ್ರೇಷ್ಠನು. ರುದ್ರಾಗ್ನಿಯ ಶ್ರೇಷ್ಠವೀರ್ಯವೇ ಭಸ್ಮವು. ಇದು ಶ್ರೌತಪಾಶುಪತವ್ರತವು. [ಕಪಟರಾಳ, ಕೃಷ್ಣರಾಯರು.; ಕರ್ನಾಟಕ ಲಾಕುಳ ಶೈವರ ಇತಿಹಾಸ, ಪುಟ.೭೪]

ಕಾವ್ಯ, ಶಾಸ್ತ್ರ, ಮತ್ತು ಶಾಸನಗಳು ಈ ನಕುಲೀಶ ಶೈವ ಮತ್ತು ಪಾಶುಪತ ಶೈವಗಳನ್ನು ಪ್ರತ್ಯೇಕಿಸಿ ಹೇಳಿದ್ದರೂ ಶಾಸನಗಳಲ್ಲಿ ಸಿಗುವ ಹೋಲಿಕೆ ರೂಪದ ವಿವರಗಳಿಂದಾಗಿ ಇವೆರಡರಲ್ಲಿ ಇರಬಹುದಾದ ವ್ಯತ್ಯಾಸ ಖಚಿತವಾಗುತ್ತಿಲ್ಲ ಹೀಗಾಗಿ ವಿದ್ವಾಂಸರು ಈವರೆಗೆ ಈ ಎರಡನ್ನೂ ಸೇರಿಸಿ ನಕುಲೀಶ ಪಾಶುಪಾತವೆಂದು ಕರೆದಿದ್ದಾರೆ, ಅಭ್ಯಾಸ ಮಾಡಿದ್ದಾರೆ. ಎರಡೂ ಶಾಖೆಗಳು ಲಕುಲೀಶನ ಭಕ್ತಿಯಿಂದ ಸ್ತುತಿಸುತ್ತ ಬಂದಿವೆ. ೨೮ ಜನ ಯೋಗಾಚಾರ್ಯರಲ್ಲಿ ಈ ನಕುಲೀಶನು ಒಬ್ಬ. [ಇವನಲ್ಲದೇ ಈ ೨೮ ಜನರಲ್ಲಿ ಪರಿಗಣಿತರಾಗಿರುವ ದಂಡಿ, ಮುಂಡಿ, ಚಾರಿ, ಹೆಸರುಗಳು ತಿಳವಳ್ಳಿ ಶಾಸನದಲ್ಲಿ, ಅಟ್ಟಹಾಸನೆಂಬವನ ಹೆಸರು ಎಮ್ಮಿಗನೂರು ಶಾಸನದಲ್ಲಿ ಕಂಡು ಬರುತ್ತವೆ] ಇದಲ್ಲದೆ ಈ ಲಕುಳೀಶನು ಪ್ರತಿಪಾದಿಸಿದ 'ಲಾಕುಳಸಿದ್ಧಾಂತ' ವನ್ನು ಎರಡೂ ಶಾಖೆಗಳು ಹೆಸರಿಸಿವೆ. "ಏಕ್ಕೋಟಿಮುನಿಪ" "ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಜಪಸಮಾಧಿ ಶೀಲಗುಣ ಸಂಪನ್ನ" ಎಂಬ ವಿಶೇಷಗಳನ್ನು ಇಬ್ಬರು ಬಳಸುತ್ತಾರೆ. ಹೀಗಿರುವುದರಿಂದ ಇವುಗಳ ವ್ಯತ್ಯಾಸವನ್ನು ಬಿಡಿಸಿ ಹೇಳುವುದು ಸಾಧ್ಯವಾಗುತ್ತಿಲ್ಲ [ಕಲ್ಬುರ್ಗಿ ಎಂ.ಎಂ.; ಮಾರ್ಗ; ಸಂಪುಟ ೪ ಪುಟ. ೨೬೦] ಎಂದಿರುವರು.

ಕಾಳಾಮುಖರಿಗೂ ಪಾಶುಪತರಿಗೂ ಇರುವ ವ್ಯತ್ಯಾಸಗಳು

ಕಾಳಾಮುಖರು	ಪಾಶುಪತರು
೧. ನೈಯಾಯಿಕರು	೧. ವೈಶೇಷಿಕರು
೨. ಕಾಳಾಮುಖ ದೀಕ್ಷೆ	೨. ಪಾಶುಪತ ವ್ರತ
೩. ಶಕ್ತಿ ಪರ್ಷೆ	೩. ಸಿಂಹ ಪರ್ಷೆ
೪. ಕೇಂದ್ರ ಬಳ್ಳಿಗಾವಿ	೪. ಕೇಂದ್ರ ಮುದನೂರು
೫. ಶಿವಮೊಗ್ಗ, ಧಾರವಾಡ ಜಿಲ್ಲೆಗಳಿಗೆ ಸೀಮಿತ	೫. ಉತ್ತರಕರ್ನಾಟಕ, ಮಹಾರಾಷ್ಟ್ರ,ಆಂಧ್ರಪ್ರದೇಶದ ಕೆಲವು ಭಾಗಗಳಿಗೆ ಸೀಮಿತ
೬. (ಕೇದಾರ) ಪರ್ವತಗಳು	೬. ಶ್ರೀಶೈಲ ಪರ್ವತಗಳು
೭. ಸಪ್ತಾಹತ್ತರಿ ಸ್ಥಾನಾಚಾರ್ಯ	೭. ಪಾಶುಪತಯೋಗಾಚಾರ್ಯ

[ಕಲುಬುರ್ಗಿ ಎಂ.ಎಂ, ಮಾರ್ಗ: ಸಂಪುಟ-೪, ಪುಟ. ೨೬೦] ಈ ರೀತಿ ಕೆಲವು ವ್ಯತ್ಯಾಸಗಳ ಪಟ್ಟಿ ನೀಡಿದ್ದಾರೆ. ಆದರೆ ನೈಯಾಯಿಕರು ಮತ್ತು ವೈಶೇಷಿಕರು ಇರ್ವರಲ್ಲಿಯೂ ಕಂಡು ಬರುತ್ತದೆ. ಕಾಳಾಮುಖ ಒಂದು ದೀಕ್ಷೆಯಲ್ಲ ಅದು ದರ್ಶನ. ದೀಕ್ಷೆಯನ್ನು ಕೊಡುವುದರಿಂದ ಕಾಳಾಮುಖತ್ವ ಬರುವುದಿಲ್ಲ ಅದು ವಂಶ ಪಾರಂಪರ್ಯವಾಗಿ ಬರುವುದನ್ನು ಶಾಸನಗಳ ಮೂಲಕ ಅರಿಯಬಹುದಾಗಿದೆ. ಗುಲ್ಬರ್ಗಾ, ರಾಯಚೂರು, ಬಳ್ಳಾರಿಗಳಲ್ಲಿ ಮತ್ತು ಬಿಜಾಪುರ, ಹೂಲಿ, ಮಹಾರಾಷ್ಟ್ರದ ಧಾನ್ಯಕಟಕ, ಚಿತ್ರದುರ್ಗ,ಅರಸೀಕೆರೆ ಮುಂತಾದ ಕರ್ನಾಟಕದ ಅರ್ಧಭಾಗದ ಸೀಳುನೋಟದಲ್ಲಿ ಶಕ್ತಿಪರಿಶೆಯನ್ನು ಕಾಣುತ್ತೇವೆ.

ಲಕುಲೀಶ ಪಾಶುಪತರಿಗೂ ಕಾಳಾಮುಖರಿಗೂ ಅಂತಹ ಪ್ರಧಾನವಾದ ವ್ಯತ್ಯಾಸವೇನೂ ಇಲ್ಲವೆಂಬುದನ್ನು ಮತ್ತೊಂದು ಪ್ರಬಲವಾದ ಆಧಾರ ಸಾಯಣ ಮಾಧವರ ಸರ್ವದರ್ಶನ ಸಂಗ್ರಹವನ್ನು ಚಿದಾನಂದಮೂರ್ತಿಯವರು ಉಲ್ಲೇಖಿಸುತ್ತಾರೆ. ಇದರಲ್ಲಿ ಕಾಳಾಮುಖರ ಹೆಸರಿಲ್ಲದಿರುವುದು ಅತ್ಯಂತ ಗಮನಾರ್ಹವಾದ ಸಂಗತಿಯೆಂದು ಹಿಂದೆಯೇ ತಿಳಿಸಲಾಗಿದೆ. ಕಾಳಾಮುಖರ ಹೆಸರು ಸೂಚಿಸುವಂತೆ ಅವರು ಧರಿಸುತಿದ್ದ ಚಿಹ್ನೆಯಿಂದ, ಬಹುಶ: ಮುಖದ ಮೇಲಿನ ಕಪ್ಪು ಗೆರೆಯಿಂದ

ಅವರು ಪಾಶುಪತರಿಂದ ಭಿನ್ನರಿರಬಹುದು. ತಾತ್ವಿಕವಾಗಿ ಅವರಿಗೂ ಲಕುಲೀಶ-ಪಾಶುಪತರಿಗೂ ಯಾವ ವ್ಯತ್ಯಾಸವೂ ಇರುವಂತೆ ಕಾಣುವುದಿಲ್ಲ. ಇದ್ದರೂ ಅದು ಅತ್ಯಲ್ಪವೆಂದೇ ಭಾವನೆ. [ಚಿದಾನಂದಮೂರ್ತಿ.ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೧೪೯] ಎಂದು ಚಿದಾನಂದಮೂರ್ತಿಯವರು ಒಂದೇ ಎಂದಿರುವುದನ್ನು ಅರಿಯಬಹುದು. ಕಾಳಮುಖವು ಪಾಶುಪತ ಪ್ರಭೇದಗಳಲ್ಲಿ ಒಂದು [ಮಹಲಿಂಗಂ.ಟಿ.ವಿ - ದಿ ಪಾಶುಪತಾಸ್ ಇನ್ ಸೌತ್ ಇಂಡಿಯಾ, ಜರನಲ್ ಆಫ್ ಇಂಡಿಯನ್ ಹಿಸ್ಟರಿ ವ್ಯಾಲುಂ-೨೭, ಪೇ. ೪೬]ಎಂದಿದ್ದಾರೆ.

ವಾಯುವಿಸಂಹಿತೆಯಂತಿರುವ ಲಂಡನ್ನಿನಲ್ಲಿ ದೊರೆತಿರುವ ಪಾಶುಪತ ಪೂಜೆ ಎಂಬ ಕೃತಿಯಲ್ಲಿರುವ ಪಾಶುಪತ ವ್ರತದ ನಿಯಮಗಳನ್ನು ಕುರಿತು ವಿವರಣೆ ನೀಡಿರುವರು. ವಾಯುಪುರಾಣ, ಕೂರ್ಮಪುರಾಣ, ಶಿವಪುರಾಣ ಶಿವಪರವಾದವುಗಳು. ಪಾಶುಪತ ಶೈವಕ್ಕೆ ಆಗಮಗಳು ಮೂಲ. ವಾಯುವೀಯ ಸಂಹಿತೆಯಲ್ಲಿ ಕಾಮಿಕ ಮತ್ತು ಇತರ ಆಗಮಗಳು ಸಂಸ್ಕೃತದಲ್ಲಿ ಬರೆದಿರುವ ಆಗಮಗಳೆಂದು ತಿಳಿಸುತ್ತದೆ. ಈ ಆಗಮಗಳು ಇಪ್ಪತ್ತೆಂಟು ಯೋಗಜ, ಚಿಂತ್ಯ, ಕಾರಣ, ಅಜಿತ, ದೀಪ್ತ, ಸೂಕ್ಷ್ಮ, ಸಾಹಸ್ರಕ, ಅಂಶುಮಾನ್, ಸುಪ್ರಭೇದ, ವಿಜಯ, ನಿಶ್ವಾಸ, ಸ್ವಯಂಭುವ, ಅನಿಲ, ವೀರ, ರೌರವ, ಮಕುಟ, ವಿಮಲ, ಚಂದ್ರಹಾಸ, ಬಿಂಬ, ಉದ್ಗೀತ, ಅಥವಾ ಪೋದ್ಗೀತ, ಲಲಿತಸಿದ್ದ, ಸನಾತನ, ನಾರಸಿಂಹ, ಪರಮೇಶ್ವರ, ಕಿರಣ, ವಾತುಲ, ಶಿವಜ್ಞಾನ ಸಿದ್ಧಿಯಲ್ಲಿ ಇತರ ಶೈವಾಗಮಗಳಿಂದ ಮತ್ತು ಶೈವತಂತ್ರಗಳಿಂದ ಎತ್ತಿ ಹೇಳಿರುವ ಅನೇಕ ಭಾಗಗಳಿವೆ. ಆ ಆಗಮಗಳ ತಂತ್ರಗಳು ಹಿಮಸಂಹಿತ, ಚಿಂತ್ಯವಿಶ್ವ, ಶಿವಧರ್ಮೋತ್ತರ, ಪೌಷ್ಕರ, ಸಿದ್ದತಂತ್ರ, ಸರ್ವಮತೋಪನ್ಯಾಸ, ಪರಾ, ರತ್ನತ್ರಯ, ನಿವಾಸ, ಮೃಗೇಂದ್ರ, ಜ್ಞಾನಕಾರಿಕ, ನಾದಕಾರಿಕಾ, ಕಾಲೋತ್ತರ, ವಿಶ್ವಸಾರೋತ್ತರ, ವಾಯುವ್ಯ, ಮಾತಂಗ, ಶುದ್ಧ ಸರ್ವಜ್ಞಾನೋತ್ತರ, ಸಿದ್ಧಾಂತರಹಸ್ಯ, ಜ್ಞಾನರತ್ನಾವಲೀ, ಮೇರುತಂತ್ರ, ಸ್ವಚ್ಛಂದ ಮತ್ತು ದೇವಿಕಾಲೋತ್ತರ. [ಹನುಮಂತರಾವ್ ಜಿ.; ಪಾಶುಪತ ಆಗಮಗಳು, ಪುಟ. ೯] ಎಂದು ಮುಂದುವರೆದು ಪಾಶುಪತ ಸನ್ಯಾಸಿಗಳು ಬ್ರಾಹ್ಮಣರು ಇವರು ಬ್ರಾಹ್ಮಣರಾದರೂ ಇವರ ಅಚಾರ ಬ್ರಾಹ್ಮಣ ಆಚಾರಗಳಲ್ಲ, ಇವರು ವೈದಿಕ ಆಚಾರಗಳನ್ನು ಅನುಸರಿಸುವುದಿಲ್ಲ. ವೇದ ಮಂತ್ರಗಳನ್ನು ಹೇಳುವುದಿಲ್ಲ. ವೈದಿಕ ಪೂಜಾವಿಧಾನಗಳನ್ನು ಬಿಟ್ಟು ಬೇರೆ ವಿಧಾನಗಳನ್ನು ಪಾಶುಪತರು ಆಶ್ರಯಿಸಿದ್ದಕ್ಕೆ ಮೃಗೇಂದ್ರಾಗಮದ ಪ್ರಾರಂಭ ಭಾಗದಲ್ಲಿ ಕಾರಣ ತಿಳಿಸಿದೆ. ವೇದದ ದೇವತೆಗಳು ಪುರುಷ ಸ್ವರೂಪದಲ್ಲಿ ವೇದಗಳು ಮಂತ್ರಗಳನ್ನು ಮಾತ್ರ ಆಶ್ರಯಿಸಿವೆ. ಅವು ಮೂರ್ತಿ ಪೂಜೆಯನ್ನು ಹೇಳಿರುವುದಿಲ್ಲ.

ಮೂರ್ತಿ ಪೂಜೆಯಿಂದ ಪರಮ ಪುರಷನ ರೂಪವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಸುಲಭ. ಅಲ್ಲದೆ ಇಲ್ಲಿ ಪರಮೇಶ್ವರನ ಕಾರುಣ್ಯಕ್ಕೆ ವಿಶೇಷ ಪ್ರಾಶಸ್ತ್ಯ ಕೊಟ್ಟಿದೆ. ಕಾರುಣ್ಯ ಅವನ ಸ್ವರೂಪ ವಿಶೇಷ ಆದ್ದರಿಂದ ಪಾಶುಪತ ಸಂಪ್ರದಾಯ ವೈದಿಕ ಸಂಪ್ರದಾಯಕ್ಕಿಂತ ಭಿನ್ನವಾದುದು ಪಾಶುಪತವು ವಿಚಾರ ಮಾಡುವ ವಿಷಯಗಳನ್ನು ಪಂಚಾರ್ಥಗಳೆಂದು ಕರೆದಿವೆ. ಆ ಐದು ಕಾರಣ, ಕಾರ್ಯ, ಯೋಗ, ವಿಧಿ ಮತ್ತು ದು:ಖಾಂತ [ಹನುಮಂತರಾವ ಜಿ.; ಪಾಶುಪತ ಆಗಮಗಳು, ಪುಟ. ೧೪] ಎಂದು ಪಾಶುಪತರ ಆಗಮಗಳನ್ನು ವಿವರಿಸಲಾಗಿದೆ. ಇಲ್ಲಿ ಪಾಶುಪತ ಸನ್ಯಾಸಿಗಳು ವೈದಿಕ ಆಚರಣೆಗಳನ್ನು ಅನುಸರಿಸುವುದಿಲ್ಲ, ವೇದ ಮಂತ್ರ ಹೇಳುವುದಿಲ್ಲವೆಂಬುದನ್ನು ತಿಳಿಸಿರುವುದು ಅವೈದಿಕ ಪರಂಪರೆಯನ್ನು ಪ್ರತಿನಿಧಿಸುತ್ತದೆ.

ಸಂಸಾರಿಯಾಗಿದ್ದರೂ ನೈಷ್ಠಿಕನಾಗಿರುವುದು ಮಹಾವ್ರತ. ಸಂಸಾರದಲ್ಲಿದ್ದುಕೊಂಡೇ ನೈತಿಕತೆಯಿಂದ, ನಿಷ್ಠೆಯಿಂದ ಆಚರಿಸುವವ ಮಹಾವ್ರತಿ ಎನಿಸಿಕೊಳ್ಳುತ್ತಾನೆ. ಕರ್ನಾಟಕದ ಶಾಸನಗಳಲ್ಲಿ ಪಾಶುಪತ ಮತ್ತು ಕಾಳಾಮುಖ ಯತಿಗಳಿಬ್ಬರನ್ನು 'ಮಹಾವ್ರತಿ' ಅಥವಾ ಕೇವಲ 'ಬ್ರತಿ' ಅಥವಾ 'ವ್ರತಿ' ಎಂದು ಕರೆಯಲಾಗಿದೆ. ಎರಡೂ ಪಂಥದ ಯತಿಗಳು ಮಹಾವ್ರತವ'ನ್ನು ಆಚರಿಸುತ್ತಿದ್ದರೆಂಬುದು ಕಂಡುಬರುತ್ತದೆ. ಮಹಾವ್ರತಿಯೆಂದರೆ ಮೈತುಂಬಾ ಸ್ಮಶಾನದ ಬೂದಿಯನ್ನು ಭಸ್ಮವನ್ನಾಗಿ ಧರಿಸುವವ, ಕಪಾಲದಲ್ಲಿ ಆಹಾರ ಸೇವಿಸುವವನು ಕಾಪಾಲಿಕ. ಮೈತುಂಬ ಆಕಳ ಸೆಗಣಿಯಿಂದಾದ ಭಸ್ಮವನ್ನು ಧರಿಸುವವನು, ರುದ್ರಾಕ್ಷಿ ಧರಿಸುವವ ಕಾಳಾಮುಖ.

ಎಂ ಚಿದಾನಂದಮೂರ್ತಿಯವರ ಪ್ರಕಾರ ಲಕ್ಕಣ್ಣ ದಂಡೇಶ (ಕ್ರಿ.ಶ.೧೪೩೦) ಹದಿನೈದನೆಯ ಶತಮಾನದ ವೀರಶೈವ ಧರ್ಮದ ಸ್ವರೂಪ ಮತ್ತು ವ್ಯಾಪ್ತಿಗಳನ್ನರಿಯುವವರಿಗೆ ಅವನ ಕೃತಿಯೊಂದು ದೊಡ್ಡಗಣಿ. ಅವನು ತನ್ನ ಗುರುವು 'ಪಾಶುಪತ ಸದ್ವ್ರತ ಗುಣಾಗ್ರಣಿಯಾದ ಮಲ್ಲಿಕಾರ್ಜುನ ಎಂದು ತನ್ನ ಗ್ರಂಥದಲ್ಲಿ ಹೇಳಿಕೊಂಡಿದ್ದಾನೆ. ಕ್ರಿಯಾಶಕ್ತಿ ಯತಿರಾಯ ಎಂಬ (ಕಾಳಾಮುಖ) ಗುರುವನ್ನು ಭಕ್ತಿಯಿಂದ ಸ್ತುತಿಸಿದ್ದಾನೆ. ಇವನು ಕ್ರಿಶ. ೧೪೧೦ರಲ್ಲಿದ್ದ ಎರಡನೆಯ ಹರಿಹರನ ಕುಲಗುರುವಾಗಿದ್ದ ಕಾಳಾಮುಖ ಗುರು ಕ್ರಿಯಾಶಕ್ತಿಯಿರಬೇಕು, ಧರ್ಮ ಮೂರ್ತಿ ವೃಷಭನಿಗೆ ಏಳುಕೋಟಿ ಮಂತ್ರಗಳೇ ರೋಮಗಳು ಎಂದು ವರ್ಣಿಸುತ್ತಾನೆ. ಈ ಏಳು ಕೋಟಿ ಮಂತ್ರಗಳು ಕಾಳಾಮುಖರಿಗೂ ಪೂಜ್ಯವಾದವು. ಅಲ್ಲದೆ. ತನ್ನ ಗ್ರಂಥದಲ್ಲಿ ಶ್ರೀಧರಾಚಾರ್ಯನೆಂಬ ಮಿಮಾಂಸಕನಿಗೂ ಬಸವಣ್ಣನಿಗೂ ನಡೆದ ವಾದ ವಿವಾದಗಳ

ಚಿತ್ರವನ್ನು ಕೊಡುತ್ತಾನೆ. ಈ ಶ್ರೀಧರಾಚಾರ್ಯನು "ಮೈಯಲ್ಲಿ ಭಸ್ಮವ ಪೂಸಿಕೊಂಡಿರ್ದ ಶೈವ ಪಾಷಂಡಿ" ಯಾದ ಬಸವನು ಎದ್ದು ನನ್ನನ್ನು ಗೌರವಿಸಲಿಲ್ಲವಲ್ಲಾ ಎಂದು ನಿಂದಿಸುವುದಲ್ಲದೆ. ಇವನೇನು ಪಾಶುಪತನೋ ಕಾಳಾಮುಖನೋ ಎಂದು ಪ್ರಶ್ನಿಸುತ್ತಾನೆ. ಆಚಾರ ವ್ಯವಹಾರಗಳಲ್ಲಿ ಪಾಶುಪತರಿಗೂ ಕಾಳಾಮುಖರಿಗೂ ಅಷ್ಟು ವ್ಯತ್ಯಾಸವಿಲ್ಲವೆನ್ನುವುದೂ ಇದರಿಂದ ಸೂಚಿತವಾಗುತ್ತದೆ. [ಚಿದಾನಂದಮೂರ್ತಿ ಎಂ.; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. ೧೭೪] ಇವರು ವ್ಯತ್ಯಾಸವಿಲ್ಲದಿರುವುದನ್ನು ಸ್ಪಷ್ಟಪಡಿಸುತ್ತಾರೆ.

ಕ್ರಿ.ಶ ೧ ನೇ ಶತಮಾನದ ಕೌಂಡಿಣ್ಯನ 'ಪಾಶುಪತ ಸೂತ್ರಗಳು' ಮತ್ತು ೧೦ನೇ ಶತಮಾನದ 'ಗಣಕಾರಿಕಾ' ಕೃತಿಗಳು ಪಾಶುಪತ ತತ್ವಗಳನ್ನು ನಿರೂಪಿಸುತ್ತವೆ. ಮಾಧವನು 'ಪಾಶುಪತ ಸೂತ್ರಗಳಿಂದ' ನಕುಲೀಶ ಪಾಶುಪತ ದರ್ಶನ ಎಂಬ ಅಧ್ಯಾಯವನ್ನು ಬರೆದಿದ್ದಾನೆ. [ಅದೇ ಪುಟ ೧೯] ಪಾಶುಪತರ ನ್ಯಾಯ ಪಂಥವಿದೆ ಎಂದು ಷಡ್‌ದರ್ಶನ ಸಮುಚ್ಚಯದ ರಾಜಶೇಖರ ಹೇಳಿದರೆ ಅದರ ವ್ಯಾಖ್ಯಾನಕಾರ ಗುಣರತ್ನನು ನಯ್ಯಾಯಿಕರು – ಶೈವರು, ವೈಶೇಷಿಕರು – ಪಾಶುಪತರು ಎಂದಿದ್ದಾನೆ. ಇದರ ಬಗ್ಗೆ ಹಿರೇಮಠರು ಚರ್ಚಿಸುತ್ತಾ ಕಾಳಾಮುಖ ಮತ್ತು ಪಾಶುಪತಗಳ ಸೂಕ್ಷ್ಮ ತೌಲನಿಕ ಅಧ್ಯಾಯನದಿಂದ ನ್ಯಾಯ, ವೈಶೇಷಿಕಗಳು ಪಾಶುಪತರಿಗಿಂತ ಹೆಚ್ಚಾಗಿ ಕಾಳಾಮುಖರಿಗೆ ನೇರವಾಗಿ ಸಂಬಂಧಿಸಿದ್ದವೆಂದು ತೋರುತ್ತದೆ ನಯ್ಯಾಯಿಕ ವೈಶೇಷಿಕರೇ ಕಾಳಾಮುಖರಾದರೆಂದು ಹೇಳುವುದು ಸರಿಯಾದ ಕ್ರಮವೆಂದು ತೋರುತ್ತದೆ. ಕಾಳಾಮುಖರು ಮಾಡಿದ ಮಹತ್ವದ ಕೆಲಸವೆಂದರೆ ವ್ಯಕ್ತಿಗಳ ಹೆಸರಿನ ಈಶ್ವರ ದೇಗುಲ ಸ್ಥಾಪನೆ ಅಲ್ಲದೆ 'ಸ್ವಯಂಭೂ' ದೇವರುಗಳ ಆಚಾರ್ಯತ್ವ ಕಾಳಾಮುಖರನ್ನು ಏಕೆ ಮಾಧವ ಹೆಸರಿಸಿಲ್ಲ ಎಂದು ಪ್ರಶ್ನಿಸುತ್ತ ಒಂದು ದರ್ಶನದ ಅನುಯಾಯಿಗಳು ಇನ್ನೊಂದು ದರ್ಶನ ಅಧ್ಯಯನ ಮಾಡುವಷ್ಟು ಉದಾರವಾಗಿದ್ದರು. ಹೀಗಾಗಿ ಯಾವ ದರ್ಶನದ ಪಂಥದವರೆಂದು ನಿರ್ಧರಿಸುವುದು ಕಷ್ಟ, ಕಾಳಾಮುಖರ ಪ್ರಸಂಗದಲ್ಲಿ ಇದು ನಿಚ್ಚಳವೆಂದಿದ್ದಾರೆ. [ಹಿರೇಮಠ ಎಸ್ ಎಸ್.; ಕಾಳಾಮುಖ ದರ್ಶನ ಪುಟ. ೧೨೩] ಆದರೆ ಒಂದು ದರ್ಶನದ ಅನುಯಾಯಿಗಳು ಅಧ್ಯಯನ ಮಾಡುವ ಇನ್ನೊಂದು ದರ್ಶನವು, ಅವರನ್ನು ಖಂಡಿಸಲು ಅವರ ಲೋಪದೋಷಗಳನ್ನು ಗಮನಿಸಿ ದೂಷಿಸಿರಲೂಬಹುದು ಹಾಗಾಗಿ ಹೆಸರಿಸಿಲ್ಲದಿರಬಹುದು.

ಕಾಳಾಮುಖರು ವೇದಗಳನ್ನು ಅಧ್ಯಯನ ಮಾಡಿಕೊಂಡಿದ್ದರು, ಪಾಶುಪತರು ವೇದಗಳನ್ನು ನಿರಾಕರಿಸಿದ್ದರು. ಕ್ರಿ.ಶ. ೧೪೧೦ ರಿಂದ ಈಚೆಗೆ ಶಾಸನಗಳಲ್ಲಿ ಕಾಳಾಮುಖ ಗುರುಗಳ ಹೆಸರು ಕಂಡು ಬರುವುದಿಲ್ಲ. ಕ್ರಿ.ಶ. ೧೪೩೦ ರ ಲಕ್ಕಣ್ಣ ದಂಡೇಶ ಕಾಳಾಮುಖ ಗುರುವನ್ನು ಹೊಗಳುತ್ತಾನೆ [ಚಿದಾನಂದಮೂರ್ತಿ ಎಂ.; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ , ಪುಟ. ೧೭೫] ಈ ಮೇಲಿನ ವಿದ್ವಾಂಸರ ಅಭಿಪ್ರಾಯವನ್ನು ಗಮನಿಸಿದಾಗ ಪಾಶುಪತ ಮತ್ತು ಕಾಳಾಮುಖ ಒಂದೇ ಎಂಬ ಅಭಿಮತವಿದ್ದರೂ ಕಾಳಾಮುಖರು ಸ್ವತಹ ದೈವತ್ವಕ್ಕೆರುವುದು ಎಂದು ಗೋಚರವಾಗುತ್ತದೆ.

ಕಾರಣೋತ್ತರ ತಂತ್ರದಲ್ಲಿ "ಅತ್ಯಾಶ್ರಮಂ ಪಾಶುಪತಂ ಶಾಂಭವಂ ತತ್ ಶಿರೋವೃತಂ" ಅಂದರೆ ಪಾಶುಪತರು ಅತ್ಯಾಶ್ರಮಿಗಳು, ಶಾಂಭವರು, ಶಿರೋವೃತಿಗಳು ಎಂಬ ಅರ್ಥವಾದಲ್ಲಿ ಪಾಶುಪತರು ಲಿಂಗಧಾರಿಗಳೆಂದಾಗುವುದಿಲ್ಲ. ಪಾಶುಪತರೇ ಶಾಂಭವರೆಂದಾದರೂ ಶಿರೋವೃತಕ್ಕೆ ಲಿಂಗಧಾರಣೆ ಎಂದರ್ಥವೇನಿಲ್ಲ, ಶಿರದಲ್ಲಿ ಲಿಂಗಧಾರಣ ಪದ್ಧತಿ ಇತ್ತು ಮತ್ತು ರಟ್ಟೆಯಲ್ಲಿ ಲಿಂಗಧಾರಣೆ ಮಾಡುತ್ತಿದ್ದುದು ಕಂಡುಬರುತ್ತದೆ ಇಂದಿನ ರೀತಿಯ ಲಿಂಗವಲ್ಲ. ಆದರೆ ಕ್ರಿ.ಶಕದ ಈಚೆ ಹುಟ್ಟಿದ ಅಭಿನವ ಪಾಶುಪತರಲ್ಲಿ ಲಿಂಗಧಾರಣಕ್ರಮ ಪ್ರವೇಶ ಪಡೆಯಿತು. ಇದಕ್ಕೆ ನಕುಲೀಶ ಕಾರಣನಿರುವಂತಿದೆ. ಕಂಚಿಪಲ್ಲವ ದೊರೆಗಳು ಲಿಂಗಧಾರಿ ಪಾಶುಪತ ಮಹೇಶ್ವರರಾಗಿದ್ದಾರೆಂದು ಶಾಸನಗಳ ಆಧಾರದಿಂದ ಮಲ್ಲಪ್ಪ ಟಿ. ಎನ್ ನಿರ್ಧರಿಸಿದ್ದಾರೆಂದು ವಿವರಿಸುತ್ತಾರೆ. [ಹಿರೇಮಠ ಎಸ್‌ಎಸ್.; ಪಾಶುಪತ ದರ್ಶನ, ಪುಟ. ೨೦]

ಪಾಶುಪತರ ತಾಂತ್ರಿಕ ಅರ್ಥ ಮಾಯವಾಗಿದೆ. ಶ್ಮಶಾನದ ಹೆಣ ಸುಟ್ಟ ಬೂದಿ ಬದಲಿ ಆಕಳ ಸಗಣಿಯನ್ನು ಸುಟ್ಟು ಮಾಡಿದ ವಿಭೂತಿ ಬಳಕೆಗೆ ಬಂದಿತು. ಬ್ರಾಹ್ಮಣ, ಚಾಂಡಾ, ಯೋಗಿ, ಕಾಪಾಲಿಕರಾರೇ ಇರಲಿ ದೇಹಕ್ಕೆ ಭಸ್ಮ ಬಳೆದುಕೊಂಡರೆ ಅವರು ನಾಸ್ತಿಕರೇ ಎಂದು ೧೪ ನೆಯ ಶತಮಾನದ ಗುಣರತ್ನ 'ತರ್ಕರಹಸ್ಯ ದೀಪಿಕಾ' ದಲ್ಲಿ ಹೇಳುತ್ತಾನೆ. ಇಂತವರು ಆತ್ಮ ಪರಮಾತ್ಮ ನಂಬುವುದಿಲ್ಲ. ಪೃಥ್ವಿ ಆಪ್ ತೇಜವಾಯು ಎಂಬ ನಾಲ್ಕೆ ಭೂತಗಳನ್ನು ನಂಬುತ್ತಾರೆ. ಇವರಿಗೆ ಮಡಿ ಮೈಲಿಗೆ ಇಲ್ಲ ಎಂಬುದನ್ನು [ಎನ್.ಎನ್. ಭಟ್ಟಾಚಾರ್ಯ ಹೇಳಿರುವುದನ್ನು ಉಲ್ಲೇಖಿಸುತ್ತಾರೆ.

ಪಶು ಯಾರು? ಜೀವವೇ ಪಶು, ಮಹೇಶ್ವರನೇ ಪಶುಪತಿ ಹುಲ್ಲು ತಿನ್ನುವ ಅವಿವೇಕಿ, ಜಡ, ಆಕಳು ಮುಂತಾದ ಪಶುಗಳನ್ನು ಬೇರೆಯವರಿಂದ ಹೊಡೆತ ತಿನ್ನುವಂಥಾ, ಹೊಲಗಳ ಕೆಲಸಕ್ಕೆ ಪ್ರಯೋಜಕ ಎಲ್ಲ ದುಃಖಗಳನ್ನು ಸಹಿಸುವಂತವು. ತನ್ನ ಒಡೆಯನಿಂದ ಕಟ್ಟಲ್ಪಡುವಂತವು. ಇವುಗಳ ಪತಿ ಈಶ್ವರ ಎಂದಿದ್ದಾರೆ. [ಅದೇ ಪುಟ. ೨೨]

ತ್ರಿಕ ಸಿದ್ಧಾಂತದಲ್ಲಿ ಪಶು ದೈವ ಪಾಶ ಅಜ್ಞಾನವನ್ನು ಕಳೆದುಕೊಂಡು ಪತಿಯಾಗುವುದು, ದೈವತ್ವಕ್ಕೆರುವುದಾಗಿದೆ. ಇಚ್ಚಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ ಕಳೆದುಕೊಳ್ಳುವ ಪತಿ ಎಂದು ದೈವತ್ವಕ್ಕೇರುವುದಾಗಿದೆ.

ಪಾಶುಪತಕ್ಕೆ ನಕುಲೀಶ ಪಾಶುಪತವೆಂಬ ಮತ್ತೊಂದು ಹೆಸರು ಉಂಟು ನಕುಲೀಶನೆಂಬುವನು ಇದರ ಸಂಸ್ಥಾಪಕನೆಂಬ ಪ್ರತೀತಿಯಿರುವುದರಿಂದ ಇದಕ್ಕೆ ಈ ಹೆಸರು ಬಂದಿರಬೇಕು. ಈ ಸಿದ್ಧಾಂತದ ಪ್ರಕಾರ ಪಾಶುಪತ ಶಾಸ್ತ್ರವೇ ಪರಮಪುರುಷಾರ್ಥ ಸಾಧನ. ಪಾಶುಪತಶಾಸ್ತ್ರವೆಂದರೆ ಪಶುಪತಿಗೆ ಸಂಬಂಧಿಸಿದುರು ಎಂದರ್ಥ ಪಶುವೆಂದರೆ ಪರತಂತ್ರವಾದ ಜಗತ್ತು ಪತಿಯೆಂದರೆ ಜಗತ್ತಿಗೆ ಕಾರಣವಾದ ಈಶ್ವರ ದು:ಖಾಂತವೇ ಪರಮ ಪುರುಷಾರ್ಥ ದು:ಖಾಂತವೆಂದರೆ, ದು:ಖನಾಶವೆಂದರ್ಥ–ಅಂದರೆ ಪಾರಮೇಶ್ವರ್ಯ ಪ್ರಾಪ್ತಿ. ಇತರ ವಸ್ತುವಿನ ಅಪೇಕ್ಷೆಯೇ ಇಲ್ಲದೇ ಪರಮೇಶ್ವರ ಸಾನಿಧ್ಯವನ್ನು ಈಶ್ವರನು ಕೊಡುವನೆಂಬುದು ಈ ಶಾಸ್ತ್ರದ ಸಿದ್ಧಾಂತ. ಯೋಗ ಮತ್ತು ವಿಧಿಯು ಈಶ್ವರನ ಅನುಗ್ರಹಕ್ಕೆ ಸಾಧನ ಪಶುಪತಿಯ ಸೂತ್ರಗಳು ಮಾಧವರ ಸರ್ವದರ್ಶನ ಸಂಗ್ರಹದಲ್ಲಿ ಉಕ್ತವಾಗಿರುವ ಹರದತ್ತಾಚಾರ್ಯರ ಗ್ರಂಥಗಳು ಈ ಪಂಥದ ಪ್ರಮಾಣ ಗ್ರಂಥಗಳು [ಸಾಹಿತ್ಯ ಭಾರತಿ, (ಸಂ) ಕೆ.ವಿ.ಪುಟ್ಟಪ್ಪ, ಕನ್ನಡ ಗ್ರಂಥಮಾಲೆ, ಪುಟ. ೨೪೦] ಎಂದು ಪಾಶುಪತ ಪಂಥದ ಕುರಿತು ವಿವರಣೆ ನೀಡಲಾಗಿದೆ. ಅಗ್ನಿರಿತಿಭಸ್ಮ, ವಾಯುರಿತಿಭಸ್ಮ, ಜಲಮಿತಿಭಸ್ಮ, ಸ್ಥಳಮಿತಿಭಸ್ಮ, ವೋಮಮಿತಿಭಸ್ಮ, ಸರ್ವ ಹವಾ ಇದಂ ಭಸ್ಮಮನ: ಈ ಮಂತ್ರಗಳು ಮಹಾ ಪಾಶುಪತಕ್ಕೆ ಬಹುಮುಖ ಎಂದು ಅಥರ್ವಶೀರ್ಷೋಪನಿಷತ್‌ನಲ್ಲಿರುವುದನ್ನು ಪ್ರಸ್ಥಾಪಿಸುತ್ತದೆ.[ಫಿಲಿಯೊಜಾ ವಸುಂಧರಾ,; ಕರ್ನಾಟಕದಲ್ಲಿ ಲಾಕುಳಶೈವ ಜಕ್ಕಣಾಚಾರ್ಯರು, ಪುಟ.೧೦] ಶಾಸನಗಳಲ್ಲಿ ಕಾಳಾಮುಖರ ಹೆಸರುಗಳೂ ಶಕ್ತಿ, ಪಂಡಿತ, ದೇವ ಎಂದು ಕೊನೆಯಾಗುತ್ತವೆ. ಇಬ್ಬರನ್ನೂ ಗೊರವರೆಂದೂ ನೈಷ್ಠಿಕ ತಪೋಧನರೆಂದೂ ಕರೆಯುತ್ತಾರೆ. ಬಹುಶ: ಕಾಳಾಮುಖರಿಗೆ ಪ್ರತ್ಯೇಕವಾದ ಧರ್ಮಗ್ರಂಥಗಳಿದ್ದಿಲ್ಲ. ಅಷ್ಟೇ

ಅಲ್ಲ ಅವರಿಗೂ ಲಕುಲೀಶ ಪಾಶುಪತರಂತೆಯೋ 'ಲಾಕುಳಾಗಮವೇ' ಆಧಾರಗ್ರಂಥ. ಶಕ್ತಿ, ಪಂಡಿತ, ದೇವ, ಹೆಸರುಗಳು ಸಾಮಾನ್ಯವಾಗಿ ಪ್ರಧಾನವಾದ ಸ್ಥಾನಗಳಲ್ಲಿ ಉಲ್ಲೇಖಿತವಾಗಿವೆ, ರಾಶಿ, ಜೀಯಗಳು ನಾಮಗಳು ಪ್ರಧಾನವಲ್ಲದ ಸ್ಥಾನಗಳಲ್ಲಿ ಕಂಡುಬರುತ್ತವೆ.

ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕು ಎಮ್ಮಿಗನೂರು ಶಾಸನ ಕ್ರಿಶ ೧೧೪೯ರಲ್ಲಿ "ಪಾಶುಪತ ಬೃತೋರ್ಜಿತ ತಪಶ್ರೀ ಮಂಡನರ್, ಮುಕ್ತಿಭಾಜನರ್ ಯೋಗೀಶ್ವರ ಅಟ್ಟಹಾಸಮುನಿ" ಎಂಬ ಉಲ್ಲೇಖವಿದೆ. ಇಲ್ಲಿಯ ರಾಮೇಶ್ವರ ದೇವಸ್ಥಾನಕ್ಕೆ ಕಾಮೇಗೌಡನ ಮಗ ದೇಚಗೌಡ ತಂದೆಯ ದಾನವನ್ನು ಪುನರ್ದತ್ತಿ ಮಾಡಿದ್ದಾನೆ. ಬ್ರಹ್ಮಚರ್ಯ ವೃತರು ಪಾಶುಪತವೃತವಿರಾಜಿತರು ಆದ ಯೋಗೇಶ್ವರರಶಿಷ್ಯ ಈ ಅಟ್ಟಹಾಸ ಮುನಿಯ ಕಾಲ್ತೊಳೆದು ದಾನ ಮಾಡಲಾಗಿದೆ.

ರಾಣೆಬೆನ್ನೂರ ತಾಲೂಕಿನ ಅಸುಂಡಿ ಕ್ರಿಶ ೧೦೭೪ರ ಶಾಸನದಲ್ಲಿ ಮೇಲ್ಭಾಗದ ಲಿಂಗದ ಶಿಲ್ಪದ ಮೇಲೆ ಇರುವ ಲಿಪಿಯಲ್ಲಿ 'ಸಿಂಘ ಪರಿಷೆಯಮಠ' ಎಂದು ಮತ್ತು ಮಠಾಧಿಪತಿಗಳು ಸೋವರಾಶಿ ಪಂಡಿತರ ಉಲ್ಲೇಖ [ಎಸ್ಐಐ, ಸಂ,೧೮, ೭೮ ಕ್ರಿಶ ೧೦೭೪] ಇಲ್ಲಿಯ ಇನ್ನೊಂದು ಮೂರನೆಯ ಸೋಮೇಶ್ವರನ ಕಾಲದ ಕ್ರಿಶ ೧೧೨೭ ರ ಶಾಸನ ೧೩೩ರ ಕಲ್ಲೇಶ್ವರ ದೇವಸ್ಥಾನದ ಮುಂದಿರುವ ಶಾಸನದಲ್ಲಿ 'ಬರ್ಮಗಾವುಂಡ ಕಲಿದೇವಸ್ವಾಮಿ ದೇವರಿಗೆ ಬಿಟ್ಟ ಸ್ಥಾನಮಾನವೆಂತೆಂದಡೆ, ಸ್ವಸ್ತ್ಯನೇಕ ಶಿವತತ್ವಾಗಮಸಂಪನ್ನರುಂ, ಶಿಷ್ಯಪ್ರಸನ್ನರುಂ ಸಕಳಶಾಸ್ತ್ರಪಾರಗರುಂ, ಚೌಷಷ್ಟಿ ಕಳಾಧಾರರುಂ[ಪಶು]ಪತಿಮತ ತಪಃ ಪ್ರಭಾವಮಾರ್ಗ್ಗ ಸುಬೋಧನಿಯಮಿತ ಮಾಹೇಶ್ವರ ಜನ ಶಿವಮುನಿಗಣ ಶಿಕ್ಷೋಕ್ತ ದೀಕ್ಷಾದಕ್ಷರುಂ. . .ಯಮನಯಮ . .ಶ್ರೀಮತು ಸಿಂಗಪರಿಷೆಯ (೫೫ನೆಸಾಲು) ಮಠದಾಚಾರ್ಯ್ಯರು ಸೋಮೇಶ್ವರ ಪಣ್ಡಿತರ ಪುತ್ರ ಶಿಷ್ಯ. . . (೫೭ನೆ ಸಾಲು) ಬ್ರಹ್ಮಸಿಂಗಿ ಮುನಿಪಂ ಎಂದು ಪಾಶುಪತರ ಉಲ್ಲೇಖವಿದೆ.

ಕಲಕೇರಿಯ ಕೆರೆ ಸೋಮೇಶ್ವರ ದೇವಾಲಯದ ದಾನದ ಸಂದರ್ಭದಲ್ಲಿ ೧ನೇ ಸೊಮೇಶ್ವರನ ಕಾಲದ ಶಾಸನದಲ್ಲಿ ಕ್ರಿ.ಶ. ೧೦೫೫ ಡಿಸೆಂಬರ ೨೫ ಸಾಲು ೧೧ರಲ್ಲಿ "ಣಜಪಸಮಾದಿ ಸಂಪನ್ನರಪ್ಪ ಶ್ರೀಮತು ಪಸುಪತಿ ದೇವರಕಾಲಂ ಕರ್ಚಿ ಧಾರಾಪೂರ್ವಕದಿಂ ಬೆಂಗೇರಿಯ ಕೆಱೆಯ ಕೆಳಗೆ ಬಿಟ್ಟಗಱ್ದೆ ಮತ್ತರೊನ್ದು ಕೆಲೆಯೂ".

ಈ ಶಾಸನದಲ್ಲಿ ಪಸುಪತಿ ಎಂಬ ಹೆಸರಿನ ಉಲ್ಲೇಖ ದೊರಕುತ್ತದೆ. ಇತ್ತೀಚಿನ ಆಧಾರಗಳಿಂದ ಜಿಲ್ಲೆಯಲ್ಲಿ ಈ ಶಾಸನಗಳನ್ನು ಪಾಶುಪತರವೆಂದು ಗುರುತಿಸಬಹುದು.

ಪಾಶುಪತರ ಕಠಿಣ ತಪಸ್ಸಿನ ಆಚರಣೆ ಅಸಾಮಾನ್ಯವಾಗಿತ್ತು. ಲಕುಲೀಶನ ಬಾಯಿಂದ ಬಂದುದೆಂದು ಹೇಳಲಾದ ಪಾಶುಪತ ಸೂತ್ರದಲ್ಲಿ ಪಾಶುಪತರಿಗೆ ಅನೇಕ ಕಠಿಣ ವಿಧಿಗಳನ್ನು ವಿಧಿಸಿದೆ. ಲೋಕದ ಕಣ್ಣಿಗೆ ಹುಚ್ಚರಂತೆ ಕಾಣಿಸಿಕೊಂಡು ಅಪಮಾನವನ್ನು ಹೊಂದಿ, ಸಹಿಸಿಕೊಂಡು ವಿನಯವನ್ನು ಸಾಧಿಸಬೇಕು, ಕುಂಟನಂತೆ ಕುಂಟುವುದು, ಹುಚ್ಚನಂತೆ ಮಾತನಾಡುವುದು, ಬೂದಿಯನ್ನು ಬಳಿದುಕೊಳ್ಳುವುದು, ಕೂಗುವುದು, ನಗುವುದು, ಕುಣಿಯುವುದು, ದೇವರಿಗೆ ಮುಡಿಸಿದ ಮಾಲೆಯನ್ನು ಮುಡಿದುಕೊಳ್ಳುವುದು. ಇತ್ಯಾದಿಗಳೇ ಈ ಕಠಿಣವ್ರತಗಳು ನೋಡಿ ಪಾಶುಪತ ಸೂತ್ರಮ್(ತಿರುವಾಂಕೂರು ವಿಶ್ವವಿದ್ಯಾಲಯ ಪ್ರಕಟಣೆ ೧.೮) [ಚಿದಾನಂದಮೂರ್ತಿ.ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೧೫೭] ಪಾಶುಪತರು ಕಠಿಣವಾದ ವ್ರತಗಳನ್ನು ಆಚರಿಸುತ್ತಿದ್ದ ಬಗ್ಗೆ ಈ ಗ್ರಂಥಗಳ ಮೂಲಕ ತಿಳಿದು ಬರುತ್ತದೆ.

ಕಾಳಾಮುಖವು ಪಾಶುಪತ ಸಿದ್ಧಾಂತದ ಕವಲು ಎಂಬುದು ಸುಪ್ರಸಿದ್ಧ ಸಂಗತಿಯಾಗಿದೆ ಎಂದು ಡಾ. ಲಾರೆಂಜೆನ್ ಹೇಳುವ ಮಾತಿಗೆ ನಮ್ಮ ಸಮ್ಮತಿಯಿದೆ. ಆದರೆ ಕರ್ನಾಟಕದಲ್ಲಿ ಕಾಳಾಮುಖವು ಎಷ್ಟೊಂದು ಪ್ರಾಧಾನ್ಯತೆಯನ್ನು ಪಡೆಯಿತೆಂದರೆ, ಕೆಲವು ದಾಖಲೆಗಳು ಪಾಶುಪತವೇ ಕಾಳಾಮುಖದ ಒಂದುಶಾಖೆಯೆಂದು ಹೇಳುವಷ್ಟು ದೀರ್ಘಕ್ಕೆ ಹೋಗುತ್ತವೆ. [ಫಿಲಿಯೋಜಾ, ವಸುಂಧರಾ.; ಧಾರವಾಡ ಜಿಲ್ಲೆಯ ಕಾಳಾಮುಖ ಮತ್ತು ಪಾಶುಪತ ದೇವಾಲಯಗಳು ಅನು: ಹನುಮಾಕ್ಷಿ ಗೋಗಿ, ಪುಟ ೫೬] ಎಂದಿರುವುದನ್ನು ಗಮನಿಸಿದಾಗ ಪಾಶುಪತರಿಗಿಂತ ಕಾಳಾಮುಖರು ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದಿರುವ ಬಗ್ಗೆ ಶಾಸನಗಳಾಧಾರವಾಗಿವೆ. ಜಿಲ್ಲೆಯಲ್ಲಿ ಪಾಶುಪತ ದೇವಾಲಯಗಳು ಅಪರೂಪವಾಗಿ ಲಭಿಸುತ್ತವೆ. ಚೌಡದಾನಪುರದ ಮುಕ್ತೇಶ್ವರ, ಅಸುಂಡಿಯ ಕಲ್ಲೇಶ್ವರ ದೇವಾಲಯಗಳು ಜಿಲ್ಲೆಯಲ್ಲಿ ಕಂಡುಬರುವ ಶಾಸನೋಕ್ತ ದೇವಾಲಯಗಳಾಗಿವೆ. ಗಳಗನಾಥದ ಗಳಗೇಶ್ವರ ದೇವಸ್ಥಾನವನ್ನು ಪಾಶುಪತರದಿರಬೇಕೆಂದು ಫಿಲಿಯೋಜಾ ವಸುಂಧರಾರವರು ಅಭಿಪ್ರಾಯಿಸಿದ್ದಾರೆ. [ಫಿಲಿಯೊಜಾ ವಸುಂಧರಾ.; ಕರ್ನಾಟಕದಲ್ಲಿ ಲಾಕುಳಶೈವ ಜಕ್ಕಣಾಚಾರ್ಯರು, ಪುಟ. ೯೧] ಪಶುಪತಿ ಎಂಬ ಉಲ್ಲೇಖವಿರುವುದರಿಂದ ದೇವಾಲಯಗಳು ಪಾಶುಪತರವೆಂದಲ್ಲ ಅವು ಕಾಳಾಮುಖ ದೇವಾಲಯಗಳಿರುವುದು ಕಂಡುಬಂದಿವೆ.

ಸಿದ್ಧನಾಥ ದೇವಾಲಯವೆಂದರೆ ನಾಥಪಂಥದವುಗಳೆಂದಲ್ಲ ಅವು ಲಾಕುಳ ಶೈವ ದೇವಾಲಯಗಳು.

ಕಾಳಾಮುಖ ಪಾಶುಪತ ಮತಗಳಲ್ಲಿ ಸಮಾನಾಂಶಗಳ ಸಾಕಷ್ಟಿದ್ದರೂ ಅವು ಭಿನ್ನವೆಂಬ ಅವನ ನಿರ್ಣಯ ಸಮರ್ಪಕವೇ, ಆದರೆ ಲಕುಲೀಶನೇ ಪಾಶುಪತದ ಮೂಲ ಸ್ಥಾಪಕ ಎಂಬ ಅವನ ವಿಚಾರ ಸರಿಯಲ್ಲ. ಹಳೆಯ ಪಾಶುಪತವನ್ನು ಲಕುಲೀಶ ಪುನರುತ್ಥಾನಗೊಳಿಸಿದನೆಂದು ಕೆಲವು ವಿದ್ವಾಂಸರು ಅಭಿಮತ ಸೂಕ್ತ ವೆಂದಿದ್ದಾರೆ. ಆದರೆ ಆಚರಣೆಯಲ್ಲಿ ಭಿನ್ನ ಅಲ್ಪ ವ್ಯತ್ಯಾಸ ಗುರುತಿಸಿಲ್ಲವೆಂದು ಸ್ಪಷ್ಟಪಡಿಸಬಹುದು.

ಕಾಳಾಮುಖರು ಎಂಬ ಚರ್ಚೆಯಲ್ಲಿ ಈ ಹಿಂದಿನ ವಿದ್ವಾಂಸರೆಲ್ಲ ವೈದಿಕ ಅವೈದಿಕ ಕೆಳವರ್ಗ (ಶೂದ್ರರ ಕುರಿತು ವಾಮಾಚಾರಿಗಳು) ಎನ್ನುವ ಅರ್ಥದಲ್ಲಿ ಹುಡುಕಲು ಯತ್ನಿಸಿದ್ದಾರೆ. ಆದರೆ ವೈದಿಕರ ನೆಲೆಯ ಸಮೀಪ ಹೋಗಿ ವೇದಗಳನ್ನು ಅರಿತುಕೊಂಡು ಸ್ಥಾನಚಾರ್ಯರಾಗಿರುವ ಇನ್ನೊಂದು ಪಂಗಡವನ್ನು ಆಲೋಚಿಸದೇ ಇದ್ದುದು ವಿಪರ್ಯಾಸವಾಗಿದೆ. ಕಾರಣ ಈ ಪರಂಪರೆಯ ಮೂಋುಜಾವಿದೇವ, ಏಕಾಂತರಾಮಯ್ಯರು ವಿಶ್ವಕರ್ಮ ಜನಾಂಗ ಪೂರ್ವಜರೆಂದು ಕಂಡು ಬರುತ್ತದೆ ಎಂದಿರುವರು ವಸುಂಧರಾ ಫಿಲಿಯೊಜ, ಇವರು ಇಂದು ಬ್ರಾಹ್ಮಣೇತರವಿದ್ದರೂ ಪಂಚಾಂಗದ ಅನುಸರಣೆ ಅನೇಕ ವಿದ್ಯಾದಾನ ಧಾರ್ಮಿಕ ಆಚರಣೆಯ ಮುನ್ನುಡಿಯಲ್ಲಿರುವುದನ್ನು ಕಾಣಬಹುದು. ಪಾಶುಪತ, ಕಾಳಾಮುಖ, ಲಾಕುಳ ಇವೆಲ್ಲ ಒಂದೇ ಎಂಬ ಪಂಡಿತರ ಮಾತನ್ನು ಹಿರೇಮಠರವರು ಖಂಡಿಸುತ್ತಾರೆ. ಅವರಿಂದ ಹೆಚ್ಚಿನದೇನನ್ನು ನಿರೀಕ್ಷಿಸಲು ಸಾಧ್ಯವಿಲ್ಲ! ಇವು ಒಂದೇ ಆಗಿದ್ದರೆ ಹೆಸರೇಕೇ ಬೇರೆ ಬೇರೆ ? ಶಿಷ್ಯ ಪರಂಪರೆ ಮತ್ತು ಶಾಸ್ತ್ರಿಗಳು ಕೂಡ ಈ ಅಭಿಪ್ರಾಯವನ್ನೇಕೆ ಬೆಂಬಲಿಸವು ? ಸ್ಥೂಲ ಒಮ್ಮತವಿದ್ದರೂ ಸೂಕ್ಷ್ಮ ವ್ಯತ್ಯಾಸಗಳು ಅವುಗಳ ಅನನ್ಯತೆಗೆ ಕಾರಣವಲ್ಲವೇ ? ಕೆಲವು ಸಲ ಸಮನ್ವಯಿಕರಣ ಪ್ರವೃತ್ತಿ ಅವುಗಳ ಸ್ವಂತ ಅಸ್ತಿತ್ವಕ್ಕೆ ಧಕ್ಕೆ ತಂದಿರಬಹುದೆನ್ನಿ ಎಂದು ಹೇಳಿರುವುದನ್ನು ವಿವೇಚಿಸಿದಾಗ ಪಾಶುಪತರು ಶಿವನನ್ನು ಪೂಜಿಸಿ ಒಲಿಸಿಕೊಂಡಾಗ ಮೋಕ್ಷವೆಂಬುದು ಶಿವನಲ್ಲಿ ಸೇರುವುದು ಎಂದಿದ್ದಾರೆ. ಆದರೆ ಕಾಳಾಮುಖರು ತಾವೇ ದೈವತ್ವ [ಶಿವತ್ವ]ವನ್ನು ಹೊಂದುವುದು ಇವರ ವಿಶೇಷವಾಗಿದೆ. ಇದನ್ನು ಹೊರತು ಪಡಿಸಿ ಆಚರಣೆಗಳೆಲ್ಲ ಒಂದೇ ಆಗಿರುವುದು ಕಂಡು ಬರುತ್ತದೆ.

೨.೨ ಕಾಪಾಲಿಕ

ಕಾಪಾಲಿಕರು ಮೂಲಶೈವ ಪಂಥದವರು ಇವರು ತಲೆಬುರುಡೆ (ಕಪಾಲ) ದೊಣ್ಣೆ (ಖಟ್ವಾಂಗ)ಗಳನ್ನು ಹೊಂದಿರುವವರು ಕಾಪಾಲಿಕರು. ರಾಮಾನುಜರು ಕಾಪಾಲಿಕರ ಪೂಜಾವಿಧಾನ ತಿಳಿಸುತ್ತ ಕಂಠಿಕಾ, ರುಚರ, ಕುಂಡಲ, ಶಿಖಾಮಣಿ, ಭಸ್ಮ ಮತ್ತು ಜನಿವಾರ ಈ ಆರು ಮುದ್ರೆಗಳನ್ನು ಧರಿಸುವವನು ಲೋಕದಲ್ಲಿ ಮರುಹುಟ್ಟು ಪಡೆಯಿತು. ಕಾಪಾಲಿಕರ ಪೂಜಾವಿಧಾನವು ವಿಶಿಷ್ಟವೆನಿಸಿದ ಎಲವು, ನೆತ್ತರು, ಮಾಂಸ ತಲೆಬುರುಡೆಗಳಿಂದ ಕೂಡಿರುವಂತ ಧಾರ್ಮಿಕ ವಿಧಾನಗಳಿಂದ ಕೂಡಿರುತ್ತದೆ ಎನ್ನುತ್ತದೆ ವಜ್ರಯಾನ ಸಾಹಿತ್ಯ.

ತಲೆಬುರುಡೆಯ ಪಾತ್ರೆಯಲ್ಲಿ ಉಣ್ಣುವುದು ಹಾಗೂ ಮದ್ಯದ ಪಾತ್ರೆಯಿಂದ ದೇವತೆಗಳನ್ನು ಪೂಜಿಸುವುದು ಕಾಪಾಲಿಕರಿಗೆ ಸಂಬಂಧಿಸಿದವು. ಕಪಾಲಿನ್ ಪದಕ್ಕೆ ತಲೆಬುರುಡೆ ಹಿಡಿದುಕೊಂಡವನೆಂಬ ಅರ್ಥವಿದೆ. ಒಂದನೆಯ ಶತಮಾನದ ಹಾಲನ ಪ್ರಾಕೃತ ಗಾಥಾಸಪ್ತಸತಿಯಲ್ಲಿ ಹೊಸ ಕಾಪಾಲಿಕಳನ್ನು ವರ್ಣಿಸುವ ಕಥೆ ಇದೆ. ಎಡಬಿಡದೆ ಭಸ್ಮಧಾರಿಯಾಗಿರುವುದು ಉಲ್ಲೇಖವಿದೆ. [ಕಾವ್ಯಮಾಲಾ ಆವೃತ್ತಿ ಪ ೪೦೮] ಕಾಪಾಲಿಕರ ಕುರಿತು ಎರಡುಶಾಸನ ಲಭಿಸುತ್ತವೆ. ಶ್ರವಣಬೆಳಗೊಳ ಮತ್ತು ಮೈಸೂರು ಜಿಲ್ಲೆಯ ನರಸೀಪುರ ತಾಲೂಕಿನ ತಿರುಮಲಕೂಡಲ ಕ್ರಿ.ಶ ೬೮೦ – ೯೭೪ ರ ಗಂಗರ ಮುಮ್ಮಡಿ ಮಾರಸಿಂಹನ ಶಾಸನವಾಗಿದೆ. ಕರ್ನಾಟಕದಲ್ಲಿ ಕಾಪಾಲಿಕರು ಇದ್ದರು ಎನ್ನುವುದನ್ನು ಸಾವಿರ ವರ್ಷ ಹಳೆಯ ಶಿಲಾಶಾಸನ ರಾಯಚೂರು ಜಿಲ್ಲೆಯ ಮಲಿಯಾಬಾದ್‌ನಿಂದ ೨ಕಿ.ಮೀ ದೂರದಲ್ಲಿರುವ ಅಡವಿಬೆಟ್ಟದ ಗುಹೆಯೊಂದರ ಮೇಲ್ಭಾಗದಲ್ಲಿರುವುದನ್ನು ಕಲವೀರ ಮನ್ವಾಚಾರ್ ಅವರು ಪತ್ತೆ ಮಾಡಿದ್ದಾರೆ. ಅದರಲ್ಲಿ ಕಾಪಾಲಿಕ ಸಿದ್ಧಾಂತದ ಕಂಕಾಳ ಗೊರವನ ಉಲ್ಲೇಖವಿದೆ. ಇದು ಕಾಪಾಲಿಕರ ಕುರಿತ ಮೊದಲ ಸಾಕ್ಷ್ಯವಾಗಿದೆ. [ದ ಹಿಂದೂ, ಜೂನ್ ೨೭, ೨೦೧೬]

ಕಾಪಾಲಿಕರಿಗೆ 'ಮಹಾವ್ರತಿ' ಎಂಬುದು ಮತ್ತೊಂದು ಹೆಸರು ಅಷ್ಟೆ [ಪಾಠಕ್ ವಿ.ಎಸ್.ಇಂಡಿಯನ್ ಕ್ವಾಲಿಟಿ ವಾಲಿಂ –೩೫] ಯಶಸ್ತಿತಿಲಕ ಚಂಪುವಿನಲ್ಲಿ ತಮ್ಮ ದೇಹದ ಮಾಂಸವನ್ನೇ ಮಾರುತ್ತಿದ್ದ 'ಮಹಾವೃತಿಗಳ' ಪ್ರಸ್ತಾವಿದೆ[ಹ್ಯಾಡಿಂಗೂ ಕೆ.ಕೆ.ಯ್ಯಾಸಿಕಲೇಕ ಇಂಡಿಯನ್ ಕಲ್ಚರ ಪೇಜ ೩೫೮] ಮಾಲತೀಮಾಧವದಲ್ಲಿ ಕಾಪಾಲಿಕ ವ್ರತವನ್ನು ಮಹಾವ್ರತವೆಂದೂ, ನಾಸಿಕದ ಬಳಿಯಿರುವ

ಕಾಪಾಲೇಶ್ವರದಲ್ಲಿರುವ ಸನ್ಯಾಸಿಗಳನ್ನು 'ಮಹಾವ್ರತಿ'ಗಳೆಂದು ಈಗಲೂ ಕರೆಯುತ್ತಾರೆ.[ದಾಸಗುಪ್ತ ಎಸ್.ಎನ್.ಎ.ಹಿಸ್ಟರಿ ಆಫ್ ಇಂಡಿಯನ್ ಫಿಲಾಸಫಿ ವಿ.ಪಿ.೨]

ಯಶಸ್ತಿತಿಲಕ ಚಂಪುವಿನಲ್ಲಿ ತಮ್ಮ ದೇಹದ ಮಾಂಸವನ್ನೆ ಮಾರುತ್ತಿದ್ದ 'ಮಹಾವ್ರತಿ' ಗಳ ಪ್ರಸ್ತಾಪವಿದೆ. ಈ ಮಹಾವ್ರತಿಗಳನ್ನು ಚನ್ನಬಸವಣ್ಣನವರೂ ಹೆಸರಿಸುತ್ತಾರೆ. ಕಾಪಾಲಿಕರಿಗೆ 'ಮಹಾವ್ರತಿ' ಎಂಬುದು ಮತ್ತೊಂದು ಹೆಸರು ಅಷ್ಟೆ. [ಪಾಠಕ.ವಿ.ಎಸ್, ಸಮ್ ಆಬ್ಸಕ್ಯೂರ ಶೈವ ಕಲ್ಟಸ್ ಎಜ್ ನೌನ ಪ್ರಾಮ್ ಇನ್ಸಕ್ರಿಪಶನ್ (ಇಂಡಿಯನ್ ಹಿಸ್ಟಾರಿಕಲ್ ಕ್ವಾರ್ಟರಲಿ ವ್ಯಾ ೩೫ ಪೇ.೧೨೦] ಕ್ರಿಶ ೧೧೪೮ರ ಶಾಸನದಲ್ಲಿ 'ಮಹಾಬ್ರತಿ' ಗಳ(=ಕಾಪಾಲಿಕ) ಪ್ರಸ್ತಾಪವಿದೆ. [ಕ.ಇ.ಸಂ-೧ ೨೪,೧೧೪೮ ಎ.ಡಿ]

ಪಂಪಮಹಾತ್ಮೆಯಲ್ಲಿ ಮಹಾವ್ರತ ಕುರಿತು ಅಧ್ಯಾಯವಿದೆ. ಅದರಲ್ಲಿ ಮಹಾವ್ರತಧಾರಿಗಳ ಚಿತ್ರಣವನ್ನು ತಿಳಿಸಿರುವರು. ಈ ವ್ರತವನ್ನು ಆಚರಿಸುವಾತ ದು:ಖ ಅಥವಾ ಯಾತನೆಗಳಾದ ಜನನ, ವೃದ್ಯಾಪ್ಯ, ಸಾವುಗಳನ್ನುಂಟುಮಾಡುವ ಕಾರಣಗಳನ್ನು ಗಾಢವಾಗಿ ಧ್ಯಾನಿಸಿ ಚರ್ಯಾಂಗವನ್ನು ಅನುಸರಿಸಬೇಕು. ಎಲ್ಲ ಸಂಕಟಗಳನ್ನು ಸಂತೈಸುವ ವಸ್ತುವಾಗಿ ಚರ್ಯೆಯನ್ನು ಮಹಾವ್ರತವನ್ನು ಆಚರಿಸುವಾತ ಕಾಣಬೇಕು. ಈ ಚರ್ಯೆ ದಶಮಾರ್ಗಗಳನ್ನು ಹೊಂದಿದೆ. ಅಹಿಂಸೆ-ಹಿಂಸೆಯನ್ನು ಮಾಡದಿರುವುದು. ಸತ್ಯ-ನಿಜವನ್ನು ಹೇಳುವುದು, ಅಸ್ತೇಯ-ಕಳವುಮಾಡದಿರುವುದು. ಬ್ರಹ್ಮಚರ್ಯ-ಲೈಂಗಿಕಸಂಬಂಧಗಳನ್ನು ಇಟ್ಟುಕೊಳ್ಳದಿರುವುದು, ಅಕಲ್ಪನಾ-ಕಲ್ಪಿಸಿಕೊಳ್ಳದಿರುವುದು, ಅಕ್ರೋಧ-ಕೋಪಿಸಿಕೊಳ್ಳದಿರುವುದು, ಗುರುಶುಶ್ರುಷಾ-ಗುರುಸೇವೆ ಮಾಡುವುದು. ಶೌಚ-ಶುದ್ಧನಾಗಿರುವುದು, ಸಂತೋಷ-ತೃಪ್ತನಾಗಿರುವುದು, ಆರ್ಜವ-ನೇರನಡೆಯುಳ್ಳವನಾಗಿರುವುದು. ಇವುಗಳನ್ನು ಅಧೀನಪಡಿಸಿಕೊಂಡಾಗ ಆತ ಮಹಾವ್ರತಿಯಾಗುತ್ತಾನೆ. ಇವೆಲ್ಲವನ್ನು ಉಪಕ್ರಮಿಸಿದ ನಂತರ ಶಿಷ್ಯ ಗುರುವಿನ ಉಪದೇಶಗಳನ್ನು ಪಾಲನೆ ಮಾಡುತ್ತ ಮಾನವ ಕಪಾಲವನ್ನು ಎತ್ತಿಕೊಂಡು ಅದರಲ್ಲಿ ಭಿಕ್ಷೆ ನೀಡಿಸಿಕೊಳ್ಳಬೇಕು. ತದನಂತರ ಅವನು ಕಾಪಾಲಿಕನೆನಿಸಿಕೊಳ್ಳುತ್ತಾನೆ. ರಾಮಾನುಜರ ಪ್ರಕಾರ ಮಹಾವ್ರತ ಎಂದರೆ ದೊಡ್ಡವ್ರತ. ಅದರ ವೈಶಿಷ್ಟ್ಯದಿಂದಾಗಿ ಆ ಹೆಸರನ್ನು ಅದಕ್ಕೆ ನೀಡಲಾಗಿದೆ. ಮನುಷ್ಯನ ಕಪಾಲದಲ್ಲಿ ಆಹಾರವನ್ನು ತೆಗೆದುಕೊಳ್ಳುವುದು, ಸುಟ್ಟ ಹೆಣದ ಬೂದಿಯಿಂದ ಮೈಯನ್ನು ಸವರಿಕೊಳ್ಳುವುದು ಮುಂತಾದ ಆಚರಣೆಗಳನ್ನು ಇವರು ಅನುಸರಿಸುತ್ತಿದ್ದರು. [ಗೋಪಾಲ ಬಿ.ಆರ್. ಕಾರಪೊಸ್ ಕದಂಬ ಇನ್ಸಕ್ರಿಪಶನ್ ನಂ.೩೧] ಎಂದು ವಿವರಿಸಿ ಈ ವ್ರತಧಾರಿಯು

ಚರ್ಯಾಂಗವನ್ನು ಅನುಸರಿಸಬೇಕು. ಈ ಮೇಲಿನ ಹತ್ತನ್ನು ಸಾಧಿಸಿದವರು 'ಮಹಾವೃತಿ ಎಂದಿದ್ದಾರೆ.

ಕಾಲಾಮುಖ, ಪಾಶುಪತ ಯತಿಗಳಲ್ಲಿ ಕೆಲವರು ಮಹಾವೃತಿಗಳಾಗಿರುತ್ತಿದ್ದರು. ರಾಮಾನುಜರು ದೊಡ್ಡವೃತಗಳನ್ನಾಚರಿಸುವವರೆಂದು ಹೇಳಿ ಈ ವೃತಿಗಳಲ್ಲಿ ಎಲ್ಲವನ್ನು ತ್ಯಜಿಸಿ, ಮೈತುಂಬಾ ಭಸ್ಮ ಬಳಿದುಕೊಂಡು ಕೈಯಲ್ಲಿ ಮನುಷ್ಯ ಕಪಾಲ ಹಿಡಿದುಕೊಂಡು ಅದರಲ್ಲಿ ಭಿಕ್ಷಾನ್ನವನ್ನು ಸ್ವೀಕರಿಸುವರು ಎಂದಿರುವರು [ಫಿಲಿಯೋಜಾ ವಸುಂದರಾ, ಕರ್ನಾಟಕದಲ್ಲಿ ಲಾಕುಳಶೈವ ಜಕ್ಕಣಾಚಾರ್ಯರು, ಕನ್ನಡ ಸಂಶೋಧನಾಸಂಸ್ಥೆ ಧಾರವಾಡ ೨೦೦೩, ಪುಟ.೩೨] ಕಾಳಾಮುಖರು, ಕಾಪಾಲಿಕರು ಆಚರಿಸುವ ಮಹತ್ ಆಚರಣೆ ಅಥವಾ ನಿಯಮಗಳನ್ನೆ ಮಹಾವೃತ ಎಂದಿರುವುದು. ಮಹಾವೃತ ಎಂಬುದು ಒಂದು ಪಂಥವಲ್ಲ ಎಂದು ಸ್ಪಷ್ಟಪಡಿಸಬಹುದು.

ಮಹಾವೃತವು ಮತಗಳಲ್ಲೆಲ್ಲಾ ಉತ್ತಮವು ಈ ಹಿಂದೆ ಶ್ವೇತಗಿರಿಯಲ್ಲಿ ಶ್ವೇತಋಷಿಗಳು ಅನ್ಯ ಋಷಿಗಳಿಗೆ ಇದನ್ನು ಬೋಧಿಸಿದರು. ಇದರಲ್ಲಿ ಮಹತ್ತಾದ ವೃತವಿರುವುದರಿಂದ ಇದಕ್ಕೆ ಮಹಾವೃತವೆಂದು ಹೆಸರು. [ಅದೇ,ಪುಟ.೩೩] ಈ ಕಾಪಾಲಿಕರಿಗೆ ಸಂಬಂಧಿಸಿದ ಶಾಸನಗಳು ಮತ್ತು ಇವರ ಬಗ್ಗೆ ಮಾಹಿತಿ ಹಾವೇರಿ ಜಿಲ್ಲೆಯಲ್ಲಿ ಲಭಿಸುವುದಿಲ್ಲ.

೨.೩ ಕಾಳಾಮುಖ/ಲಾಕುಳ

ಕಾಳಾಮುಖ ಶಬ್ದವು ಹಲವಾರು ತತ್ವಜ್ಞಾನಿಗಳ ವಿದ್ವಾಂಸರ ಗಮನಸೆಳೆದಿದೆ. ಬಹಳಷ್ಟು ವಿದ್ವಾಂಸರು ವಿವಿಧ ರೀತಿಯಲ್ಲಿ ಹೇಳಿದ್ದಾರೆ. ವಾಚಸ್ಪತಿಮಿಶ್ರನು, ಶೈವ, ಪಾಶುಪತ, ಕಾರುಣಿಕ ಸಿದ್ಧಾಂತ ಕಾಪಾಲಿಕ ಎಂದು[ಶಾಸ್ತ್ರಿ ಬಿ.(ಸ) ಭಾಮತೀ ೨.೩೭] ಭಾಸ್ಕರಾಚಾರ್ಯನು ಕಾರಣಿಕ ಸಿದ್ಧಾಂತ ಸ್ಥಾನದಲ್ಲಿ ಕಾಠಕ ಸಿದ್ಧಾಂತಿಯೆಂದು ಹೆಸರಿಸಿರುವನು. ಯಮುನಾಚಾರ್ಯನು ಕಾಲದಮನ, ಕಾರುಣಿಕ ಬದಲಾಗಿ ಕಾಲಾಮುಖ ಎಂದೂ, ರಾಮಾನುಜಾಚಾರ್ಯ ಕಪಾಲ, ಕಾಲಾಮುಖ, ಪಾಶುಪತ, ಶೈವ ಎಂದು, ಶ್ರೀನಿವಾಸನು 'ವೇದಾಂತಕೌಸ್ತುಭ' ಎಂಬ ಟೀಕೆಯಲ್ಲಿ ಕಾಠಕ ಅಥವಾ ಕಾರುಣಿಕದ ಸ್ಥಳದಲ್ಲಿ ಕಾಳಾಮುಖ ಎಂದಿರುವನು, ಜಯತಿರ್ಥೀಯ 'ನ್ಯಾಯಸುಧಾ' ಎಂಬ ಗ್ರಂಥದಲ್ಲಿ ಶೈವ, ಪಾಶುಪತ, ಕಾಲಾಮುಖ, ಕಾಪಾಲಿಕ, ಈ ನಾಲ್ವರನ್ನು ಹೇಳಲಾಗಿದೆ. ಸುಪ್ರಭೇದಾಗಮದ ಕ್ರಿಯಾಪಾದದಲ್ಲಿ ಶೈವ, ಪಾಶುಪತ, ಸೋಮ, ಲಾಕುಲವೆಂದು ನಾಲ್ಕನ್ನು ಹೇಳಿದ್ದಾರೆ, ಇವೆಲ್ಲವನ್ನು ವಿಮರ್ಶಿಸಿದರೆ, ಸೂತಸಂಹಿತೆ,

ಯಮುನಾಚಾರ್ಯ, ರಾಮಾನುಜಾಚಾರ್ಯ, ಶ್ರೀನಿವಾಸ, ಜಯತೀರ್ಥ ಗುಣರತ್ನಸೂರಿ, ಇವರೆಲ್ಲರೂ ತಮ್ಮ ತಮ್ಮ ಗ್ರಂಥಗಳಲ್ಲಿ 'ಕಾಲಾಮುಖ' ಎಂದು ಹೇಳಿರುವಲ್ಲಿ, ವಾಮನಪುರಾಣದಲ್ಲಿ 'ಕಾಲದಮನ' ವಾಚಸ್ಪತಿಮಿಶ್ರನು 'ಕಾರುಣಿಕ'ವೆಂದು ಭಾಸ್ಕರಾಚಾರ್ಯನು 'ಕಾಠಕ'ವೆಂದು ಸೋಮದೇವನು ಯಶಸ್ತಿತಿಲಕದಲ್ಲಿ 'ಅಸಿತವಕ್ತ್ರ'ವೆಂದು ಸುಪ್ರಭೇದಾಗಮದಲ್ಲಿ 'ಲಾಕುಲ' ವೆಂದೂ ನಿಜಗುಣಶಿವಯೋಗಿಯ ಗ್ರಂಥದಲ್ಲಿ 'ಮಹಾವ್ರತಧರ' ಎಂದೂ ಬೇರೆ ಬೇರೆಯಾಗಿ ಹೆಸರಿಸಲಾಗಿದೆ. [ಕಪಟರಾಳ, ಕೃಷ್ಣರಾಯ.; ಕರ್ನಾಟಕ ಲಾಕುಳ ಶೈವರ ಇತಿಹಾಸ, ಪುಟ. ೬೩] ಕಾರುಕ, ಕಾರುಣಿಕ, ಹಾಗೂ ಕಾಠಕ ಸಿದ್ಧಾಂತಿನ್‌ರನ್ನು ಮುಂದಿನ ಕಾಲದಲ್ಲಿ ಕಾಳಾಮುಖರೆಂದು ತಿಳಿಯಲಾಗುತ್ತಿದ್ದರೆ, ಹೀಗಿರುವ ಹೆಚ್ಚಿನ ಸಾಧ್ಯತೆಯಿದ್ದೇ ಇದೆ. ಹಾಗೂ ಅವರೆಲ್ಲರೂ ಕೌರುಷನ ಪರಂಪರೆಯವರಾಗಿದ್ದರೆ, ಕಾಳಾಮುಖ ಶಾಸನಗಳಲ್ಲಿ ಈ ಶಿಷ್ಯನನ್ನು ಕುರಿತು ನಮೂದಿಸದಿರುವುದು ಬಲು ವಿಚಿತ್ರ ಸಂಗತಿ ಎನ್ನಿಸುತ್ತದೆ. ಈ ಕುರಿತು ಸಹಮತ ವ್ಯಕ್ತಪಡಿಸಬಹುದು.

ರಾಷ್ಟ್ರಕೂಟರ ಕಾಲದ ಶೈವ ಧರ್ಮದ ಬಗ್ಗೆ ಚರ್ಚಿಸುತ್ತ ಎಸ್ ಶೆಟ್ಟರವರು, ಈ ಕಾಲದ ಶೈವ ಒಳಪಂಥಗಳ ಸುಳಿವು ಶಾಸನಗಳಲ್ಲಿ ಸಿಕ್ಕರೂ ಅವುಗಳಿಗೆ ಹೆಚ್ಚಿನ ಮಹತ್ವ ದೊರೆತಿಲ್ಲ ಆದರೆ ಕಾಳಾಮುಖ ಮತ್ತು ಪಾಶುಪತ ಪಂಥಗಳು ಕರ್ನಾಟಕದಲ್ಲಿ ನೆಲೆ ಪಡೆದುಕೊಳ್ಳುತ್ತಿದ್ದ ಸೂಚನೆಗಳಿವೆ. ಆಲಂಪುರ ತಾಲೂಕಿನ ಮೀನಾಂಬರಂ ಕನ್ನಡ ಶಾಸನದಲ್ಲಿ ಕಾಳಾಮುಖ ಸಮಯದ ವೀರವ್ರತಿಯನ್ನು ಹೆಸರಿಸಲಾಗಿದ್ದು ಈ ವರೆಗೂ ಗಮನಿಸಿದ ಏಕೈಕ ಕಾಳಾಮುಖ ಸಮಯದ ನಿದರ್ಶನ ಇದಾಗಿದೆ. ಇದರ ಕಾಲ ಹತ್ತನೆಯ ಶತಮಾನದ ಮಧ್ಯಾವಧಿ ಲಕುಲೀಶ್ವರ ಪಂಥದ ಪ್ರಸ್ತಾಪವು ಬಹುಶ ಗದಗ ಜಿಲ್ಲೆಯ ೯೬೯ ರ ನಾಗಾವಿಯಲ್ಲಿ ಮಾತ್ರ ಕಂಡುಬಂದಿದೆ. ಅಲ್ಲಿಯ ರಾಮೇಶ್ವರ ದೇವಾಲಯದ ವಿದ್ಯಾಕೇಂದ್ರಕ್ಕೆ ದತ್ತಿ ಕೊಡುವಾಗ ಲಾಕುಳಿದೇವರ-ದುರಿತಾಂತರವ್ಯಕ್ತ-ಲಿಂಗದೇವರ-ದೈವರ ಎಂದು ಮುನಿಸಂತತಿಯನ್ನು ಹೆಸರಿಸಲಾಗಿದೆ. ಪಾಶುಪತ ಮತ್ತು ಕಾಪಾಲಿಕರ ಪ್ರಸ್ತಾಪ ಬಂದತಿಲ್ಲ [ಶೆಟ್ಟರ ಎಸ್.; ಹಳಗನ್ನಡ ಲಿಪಿ, ಲಿಪಿಕಾರ, ಲಿಪಿವ್ಯವಸಾಯ , ಪುಟ ೨೯೩] ಇದು ಕಾಳಾಮುಖರ ಸಂತತಿಯ ಪ್ರಾಚೀನತೆಯನ್ನು ಸಾರುತ್ತದೆ.

ಕಾಳಾಮುಖ ಪದದ ಬಗ್ಗೆ ವಿವಿಧ ವಿದ್ವಾಂಸರ ಉಲ್ಲೇಖ ತಿಳಿಯಪಡಿಸಲಾಗಿದೆ. ಕಾಳಾಮುಖ ಸಂಪ್ರದಾಯ ವಿಷಯದಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆದಿರುವುದು

ಕಂಡು ಬರುತ್ತದೆ. ಕಾಳಾಮುಖ, ಕಾಠಕ, ಕಾರುಣಿಕ, ಲಾಕುಳ, ಮಹಾವ್ರತಧರ, ಡಾ.ಎಂ.ಎಂ.ಕಲಬುರ್ಗಿಯವರು ಎಸ್‌ಎಸ್‌ಹಿರೇಮಠರವರಿಗೆ ಬರೆದ ಪತ್ರದಲ್ಲಿ ನಕುಲೀಶರು (ಪಾಶುಪತರು) ಪಡೆಯುತ್ತಲಿದ್ದ ಒಂದು ದೀಕ್ಷೆ, 'ಕಾಳಾಮುಖ' ಹೀಗಿರುವಾಗ 'ಕಾಳಾಮುಖ ದರ್ಶನ'ವೆಂಬ ಹೆಸರೇ ಆಕ್ಷೇಪರ್ಹವೆನಿಸುತ್ತದೆ. ಶೈವರ ಹೆಸರುಗಳನ್ನು ಈವರೆಗೆ ವಿದ್ವಾಂಸರು ಕೈಗೆ ಬಂದಂತೆ ಬಳಸಿದ್ದಾರೆ. ಅವು ಪರ್ಯಾಯ ನಾಮಗಳಿರಬಹುದು. ಪರ್ಯಾಯ ನಾಮಗಳನ್ನು ಸ್ವತಂತ್ರ ನಾಮಕಗಳೆಂದು ಬಳಸಬೇಡಿರಿ' ಎಂದಿರುವುದು ಚರ್ಚಿತವಾಗಿದೆ. ಅದಕ್ಕೆ ಉತ್ತರವಾಗಿಯೇ ಹಿರೇಮಠರವರು ನನ್ನ ಮಾತು ಭಾಗದಲ್ಲಿಯೇ ಕಾಳಾಮುಖ ದರ್ಶನ ಮತ್ತು ಸಮಯ ಎಂಬ ಮಾತನ್ನು ಕನ್ನಡ ಶಾಸನಗಳು ಮತ್ತು ವಚನಕಾರರು ಬಳಸಿರುವುದರಿಂದ ಕಲಬುರ್ಗಿಯವರು ಸೂಚಿಸಿರುವಂತೆ ಕಾಳಾಮುಖವು ಲಕುಲೀಶರ ಒಂದು ದೀಕ್ಷೆ ಎಂಬ ಗುರುಗಳ ಮಾತೂ ಕೂಡ ನಿರಾಧಾರವೆನಿಸುತ್ತದೆ ಇಲ್ಲಿ [ಹಿರೇಮಠ, ಎಸ್‌ಎಸ್, ಕಾಳಾಮುಖದರ್ಶನ, ಪುಟ. ೧೪] ದೀಕ್ಷೆ ಎಂಬುದನ್ನು ಖಂಡಿಸಿರುವರು. ದರ್ಶನ ಎಂಬುದನ್ನು ಸ್ಪಷ್ಟಗೊಳಿಸಿರುವರು. ದೀಕ್ಷೆಯು ಗುರುಗಳಿಂದ ಬರುವಂತದ್ದು, ಆದರೆ ಕಾಳಾಮುಖತ್ವವು ಪರಂಪರಾಗತವಾಗಿ ಮುಂದುವರೆದಿರುವುದನ್ನು ಕಾಣುತ್ತೇವೆ. ಕಾರಣ ಕಾಳಾಮುಖ ಒಂದು ದರ್ಶನವಾಗಿದೆ.

ಅ.ಸುಂದರರವರು 'ಕರ್ನಾಟಕ ಭಾರತಿ' ೬-೧-೧೯೭೩ ರಲ್ಲಿ 'ಕಾಳಾಮುಖರು ಕಟ್ಟಾ ಶೈವ ಧರ್ಮಿಗಳು, ಮತ್ತು ಉದ್ದಾಮ ಪಂಡಿತರು ಶಿವನ ಹಾಗೂ ಶಕ್ತಿಯ, ಭೈರವ ಮತ್ತು ಮಹಾಕಾಲಿಯ ಅವತಾರಗಳ ನಿಷ್ಠಾವಂತ ಆರಾಧಕರು, ಇವರ ಪೂಜಾವಿಧಾನ ಮತ್ತು ಧಾರ್ಮಿಕ ಜೀವನ ಸಾಮಾನ್ಯ ಜನರಿಗೆ ಕಠಿಣ. ಹಾಗೂ ಹಿಡಿಸುವುದಿಲ್ಲ. ಇಂದ್ರಿಯನಿಗ್ರಹವನ್ನು ಸಾಧಿಸಿದವನಿಗೆ ಮಾತ್ರ ಇವರ ಮಾರ್ಗ ಸರಿಹೋಗುತ್ತದೆ. ಎಂದಿದ್ದಾರೆ. ಇದು ಈ ಪಂಥದವರು ನಿಯಮ ಬದ್ಧರಾಗಿ ಪೂಜಾವಿಧಾನಗಳನ್ನು ಕರಾರುವಕ್ಕಾಗಿ ಚಾಚೂ ತಪ್ಪದೇ ಮಾಡುವವರು ಎಂಬುದನ್ನು ತಿಳಿಸುತ್ತದೆ. ಎಂಬುದು ನಿಯಮಗಳನ್ನು ಕಠೋರವಾಗಿ ಆಚರಣೆ ಮಾಡುವುದಾಗಿದೆ ಅದು ಕಾಳಾಮುಖ ಎಂಬ ಹೆಸರಿಗೆ ತಕ್ಕುದಾಗಿದೆ.

ಶಾಕ್ತ ಪಂಥದ ಕುರಿತು ನಾಗಭೂಷಣರು ಶಾಕ್ತ ಪಂಥದವರು ಯೋಗಶಕ್ತಿಯಿಂದ ಪಡೆಯುವ ಶಕ್ತಿಯು ಶಿವಶರಣರ ಯೋಗ ಶಕ್ತಿಗೆ ಸರಿಸಾಟಿಯಲ್ಲ ಎಂಬ ಅಂಶವನ್ನು ಹೇಳುವಲ್ಲಿ ಶಾಕ್ತ ಪಂಥದ ಅಷ್ಟಾಂಗ ಯೋಗಗಳಾದ ಹಠಯೋಗ,

ಅಭ್ಯಾಸಯೋಗ, ಅಂಬಿಕಾಯೋಗ, ಆತ್ಮಯೋಗ, ಸಿದ್ಧಯೋಗ, ಪಿಶಾಚಯೋಗಗಳನ್ನು ಹೆಸರಿಸಿ ಅವುಗಳ ಸ್ವರೂಪ, ಅವುಗಳು ಸಿದ್ಧಿಸಲು ಅನುಸರಿಸಲು ಬೇಕಾದ ಆಚರಣೆಗಳನ್ನು ವಿಸ್ತೃತವಾಗಿ ತಿಳಿಸಿದ್ದಾನೆ. ಇದು ಆದಯ್ಯನಿಗೆ ಶಾಕ್ತ ಪಂಥದ ಬಗ್ಗೆ ಇದ್ದ ಪಾಂಡಿತ್ಯವನ್ನು ಸೂಚಿಸುತ್ತದೆ. [ನಾಗಭೂಷಣ. ಸಿ, ಏಕಾಂತರಾಮಯ್ಯ ಮತ್ತು ಆದಯ್ಯ ಒಂದು ತುಲನಾತ್ಮಕ ಅಧ್ಯಯನ, ಪುಟ. ೧೪೨] ಈ ಪಂಥದ ಕಾಳಾಮುಖರು ಯೋಗ ಶಕ್ತಿ ಪಡೆದಿರುವ ಬಗ್ಗೆ ವಚನಕಾರ ನಿರೂಪಿಸಿರುವನು. ಶೈವಧರ್ಮದ ಒಂದು ಶಾಖೆಯಾದ ಕಾಳಾಮುಖವು ೧೧ನೇಯ ಶತಮಾನದ ಮಧ್ಯದಿಂದ ೧೩ನೆಯ ಶತಮಾನದ ಮಧ್ಯದವರೆಗೂ ನಾಗರಖಂಡದಲ್ಲಿ ಪ್ರಭಲವಾಗಿತ್ತು ಇಲ್ಲಿಯ ಅನೇಕ ಶೈವದೇವಾಲಯಗಳಿಗೆ ಸ್ಥಾನಪತಿಗಳು ಕಾಳಾಮುಖರೇ ಆಗಿದ್ದರು. ಎಂದು ಡಾ.ಭೋಜರಾಜ ಪಾಟೀಲರವರು ಹೇಳಿ ಮುಂದೆ ಕಾಳಾಮುಖ ಗುರುಗಳು ಶೈವಧರ್ಮವನ್ನು ಪ್ರಚಾರ ಮಾಡುವ, ಸಂವರ್ಧಿಸುವ ಉದ್ದೇಶ ಹೊಂದಿದವರಾಗಿರಲಿಲ್ಲ. ವೈಯಕ್ತಿಕವಾಗಿ ತಪಸ್ಸು ಮಾಡುವುದು, ಜ್ಞಾನಸಂಪಾದಿಸುವುದು, ಗುರಿಯಾಗಿದ್ದಂತಿದೆ. ಇವರಿಗೆ ಶಾಸನಗಳನ್ನು ಬರೆಯಿಸುವ ಹವ್ಯಾಸವೂ ಇದ್ದಂತಿಲ್ಲ. ಆದ್ದರಿಂದ ಇವರ ಪ್ರಮಾಣಕ್ಕೆ ತಕ್ಕಂತೆ ಶಾಸನಗಳು ಕಂಡು ಬರುವುದಿಲ್ಲ [ಪಾಟೀಲ ಭೋಜರಾಜ.; ನಾಗಖಂಡ – ೭೦ ಒಂದು ಅಧ್ಯಯನ, ಪುಟ. ೨೩೩] ಎಂಬ ಮಾತನ್ನು ಒಪ್ಪಲಿಕ್ಕಾಗುವುದಿಲ್ಲ ಕಾರಣ ಅವರೇ ಮುಂದುವರೆದು ಶೈವ ದೇವಾಲಯವೊಂದು ನಿರ್ಮಿಸುವಾಗ ಅದರ ವ್ಯವಸ್ಥೆಗಾಗಿಯೇ ವಿದ್ವತ್ತು ಹಾಗೂ ತಪಸ್ಸುಗಳಿಂದ ಶೋಭಿಸುವ ಆಚಾರ್ಯರೋರ್ವರು ನಿಯುಕ್ತರಾಗುತ್ತಿದ್ದರು ಇವರು ಅಲ್ಲಿಯೇ ವಾಸಿಸಿ ಧಾರ್ಮಿಕ ಶೈಕ್ಷಣಿಕ ಕೇಂದ್ರವಾಗಿ ಊರ್ಜಿತಗೊಳಿಸುತ್ತಿದ್ದರು ಇವರೇ ಸ್ಥಾನಪತಿಗಳು, ಒಬ್ಬ ಸ್ಥಾನಪತಿ ಹಲವಾರು ದೇವಾಲಯಗಳನ್ನು ನಿರ್ವಹಿಸುತ್ತಿರುವ ಬಗ್ಗೆ ಉಲ್ಲೇಖಿಸುತ್ತಾರೆ. ಕಾರಣ ಕಾಳಾಮುಖ ಗುರುಗಳಿಗೆ ಶೈವಧರ್ಮದ ಉನ್ನತಿಗೆ ಆಸಕ್ತಿ ಇರುವುದೆಂದು ಸ್ಪಷ್ಟವಾಗಿದೆ.

ಎಂ ಚಿದಾನಂದಮೂರ್ತಿಯವರು, ಕಾಳಾಮುಖರು 'ಬ್ರಾಹ್ಮಣರಲ್ಲ' ಎಂಬ ಕಪಟರಾಳ ಕೃಷ್ಣರಾಯರ ಅಭಿಪ್ರಾಯವು ಸರಿಯಲ್ಲವೆಂಬುದು ಶಾಸನಾಧಾರದಿಂದ ತಿಳಿದುಬರುತ್ತದೆ. ಫ್ಲೀಟರು ಸಂಪಾದಿಸಿದ ಮನಗುಳಿ ಶಾಸನದಲ್ಲಿ [ಎಇ. ಸಂ–೫ ನಂ, ೩ ಪುಟ.೧೦–೧೧] ಭುಜಂಗಾವಳೀ ಕುಲತಿಲಕ ಕಾಳಾಮುಖ ನೈಷ್ಠಿಕ ಪರಮತಪೋನಿಷ್ಠ ಬ್ರಹ್ಮಕುಳ ಬಾಳಾ ಬ್ರಹ್ಮಚಾರಿ ಶ್ರೀ ಸದ್ಯೋಜಾತ ಪಂಡಿತರ ಕಾಲಂ ಕರ್ಚಿ ದಾನ ಮಾಡಿದುದನ್ನು ಹೇಳಿದೆ. ಲಾಕುಳ ಪಾಶುಪತರು ಬ್ರಾಹ್ಮಣ ಗುರುಗಳಾಗಿದ್ದುದದರಿಂದಲೇ ಅವರು ರಾಜಗುರುಗಳಾಗಿರಲು ಸಾಧ್ಯವಾಗಿದ್ದತು. ಅಲ್ಲದೇ

ಅವರು ವೇದ ವೇದಾಂಗಗಳನ್ನು ಕಲಿಸುವ ವಿದ್ಯಾಗುರುಗಳಾಗಿದ್ದರು. 'ಕಾಳಾಮುಖಾ: ಶ್ರುತಿಮುಖ್ಯಾ:' ಎಂಬ (ತೊಂಡಿಗೊಂಡ ಶಾಸನ ನಂ೨೫ ಎ.ಇ-೨೩) ಶಾಸನಾಧಾರವುಂಟು (ಚಿದಾನಂದಮೂರ್ತಿ ಎಂ.ಅಧ್ಯಯನ.; ಪುಟ.೬೧೬) ಇಲ್ಲಿ ಬ್ರಹ್ಮಕುಳವೆಂದರೆ ಬ್ರಾಹ್ಮಣಕುಳವೆಂದು ಕರೆಯುವುದು ಸಮಂಜಸವೆನಿಸುವುದಿಲ್ಲ, ವೇದಗಳನ್ನು ಅಧ್ಯಯನ ಮಾಡಿದವರೆನ್ನಬಹುದು. ಹಾಗಾಗಿ ಕಾಳಾಮುಖರು ಶ್ರುತಿಮುಖ್ಯಾ ಎಂದಿರುವರು.

ಮಲ್ಲಪ್ಪನವರು ಹೇಳಿದಂತೆ ಬ್ರಾಹ್ಮಣ ಗುರುಗಳಾಗಿದ್ದರಿಂದಲೇ ಅವರು ರಾಜಗುರುಗಳಾಗಿರಲು ಎಂಬ ಮಾತನ್ನು ಒಪ್ಪಲಾಗದು ಅವರು ಅವೈದಿಕರಾಗಿದ್ದರು. ವೇದಗಳನ್ನು ಅಧ್ಯಯನ ಮಾಡಿದವರಾಗಿದ್ದರು ವೇದಗಳನ್ನು ಬ್ರಾಹ್ಮಣರ ಸಮನಾಗಿ ಅಧ್ಯಯನ ಮಾಡಿದವರು ಕಾಳಾಮುಖರು ಕಾರಣ ವಿಜಯನಗರದ ಬುಕ್ಕರಾಯನಿಗೂ ಗೋವೆ ಚಂದ್ರಗುತ್ತಿಗಳಿಗೆ ಅಧಿಕಾರಿಯಾಗಿದ್ದ ಮಾಧವ ಮಂತ್ರಿಗೂ ಗುರುವಾಗಿದ್ದ ಕ್ರಿಯಾಶಕ್ತಿಯ ಬಗ್ಗೆ 'ಸೂತಸಂಹಿತೆ' ಗೆ ವ್ಯಾಖ್ಯಾನ ಬರೆದಿರುವುದರಲ್ಲಿ 'ಶಾಂಭವಿ ಕಾಳಾಮುಖ' ದೀಕ್ಷೆಹೊಂದಿದವರನ್ನು ಬ್ರಾಹ್ಮಣಧಮರೆಂದು ನಿಂದಿಸಲಾಗಿರುವುದನ್ನು ಕಪಟರಾಳರು ಪುಟ ೧೧೪ ರಲ್ಲಿ ಉಲ್ಲೇಖಿಸುತ್ತಾರೆ. ವೇದಗಳನ್ನು ಅಧ್ಯಯನ ಮಾಡುವರು ಬ್ರಾಹ್ಮಣರೇ ಎಂಬ ಭಾವನೆಯಿಂದ ಹೊರಬಂದು, ಅವೈದಿಕ ಪರಂಪರೆಯಲ್ಲಿ ಕಾಳಾಮುಖರು ವೇದಗಳನ್ನು ಅಧ್ಯಯನ ಮಾಡಿದ್ದರೆಂಬುದನ್ನು ಸ್ಪಷ್ಟಗೊಳಿಸುತ್ತದೆ.

ಕಲಬುರ್ಗಿಯವರು ಸಿರಸಂಗಿಶಾಸನ(೧೧೪೮), ನೇಸರಗಿ ಶಾಸನ (೧೨೧೯) ಗಳಲ್ಲಿ ಬರುವ ಕೆಳಗಿನ ಪದ್ಯ ಉಲ್ಲೇಖಿಸುತ್ತ,

ನೆಗರ್ದ್ದ ಮಹಾಬ್ರತಿಗಳೊಳಂ
ನೆಗರ್ದ್ದ ಮಹಾಪಾಶುಪತದೊಳ್ ಶ್ರೋತ್ರಿಯದೊಳಂ
ನೆಗರ್ದ್ದುದಗಣಿತಮೆನಲ್ಕೆ
ನೆಗರ್ದ್ದ ಕಾಳಾಮುಖಂ ಸುಧರ್ಮಂ ಪ್ರಮುಖಂ

ಮಹಾವೃತಿ (ಕಪಾಳಿ), ಪಾಶುಪತ, ಶ್ರೋತ್ರಿ (ಶೈವ), ಕಾಳಾಮುಖ (ನಕುಲೀಶ) ಎಂದು, ಮೇಲೆ ಉಲ್ಲೇಖಿಸಿದ ನಾಲ್ಕು ಶೈವಗಳನ್ನೇ ಪ್ರಸ್ತಾಪಿಸುತ್ತ, ಇವುಗಳಲ್ಲಿ ಕಾಳಾಮುಖವು ಶ್ರೇಷ್ಠವೆಂದು ಹೇಳುತ್ತದೆ. ಇವೆಲ್ಲವನ್ನು ಸಮೀಕರಿಸಿದರೆ ನಕುಲೀಶ (ಲಾಕುಳ), ಪಾಶುಪತ, ಶೈವ, (ಸಿದ್ಧಾಂತ ಮಾಹೇಶ್ವರ ಶ್ರೋತ್ರಿ) ಮಹಾವೃತಿ (

ಕಾಪಾಳಿ) ಈ ನಾಲ್ಕು ಶೈವಧರ್ಮಗಳು ಕರ್ನಾಟದಲ್ಲಿ ಹರಡಿಕೊಂಡಿದ್ದವು. [ಕಲಬುರ್ಗಿ ಎಂ ಎಂ.; ಮಾರ್ಗ: ಸಂಪುಟ-೪] ಆಚರಣೆ ವಿಧಿವಿಧಾನಗಳನ್ನು ಗಮನಿಸಿದರೆ ಕಾಳಾಮುಖ ಪರಂಪರೆ ಪ್ರಮುಖವಾಗಿದೆ. ಕಾಳಾಮುಖವು ಒಳ್ಳೆಯ ಪ್ರಾಮುಖ್ಯತೆ ಪಡೆದ ಧರ್ಮ ಎಂದು ವರ್ಣಿತವಾಗಿದೆ.

ಜಿ ಹನುಮಂತರಾವ್‌ರವರು ಶೈವ ಪಂಥಗಳಲ್ಲಿ ಪಾಶುಪತ ಒಂದು ಕಾಳಾಮುಖ, ಕಾಪಾಲಿಕ, ಮಾಹೇಶ್ವರ, ಮುಂತಾದವು ಇತರ ಪಂಥಗಳು ಶಂಕರಾಚಾರ್ಯರು ಬ್ರಹ್ಮಸೂತ್ರಭಾಷ್ಯದಲ್ಲಿ ಪಾಶುಪತರನ್ನು ಮಾಹೇಶ್ವರವೆಂದು ಕರೆದಿರುತ್ತಾರೆ, ನಮಗೆ ಮಾಹೇಶ್ವರ ತತ್ವವೇನು ಎಂದು ತಿಳಿಸಲು ಸಾಧ್ಯವಿಲ್ಲ [ಜಿ ಹನುಮಂತರಾವ್.; ಪಾಶುಪತ ಆಗಮಗಳು ಪುಟ. ೪] ಪಾಶುಪತರನ್ನು ಮಾಹೇಶ್ವರರೆಂದು ಕರೆದಿರುವ ಬಗ್ಗೆ ಜಿಜ್ಞಾಸೆ ವ್ಯಕ್ತಪಡಿಸಿದ್ದಾರೆ.

ಕರ್ನಾಟಕದ ಎಲ್ಲಕಡೆ ಮಠಗಳನ್ನು ಸ್ಥಾಪಿಸಿಕೊಂಡು ಈ ಪಂಥದ ಆಚಾರ್ಯರು ಅಸ್ತಿತ್ವದಲ್ಲಿದ್ದರು ಮತ್ತು ಸಿದ್ಧ ಸಾತ್ವಿಕ ಆಚರಣೆಗಳನ್ನು ಅನುಸರಿಸುತ್ತಿದ್ದರು. ಇವರು ದೇವಾಲಯ ಸಂಸ್ಕೃತಿಗೆ ಒಗ್ಗಿಕೊಂಡ ಶೈವರೆಂಬುದು ಸ್ಪಷ್ಟವಾಗುತ್ತದೆ. ಕಲ್ಯಾಣದ ಚಾಲುಕ್ಯರ ಮತ್ತು ಹೊಯ್ಸಳರ ಕಾಲದ ಈ ಪಂಥದ ದೇವಾಲಯಗಳನ್ನು ಪರೀಶೀಲಿಸಿದಾಗ ಅವು ಹೆಚ್ಚಾಗಿ ತ್ರೈಪುರುಷ ಅಂದರೆ ಬ್ರಹ್ಮ ಅಥವಾ ಸೂರ್ಯ ಮಹೇಶ್ವರ ಮತ್ತು ವಿಷ್ಣು ಇವರನ್ನೊಳಗೊಂಡ ದೇವಾಲಯಗಳಾಗಿವೆ.

ಕಡಪಟ್ಟಿಯವರು 'ಮೂವರು ಕೋಣೆಯ ಸಂತತಿ' ಎಂಬ ವಿಶೇಷ ಉಲ್ಲೇಖ ಅನೇಕ ಶಾಸನಗಳಲ್ಲಿದ್ದು ಬಹುಷಃ ಇದು ತ್ರೈಪುರುಷರನ್ನೊಳಗೊಂಡ ತ್ರಿಕೂಟ ಮಾದರಿಯ ದೇವಾಲಯಗಳನ್ನು ಪ್ರತಿನಿಧಿಸುತ್ತದೆ. ಇಂತಹ ದೇವಾಲಯಗಳು ಶಾಲೆಗಳಾಗಿ ವರ್ತಿಸುತ್ತಿದ್ದವು. ಹೀಗಾಗಿ ಕಾಳಾಮುಖರು ಬಹುಶ: ತ್ರಿಮೂರ್ತಿ ಆರಾಧನೆಗೆ ಪ್ರಾಮುಖ್ಯತೆ ಕೊಟ್ಟಿದ್ದರು [ಕಡಪಟ್ಟಿ ಎನ್.ಎಮ್.; ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ ಪುಟ. ೨೪] ಎಂಬುದಕ್ಕೆ ಸಾಕ್ಷಿಯಾಗಿ ಹಾವೇರಿಯಲ್ಲಿ ಅಧಿಕವಾಗಿ ತ್ರಿಕೂಟದೇವಾಲಯಗಳಿರುವುದು ಕಂಡು ಬಂದಿದೆ ಅವು ಕಾಳಾಮುಖರು ಸ್ಥಾನಾಚಾರ್ಯರಾಗಿರುವುದು ಸ್ಪಷ್ಟವಾಗಿದೆ. ಇವರ ಸಾತ್ವಿಕ ಆಚರಣೆ ದೇವಾಲಯ ಸಂಸ್ಕೃತಿಗೆ ಹೊಂದಿಕೊಂಡಿರುವುದು ಕಂಡು ಬರುತ್ತದೆ.

ಕಾಳಾಮುಖರು ಕಾಪಾಲಿಕರ ಗುಂಪಿಗೆ ಸೇರಿದವರೆಂದು ರಾಮಾನುಜಾಚಾರ್ಯರು ನಿರೂಪಿಸಿರುವುದನ್ನು ಆಧಾರವಾಗಿಕೊಂಡು ಡಾ. ಆರ್.ಜಿ

ಭಂಡಾರಕರವರು ಕಾಳಾಮುಖರೂ, ಕಾಪಾಲಿಕರೂ, ಒಂದೇ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಇದಕ್ಕೆ ಯಾವ ಆಧಾರಗಳು ಇಲ್ಲ. ಕಾಪಾಲಿಕರು ವಾಮಾಚಾರಿಗಳು ಆದರೆ ಕಾಳಾಮುಖರು ಶುದ್ಧ ಸಾತ್ವಿಕಾಚಾರಿಗಳು. ಕನ್ನಡ ಶಾಸನಗಳನ್ನು ಅಧ್ಯಯನ ಮಾಡಿದರೆ ಎಲ್ಲಿಯೂ ಕಾಳಾಮುಖರನ್ನು ಕಾಪಾಲಿಕರೆಂದು ಕರೆದಿಲ್ಲವೆಂಬುದು ಗೋಚರವಾಗುತ್ತದೆ. ಮಾತ್ರವಲ್ಲ ಅವರು ಪಾಶುಪತ ಲಾಕುಳ ವರ್ಗಕ್ಕೆ ಸೇರಿದವರೆಂಬುದು ಸ್ಪಷ್ಟವಾಗುತ್ತದೆ. [ಚಿದಾನಂದಮೂರ್ತಿ ಎಂ.; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೧೪೨] ಇವರು ಕಾಳಾಮುಖರು ಸಾತ್ವಿಕರು ವಾಮಾಚಾರಿಗಳಲ್ಲವೆಂಬುದು ಸ್ಪಷ್ಟವಾಗುತ್ತದೆ. ಕಾರಣ ಕಾಪಾಲಿಕರಿಗಿಂತ ಭಿನ್ನರು ಎಂಬುದು ಕಂಡುಬಂದಿದೆ. ಲಕುಲೀಶ–ಪಾಶುಪತರಿಗೂ ಕಾಳಾಮುಖರಿಗೂ ಅಂತಹ ಪ್ರಮುಖ ವ್ಯತ್ಯಾಸವಿರಲಿಲ್ಲ ಎಂದು ಹೇಳಿ ಅವರ ಆಚರಣೆಗಳ ಬಗ್ಗೆ ತಿಳಿಸುತ್ತ ಲಕುಲೀಶ–ಪಶುಪತರು ಸಾತ್ವಿಕ ಸನ್ಯಾಸಿಗಳಾಗಿದ್ದರು. ಇವರಲ್ಲಿ ಮಾಂಸಾಹಾರ, ಮದ್ಯಪಾನ ಮುಂತಾದ ಹೇಯ ಕೃತ್ಯಗಳಿರಲಿಲ್ಲ. ಇವರು ಜನತೆಯೊಡನೆ ಅತಿನಿಕಟವಾದ ಸಂಪರ್ಕವನ್ನು ಇಟ್ಟುಕೊಂಡಿದ್ದರು ದೇವಸ್ಥಾನಗಳಲ್ಲಿ ಸ್ಥಾಪಿತವಾಗಿದ್ದ ಸ್ಥಾವರ ಲಿಂಗಗಳ ಆರಾಧಕರಾಗಿದ್ದರು[ಚಿದಾನಂದಮೂರ್ತಿ ಎಂ.; ಬಸವಣ್ಣನವರು, ಪುಟ.೨೨]

ಶ್ರೀಮಾನ ಚೆನ್ನಮಲ್ಲಪ್ಪ ಗಲಗಲಿಯವರು, 'ಜಯಕರ್ನಾಟಕ' ಸಂಪುಟ ೯, ಸಂಚಿಕೆ ೧ ರಲ್ಲಿ ಲಿಂಗಿಗಳು ಎಂಬ ಲೇಖನವನ್ನು ಬರೆದು ಚರ್ಚಿಸಿರುವುದು.

ಗಂಗೆ ಗಯೆ ಕೇದಾರಂ ಕುರುಕ್ಷೇತ್ರಮಂ
ಬಿವರೊಳ್ ಪೇಸದೆ ಪಾರ್ವರಂ ಕವಿಲೆಯಂ ಸ್ತ್ರೀಬಾಳರಂ ಲಿಂಗಿಯ
ಪ್ಪವರಂ ಕೊಂದನವಂ ಸ್ವಗೋತ್ರ ಸಹಿತಂ ಬೀಳ್ಗುಂ ಮಹಾಘೋರದೊಳ್
[ಶಿಕಾರಿಪುರ, ಬಳ್ಳಿಗಾವಿ–೯೪,೧೦೭೮] ಮತ್ತು
ಗಂಗಾ ಯಮುನಾ ಸಾಗರ
ಸಂಗಮದೊಳ್ ಕೋಟಿಪಾರ್ವರಂ ಕವಿಲೆಗಳುಂ
ಲಿಂಗಿಗಳುಂ ಬೆರಸಳಿದಂ
    ಲಿಂಗಮನೀಧರ್ಮಮಂಕರುತ್ತಳಿದಧಮಂ
    ಕವಿಲೆಗಳಂ ಕೋಟಿಯನೊಸೆ
    ದವನೀಸುರ ಕೋಟಿಗಿತ್ತನೀಧರ್ಮಕ್ಕು

ದ್ಭವಮಂ ಪಡೆದವನಾ ತೀ

ರ್ಥವಿತತಿಯೋಳ್ ಲಿಂಗಲಿಂಗಿಜನ ಸನ್ನಿಧಿಯೊಳ್

ಇಲ್ಲಿ ಪಾರ್ವರುಂ ಮತ್ತು ಲಿಂಗಿಗಳು ಎಂದು ಎರಡು ಪೂಜ್ಯ ಜನಾಂಗಗಳನ್ನು ಹೇಳಿದೆ. ಹಾಗಾದರೆ ಬ್ರಾಹ್ಮಣರ ಹೊರತು ಈ ಬ್ರಾಹ್ಮಣೇತರ 'ಪೂಜ್ಯರು' ಯಾರು? [ಕಪಟರಾಳ ಕೃಷ್ಣರಾಯರು –ಕರ್ನಾಟಕ ಲಾಕುಳ ಶೈವರ ಇತಿಹಾಸ, ಪುಟ. ೧೦೮.] ಎಂದು ಪ್ರಶ್ನಿಸಿ ಬೇಲೂರು ಶಾಸನಗಳನ್ನು ಉದಾಹರಿಸಿ 'ಪಾರ್ವರು, ಗೊರವರಂ, ಎಕ್ಕೋಟಿ ಮುನಿಂದ್ರರಂ, ಲಿಂಗಿಗಳ ಬದಲಾಗಿ ಹೇಳಿದೆ ಎಕ್ಕೋಟಿ ಮುನಿಂದ್ರರೆಂದರೆ ಕಾಳಾಮುಖರು ಎಂಬುದನ್ನು ವಿವರಿಸಲು ಸೊರಬ ತಾಲೂಕಿನ ೨೭ನೇ ಶಾಸನ ಉಲ್ಲೇಖಿಸಿರುವುದು ಸಮರ್ಥನೀಯವಾಗಿದೆ.

ನಿತ್ಯಜ್ಞಾನಾನಂದ ಪರಶಿವ ಸ್ವರೂಪಾವಲೋಕ ತತ್ವರೂಪರುಂ ಯತಿಸಾರ್ವಭೌಮರುಂ ಎಕ್ಕೋಟಿ ಸಮಯ ಚಕ್ರವರ್ತಿ ಸಪ್ತಹತ್ತರಿ ಸ್ಥಾನಾಚಾರ್ಯರು. ಕಾಳಾಮುಖ ಮುನಿಗಳಿಗೆ ಎಕ್ಕೋಟಿ ಮುನಿಗಳೆಂದು ಕರೆದಿರುವುದು ಕಂಡು ಬರುತ್ತದೆ ಇವರಿಗೆ ಆರಾಧ್ಯರು ಎಂದು ಕರೆಯುವ ರೂಢಿಯಿತ್ತೆಂದು ತೋರುತ್ತದೆ. ಎಂಬುದಕ್ಕೆ ನಾನು ಪಾಠ ಪ್ರಕಟಿಸಿದ ಹಿರೇಕೆರೂರ ತಾಲೂಕಿನ ಕಡೂರಿನ ವೀರಗಲ್ಲು ಶಾಸನ ೬೫ ರಲ್ಲಿಯೂ ಆರಾಧ್ಯವೆಂಬುದು ಮೂಜುಜಾವಿದೇವರ ಶಾಸನದಲ್ಲಿ ಇರುವುದನ್ನು ಗುರುತಿಸಲಾಗಿದೆ. [ಕಲಬುರ್ಗಿ ಎಂ ಎಂ.; ಧಾರವಾಡ ಜಿಲ್ಲಾ ಶಾಸನಸೂಚಿ ಪುಟ.೭೨]

ಎಸ್ ಎಸ್ ಹಿರೇಮಠರ ಪ್ರಕಾರ ಉಚ್ಚಂಗಿದುರ್ಗದ ಮಠಗಳ ಮತ್ತು ಆ ಊರಿನ ಕ್ರಿಶ. ೧೦೭೦ರ ಶಾಸನದಲ್ಲಿರುವ ನನ್ನೇಶ್ವರದ ಆಚಾರ್ಯ ಕಾಳಾಮುಖ ತಪೋಧನರನ್ನು ಉಲ್ಲೇಖಿಸುತ್ತ ಈ ಶಾಸನದ ವಿಶೇಷತೆ ಎಂದರೆ ಬ್ರಾಹ್ಮಣ ಗೋತ್ರದ [ಅತ್ರೇಯ] ಕಾಳಾಮುಖ ತಪೋಧನರನ್ನು ಪ್ರಸ್ತಾಪಿಸುತ್ತಿರುವುದು. ಬ್ರಾಹ್ಮಣರೂ ಕೂಡ ಕಾಳಾಮುಖ ಸಮಯವನ್ನು ಸೇರುತ್ತಿದ್ದರು. ಹಾಗೆ ಮತಾಂತರ ಗೊಂಡಾಗಲೂ ತಮ್ಮ ಮೂಲ ಗೋತ್ರವನ್ನು ಕೈ ಬಿಡುತ್ತಿರಲಿಲ್ಲ. ಆಕಸ್ಮಿಕವೆಂಬಂತೆ ಸಿಗುವ ಇಂಥ ಒಂದೆರಡು ನಿದರ್ಶನಗಳಿಂದ ಈ ರೀತಿ ಊಹೆ ಮಾಡಬಹುದು. ವಖ್ಖಾಣಿ ದೇವನ ವಿಶೇಷಣಗಳು ಅವನ ಪ್ರಕಾಂಡ ಪಾಂಡಿತ್ಯವನ್ನು ಸ್ಪಷ್ಟಪಡಿಸುತ್ತವೆ. ಬಹಳಷ್ಟು ಸ್ಥಾನಾಚಾರ್ಯರು ಈ ಬಗೆಯ ಪಾಂಡಿತ್ಯವುಳ್ಳವರೇ [ಹಿರೇಮಠ, ಎಸ್ಎಸ್.; ಕಾಳಾಮುಖದರ್ಶನ, ಪುಟ.೫೮] ಬ್ರಾಹ್ಮಣರೂ ಸಹ ಕಾಳಾಮುಖರಾಗುವ ಸನ್ನಿವೇಶವನ್ನು ಈ ಶಾಸನ ಉಲ್ಲೇಖಿಸಿರುವುದು ಕಾಳಾಮುಖರ ತಾತ್ವಿಕ ಹಿನ್ನೆಲೆಯನ್ನು ತಿಳಿಸಿಕೊಡುತ್ತದೆ. ಗೋತ್ರಗಳು ಬ್ರಾಹ್ಮಣರಿಗಷ್ಟೇ

ಸೀಮಿತವಾದವುಗಳಲ್ಲ ಎಲ್ಲರಿಗೂ ಸಂಬಂಧಿಸಿವೆ ಶಾಕ್ತರು ಕಾಯಸ್ತರೆಂದು ಗುರುತಿಸಲಾಗಿದೆ.

ಲಾಕುಳಶೈವರ ಪ್ರಥಮ ಶಾಸನವೆಂದರೆ ಕ್ರಿ.ಶ. ೭೫೫ರಲ್ಲಿ 'ಜ್ಞಾನಶಿವ'ವೆಂಬ ಆಚಾರ್ಯನು ಗಂಗೆಯ ಉತ್ತರದಡದಲ್ಲಿರುವ ಮೃಗತನಿಕಾ ವಿಷಯದಿಂದ ಪಟ್ಟದಕಲ್ಲಿಗೆ ಬಂದು ಅಲ್ಲಿ ತ್ರೈಲೋಕ್ಯ ಮಹಾದೇವಿಯಿಂದ ಪೂಜಿತಗೊಂಡನೆಂದು ತ್ರೈಲೋಕೇಶ್ವರ ದೇವಸ್ಥಾನದಲ್ಲಿರುವ ಶಾಸನ ಹೇಳುತ್ತದೆ. [ದೀಕ್ಷಿತ ಜಿ ಎಸ್.; ಸೋಸಿಯಲ್ ಆಂಡ ರಿಲಿಜಿಯಸ್ ಕಂಡಿಷನ್ಸ್ ಆಫ್ ಕರ್ನಾಟಕ ಬಿಫೊರ ಬಸವಾ, 'ಶ್ರೀ ಬಸವೇಶ್ವರ ಕಮೊರೆಷನ್ ವ್ಯಾಲುಂ' ಪೇಜ ೧೨೧ ಸಿಟೆಡ ಬ್ಯಾಯ ವಸುಂಧರಾ ಫಿಲಿಯೊಜಾ ಕಾಳಾಮುಖ ಆಂಡ್ಯ ಪಾಶುಪತ ಟೆಂಪಲ್ಸ ಇನ್ ಧಾರವಾಡ, ಪೇಜ. ೨೭] ಕಾಳಾಮುಖರ ಇತಿಹಾಸವು ೮ನೆಯ ಶತಮಾನದಷ್ಟು ಹಿಂದೆ ಹೋಗುತ್ತದೆ.

ಕೋಲಾರ ಜಿಲ್ಲೆಯ ನಂದಿಬೆಟ್ಟದ ಮೇಲೆ ದೊರೆತ ದತ್ತಿಶಾಸನ ಕ್ರಿ.ಶ ೮೧೦ರಲ್ಲಿ ಬಾಣ ದಳವಾಯಿ ವಿದ್ಯಾಧರರಾಜನ ರಾಣಿರತ್ನಾವಲಿ ಬೆಟ್ಟದಮೇಲೆ ಕಟ್ಟಿಸಿದಶಿವ ದೇವಾಲಯಕ್ಕೆ ಭೂದಾನ ಮಾಡಿರುವುದು, ಮಠಾಧೀಶನಾದ ಕಾಳಾಮುಖ ಗುರು ಕಾಳಶಕ್ತಿಯ ಕುರಿತು ಉಲ್ಲೇಖವಿರುವುದು. ಜ್ಞಾನಶಿವನೆಂಬ ಹೆಸರು ಕಾಳಾಮುಖರಲ್ಲಿ ಸಾಮಾನ್ಯವಾಗಿ ಪ್ರಚಲಿತವಿದ್ದು ಕರ್ನಾಟಕಕ್ಕೆ ಬಂದಿರುವ ಲಾಕುಳಶೈವ ಪಂಥದ ಅನುಯಾಯಿಗಳಲ್ಲಿ ಇವನು ಮೊದಲಿಗನಾಗಿರುವನು.

ಸೋಮೇಶ್ವರ ಪಂಡಿತನದೇವನು ಕೇದಾರೇಶ್ವರ ಯತಿಗಳಸಾಲಿನಲ್ಲಿ ಪ್ರಸಿದ್ಧಿ ಪಡೆದಿದ್ದು ಇವನು ಸೂಡಿಯ ನಗರೇಶ್ವರ ಮತ್ತು ಅಚಲೇಶ್ವರ ದೇವರಿಗೆ ಸಂಬಂಧಿಸಿದವನಾಗಿದ್ದನು ಇವನನ್ನು ಕುರಿತು ಕ್ರಿ.ಶ ೧೦೬೦, ೧೦೬೯ -೭೦, ೧೦೭೫ ಮತ್ತು ೧೦೮೪ ಶಾಸನಗಳಲ್ಲಿ ನಮೂದಿಸಲಾಗಿದೆ. ಈ ಸೂಡಿಯ ಶಾಸನಗಳು ಸೋಮೇಶ್ವರನೆಂಬ ಯತಿಗಳನ್ನು ಹೊಗಳುತ್ತವೆ. ಇವು ಅಬ್ಬಲೂರು, ಬಳ್ಳಿಗಾವೆ ಶಾಸನಗಳಲ್ಲಿಯ ಹೊಗಳಿಕೆಯನ್ನು ಹೋಲುತ್ತವೆ. ೧೦೬೦ರ ಶಾಸನದಲ್ಲಿ ಚಕ್ರವರ್ತಿ ಕಿರೀಟದ ಚೂಡಾಮಣಿ, ಕಲೆಗಳು ಪದ್ಮಾಪಾದನೆ. ವೈಶೇಷಿಕರ ಚೂಡಾರತ್ನರೇ, ನಯ್ಯಾಯಕರ ನೈದಿಲೆಗಳಿಗೆ ನೇಸರನಾಗಿದ್ದವನು , ಸಾಂಖ್ಯದಲ್ಲಿ ಪಾರಂಗತ, ವ್ಯಾಕರಣಕಾರ ಎಂದಿದೆ. ೧೦೭೫ರ ಶಾಸನದಲ್ಲಿ ಬೌದ್ಧನಿಗೆ ಆದಿ ಬುದ್ಧನು, ಅಕಳಂಕನಿಗೆ ಮೂಲಜಿನ, ತರ್ಕಶಾಸ್ತ್ರದ ವಿದ್ಯಾರ್ಥಿಗೆ ಅಕ್ಷಪಾದ, ವಿದ್ಯಾರ್ಥಿಗೆ ಜೈಮಿನಿ, ವ್ಯಾಕರಣ ಕ್ಷೇತ್ರದ ಬೃಹಸ್ಪತಿ ಎಂದು ನಗರೇಶ್ವರ ದೇವಾಲಯಕ್ಕೆ ಹೆಸರಾಗಿದ್ದವನು

ಬಳ್ಳಿಗಾವೆಯ ಅಬ್ಬಲೂರಿನ, ಸೂಡಿಯಲ್ಲಿರುವವ ಒಬ್ಬನೇ ಆಗಿರುವ ಸಾಧ್ಯತೆಯಿದೆ.[ಎಇಂ ೧೫ ನಂ ಎಫ್-೧]

ಕಾಳಾಮುಖರ ಚಾರಿತ್ರಿಕ ಅಸ್ತಿತ್ವ ಕ್ರಿ.ಶ ೭ನೇ ಶತಮಾನಕ್ಕೂ ಹಿಂದೆ ಹೋಗುತ್ತದೆಯಾದರೂ ಅಲ್ಲಿ ಕಾಳಾಮುಖ ಎಂಬ ಹೆಸರು ಬರುವುದಿಲ್ಲ ಕಾಳಾಮುಖ ಎಂಬ ಹೆಸರು ಬರುವುದು ೯ನೆಯ ಶತಮಾನದ ನಂತರದಲ್ಲಿ ಕಾಳಾಮುಖ ಎನ್ನುವುದು ವೈದಿಕ ಆಚರಣೆಗಳ ಫಲವಾಗಿದೆ ಎಂಬುದಾಗಿ ನೋಡುವುದೆ ಆಗಿದೆ. ಬ್ರಾಹ್ಮಣರ ಪ್ರಾಬಲ್ಯದ ನಂತರದಲ್ಲಿ ಬಂದ, ಅಂದರೆ ಕಾಳಾಮುಖರನ್ನು ವೇದ ಬಾಹಿರವಾಗಿ ನೋಡುವುದಾಗಿದೆ. ಅಥವಾ ಬ್ರಾಹ್ಮಣ್ಯದಿಂದ ಹೊರಗಿಟ್ಟು ನೋಡುವ ಪರಂಪರೆಯ ಪ್ರತೀಕವಾಗಿ ಕಾಳಾಮುಖ ಎಂಬ ಅಭಿದಾನ ಬಂದಿರಬೇಕು. ಕಪ್ಪು ಬಣ್ಣವನ್ನು ಬಳಿದುಕೊಂಡಿದ್ದರಿಂದ ಕಾಳಾಮುಖ ಎಂಬ ಹೆಸರು ಬಂದಿತೆನ್ನುವ ಮಾತು, ಆ ಮಾತನ್ನೆ ಇಟ್ಟುಕೊಂಡು ಹೇಳುವ ಮಾತುಗಳು ಕಾಳಾಮುಖರಿಗೆ ಮಾಡುವ ಅವಮಾನವಷ್ಟೇ ಅಲ್ಲ, ಇಡೀ ದೇವಾಲಯ ಸಂಸ್ಕೃತಿಗೆ ಮಾಡಿದ ಅವಮಾನವಾಗುತ್ತದೆ. ಯಾಕೆಂದರೆ ಕಾಳಾಮುಖರು ಶಿವನ ಪರಮ ಆರಾಧಕರು, ಅಷ್ಟೇ ಅಲ್ಲ ಶಕ್ತಿ ಆರಾಧನೆಯ ಸಮನ್ವಯಕಾರರು ಶಿವನನ್ನೂ ರುದ್ರನನ್ನು ಅವರು ಅಗ್ನಿಯ ರೂಪದಲ್ಲಿ ನೋಡುವವರೆ ಆಗಿದ್ದಾರೆ. ಆಂದರೆ ಪ್ರಳಯಾಕಾರನಾದ ಶಿವನಷ್ಟೇ ಅಗ್ನಿಯ ರೂಪದಲ್ಲಿ ನೋಡುವ ವ್ಯಕ್ತರೂಪವಾಗಿದೆ. ಅಂದ ಹಾಗೆ ಕಾಳಾ ಎನ್ನವುದು ಅಗ್ನಿಯ ಮುಖವೇ ಅಗಿರುವುವಾಗ ಕಾಳಾಮುಖ ಎನ್ನುವುದು ಸರಿಯಾದ ವಿವರಣೆಯಾಗುತ್ತದೆ. ಕಾಳಾಮುಖರಿಗೆ ವಿಭೂತಿಯೇ ಪರಮ ಶ್ರೇಷ್ಠವಾಗಿದ್ದು, ಸುಡುಗಾಡುಸಿದ್ಧರು ಮುಖಕ್ಕೆ ಹಚ್ಚುವ ಬಣ್ಣಕ್ಕೂ ಇವರಿಗೂ ಹೋಲಿಕೆ ಸಲ್ಲದು, ಅದೊಂದು ತಾಂತ್ರಿಕ ಎನ್ನಬಹುದಾದ ಒಂದು ಪ್ರಯೋಗ [ಮನ್ವಾಚಾರ ಕಲವೀರ.; ಲೇಖನ; ಅಬಲೂರು ಮತ್ತು ಕಾಳಾಮುಖ ಪರಂಪರೆ, ಗೌಡರ, ಎಸ್‌ಪಿ(ಸಂ).; ಕಣಜ, ಪುಟ, ೧೩] ಇವುಗಳೆಲ್ಲ ಅಭಿಮತ ಗಮನಿಸಿದಾಗ ಸುಮಾರು ಎಂಟನೆಯ ಶತಮಾನದಷ್ಟು ಹಳೆಯ ಇತಿಹಾಸ ಇವರದಾಗಿದೆ ಎಂದು ಸ್ಪಷ್ಟಗೊಳ್ಳುತ್ತದೆ. ಕಾಳಾಮುಖ ಯಾರು ಎನ್ನುವ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಿಲ್ಲ ಅಲ್ಲದೇ ಅಷ್ಟೇ ಗೋಜಲಾಗಿಯೆ ಉಳಿದಿದೆ. ಭಿನ್ನಭಿನ್ನವಾದ ಹೇಳಿಕೆಗಳನ್ನು ನೀಡುತ್ತಾ ಬಂದಿದ್ದಾರೆ. ತದ್ವಿರುದ್ದವಾದ ಹೇಳಿಕೆಗಳಿಂದ ಸಮಸ್ಯೆಯನ್ನು ಸೃಷ್ಟಿಸಲಾಗಿದೆ. [ಅದೇ ಪುಟ] ಎಂದು ಕಠೋರವಾಗಿ ಟೀಕಿಸುತ್ತಾ ನಾಗರಕಂಡ ೭೦ ರಲ್ಲಿ ಪುಟ. ೨೩೩ ರಲ್ಲಿರುವ ಭೋಜರಾಜ ಪಾಟೀಲರವರ ಹೇಳಿಕೆಯನ್ನು ಖಂಡಿಸಿ ಸ್ಪಷ್ಟಪಡಿಸಿದ್ದಾರೆ. ಮುಂದುವರೆದು

ಸಮಯ ವಿಧಾರಣ ಪಟುತರ ಕಾಳಾಗ್ನಿ ರುದ್ರ ಸದೃಶ
ಕ್ರೋದೋ ಶಿವ ಸಮಯ ದುಗ್ದಸಾಗರ ಸಂವರ್ಧನ ಸಂಭ್ರಮ

ಎಂದಿರುವ ಶಿಕಾರಿಪುರ ತಾಲೂಕಿನ ಶಾಸನ ಉಲ್ಲೇಖಿಸಿ ಶಿವ ಸಮಯ ಅಥವಾ ಶಿವ ನಿಂದಕರಿಗೆ ಅವರು ಕಾಳಾಗ್ನಿಯ ಹಾಗೆ ಎನ್ನುವ ಮಾತು ಇಲ್ಲಿ ಪ್ರಮುಖವಾದುದು. ಕಾಳಾ ಮತ್ತು ಕಾಲಾಕ್ಕೂ ಅರ್ಥ ವ್ಯತ್ಯಾಸವಿದ್ದರೂ ಅರ್ಥ ಒಂದೇ ಎನ್ನುವ ರೀತಿಯಲ್ಲಿ ಬಳಸಿರುವುದು ಸಮಸ್ಯೆಗೆ ಕಾರಣವಾಗಿದೆ. ಧವಳ ತನು ಸುಲಿಪಲ್ಲು ಕೆಂಜಡೆ ಎಂದು ಹೇಳುವ ಶಾಸನವೊಂದರಲ್ಲಿ ವಿಭೂತಿಯನ್ನು ಬಳಿದುಕೊಂಡ ರೀತಿಯನ್ನು ಹೇಳುವಂತೆ ಭಾಸವಾಗುತ್ತದೆ. ಈ ಎಲ್ಲ ಕಾರಣಗಳಿಂದ ಕಾಳಾಮುಖ ಎನ್ನುವುದು ಅಗ್ನಿಯ ಆರಾಧನೆಯ ಪ್ರತೀಕವಾಗಿಯೇ ನೋಡಿದರೆ ಕಾಳಾಮುಖ ಎನ್ನುವುದು ಸರಿಯಾಗಿ ಅರ್ಥವಾದೀತು. [ಆದೇ, ಪುಟ೧೪೪] ಎಂದು ನಿರೂಪಿಸಿರುವುದು ಕಂಡುಬಂದಿದೆ.

ಕಾಳಾಮುಖರು ಕಪ್ಪು ಮಸಿಹಚ್ಚುವವರು ಇತ್ಯಾದಿ ಕುರಿತು ವಿವಿಧ ವಿದ್ವಾಂಸರು ತಪ್ಪಾಗಿ ಅರ್ಥೈಸಿರುವುದನ್ನು ಕೆಲವರು ಖಂಡಿಸಿರುವರು 'ಕಾಲಾಮುಖ' ಎಂಬ ಶಬ್ದ ಅನೇಕ ಇತಿಹಾಸಕಾರರ ಗಮನವನ್ನು ಸೆಳೆದಿದೆ. ಈ ಇತಿಹಾಸಕಾರರ ಪ್ರಕಾರ ಕಾಲಾಮುಖರೆಂದರೆ ಮುಖಕ್ಕೆ ಕಪ್ಪು ಮಸಿ ಬಳಿದುಕೊಂಡು, ತಲೆಬುರುಡೆಗಳಲ್ಲಿ ಸುರೆ ಸೇವಿಸುತ್ತಾ ವಾಮಾಚಾರ ಮಾಡುವವರು ಎಂದು. ಆದರೆ ಇದು ತಪ್ಪು ಅಭಿಪ್ರಾಯ ಎಂದು ಸಾರಿ ಹೇಳಲು ನಮಗೆ ಕಾಲಾಮುಖರು ಬಿಟ್ಟುಹೋಗಿರುವ ದೇವಸ್ಥಾನಗಳು ಹಾಗೂ ಅವುಗಳಲ್ಲಿರುವ ಶಾಸನಗಳೇ ಸಾಕು. ಇವೇ ನಮಗೆ ಮೂಲಾಧಾರಗಳು. [ಫಿಲಿಯೊಜಾ ವಸುಂಧರಾ– 'ಕರ್ನಾಟಕದಲ್ಲಿ ಲಾಕುಳ ಶೈವ ಜಕ್ಕಣಾಚಾರ್ಯರು' ಪುಟ. ೧೭] ಎಂದು ಸಾಕ್ಷೀಕರಿಸುತ್ತಾರೆ. ಅದಕ್ಕೆ ಕೆಲವು ವಿದ್ವಾಂಸರು ಹೇಳುವಂತೆ ಮುಖದ ತುಂಬ (ಕಪ್ಪು=ಕಾಲ) ವಿಭೂತಿ, ಇಲ್ಲವೆ ಹಣೆಯ ಮೇಲೆ ಕಪ್ಪುಗೆರೆ ಬರೆದುಕೊಳ್ಳುವ ಕಾರಣ ಈ ಹೆಸರು ಬಂದಿದ್ದರೆ, ಕಾಲಾಮುಖರು– ಕಾಳಮುಖರು ಎಂಬ ಹೆಸರು ಇವರಿಗೆ ಬಳಕೆಯಲ್ಲಿರಬೇಕಿತ್ತು. ಹಾಗಿಲ್ಲವಾಗಿ ಶ್ರೀಮತಿ ವಸುಂಧರಾ ಹೇಳುವ ಅರ್ಥವೇ ನಿಜವಿರಬಹುದೆನಿಸುತ್ತದೆ ಎಂದು ಡಾ.ಕಲಬುರ್ಗಿ ಅನುಮಾನಿಸುತ್ತಾರೆ. 'ಕಾಲ' ಕಪ್ಪು ಮೂಲವನ್ನು ಭ್ರಮಿಸಿ ಕೆಲವೊಮ್ಮೆ ಕಾಲಮುಖ, ಅಸಿತವಕ್ತ್ರವೆಂಬ ತಪ್ಪು ರೂಪಗಳನ್ನು ಶಾಸನಗಳು ಬಳಸಿದವು. [ಕಲಬುರ್ಗಿ, ಎಂ ಎಂ.; ಮಾರ್ಗ ಸಂಪುಟ, ೪ ಪುಟ.೨೭೯] ಎಂದು ಪ್ರಸ್ತಾಪಿಸಿರುವುದು ಸ್ಪಷ್ಟವಾಗಿಲ್ಲ. ಶಾಸನಗಳು ಕಾಳಾಮುಖರನ್ನು ಅವರ ದೇವತಾಶಾಸ್ತ್ರೀಯ ಹಾಗೂ ಧಾರ್ಮಿಕ

ಎದುರಾಳಿಗಳಾದ ಯಾಮುನಾಚಾರ್ಯ ಹಾಗೂ ರಾಮಾನುಜರಂಥವರು ಆಕ್ರಮತೆಯಿಂದ ಚಿತ್ರಿಸುವುದಕ್ಕಿಂತಲೂ ತುಂಬ ಬೇರೆಯಾಗಿ ಚಿತ್ರಿಸುತ್ತವೆ. ಎದುರಾಳಿಗಳ ಈ ದಾಳಿಗಳು ಪಾಶುಪತ ಗ್ರಂಥಗಳಲ್ಲಿ ವಿಧಿಸಲಾದ ಹಾಗೂ ತುಸುಮಟ್ಟಿಗೆ ವಿಚಿತ್ರವಾಗಿ ತೋರುವ ಮತಾಚರಣೆಗಳೆಲ್ಲ ಕೂಡಿ ಕಾಳಾಮುಖರೆಂದರೆ ಪಾಷಂಡಿಗಳು ಹಾಗೂ ಅವರ ಸಂಪ್ರಾದಾಯವು ಅಬ್ರಾಹ್ಮಣ ಸಂಪ್ರದಾಯ, ಅಲ್ಲದೆ ಅದು ಕಾಪಾಲಿಕರಂಥವರ ತಾಂತ್ರಿಕ ಪ್ರಭಾವಗಳಿಗೆ ಒಳಪಟ್ಟಿದೆಂದೆಲ್ಲ ಆಧುನಿಕ ವಿದ್ವಾಂಸರಿಗೆ ಸೂಚಿಸುತ್ತ ಬಂದಿವೆ. ಹೀಗೆ ಸೂಚಿಸಿರುವುದು ಅಭಾಸವೆನಿಸಿದೆ. ಏಕೆಂದರೆ ಸಂಸ್ಕೃತ ಅಭ್ಯಾಸಿಗಳಾದ ಅವರನ್ನು ಪಂಡಿತರೆಂದು ಉಲ್ಲೇಖಿಸಿರುವುದನ್ನು ಹಲವಾರು ಶಾಸನಗಳಲ್ಲಿ ಕಾಣಬಹುದು.

ಲಾರೆಂಜನ್ ರವರು ಇವರನ್ನು ಪಾಷಂಡಿಗಳು ಎಂದು ಕರೆಯುವುದೇಕೆ? ಎಂಬುದನ್ನು ಸ್ಪಷ್ಟಪಡಿಸಿಲ್ಲ. ಹಿಂದೂ ಪಂಥಗಳು ಯಾವುದೇ ಒಂದು ವಿಶಿಷ್ಟ ಸಂಪ್ರದಾಯವನ್ನು ಅನುಸರಿಸಬೇಕೆಂದು ಬೋಧಿಸುವುದಿಲ್ಲ ಏಕೆಂದರೆ ಇವು ಕೆಲವು ವಿಶಿಷ್ಟವಾದ ನಂಬಿಕೆ ಹಾಗೂ ಮತಾಚರಣೆಗಳನ್ನು ಕಾಪಾಡಿಕೊಂಡವುಗಳಾಗಿವೆ. ಅವು ಬಗೆಬಗೆಯ ನಂಬಿಕೆ ಹಾಗೂ ಆಚರಣೆಗಳಿಂದಾಗಿ ಒಂದರಿಂದ ಒಂದೊಂದು ಬೇರೆಯಾದವುಗಳಾಗಿವೆ. ಇವುಗಳ ನಂಬಿಕೆ ಹಾಗೂ ಆಚರಣೆಗಳು ಬಲು ಸಡಿಲಾಗಿ ನಿರ್ದೇಶಿಸಲಾದವುಗಳು ಹಾಗೂ ವ್ಯಾಖ್ಯಾನಿಸಲಾದವುಗಳೆನಿಸಿವೆ. ಈ ಕಾಳಾಮುಖ ಪಂಥಗಳ ಅಸ್ತಿತ್ವವು ಈ ಬಗೆಯದು. [ಲಾರೆಂಜನ ಡೆವಿಡ್ ಎನ್.; ಕಾಪಾಲಿಕರು ಮತ್ತು ಕಾಳಾಮುಖರು, ಪುಟ ೨೬೯] ಕಾಳಾಮುಖ ಪಂಥಕ್ಕೆ ಮಾತ್ರ ಪಾಷಂಡಿ ಎನ್ನುವುದು ತಪ್ಪು ಯಾವ ಪಂಥವು ಪಾಷಂಡಿಯಲ್ಲ ಬಹಳಷ್ಟು ಜನ ಪ್ರಮುಖ ಕಾಳಾಮುಖ ಯತಿಗಳು ಸಾಂಪ್ರಾದಾಯಿಕ ದೇವತಾಶಾಸ್ತ್ರಗಳ ಪರಂಪರೆಗಳಾದ ನ್ಯಾಯ ಹಾಗೂ ವೈಶೇಷಿಕ ಸಂಪ್ರದಾಯಗಳ ಅನುಯಾಯಿಗಳಾಗಿದ್ದರಲ್ಲದೆ ಅವರು ಯೋಗದ ಮಾನಸಿಕ ಹಾಗೂ ದೈಹಿಕ ಶಿಸ್ತುಗಳಲ್ಲಿ ಕೂಡ ಅನುಭವಿಗಳಾದ ಸಮರ್ಥಕರಾಗಿದ್ದರು. ಇವರಲ್ಲಿ ಕೆಲವರಂತೂ ತಮ್ಮ ಎದುರಾಳಿಗಳ ದೇವತಾಶಾಸ್ತ್ರದ ಸಿದ್ಧಾಂತಗಳಲ್ಲಿ ಕೂಡ ವಿದ್ವಾಂಸರಾಗಿದ್ದರು. ತಮ್ಮ ಧಾರ್ಮಿಕ ಸಹಿಷ್ಣುತೆ ಹಾಗೂ ಧಾರ್ಮಿಕವಾದ ವಿವಾದಗಳ ಬಗೆಗೂ ಕೂಡ ಅವರು ಎದ್ದು ಕಾಣುವ ಪುರಾವೆಯೆನ್ನಿಸಿದ್ದರು [ಲಾರೆಂಜನ್, ಡೆವಿಡ್.ಎನ್.; ಕಾಪಾಲಿಕರು ಮತ್ತು ಕಾಳಾಮುಖರು, ಪುಟ. ೨೭೦] ಪಾಷಂಡಿ ಎಂದರೆ ವೇದವನ್ನು ಅರಿಯದವನು, ವೈದಿಕನಲ್ಲದವನಾಗಿದ್ದಾನೆ. ಭಂಡಾರಕರವರು ಕಾಳಾಮುಖರು ಅತಿರೇಕದ ಪಂಥವನ್ನು ತೋರುತ್ತದೆ. ಶಿವಪುರಾಣಗಳಲ್ಲಿ ಅವರನ್ನು ಮಹಾವ್ರತಧರರು ಎಂದು ಕರೆಯಲಾಗಿದೆ. ಮಹಾವ್ರತವೆಂದರೆ ಪರಮ ಪ್ರತಿಜ್ಞೆ . ಈ

ಪ್ರತಿಜ್ಞೆಯ ಮಹತಿ ಅದರ ಅಸಾಧಾರಣ ಲಕ್ಷಣದಲ್ಲಿ ಅಡಗಿದ್ದು, ಮಾನವ ಕಪಾಲದಲ್ಲಿ ಆಹಾರ ಸೇವಿಸುವುದು. ಮಾನವ ಶವದ ಬೂದಿಯನ್ನು ದೇಹಕ್ಕೆ ಲೇಪಿಸಿಕೊಳ್ಳುವುದು ಇತ್ಯಾದಿಗಳನ್ನು ರಾಮಾನುಜರು ಕಾಳಾಮುಖರಿಗೆ ಆರೋಪಿಸುತ್ತಾರೆ. [ಫಿಲಿಯೋಜ, ವಸುಂಧರಾ.; ಕರ್ನಾಟಕದಲ್ಲಿ ಲಾಕುಳ ಶೈವ ಜಕ್ಕಣಾಚಾರ್ಯರು, ಪುಟ.೧] ಹೀಗಿರುವಾಗ ಸರಿಯಾದ ಅರ್ಥ ಕಟ್ಟುವುದು ಅಸಾಧ್ಯವಾಗಿದೆ. ಸಾಮಾನ್ಯವಾಗಿ ಕಾಳಾಮುಖ ಮತ್ತು ಪಾಶುಪತ ಸಿದ್ಧಾಂತಗಳ ಅನುಯಾಯಿಗಳನ್ನು ವಾಮಾಚಾರಿಗಳೆಂದು ನಂಬಲಾಗಿದೆ. ಈ ಕೃತಿಯ ಮುಖ್ಯ ಗುರಿಯೆಂದರೆ ಈ ಸಿದ್ಧಾಂತ ಇದುವರೆಗಿನ ಎತ್ತಿ ತೋರಿಸುವುದಾಗಿದೆ. ಕಾಳಾಮುಖ ಮತ್ತು ಪಾಶುಪತ ಸಿದ್ಧಾಂತಗಳ ಅನುಯಾಯಿಗಳು ವಾಮಾಚಾರಿಗಳಾಗಿರಲಿಲ್ಲ. ಎಂದು ಹೇಳುವ ಅವರ ಅಭಿಮತಕ್ಕೆ ಸಮ್ಮತವಿದೆ.

ಬಿ.ಪೀರಭಾಷರವರು ಮುನ್ನುಡಿಯಲ್ಲಿ 'ಮಾಧ್ವ ' ಮೊದಲಾದ ಧಾರ್ಮಿಕ ಸಿದ್ಧಾಂತಗಳೇ ದಾರ್ಶನಿಕತೆಯನ್ನು ಸ್ವಯಂ ಘೋಷಿಸಿಕೊಂಡು ಬಹುಜನ ಸಮುದಾಯಗಳಿಗೆ ನಿತ್ಯನಾರಕತ್ವವನ್ನು ಆರೋಪಿಸುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ 'ಕಾಳಾಮುಖ'ದಂತಹ ಧರ್ಮ ನಿರಪೇಕ್ಷ ಸಾಂಖ್ಯ ಲೋಕಾಯತ ಮೊದಲಾದ ನಾಸ್ತಿಕ ದರ್ಶನಗಳು ಮಾತ್ರವೇ 'ಬಹುಜನಹಿತ'ಕಾರಿ ಭವಿಷ್ಯದೆಡೆ ಕರೆದೊಯ್ಯಬಲ್ಲವು.[ಹಿರೇಮಠ ಎಸ್‌ಎಸ್.; ಕಾಳಾಮುಖ ದರ್ಶನ, ಪುಟ. ಮುನ್ನುಡಿ ೬]

ಎಂ.ಎಂ.ಕಲಬುರ್ಗಿಯವರು ಕಾಳಾಮುಖ ಹಾಗೆಂದರೇನು? ಎಂಬ ಲೇಖನದಲ್ಲಿ ಕಾಳಾಮುಖರಲ್ಲಿ ಮಹಾಕಾಲ, ಕಾಲ, ಕಾಲವಕ್ತ್ರ, ಕೇವಲ ಹೀಗೆ ನಾಲ್ಕು ಬಗೆಯ ಸಾಧಕರಿರುವರು. ಇವರಲ್ಲಿ ಭಸ್ಮವನ್ನು ಅಂಗಾಂಗಗಳಿಗೆ ಲೇಪಿಸಿಕೊಂಡು, ಕಪ್ಪು ಭಸ್ಮವನ್ನು ಮುಖಕ್ಕೆ ಬಳಿದುಕೊಂಡು ದಿನಕ್ಕೆ ಐದುಸಲ ಶಿವಪೂಜೆ ಮಾಡುತ್ತಿರುವವರೇ ಕಾಲವಕ್ತ್ರರು, ಕಪ್ಪುಮುಖ ಅರ್ಥನೀಡುವ ವಿವರಣೆ ಈ ಕಾಳಾಮುಖ, ಕಾಲಾನನ, ಅಸಿತವಕ್ತ್ರ ಪದಗಳಿಗೆ ಸಮಾನವಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಇದಕ್ಕೆ ಪೂರಕವಾಗಿ ಪಂಪಮಹಾತ್ಮೆ ೧೫ನೆಯ ಅಧ್ಯಾಯದಲ್ಲಿ ಒಂದಿಷ್ಟು ಹೇಳಿದ್ದೇ ಕಾರಣವಾಗಿದೆ ಅಲ್ಲದೇ ಫಿಲಿಯೋಜಾರವರು ಶಿವನ ಐದು ಕಲಾಮುಖಗಳಲ್ಲಿ ಎಂಬ ಇನ್ನೊಂದು ಅರ್ಥವನ್ನು ವಿವರಿಸಿದ್ದಾರೆ. ನಾಥಪಂಥದ 'ಸಿದ್ಧ ಸಿದ್ಧಾಂತ ಪದ್ಧತಿ' ಗ್ರಂಥ ಭಿನ್ನ ಅರ್ಥ ನೀಡುತ್ತದೆ. ಗೋರಕನಾಥರ ಈ ಕೃತಿಯ ೬ನೆಯ ಪ್ರಕರಣದಲ್ಲಿ ಶುದ್ಧಶೈವ, ಪಾಶುಪತ, ಕಾಲಾಮುಖ, ಮಹಾವ್ರತ, ಕೌಲ, ಶಾಕ್ತ, ವೈಷ್ಣವ, ಭಾಗವತ ಬೇಧವಾದಿ,

ಪಂಚರಾತ್ರಿಕ ಇವುಗಳಿಗೆ ಸಂಬಂಧಿಸಿದ ಅವಧೂತರ ಲಕ್ಷಣದ ವಿವರಣೆ ಇದ್ದು ಕಾಲಾಮುಖದ ಬಗ್ಗೆ ಈ ರೀತಿ ಹೇಳಲಾಗಿದೆ.

ಪರಾನಂದಮಯಂ ಲಿಂಗಂ ನಿಜಪೀಠೇ ಸದಾಚಲೇ
ತಲ್ಲಿಂಗಂ ಪೂಜಿತಂ ಯೇನ ಸರ್ವಂ ಕಾಲಮುಖೋ ಭವೇತ್

ಇದರರ್ಥ ಯಾವುದು ಸದಾ ಅಚಲವು ಪರಮಾಣಂದರೂಪವೂ ಆಗಿ ನಿಜಧಾಮದಲ್ಲಿ ಸ್ಥಿರವಾಗಿರುತ್ತದೆಯೋ ಅದುವೇ ಲಿಂಗವೆಂದು ತಿಳಿಯಬೇಕು. ಅಂದರೆ ಯಾವುದು ಜಗತ್ತಿಗೆ ಕಾರಣವಾಗಿರುವುದೋ ಅದು ಲಿಂಗವಾಗಿದೆ. ಅಂತಹಲಿಂಗವನ್ನು ಯಾರು ಪೂಜೆ ಮಾಡಿರುವನೋ, ಅಂದರೆ ಪತ್ರಪುಷ್ಪಾದಿಗಳಿಂದ ಬಾಹ್ಯ ಪೂಜೆಯನ್ನೂ, ಧ್ಯಾನಾದಿಗಳಿಂದ ಮಾನಸಪೂಜೆಯನ್ನು ಮಾಡಿರುವನೋ ಅವನು ಮಹಾಕಾಲನನ್ನು ಜಯಿಸಿದ 'ಕಾಲಾಮುಖ' ಮತದವನೆಂದು ಹೇಳುವರು. ಇಲ್ಲಿರದ ಮಹಾಕಾಲವನ್ನು ಏಕೆ ಕಡವ ಶಂಭುಶರ್ಮರು ತಂದರೆಂದು? ಪ್ರಶ್ನಿಸುತ್ತಾರೆ ಡಾ. ಕಲಬುರ್ಗಿಯವರು ಕಾಳಾಮುಖವೆನ್ನುವ ಕಲಾ ಶಬ್ದದಿಂದಲೇ ಬಂದಿದೆ ಎನ್ನುವುದು ಸರಿಯಲ್ಲ ಇದು ಕಲೆಗೆ ಸಂಬಂಧಿಸಿದ ಶಿವನಮುಖವನ್ನು ಆರಾಧಿಸುವವರು ಎಂಬ ಅರ್ಥದಲ್ಲಿ ರೂಪ ಪಡೆದು ಛಂದಸ್ಸಿನ ಕಾರಣ ಕಾಲಾಮುಖ>ಕಾಳಾಮುಖವೆಂದಾಯಿತು. ತರುವಾಯದ ದಿನಗಳಲ್ಲಿ ನಮ್ಮ ಪ್ರಾಚೀನರು ಕಲೆಗೆ ಸಂಬಂಧಿಸಿದ ಮೂಲಅರ್ಥವನ್ನು ಮರೆತು, ಈ ಯತಿಗಳು ಮುಖಕ್ಕೆ ಕಪ್ಪುಭಸ್ಮ ಲೇಪಿಸಿಕೊಳ್ಳುವುದನ್ನು ಅಸಿತವಕ್ತ್ರ ಇತ್ಯಾದಿ ಪದಗಳನ್ನು ಸೃಷ್ಟಿಸಿಕೊಂಡಂತಿದೆ. ಕಲಾಮುಖ>ಕಾಲಾಮುಖ>ಕಾಳಾಮುಖವೆಂದು ಶಬ್ದರೂಪ ಬೆಳೆದು ಮುಖಕ್ಕೆ ಕಪ್ಪು ಹಚ್ಚಿಕೊಳ್ಳುವವರು ಎಂದು ತಪ್ಪು ಅರ್ಥಕ್ಕೆ ಗುರಿಯಾದಂತಿದೆ ಎಂದು ಸಮರ್ಥಿಸಿರುವುದು ಸತ್ಯದ ಅನ್ವೇಷಣೆಯ ಹಾದಿಯಾಗಿದೆ. [ಕಲಬುರ್ಗಿ.ಎಂ.ಎಂ, ಮಾರ್ಗ ಸಂ-೩ ಪುಟ.೧೬೪] ಇವೆಲ್ಲವುಗಳಿಂದ ತೃಪ್ತರಾಗದ ಕಲ್ಬುರ್ಗಿಯವರು ಸಹ ಗೊಂದಲಕ್ಕೀಡಾಗಿದ್ದಾರೆ ಎನ್ನುವುದು ಕಾಣುತ್ತದೆ. ಅವರನ್ನು ಭೇಟಿಯಾದಾಗ ಕಾಳಾಮುಖರ ಬಗ್ಗೆ ಸಂಶೋಧನೆ ಮಾಡುತ್ತಿದ್ದೇನೆ ಎಂದಾಗ ವಿಷಯ ಚೆನ್ನಾಗಿದೆ ಜಿಲ್ಲಾ ವ್ಯಾಪ್ತಿಯಿದ್ದರೂ ವಿಶಾಲವಾಗಿ ಅಧ್ಯಯನ ಮಾಡೆಂದು ವಿದ್ಯಾಗುರುಗಳು ಬೆನ್ನುತಟ್ಟಿದರು.

ಕಾಳಾಮುಖರು ಕಾಪಾಲಿಕರೂ ಒಂದೇ ಎಂದು ವಾದಿಸುವವರಿಗೆ ಉತ್ತರವಾಗಿ ಕಾಪಾಲಿಕರು ಮತ್ತು ಕೌಳರು ಕರ್ನಾಟಕದಲ್ಲಿ ಅಲ್ಪ ಸಂಖ್ಯೆಯಲ್ಲಾದರೂ ಇದ್ದರು; ಆಚರಣೆಯಲ್ಲಿ ಇವರಿಗೂ ಕಾಳಾಮುಖ ಶೈವರಿಗೂ ಅಜಗಜಾಂತರ ವ್ಯತ್ಯಾಸವಿತ್ತು

ಎಂಬುದರಲ್ಲಿ ಸಂದೇಹವಿಲ್ಲವೆಂದು ಚಿದಾನಂದಮೂರ್ತಿಯವರು ಅಭಿಪ್ರಾಯಿಸಿದ್ದಾರೆ ಈ ವಿದ್ವಾಂಸರ ಮಾತನ್ನು ಗಮನಿಸಿದಾಗ ಕಾಳಾಮುಖ ಪಂಥದ ಆಚರಣೆಗಳು ಭಿನ್ನ ರೀತಿಯಲ್ಲಿರುವುದು ಕಂಡು ಬರುತ್ತದೆ.

ಕಾಳಾಮುಖ ಎಂಬ ಪದ ಕುರಿತು ಹಿಂದಿನ ವಿದ್ವಾಂಸರುಗಳೆಲ್ಲ ಮುಖಕ್ಕೆ ಕಪ್ಪು ಬಣ್ಣ ಬಳಿದುಕೊಂಡಿರುವರು. ಕಪ್ಪುಗೆರೆ ಹಾಕಿಕೊಂಡವರೆಂದು ಕಾಳಾಮುಖ ಎಂದು ವಿವರಿಸುತ್ತಾರೆ. ಬಿಳಿ ವಿಭೂತಿ ಹಚ್ಚಿದವರಿಗೆ ಬಿಳಿಮುಖ, ಕೆಂಪುಹಚ್ಚಿದವರಿಗೆ ಕೆಮ್ಮುಖ, ಕೆಂಪುಮುಖ ಎಂದು ಕರೆದಿಲ್ಲವೇಕೆ? ಇನ್ನೂವರೆಗೂ ಈ ರೀತಿ ಹಣೆಗೆ ಹಚ್ಚಿಕೊಳ್ಳುವವರಿದ್ದಾರೆ. ಕಾರಣ ಹಾಗೆ ಕರೆಯುವುದು ನಿಜವಾದ ಕಾಳಾಮುಖ ಪರಂಪರೆಯವರಿಗೆ ಅವಮಾನ ಎಂಬ ಮಾತು ಸತ್ಯವಾಗಿದೆ. ಕಾಳ ಎಂದರೆ ಅಗ್ನಿ, ಉಗ್ರ, ಕಠೋರ ಇತ್ಯಾದಿ ಅರ್ಥಗಳಿವೆ. ಅಂದರೆ ನಿಯಮಗಳನ್ನು ಕಠೋರವಾಗಿ ಆಚರಿಸುವವನೆಂದರ್ಥ.

ಶೈವರು ಶಿವನ ಆರಾಧಕರು. ಶಿವನಿಗೆ ವಿಭೂತಿ ಶ್ರೇಷ್ಠ, ಭಸ್ಮವಿಲ್ಲದೆ ಅವನ ಪೂಜೆ ನಿರರ್ಥಕ ಕಾರಣ ಕಾಪಾಲಿಕರನ್ನು, ಪಾಶುಪತರನ್ನು, ಮಹಾವ್ರತರನ್ನು ಭಸ್ಮಧಾರಿಗಳೆಂದು ಬರಿ ಕಾಳಾಮುಖರನ್ನಷ್ಟೇ ಕಪ್ಪು ಗೆರೆಯನ್ನು ಹಣೆಯಮೇಲೆ ಹಚ್ಚಿ ಕೊಳ್ಳುವವರಂದು, ಆರೋಪಿಸುವುದೇಕೆ? ಇವರು ಕಟ್ಟಾ ಶಿವನ ಆರಾಧಕರಲ್ಲವೇ? ಇವರು ಭಸ್ಮಧಾರಿಗಳು ಎಂಬುದು ಸ್ಪಷ್ಟವಾಗಿದೆ. ಲಿಂಗಪೂಜೆಯನ್ನು ಮಹತ್ತೀಕರಿಸಿರುವುದು ಕಾಳಾಮುಖ ಮತ್ತು ಪಾಶುಪತರಿಗೆ ಸಲ್ಲುತ್ತದೆ. ಕಾಳಾಮುಖರ ಪ್ರತಿಯೊಂದೂ ಶಾಸನವೂ "ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೊಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ" ಎಂಬ ಶ್ಲೋಕದ ಮೂಲಕ ಶಂಭುವನ್ನು ನಮಸ್ಕರಿಸಿ ಪ್ರಾರಂಭವಾಗುತ್ತವೆ.

ಡಾ. ಭಂಡಾರಕರ, ಯಾಮನಾಚಾರ್ಯ, ರಾಮಾನುಜಾಚಾರ್ಯ, ಮತ್ತು ಮಧ್ವಾಚಾರ್ಯರು ಸಂಸ್ಕೃತ ಮೂಲ ಕೃತಿಗಳನ್ನು ಆಧಾರವಾಗಿಟ್ಟಕೊಂಡಿದ್ದಾರೆ. ಬಹುತೇಕ ಈ ಆಚಾರ್ಯರೆಲ್ಲರೂ ಕಾಳಾಮುಖರು ಮತ್ತು ಪಾಶುಪತರಿಗೆ ವಿರೋಧಿಗಳು. ಇವರೆಲ್ಲ ಕಪ್ಪುಮಸಿ ಬಳಿದವರಂದು ಆರೋಪಮಾಡಿರುವುದು. ಈ ವೈರುದ್ಯದಲ್ಲಿಯೇ ಇರುವುದು. ಆದ್ದರಿಂದ ಕಾಳಾಮುಖರೆಂದರೆ ಅ ಸುಂದರವರ ಅಭಿಮತದಂತೆ ಕಾಳಾಮುಖರು ಕಟ್ಟಾ ಶೈವರು, ಇಂದ್ರಿಯ ನಿಗ್ರಹವನ್ನು ಸಾಧಿಸಿ

ನಿಯಮ ಬದ್ಧರಾಗಿ ಹಿಡಿದವ್ರತವನ್ನು ಬಿಡದೆ, ಕರಾರುವಕ್ಕಾಗಿ ಆಚರಿಸುವವರೆಂದರೆ ತಪ್ಪಾಗಲಿಕ್ಕಿಲ್ಲ.

ನಾಗಾರ್ಜುನಕೃತ 'ಕಕ್ಷಪುಟಿಯಲ್ಲಿ' ಮಂತ್ರ ತಂತ್ರಗಳನ್ನು ಹೇಳುತ್ತ :

ಶಾಂಭವೇ ಶ್ಯಾಮಲೇ ಶಾಕ್ತೇ ಮೌಲೇ ಕೌಲೇಯ ಡಾಮರೇ
ಸ್ವಚ್ಛಂದೇ ಲಾಕುಲೇ ಶೈವೇ ರಾಜತಂತ್ರೇ ಅಮೃತೇಶ್ವರೇ

ಲಾಕುಲ ಶೈವದ ಉಲ್ಲೇಖವಿದೆ. ಈ ಗ್ರಂಥಕಾರನು ಯಾವ ಕಾಲದ ನಾಗಾರ್ಜುನನೊ ತಿಳಿಯದು [ಕಪಟರಾಳ, ಕೃಷ್ಣರಾಯ.; ಕರ್ನಾಟಕ ಲಾಕುಳಶೈವರ ಇತಿಹಾಸ, ಪುಟ. ೯೮] ತಂತ್ರಶಾಸ್ತ್ರಗಳಲ್ಲಿ 'ಲಾಕುಲ'ವು ಒಂದಾಗಿದೆ. ಇದರ ಸ್ವತಂತ್ರ ಲಾಕುಲಾಗಮವಿದ್ದಂತಿದೆ. ಶ್ರೀಪರ್ವತದ ಅಗಸ್ತೇಶ್ವರ ಸಂತತಿಮಠದ ಹರಪನಹಳ್ಳಿ ತಾಲೂಕ ಇಬ್ಬರು ಪಂಡಿತರಾದ ದಿವ್ಯಶಕ್ತಿ ಮತ್ತು ವಾಮಶಕ್ತಿಯನ್ನು ವರ್ಣಿಸುವಾಗ "ಲಾಕುಳದೇವಾಗಮದೀ ಲೋಕ ಜನಸ್ತುತ್ಯಮಾಗೆ" [ಎಸ್ಐಐ,ಮದ್ರಾಸ ನಂ.೧೨೮-೧೦೬೫] ಎಂದಿದೆ. ನಂದಿಕೊಟ್ಟೂರು ಶಾಸನದಲ್ಲಿ ಶ್ರೀ ಪರ್ವತದ ಮಾಸಂಗಿಯ ಬ್ರಹ್ಮೇಶ್ವರದಾಚಾರ್ಯ ಗಂಗರಶಿ ಭಟ್ಟಾರಕರ ಶಿಷ್ಯರಾದ ಸುರೇಶ್ವರ ಪಂಡಿತರನ್ನು ಕಾಳಾಮುಖ ಸಮಯ ಸರೋವರ ರಾಜಹಂಸರ ಲಾಕುಳ ಸಿದ್ಧಾಂತ ನೈಯಾಯಿಕ ನಳಿನೀ ದಿವಾಕರ ಮಧ್ಯಾಹ್ನ ಕಳ್ಪವೃಕ್ಷರ ಗುರುಕುಳ ಸಮುದ್ಧರಣರ್ [ಎಸ್ಐಐ,ಎಂ.ಡಿ.ನಂ.೧೩೪-೧೦೬೪ ಮದ್ರಾಸ್ ಸಿರಿಜ್ ಸಂ ೯ ಪಾರ್ಟ ೧] ಅರಸಿಕೆರೆ ನಂ.೮೯-೧೧೪೯ ಶಾಸನದಲ್ಲಿ ಅಮಿತರಾಸಿ ಪಂಡಿತ ಪದುಮಶಿವ ಪಂಡಿತರಿಗೆ ಲಾಕುಳಾಗಮ ಸಮಯ ಸಮುದ್ದರಣರೆಂದು, ಅದೇ ಅರಸಿಕೆರೆ ನಂ ೬೨-೧೧೦೦ ರ ಶಾಸನದಲ್ಲಿ ಲಾಕುಳಾಗಮ ಸಮಯ ಸಮುದ್ದರಣರುಂ ಎಕ್ಕೋಡಿ ಮುನೀಂದ್ರ ವಂದನಾನಂದರುಂ, ಕಾಳಾಮುಖ ಪ್ರತಿ ಬದ್ಧರುಂ. . . . .ಎಂಬ ಉಲ್ಲೇಖವಿರುವುದು. ಮುನವಳ್ಳಿಯ ೧೨೫೩ ರ ಶಾಸನವೂ "ಲಾಕುಳಾಗಮ ಸಮಯ ಸಮುದ್ಧರಣರುಂ" ಎಂದು ಉಲ್ಲೇಖಿಸುತ್ತದೆ.

ಸೊರಬಶಾಸನ ನಂ ೨೭೫ ರಲ್ಲಿ ಶ್ರೀ ಸ್ವಯಂಭೂ ಕೋಟಿನಾಥ ದಿಬ್ಬ ಶ್ರೀಪಾದ ಪದ್ಮಾರಾಧಕರಾದ ರುದ್ರಶಕ್ತಿ ದೇವರಿಗೆ" ಎಕ್ಕೋಟಿ ಸಮಯ ಚಕ್ರವರ್ತಿ 'ಎನ್ನಲಾಗಿದೆ. ತಿಪಟೂರಿನ ನಂ ೧೨೩ ಕ್ರಿ.ಶ.೧೨೦೦ ರ ಶಾಸನದಲ್ಲಿ ಸೋಮಜೀಯನಮಗ ವಾಮಜೀಯನಿಗೆ" ವಾಗಿಲಾಕುಳಾಗಮ ಸಮಯ ಸಮುದ್ದರಣರೆಂದು ವಿಶೇಷಗಳಿರುವುದು.

ತಿಪಟೂರು ನಂ ೧೨, ಕ್ರಿಶ ೧೨೮೫ ಶಾಸನದಲ್ಲಿ ವಾಗಿಲಾಕುಳ ಹೊಸ ಸಮಯ ಸಮುದ್ದರಣರಪ್ಪ ಎಂಬ ಉಲ್ಲೇಖಗಳು ಬರುವುವು. ಒಟ್ಟಿನ ಮೇಲೆ ಲಾಕುಳಶಾಸ್ತ್ರ, ಲಾಕುಳಾಗಮ, ಲಾಕುಳಸಿದ್ಧಾಂತ, ಲಾಕುಳಸಮಯ, ಎಕ್ಕೋಟಿ ಸಮಯ, ಇವೆಲ್ಲ ಒಂದೇ ಸಂಪ್ರದಾಯದ ಪರ್ಯಾಯನಾಮಗಳೆಂದು ಶಾಸನಗಳಿಂದ ತಿಳಿದು ಬರುತ್ತದೆ. ಈ ಲಾಕುಳ ಸಂಪ್ರದಾಯವು ಕಾಳಾಮುಖ ಸಮಯವನ್ನು ಒಳಗೊಂಡಿದೆ. ಲಾಕುಳಾಗಮದ ಯತಿಗಳನ್ನು ಗುರುತಿಸಲಾಯಿತು. ಕಪಟರಾಳರವರು ಲಾಕುಳಾಗಮ ಸಿದ್ಧಾಂತಗಳಲ್ಲಿ ಎಲ್ಲರೂ ಕಾಳಾಮುಖರಲ್ಲ ಕೆಲವರಿಗೆ ಮಾತ್ರ ಕಾಳಾಮುಖರೆಂದು ವರ್ಣನೆ ಬರುವುದು. ಲಾಕುಳ ಸಿದ್ಧಾಂತದ ಆ ವಿಶಿಷ್ಟ ದೀಕ್ಷೆಯ ಸ್ವರೂಪವೆನಿತ್ತೋ ಈಗ ತಿಳಿದುಕೊಳ್ಳಲು ಸಾಧ್ಯವಿಲ್ಲ ಲಾಕುಳಾಗಮವು ದೊರೆತಾಗ ಮಾತ್ರ ಅದನ್ನು ತಿಳಿಯಬಹುದು. [ಕಪಟರಾಳ ಕೃಷ್ಣರಾಯ, ಕರ್ನಾಟಕ ಲಾಕುಳಶೈವರ ಇತಿಹಾಸ, ಪುಟ. ೭೨] ಇಂದಿಗೂ ಈಗಿನ ಜಂಗಮರಲ್ಲಿ ಪ್ರಸಿದ್ಧ ಮಠಗಳ ಅಧಿಪತಿಗಳು ಪಂಡಿತರಾಗಿರುವರು. ಕೇದಾರ ಪೀಠಕ್ಕೆ ಇಲ್ಲಿಂದ ಹೋದ ಜಂಗಮ ಗುರುಗಳು ಜನ್ನಿವಾರವನ್ನು ಹಾಕಿಕೊಳ್ಳುತ್ತಾರೆಂದೂ ಅದಿಲ್ಲದೆ ಅಲ್ಲಿ ರಾಜರು ಮನ್ನಣೆ ಮಾಡುವುದಿಲ್ಲವೆಂದೂ ನಾವು ಕೇಳಿರುವೆವು. ಇದು ನಿಜವಿದ್ದಲ್ಲಿ ಇದು ಕಾಳಾಮುಖ ಪರಂಪರೆ ಇದ್ದಿರಬಹುದಲ್ಲವೇ? ಈ ಎಲ್ಲ ಸಂಗತಿಗಳನ್ನು ಪರ್ಯಾಲೋಚಿಸಿದರೆ ಪೂರ್ವದ ಲಾಕುಳ ಗುರುಗಳು ಈಗಿನ ಜಂಗಮರ ಪೂರ್ವಜರೆಂದು ನಿರ್ಧಾರವಾಗುವುದು. [ಕಪಟರಾಳ, ಕೃಷ್ಣರಾಯ, ಕರ್ನಾಟಕ ಲಾಕುಳಶೈವರ ಇತಿಹಾಸ , ಪುಟ. ೧೨೦] ಎಂದಿರುವುದು ಆಲೋಚನಾಪರವಾದುದು.

ಲಾಕುಳಶಾಸ್ತ್ರ, ಲಾಕುಳಾಗಮ, ಲಾಕುಳಸಿದ್ಧಾಂತ, ಲಾಕುಳಸಮಯ, ಎಕ್ಕೋಟಿ ಸಮಯ ಇವೆಲ್ಲ ಒಂದೇ ಸಂಪ್ರದಾಯದ ಪರ್ಯಾಯ ನಾಮಗಳೆಂದು ಶಾಸನಗಳ ಅಭ್ಯಾಸದಿಂದ ಕಂಡು ಬರುವುದು. ಈ ಲಾಕುಳ ಸಂಪ್ರದಾಯವು ಕಾಳಾಮುಖ ಸಮಯವನ್ನು ಒಳಗೊಂಡಿರುವುದು. ಮೆಜವೂರ [ಮೇದೂರು ಹಿರೇಕೆರೂರ ತಾಲೂಕು] ದ ಮಾಕಳೇಶ್ವರ ದೇವರದತ್ತಿಯನ್ನು ಲಕುಳೇಶ್ವರ ಪಂಡಿತರ ಕಾಲ್ತೊಳೆದು ಬಿಟ್ಟಿದೆ [ಕ.ಇ.ಸಂ ೪ ಪುಟ.೫೬]

ಎಸ್.ಎಸ್.ಹಿರೇಮಠರು ಸಂಸ್ಕೃತ ಶಿಷ್ಟ ಪರಂಪರೆಯಲ್ಲಿ 'ಲಾಕುಲ', 'ವಾಕುಲ', ನಾಕುಲ', 'ಲಾಕುರ' 'ಲಗುನ', 'ಲಾಗುಡ' 'ಲಾಂಗಲ', ಲಾಂಜನ ಎಂಬ ಎರಡು ವಿಧದ ಪರಿಭಾಷೆಗಳಿವೆ. ಇವೆಲ್ಲವೂ 'ಲಾಕುಳ' ಸಮಯವನ್ನು ಸೂಚಿಸುತ್ತವೆಂಬ ನಂಬುಗೆ. ಈ

ಪದ ಸಂಸ್ಕೃತ ಮೂಲದ್ದೆಂದು ಹೇಳುವುದು ಕಷ್ಟವೇ. [ಹಿರೇಮಠ ಎಸ್ ಎಸ್.; ಲಾಕುಳದರ್ಶನ, ಪುಟ. ೧೩]ಎಂದಿರುವರು.

ಕಿಟೆಲ್‌ರವರು ನಾಕುಲ, ಲಾಕುಳ, ಲಾಂಗಲ, ಲಗುಡ, ಲವುಡಿ, ಲವಡಿ, ಲವುಡಾ ಪದಗಳಿಗೆ ಅನುಕ್ರಮವಾಗಿ ಮುಂಗಲಿ, ಬಡಿಗೆ, ನೇಗಿಲು, ದೊಣ್ಣೆ, ಕಬ್ಬಿಣದ ದೊಣ್ಣೆ, ಸೇವಕಿ, ಶಿಶ್ನ ನಾನಾ ಅರ್ಥಗಳನ್ನು ಹೇಳಿದ್ದಾರೆ. ಶೈವಧರ್ಮಕ್ಕೆ ಲಾಕುಳ ಸಮಯ ಎಂಬ ಮತ್ತೊಂದು ಹೆಸರೂ ಇದೆ. ಈ ಹೆಸರು ಬಹುಶ ಪ್ರಾಚೀನವಾದುದೆಂದೂ ಇದು ಲಕುಲೀಶ ಎಂಬ ಒಬ್ಬ ಮಾನವ ವ್ಯಕ್ತಿಯನ್ನು ಸೂಚಿಸುವುದರಿಂದ ಇದರ ಸ್ಥಾನದಲ್ಲಿ ಪಶುಪತಿ ಎಂಬ ಭಗವಂತನ ಹೆಸರನ್ನಿಟ್ಟು ಪಾಶುಪತ ಸಮಯ ಎಂದು ಮುಂದಿನವರು ಮಾಡಿಕೊಂಡಿರಬೇಕೆಂದು ಹೇಳುತ್ತಾರೆ, ಡಾ.ಭಂಡಾರ್ಕರ. ಲಕುಲೀಶನ ವಿಗ್ರಹಗಳು ಸಾಮಾನ್ಯವಾಗಿ ಬಲಗೈಯಲ್ಲಿ ಮಾದಲ ಹಣ್ಣನ್ನು, ಎಡಗೈಯಲ್ಲಿ ದಂಡ[ಲಾಕುಳ] ಹಿಡಿದಿರುತ್ತವೆ. ಎಂಬ ಉಲ್ಲೇಖಗಳು ಕಂಡುಬರುತ್ತವೆ. [ಹಿರೇಮಠ ಎಸ್ ಎಸ್.; ಲಾಕುಳದರ್ಶನ, ಪುಟ. ೨೩]

ಗ್ರಂಥಕಾರನು ಯಾವ ಕಾಲದ ನಾಗಾರ್ಜುನನೋ ತಿಳಿಯದು "ಯಿದುಕ್ತಂ ಹಿ ಶಾಸ್ತ್ರೆಷು ತತ್ಸರ್ವಮಮಲೋಕಿತಂ "ಇತ್ಯೈವಮಾಗಮೋಕ್ತಂ" ಎಂದಿರುವುದರಿಂದ ಈ ತಂತ್ರಗ್ರಂಥಗಳಿಗೆ ಶಾಸ್ತ್ರವೆಂದೂ ಆಗಮಗಳೆಂದೂ ಕರೆದಿದ್ದಾನೆ. ಈ ತಂತ್ರ ಶಾಸ್ತ್ರಗಳಲ್ಲಿ "ಲಾಕುಳವು" ಒಂದಾಗಿದೆ. ಇದರಿಂದ ಲಾಕುಳಾಗಮವು ಸ್ವತಂತ್ರ ಆಗಮವಿದ್ದಂತೆ ತೋರುವುದು ಎಂದಿದ್ದಾರೆ. [ದೊಡ್ಮನಿ ಎಸ್ ಮನೋಹರ.; ಮೂರು ಜಾವಿದೇವರ ಪರಂಪರೆ, ಪುಟ.೭] ಕೈಯಲ್ಲಿ ಲಗುಡ(ದಂಡ)ವನ್ನು ಹಿಡಿದು ಶಿವನನ್ನು ಆರಾಧಿಸುವ ಶೈವದ ಮುಖ್ಯ ಪ್ರವಾಹದಲ್ಲಿ ಭಾಗಗಳಾಗಿ, ಲಾಕುಳಶೈವರಂದು ಕರೆಯಿಸಿಕೊಳ್ಳುವ, ಪಾಶುಪತ ಮತ್ತು ಕಾಳಾಮುಖಗಳು ಅದರಲ್ಲಿಯ ಶಾಖೆಗಳು. ಈ ಲಗುಡವು ನಾಲ್ಕು ವೇದಗಳನ್ನು ಪ್ರತಿನಿಧಿಸುತ್ತದೆ. ಈ ಕಾರಣದಿಂದಲೇ ಅವರ ಮಠಗಳಲ್ಲಿ ವೇದಾಧ್ಯಯನಕ್ಕೆ ಒತ್ತು ಕೊಡಲಾಗಿತ್ತು.[ಫಿಲಿಯೋಜಾ ವಸುಂಧರಾ.; ಕರ್ನಾಟಕ ಲಾಕುಳಶೈವ ಜಕ್ಕಣಾಚಾರ್ಯರು, ಪುಟ.೬೮] ಅಲ್ಲದೇ ಇನ್ನೊಂದು ಕೃತಿಯಲ್ಲಿ ಲಾಕುಳಶೈವರಲ್ಲಿ ನಾಲ್ಕು ಪಂಗಡಗಳು ಕಾಲಾಮುಖ, ಪಾಶುಪತ, ಕಾಪಾಲಿಕ, ಕೌಲ. ಕಾಪಾಲಿಕರು ಮತ್ತು ಕೌಲರು ಶಕ್ತಿಯ ಆರಾಧಕರು ಈ ಆರಾಧನೆಯಲ್ಲಿ ಮಂತ್ರ ತಂತ್ರಗಳನ್ನು ಉಪಯೋಗಿಸುತ್ತಿದ್ದರು. ಇವರು ವಾಮಾಚಾರಿಗಳೆಂದು ಪ್ರಸಿದ್ಧರಾದರು. ಇವರ ವಿರುದ್ಧವಿದ್ದ ಕಾಲಾಮುಖ ಪಾಶುಪತ ವೈದಿಕ ಮಾರ್ಗವನ್ನು ಅನುಸರಿಸುತ್ತಿದ್ದರು.

[ಫಿಲಿಯೋಜ ವಸುಂಧರಾ, ಕರ್ನಾಟಕ ಲಾಕುಳಶೈವ ಜಕ್ಕಣಾಚಾರ್ಯರು, ಪುಟ.೫] ವಾಮಾಚಾರಿಗಳೆಂದರೆ ವಾಮ ಎಂದರೆ ಎಡಭಾಗ ಶಿವನ ಎಡಭಾಗದಲ್ಲಿರುವ ಶಕ್ತಿಯಾರಾಧಕರು ಶಿವನ ಅರ್ಧಾಂಗಿಯಾದ ಪಾರ್ವತಿಯ ಆರಾಧಕರು ಇವರಾಗಿದ್ದರು.

ಬಸವಣ್ಣನವರು ಕಾಲಾಮುಖರ ಕೆಲತತ್ವಗಳನ್ನೇ ಎತ್ತಿ ಹಿಡಿದರಲ್ಲದೆ ಅದಕ್ಕೆ ಪ್ರಚೋದನೆ ಕೊಟ್ಟರು. ಉದಾ– ಇಷ್ಟಲಿಂಗ ಪೂಜೆ, ಸ್ತ್ರೀಯರಿಗೂ ದೀಕ್ಷೆ ಕೊಟ್ಟು ಶಿಷ್ಯೆಯರನ್ನು ಮಾಡಿಕೊಟ್ಟರು,ಇತ್ಯಾದಿ ಸ್ತ್ರೀಯರಿಗೆ ದೀಕ್ಷೆ ಕೊಡುವುದು ಲಾಕುಳಶೈವರಲ್ಲಿತ್ತು ಎಂದು ವಿ.ಜಿ.ದೀಕ್ಷಿತರು ಉಲ್ಲೇಖಿಸುತ್ತಾರೆ. [ಫಿಲಿಯೋಜ ವಸುಂಧರಾ.; ಕರ್ನಾಟಕದಲ್ಲಿ ಲಾಕುಳಶೈವ ಜಕ್ಕಣಾಚಾರ್ಯರು, ಮುನ್ನುಡಿ ಪುಟ.೭] ಇದು ಸ್ತ್ರೀಯರು ಕಾಳಾಮುಖರಿದ್ದರೆಂದು ತಿಳಿದು ಬರುತ್ತದೆ.

೨.೪ ಶೈವ

ಶೈವಾಗಮಗಳಲ್ಲಿ ಶಿವಮಂಡಲ ದೀಕ್ಷೆಯ ಉಲ್ಲೇಖದಲ್ಲಿ ವಿವಿಧ ನಿಯಮಗಳನುಸಾರ ಭೇದಗಳನ್ನು ಕಲ್ಪಿಸಿವೆ. ಚಂದ್ರಜ್ಞಾನಾಗಮ ೮ ಪ್ರಭೇದಗಳನ್ನು ತಿಳಿಸುತ್ತದೆ. ೧. ಅನಾದಿ ೨. ಆದಿ ೩. ಪೂರ್ವ ೪. ಮಿಶ್ರ ೫. ಶುದ್ಧ ೬. ಮಾರ್ಗ ೭. ಸಾಮಾನ್ಯ ೮. ವೀರಶೈವ.

ಸೂಕ್ಷ್ಮಾಗಮದ ಏಳನೆಯ ಪಟಲದಲ್ಲಿ ಶೈವ ಮತದ ಪ್ರಭೇದಗಳ ವಿಸ್ತಾರವಾದ ವಿವರಣೆಯಿದೆ. ಇಲ್ಲಿ ಭೇದ ಕ್ರಮವು ಜಾತಿ ಮತ್ತು ಆಚಾರಗಳ ಹಿನ್ನೆಯಲ್ಲಿ ಅರ್ಥಪೂರ್ಣವಾಗಿದೆ. ೧. ಅನಾದಿಶೈವ ೨. ಆದಿಶೈವ ೩. ಮಹಾಶೈವ ೪.ಅನುಶೈವ ೫.ಅವಾಂತರಶೈವ ೬. ಪ್ರವರಶೈವ ೭.ಅಂತ್ಯಶೈವ ೮. ಸಾಮಾನ್ಯಶೈವ ೯.ಮಿಶ್ರಶೈವ ೧೦.ಶುದ್ಧಶೈವ ೧೧.ವೀರಶೈವ ಎಂದು ಹನ್ನೊಂದು ಪ್ರಕಾರಗಳನ್ನು ತಿಳಿಸುತ್ತದೆ. ಡಾ.ಫ.ಗು.ಹಳಕಟ್ಟಿಯವರು ತಮ್ಮ ಶಿವಾನುಭವ ಶಬ್ದಕೋಶ ಪುಟ ೨೦೭–೨೦೮ ರಲ್ಲಿ ಈ ಕೆಳಗಿನಂತೆ ವಿವರಿಸಿದ್ದಾರೆ.

೧. ಆದಿಶೈವ – ದ್ವಿಜರು.

೨. ಮಹಾಶೈವ – ದೀಕ್ಷೆ ಹೊಂದಿದ ಶಿವದ್ವಿಜರು.

೩. ಅನುಶೈವ – ಕ್ಷತ್ರೀಯರಿಗೂ ವೈಶರಿಗೂ ದೀಕ್ಷೆಯನ್ನಿತ್ತರೆ ಅವರು ಅನುಶೈವರು.

೪. ಅವಾಂತರಶೈವ – ಶೂದ್ರರಿಗೆ ದೀಕ್ಷೆಯನ್ನಿತ್ತರೆ ಆವಾಂತರಶೈವ.

೫. ಪ್ರವರಶೈವ – ಬ್ರಾಹ್ಮಣನಿಂದ ಶೂದ್ರ ಸ್ತ್ರೀಯರಲ್ಲಿ ಜನಿಸಿದರು.

೬. ಅಂತ್ಯಶೈವ – ಅಂತ್ಯಜರಿಗೆ ದೀಕ್ಷೆಯನ್ನಿತ್ತರೆ

೭. ಸಾಮಾನ್ಯಶೈವ –ಶಿವನನ್ನು ಪೂಜಿಸುವವರು.

೮. ಮಿಶ್ರಶೈವ – ಶಿವ, ವಿಷ್ಣು, ಬ್ರಹ್ಮ, ಷಣ್ಮುಖ, ಗಣಪತಿ ಹೀಗೆ ಬೇರೆ ಬೇರೆ ದೇವತೆಗಳನ್ನು ಪೂಜಿಸುವವರು.

೯. ಶುದ್ಧಶೈವ – ಶಿವನೊಬ್ಬನನ್ನೇ ಪೂಜಿಸುವವರು,ಇವರಿಗೆ ಲಿಂಗಧಾರಣವಿದೆ.

೧೦. ವೀರಶೈವ –ಸಂಕಲ್ಪ,ವಿಕಲ್ಪಗಳನ್ನು ದೂರಮಾಡಿ ಆತ್ಮತತ್ವದ ವಿಚಾರಮಾಡುವವರು. ಇಷ್ಟಲಿಂಗಧಾರಿಗಳು. [ಅಕ್ಕೂರ ಮಠ ಷಣ್ಮುಖಯ್ಯ.; ವೀರಶೈವ ಸಂಹಿತೆ, ಪುಟ.೭] ಇವುಗಳಲ್ಲಿ ಮುಖ್ಯವಾದ ಕೆಲವನ್ನುವಿವರಿಸಲಾಗಿದೆ.

೨.೪.೧. ಆದಿ ಶೈವ

ಗೋಪಾಲ ಬಿ ಆರ್, ರವರು ಆದಿಶೈವರು ಅಥವಾ ಶಿವಬ್ರಾಹ್ಮಣರು ಮಾತ್ರ ಭಗವತರಾಗಿದ್ದು ಇವರು ಅನಾದಿ ಪುರುಷನಾದ ಸದಾಶಿವನಿಂದ ಪರಾರ್ಥಯಜಕ್ಕಾಗಿ ಎಲ್ಲರಿಗಿಂತ ಮೊದಲು ಶಿವಮಂಡಲ ದೀಕ್ಷೆ ಹೊಂದಿದವರು ಶಿವನಂತೆಯೆ ಬಸ್ಮ, ರುದ್ರಾಕ್ಷಿ, ಮುಂತಾದ ಬಾಹ್ಯ ಚಿಹ್ನೆಗಳನ್ನು ಧರಿಸಿ ಪ್ರತಿನಿತ್ಯವೂ ಷಡಾಚಾರ ಪೂರ್ವಕ ಸೂರ್ಯಾರಾಧನೆಯನ್ನು ಮಾಡಿದ ನಂತರವೇ ತಮ್ಮ ಪರಾರ್ಥಯಜನವಾದ ಆಲಯದಲ್ಲಿ ಸದಾಶಿವನ ಆರಾಧನೆ ಮಾಡುವರು.[ಗೋಪಾಲ ಬಿ ಆರ್.; ಕೊರಪಸ್ ಆಪ್ ಕದಂಬ ಇನ್ಸಕ್ರಿಪಶನ್ ವಾಲ್ಯುಂ ೧ ಕದಂಬ ಇನ್ಸಿಟ್ಯೂಟ ಆಪ್ ಕಲ್ಚರಲ್ ಸ್ಟಡೀಸ್ ಶಿರಶಿ ೧೯೮೪ ನಂ ೩೧] ಕಾಳಾಮುಖರಲ್ಲಿ ಭಸ್ಮ, ರುದ್ರಾಕ್ಷಿ, ಸೂರ್ಯಾರಾಧನೆ ಇರುವುದನ್ನು ಸ್ಪಷ್ಟಪಡಿಸುತ್ತದೆ.

ಚಂದ್ರಜ್ಞಾನಾಗಮದ ಉತ್ತರಭಾಗದಲ್ಲಿ ಹೇಳಿದ ಪ್ರಕಾರ ದೀಕ್ಷೆ ಹೊಂದುವ ವಿಚಾರದಲ್ಲಿ ವೀರಶೈವವು ಆದಿಶೈವವನ್ನು ಹೋಲಿದರೂ ಲಿಂಗ ನಷ್ಟವಾದರೆ ಪ್ರಾಣತ್ಯಾಗ ಮಾಡುವುದು(ವೀರವೃತ) ವೀರಶೈವದ ವೈಶಿಷ್ಟ್ಯ ಎನ್ನುವುದು. ಆದರೆ ಈ 'ವೀರವೃತ' ವೀರಶೈವ ಗುರುವರ್ಗಕ್ಕಷ್ಟೇ ಸೀಮಿತವಾದುದು.ಆದಿಶೈವರೆಂದರೆ : ಕೌಶಿಕ, ಕಶ್ಯಪ, ಅತ್ರಿ, ಭರದ್ವಾಜ, ಗೌತಮ ಇತ್ಯಾದಿಯವರೆಂದಿದ್ದಾರೆ ಫಿಲಿಯೋಜಾ. [ಫಿಲಿಯೋಜಾ ವಸುಂಧರಾ.; ಕರ್ನಾಟಕದಲ್ಲಿ ಲಾಕುಳಶೈವ ಜಕ್ಕಣಾಚಾರ್ಯರು, ಪುಟ.೧೦೦]

೨.೪.೨ ಶುದ್ಧಶೈವ

ಪರಮೇಶ್ವರಾಗಮದಲ್ಲಿ – ತತ್ರ ತತ್ರ ವಿಭೇದೇನ ಜಾತಿ ಭೇದೇನ ಕೇನಚಿತ್, ವರ್ತಂತೆ ಲಿಂಗಿನೋದೇವಿ ಜಾತಿಕರ್ಮ ಸಮಾಶ್ರಿತಾ: ಶಿಖೆ, ಯಜ್ಞೋಪವೀತ, ಲಿಂಗ, ರುದ್ರಾಕ್ಷ, ಭಸ್ಮಧಾರಿಗಳೂ, ಗೃಹಸ್ಥರಾದ ಆರಾಧ್ಯರು ಈ ಶುದ್ಧ ಶೈವರು. ಆರಾಧ್ಯರೆಂದರೆ ಪೂಜ್ಯರಾದವರು.

ಚಂದ್ರಜ್ಞಾನಾಗಮದಲ್ಲಿ – ಭಸ್ಮ, ರುದ್ರಾಕ್ಷಧಾರಣೆ, ಪೌರಾಣಿಕ ದೀಕ್ಷೆ, ಶಿವಲಿಂಗ ಪೂಜೆಯಲ್ಲಿ ಶ್ರದ್ಧೆಯನ್ನು ಶಿವಾಧಿಕ್ಯ ಭಾವನೆಯನ್ನು ಹೊಂದಿರುವರು ಶುದ್ಧ ಶೈವ.

ಸೂಕ್ಷ್ಮಾಗಮದಲ್ಲಿ – ಶಿವನುಶುದ್ಧ ಅವನಿಂದಾದುದ ಶುದ್ಧಶೈವ, ಪೂಜಾಕಾಲದಲ್ಲಿ ಅನ್ಯದೇವತೆಗಳಿದ್ದಾಗೂ ಅವುಗಳಿಗೆ ತೆರೆ ಎಳದು ಶಿವನೊಬ್ಬನನ್ನೇ ಪೂಜಿಸುವುದು. ಗುರುವಿತ್ತ ಲಿಂಗವನ್ನು ಕರಪೀಠದಲ್ಲಿಟ್ಟು ಪೂಜಿಸುವುದು. ಲಿಂಗ ನಷ್ಟವಾದರೆ ಅಘೋರ ಮಂತ್ರ ಜಪಿಸಿ ಅದನೇ ಅಥವಾ ಬೇರೆ ಲಿಂಗವನ್ನು ಪೂಜಿಸುವುದು. ಅಜಾಗರೂಕತೆಯಿಂದ ಲೋಪವುಂಟಾದಲ್ಲಿ ಮೂಲ ಪಂಚಾಕ್ಷರಿ ಮಂತ್ರ ಜಪಿಸುವುದು ಇದೆಲ್ಲ ಶುದ್ಧ ಶೈವಾಚಾರ.

ಆಗಮಗಳಲ್ಲಿ ಶುದ್ಧ ಶೈವ ಎಂದರೆ ಶಿವ ಯಜ್ಞೋಪವೀತ, ಇಷ್ಟಲಿಂಗ, ರುದ್ರಾಕ್ಷ, ಶಿವಾಧಿಕ್ಯ ಭಾವನೆ, ಮೂಲ ಪಂಚಾಕ್ಷರಿ ಮಂತ್ರ ಇವೆ ಅಂಶಗಳು ಈ ಶುದ್ದ ಶೈವ ಎಂಬುದಕ್ಕೆ ಕಾರಣ. ಚಿದಾನಂದ ಮೂರ್ತಿಯವರು ಶುದ್ಧ ಶೈವರು ಇಷ್ಟ–ಸ್ಥಾವರಗಳೆರಡನ್ನೂ ಪೂಜಿಸುವುದಲ್ಲದೆ ಶಿವಾಲಯದೊಳಗಿನ ವಿಷ್ಣುಗಣಪಾದಿ ಶಿವನ ಪರಿವಾರವೆಂದು ಪೂಜಿಸುತ್ತಾರೆಂದಿದ್ದಾರೆ. ಇಷ್ಟಲಿಂಗಕ್ಕೆ ಮೀಸಲಿರದೆ ಸ್ಥಾವರಲಿಂಗ ಆರಾಧಕರಿದ್ದರೆಂದು ತಿಳಿದು ಬರುತ್ತದೆ.

ಹಾಸನ ಜಿಲ್ಲೆ ಅರಸಿಕೆರೆ ತಾಲೂಕು ತಳಲೂರಿನಲ್ಲಿ ಕ್ರಿಶ ೧೧೯೧ ಶಾಸನದಲ್ಲಿ ಪೆರ್ಗಡೆ ಸಂಕಣ್ಣನವರು " ಶ್ರೀ ಮದ್ ಮೃತೇಶ್ವರ ದೇವರ ಶ್ರೀ ಪಾದರಾಧಕನುಂ ಗುರುಕುಳ ತಿಳಕನುಂ ಶುದ್ಧಶೈವ ಶಾಂತನಿರಾಚಾರ್ಯ ನಿರ್ಮಲ ಶಿವಮಾಹೇಶ್ವರಾಗ್ರಗಣ್ಯ" ಎಂದು ಬಣ್ಣಿಸಿದೆ. ಕ್ರಿಶ ೧೧೫೭–೫೮ ರ ಶಾಸನದಲ್ಲಿ ಶಿವಗೃಹ & ಈಶ್ವರಪಂಡಿತ ಎಂದಿರು ಒಬ್ಬ ಶೈವಸ್ಥಾನಾಚಾರ್ಯನ ಹೆಸರಿನ ಉಲ್ಲೇಖವಿದೆ.[ಎಕ,ನಂ೧೦ ಪುಟ.೨೨೩]

ಶುದ್ಧಶೈವ ಎಂದರೆ ಒಮ್ಮೆ ಧರಿಸಿ, ಒಮ್ಮೆ ಇರಿಸಿ, ರುಚಿಯಾದನೆಂದು ಅಶುಚಿಯಾನೆಂದು ಭವಿಯಾಗುತ್ತೊಮ್ಮೆ ಭಕ್ತನಾಗುತ್ತೊಮ್ಮೆ ಒಪ್ಪಚ್ಚಿ ಹೊಲೆ ಒಪ್ಪಚ್ಚಿ ಕುಲವೆಂದು ಆ ರೀತಿ ಇರುವ ಭಕ್ತನ'ಮತ (ನಾಗಭೂಷಣ ಸಿ.; ಏಕಾಂತರಾಮಯ್ಯ & ಆದಯ್ಯ ಒಂದು ತುಲನಾತ್ಮಕ ಅಧ್ಯಯನ, ಪುಟ. ೧೨೯) ಮುಂದುವರೆದು ಶೈವ ಪ್ರಭೇದಗಳು ಕಾಲಾಮುಖ, ಕಾಪಾಲಿಕ, ಪಾಶುಪತ ಮತಕ್ಕೆ ಅನ್ವಯಿಸುತ್ತವೆಯೇ ಅಥವಾ ಬೇರೆಯವೇ ಎಂಬಲ್ಲಿ ಗೊಂದಲವುಂಟಾಗುತ್ತದೆಯಾದರೂ ಸಂಕೀರ್ಣ ಶೈವ ಮತ್ತು ಶುದ್ಧ ಶೈವದ ವಿವರಗಳೂ ಕಾಳಾಮುಖರ ಆಚರಣೆಯ ಪದ್ದತಿಯನ್ನು ಹೋಲುತ್ತದೆ. ಶೈವ ಮತದ ವಿಭಾಗಗಳಲ್ಲಿರುವ ಭಕ್ತರಂತೂ ಸ್ಥಾವರ ಲಿಂಗರಾಧಕರು ಎಂದಿದ್ದಾರೆ.

ಶುದ್ಧಶೈವದ ಕುರಿತು ವಚನದಲ್ಲಿ

ಶುದ್ಧಶೈವಂಗೆ ಗುರು ತನ್ನ ನಿರೀಕ್ಷಣಾ ಮಾತ್ರದಲ್ಲಿ ಅವನ ಶುದ್ಧಾಂಗನ ಮಾಡಿ
ಆತನ ಕರ್ಣದ್ವಾರದಲ್ಲಿ ಪಂಚಾಕ್ಷರಿಯನುಪದೇಶ ಮಾಡಿ.
ಸ್ಥಾವರ ಲಿಂಗ ಪೂಜಕನಾಗಿರರೆಂದು ಲಿಂಗವನು ಕೊಟ್ಟು ಭೂ ಪೀಠದಲ್ಲಿರಿಸಿ
ಅರ್ಚನೆಯ ಪೂಜನೆಯ ಮಾಡೆಂದು ಹೇಳಿದಾಗ

ಶುದ್ಧಶೈವನೆ ಭಿನ್ನಭಾವಿಯಾಗಿ ಪೀಠದಲ್ಲಿರಿಸಿ ಅರ್ಚನೆ ಪೂಜನೆಯ ಮಾಡುವನು. [ಉತ್ತಂಗಿ ಚನ್ನಪ್ಪ.; (ಸಂ) ಆದಯ್ಯನ ವಚನಗಳು, ಮುರುಘಾಮಠ ಧಾರವಾಡ ೧೯೫೨, ವಚನ ಸಂ.೭೮) ವೀರಶೈವಕ್ಕೆ ಹೋಲಿಕೆ ಮಾಡಿ ಶುದ್ಧಶೈವಕ್ಕೆ ಲಿಂಗದ ನೆನಹು ಇಷ್ಟ ವೀರಶೈವಕ್ಕೆ ಲಿಂಗದ ಸಂಗ ಶ್ರೇಷ್ಠವೆಂದಿರುವರು.

೨.೪.೩ ಮಿಶ್ರಶೈವ

ಇವರು ಎಲ್ಲ ದೇವ, ದೇವತೆಗಳನ್ನು ಪೂಜಿಸುವರು. ಇವರಿಗೆ ಶಿವ ಪ್ರಮುಖ. ಅನಂತರ ವಿಷ್ಣು, ಬ್ರಹ್ಮ, ಸೂರ್ಯ, ಗಣೇಶ, ಸ್ಕಂದ, ಶಕ್ತಿದೇವತೆಗಳನ್ನು ಆರಾಧಿಸುವರು. ಆದ್ದರಿಂದ ಅವರಿಗೆ "ಅಂತಶ್ಯಾಕ್ತಃ ಬಹಿಶೈವಃ ಸಭಾಮಧ್ಯೇ ಚ ವೈಷ್ಣವ' ಎಂದರೆ ಆಂತರ್ಯದಲ್ಲಿ ಶಕ್ತಿಯನ್ನು ಪೂಜಿಸುತ್ತಾ ಹೊರಗೆ ಶಿವನನ್ನು ಹಾಗೂ ಸಭೆಗಳಲ್ಲಿ ವಿಷ್ಣುವನ್ನು ಹೊಗಳುವುದರಿಂದ ಅವರಿಗೆ ಮಿಶ್ರಶೈವರೆಂದು ಹೆಸರು ಬರುತ್ತದೆ. ಈ ಮಾತು ಶಿವ ಪುರಾಣದಲ್ಲಿಯೂ ಇದೆ. ಈ ಮಿಶ್ರಶೈವರೇ ಕರ್ನಾಟಕದಲ್ಲಿ ಕಾಲಾಮುಖ ಪಾಶುಪತರೆಂಬ ಹೆಸರಿನಿಂದ ಪ್ರಸಿದ್ದರಾಗಿದ್ದರೆಂದು ಹೇಳಿದರೆ ತಪ್ಪೇನಿಲ್ಲ, ಯಾಕೆಂದರೆ ಈ ಕಾಲಾಮುಖ, ಪಾಶುಪತರು ಕಟ್ಟಿಸಿದ ದೇವಸ್ಥಾನಗಳು "ತ್ರೈಪುರುಷಾಲಯ" ಎಂದು ಹೆಸರುಗೊಂಡಿದೆ. ಈ ದೇವಸ್ಥಾನಗಳಲ್ಲಿ ಅದರಲ್ಲೂ ೧೧-೧೨ನೆಯ ಶತಮಾನಕ್ಕಿಂತ

ಮೊದಲು ಕಟ್ಟಿದ ದೇವಾಲಯಗಳಲ್ಲಿ ಮಧ್ಯದಲ್ಲಿ ಶಿವ, ಆತನ ಆಚೆ ಈಚೆ ಬ್ರಹ್ಮ, ವಿಷ್ಣು ಅಥವಾ ಸೂರ್ಯ, ರಂಗಮಂಟಪದಲ್ಲಿ ಸಪ್ತಮಾತೃಕೆಯರು, ದುರ್ಗಾ, ಗಣೇಶ ಮುಂತಾದ ಮೂರ್ತಿಗಳಿರುತ್ತವೆ. ಆದ್ದರಿಂದ ಕಾಳಾಮುಖರು ಮಿಶ್ರಶೈವರೆಂದು ಇವರು ತ್ರೈಪುರುಷಾಲಯಗಳಲ್ಲಿ ಶಿವನ ಆಚೆ ಈಚೆ ಮೂರ್ತಿಗಳನ್ನು ಲಿಂಗರೂಪದಲ್ಲಿಯೇ ಸ್ಥಾಪಿಸಿ ಪೂಜಿಸುತ್ತಿರುವುದು ಗೋಚರಿಸುತ್ತದೆ.

೨.೪.೪ ಕಾಶ್ಮೀರ ಶೈವ/ತ್ರಿಕಸಿದ್ಧಾಂತ

ಕಾಶ್ಮೀರಶೈವ/ತ್ರಿಕಸಿದ್ಧಾಂತದಲ್ಲಿ ಪಶು ದೈವ ಪಾಶ ಅಜ್ಞಾನವನ್ನು ಕಳೆದುಕೊಂಡು ಪತಿಯಾಗುವುದು, ದೈವತ್ವಕ್ಕೆರುವುದಾಗಿದೆ. ಇಚ್ಚಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ ಕಳೆದುಕೊಳ್ಳುವ ಪತಿ ಎಂದು ದೈವತ್ವಕ್ಕೇರುವುದಾಗಿದೆ.

ಕಾಳಾಮುಖ ಪರಂಪರೆಯು ಕಾಶ್ಮೀರದಲ್ಲಿ ಇದ್ದಿದ್ದರೆ ಅದರ ಕುರುಹುಗಳು ಉತ್ತರಭಾರತದ ಯಾವ ಭಾಗದಲ್ಲಿಯಾದರೂ ಕಾಣಬೇಕಾಗಿತ್ತು, ಅದು ಕಂಡು ಬರುವುದು ದಕ್ಷಿಣದಲ್ಲಿ ಅದರಲ್ಲೂ ಪ್ರಧಾನವಾಗಿ ೭ ನೆಯ ಶತಮಾನದ ನಂತರದಿಂದ ಕರ್ನಾಟಕದಲ್ಲಿ ಕಂಡುಬರುತ್ತದೆ. ಅದರಲ್ಲೂ ಉತ್ತರದವರೇ ಆಗಿದ್ದರೆ 'ಕಾಳಾ' ದ ಬದಲಾಗಿ 'ಕಾಲೆ ಎಂಬ ಶಬ್ದ ಕಾಣಬೇಕಾಗಿತ್ತು. ಅದು ಒಂದು ಬಾರಿಯಾದರೂ ಶಾಸನ ಸಂಪತ್ತಿನಲ್ಲಿ ಕಂಡು ಬರುವುದಿಲ್ಲ.[ಮನ್ವಾಚಾರ, ಕಲವೀರ.; ಲೇಖನ: ಅಬಲೂರು ಮತ್ತು ಕಾಳಾಮುಖ ಪರಂಪರೆ, ಗೌಡರ ಎಸ್.ಪಿ.(ಸಂ) ಕಣಜ, ಪುಟ. ೧೫]

ಕಾಳಮುಖ ಪರಂಪರೆ ಕಾಶ್ಮೀರ ಮೂಲದ್ದು ಎನ್ನುವ ಅಭಿಮತ ತಪ್ಪು ಎಂಬುದಕ್ಕೆ, ಕಾಳಾಮುಖರು ಸಂಪ್ರದಾಯವಾದಿಗಳಲ್ಲ, ಅವರ 'ಸಾರಸ್ವತ' ವಿಶೇಷಣ ಎಂದೂ ಜಾತಿವಾಚಕವಲ್ಲ. ಅದು 'ವಿದ್ವಾಂಸ' ಎಂಬುದರ ಸಂಕೇತ ಅವರು ಜಾತಿಯ ಮೂಲಕ ದೊಡ್ಡವರಾಗಬೇಕಾದ ಅಗತ್ಯವಿರಲಿಲ್ಲ. ತಮ್ಮ ವಿದ್ಯೆಯ ಬಲದಿಂದಲೇ ಭಾರತದ ಪುನನಿರ್ಮಾಣದ ಕೈಂಕರ್ಯಕ್ಕೆ ಮುಂದಾಗಿದ್ದಾರೆ. ಅವರು ವೇದ ವಿರೋಧಿಗಳಲ್ಲ. ಹಾಗಂತ ಅವರು ಜಾತಿವಾದಿಗಳೂ ಅಲ್ಲ. ಕಾರಣ ವೇದ, ವೇದಾಂತ ಎಂದಿಗೂ ಜಾತಿವಾದಿಯಾಗಲೀ, ಕೋಮುವಾದಿಯಾಗಲೀ ಜೀವ ವಿರೋಧಿಯಾಗಲ್ಲಿ ಅಲ್ಲ.[ವಸಂತಕುಮಾರ.ಬಿ.ವಿ, ಶಿಕಾರಿಪುರ ತಾಲೂಕಿನ ಸಾಂಸ್ಕೃತಿಕ ಸಂಕಥನ, ಪುಟ.೧೧೧] ಕಾರಣ ಕಾಶ್ಮೀರಿ ಪಂಡಿತರು ಎಂಬುದು ಒಂದು ಪಾಂಡಿತ್ಯದ ಪದ್ಧತಿಯಾಗಿರಲು ಸಾಧ್ಯತೆಯಿದೆ.

ಎಸ್.ಎಸ್.ಹಿರೇಮಠರವರು ಕಾಶ್ಮೀರ ದೇವರ ಸಂತಾನ ಎಂಬುದು ಕಾಳಾಮುಖ ಮೂಲವನ್ನು ಉತ್ತರಕ್ಕೆ ಒಯ್ಯುತ್ತದೆ. ಚಕ್ರವರ್ತಿ ಎಂಬ ಮಾತು ಕಾಳಾಮುಖರಲ್ಲಿ ಅಗ್ರಗಣ್ಯರೆಂಬ ಅರ್ಥದಲ್ಲಿರಬೇಕು. ಕಾಳಾಮುಖವು ಉತ್ತರ ಭಾರತದಲ್ಲಿರಲಿಲ್ಲ ಅದು ದಕ್ಷಿಣ ಭಾರತಕ್ಕೆ ಸೀಮಿತವಾಗಿತ್ತು ಎಂಬ ನಿಲುವಿರುವಾಗ ಕಾಶ್ಮೀರ, ಕೇದಾರ ಮುಂತಾದ ಪದಗಳಿಗೆ ಯಾವ ಅರ್ಥ ಹೇಳುವುದು? ಎಂದು ಪ್ರಶ್ನಾರ್ಥಕವಾಗಿ ಕಾಶ್ಮೀರ ಮೂಲವೆಂಬುದನ್ನು ಅಲ್ಲಗಳೆದಿದ್ದಾರೆ. [ಹಿರೇಮಠ, ಎಸ್ ಎಸ್.; ಲಾಕುಳದರ್ಶನ, ಪುಟ.೯೬] ಕಾಶ್ಮೀರ ಪದ್ಧತಿಯ ಅಧ್ಯಯನವಿರುವುದನ್ನು ಸ್ಪಷ್ಟಪಡಿಸಬಹುದು.

೨.೫.೧ ಶಾಕ್ತರು / ಕೌಳರು

ಇವರು ಶಕ್ತಿಯ ಉಪಾಸಕರು ಇವರದು ಶಾಕ್ತಪಂಥ. ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನ ಸಾತೇನಹಳ್ಳಿ ಶಾಸನದಲ್ಲಿ ಕೌಳರು ಉಲ್ಲೇಖಗೊಂಡಿದ್ದಾರೆ. ಭೋಜರಾಜ ಪಾಟೀಲರವರು ನಾಗರಖಂಡ-೭೦ ಒಂದು ಅಧ್ಯಯನ ಕೃತಿಯಲ್ಲಿ 'ಕಷ್ಟ ವಿಕ್ರಿರ್ಷ್ಟದುಷ್ಟ ಚರಿತ(ರ್) ಕಾಳೇಯದುಂರ್ಮಾನವರು' ಎಂಬ ಶಿವಳ್ಳಿ ತ್ರಾಮ ಶಾಸನಗಳನ್ನು ಉಲ್ಲೇಖಿಸಿ ಇಲ್ಲಿ ನಿಂದೆಗೊಳಗಾಗಿರುವ 'ಕಾಳೇಯರು' ಕೌಳರೇ ಆಗಿದ್ದಾರೆ. ಈ ಶಾಸನವಿದ್ದ ಊರು ಹಾಗೂ ಪಕ್ಕದ ಕೋಣವತ್ತಿಗಳು ಕೌಳರು ವಾಸಸ್ಥಾನಗಳಾಗಿದ್ದವು. ಕೋಣವತ್ತಿಗೆ 'ಕೌಳಂಗೇರಿ' ಸಾತೇನಹಳ್ಳಿಗೆ 'ಕೌಳಗಡ್ಡೆ' ಎಂದೂ ಪ್ರಾಚೀನ ಹೆಸರುಗಳಿವೆ. [ಪಾಟೀಲ, ಭೋಜರಾಜ.; ನಾಗರಖಂಡ ೭೦-ಒಂದು ಅಧ್ಯಯನ ಪುಟ.೨೩೮] ಲಿಂಗರಾಜ ಕಮ್ಮಾರವರು ಬಳಗೆರೆ ಎಂಬ ಹಿರೇಕೆರೂರ ತಾಲೂಕಿನ ತಮ್ಮೂರಾದ ಭೋಗಾವಿಯ ಪ್ರಮುಖ ಕೆರೆ ಬಗ್ಗೆ ವಿವರಿಸುತ್ತ ಇಂದು ಕಂದಾಯ ಹಾಗೂ ನೀರಾವರಿ ಇಲಾಖೆಗಳ ದಾಖಲೆಯಲ್ಲಿರುವ ಬಳಗೆರೆ ಕೆರೆಯ ಮೂಲ ಹೆಸರು ಬಳರಿಯಕೆರೆ. ಇದು ಸ್ತ್ರೀದೇವತೆಯ ಹೆಸರಾಗಿದ್ದು, ಈ ದೇವತೆಯ ಆರಾಧಕರು ಕೌಳರು. ಇವರು ೯ರಿಂದ ೧೨ನೆಯ ಶತಮಾನದ ಅವಧಿಯಲ್ಲಿ ಅಧಿಪತ್ಯ ನಡೆಸಿದವರು ಈ ಜನಾಂಗದ ವಿಶೇಷತೆ ಜೋಗಿ ವೇಷಧಾರಿಗಳು. ಚಿನ್ನಮುಳಗುಂದ ಗುಡ್ಡದ ಪೂರ್ವದಿಕ್ಕಿಗೆ ವಿಶಾಲವಾದ ಪ್ರದೇಶದಲ್ಲಿ ನೆಲೆಸಿದ್ದರು. ಅವರು ಯೋನಿ ಭಾಗವನ್ನು ವೈಶಿಷ್ಟ್ಯಪೂರ್ಣವಾಗಿ ಪೂಜಿಸಿ ಆರಾಧಿಸುವ ಪರಿಪಾಠವಾಗಿದ್ದು, ನರಬಲಿ, ಪಶುಬಲಿ ಕೊಡುವ ಆಚರಣೆಯವರಾಗಿದ್ದು ಆ ಗುಡ್ಡಕ್ಕೆ ಜೋಗಿಗುಡ್ಡವೆಂದೇ ಹೆಸರು. ಅವರು ಕೆರೆಯನ್ನು ನಿರ್ಮಿಸಿ ಏರಿಯ ಮೇಲೆ ಬಳರಿ ವಿಗ್ರಹಸ್ಥಾಪಿಸಿದ್ದರು.

ಕುಮಾರರಾಮನ ವಿಗ್ರಹವೂ ಇದ್ದು ಈ ಬಳರಿದೇವತೆ ಹೆಸರೇ ಬಳಗೆರೆಗೆ ಬಂದಿದ್ದು ಅನುಮಾನವಿಲ್ಲವೆಂದಿದ್ದಾರೆ.[ಕಮ್ಮಾರ ಲಿಂಗರಾಜ.; ಉದಕದೊಳಗಣ ಪಾವಕ,ಪುಟ.೭೧]

ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ ಕೌಳರನ್ನು ಕುರಿತು ಪದ್ಯವೊಂದರಲ್ಲಿ

ಎಕ್ಕಲದೇವಿ[ಗಮಾ]ಮಾ
ಲಕ್ಕನಿಗಂ ಬನದ ಬಳರಿಗಮ ಮೈಲಾರಂ
ಗಳ್ಕದೆ ಜಾತ್ರೆಯ ಮಾಟ್ಪಂ
ಮೊಕ್ಕಳಿಗಂ ಜೈನನಲ್ಲನಾತಂ ಕೌಳಂ.

ಎಕ್ಕಲದೇವಿಗೆ ಆ ಲಕ್ಕನಿಗೂ, ಬನದ ಬಳರಿಗೂ, ಮೈಲಾರಗಳಿಗೆ ಅಳುಕದೆ, ಭಯಪಡದೆ, ಜಾತ್ರೆ ಮಾಡುವ ಒಕ್ಕಳಿಗ ಜೈನನಲ್ಲ ಆತ 'ಕೌಳ' ಎಂದು ಹೇಳಿರುವನು [ವೆಂಕಟಾಚಲಶಾಸ್ತ್ರಿ.ಟಿ.ವಿ,ರಾಘವೇಂದ್ರರಾವ್ ಕೆ (ಸಂ) ಬ್ರಹ್ಮಶಿವವೃತ್ತವಿಲಾಸ ಸಂಪುಟ, ಸಮಯಪರೀಕ್ಷೆ ಪುಟ.೭೧] ಶೈವ ಪಂಥಗಳಲ್ಲೊಂದಾದ ಕೌಳ ಪಂಥವು ಇಲ್ಲಿರುವ ಬಗ್ಗೆ ತಿಳಿದು ಬರುತ್ತದೆ. ಇದು ವಾಮಾಚಾರದ ಪಂಥವೆಂದು ಗುರುತಿಸಿರುವುದು. ಚಿಕ್ಕೇರೂರಿನ ಬಳರಿದೇವತೆ, ಬಾರಂಗಿಯ ಬಳರಿದೇವತೆ,ಇವು ಶಕ್ತಿದೇವತೆ ಅರ್ಚನೆಗೆ ಪ್ರಸಿದ್ಧ ಕೇಂದ್ರಗಳಾಗಿದ್ದವು. ಕೌಳರು ಇಂಥ ದೇವಸ್ಥಾನಗಳಲ್ಲಿ ವಾಸವಾಗಿದ್ದ ಶಕ್ಯತೆ ಇದೆ. ಬಳರಿ ದೇವತೆಯನ್ನು ಬನದಲ್ಲಿ ಸ್ಥಾಪಿಸುತ್ತಿರಬೇಕು. ಇದು ಕೌಳರ ದೇವತೆಯೆಂದು ಕಲಬುರ್ಗಿಯವರು ನಿರ್ಣಯಿಸಿದ್ದಾರೆ. ಬಳರಿ ವಿಗ್ರಹದ ಪ್ರಮುಖ ಸಂಕೇತಗಳೆಂದರೆ ಪಾದದ ಬಳಿ ಗೂಗೆ ಪಾದಪೀಠದಲ್ಲಿ ಬಳರಿಯಿಂದ ತುಳಿತಕ್ಕೊಳಗಾದ ಮಾನವ, ಅವನ ಪಾದಗಳತ್ತ ತೋಳ, ತಲೆಯತ್ತ ನಾಯಿಗಳು ಅವನನ್ನು ತಿನ್ನುವ ಭಂಗಿಯಲ್ಲಿರುವುದು. [ಪಾಟೀಲ ಭೋಜರಾಜ.; ನಾಗರಖಂಡ ೭೦ ಒಂದು ಅಧ್ಯಯನ, ಪುಟ.೨೩೯] ಬಳರಿದೇವತೆಯ ಸಂಕೇತಗಳನ್ನು ಗಮನಿಸಿದರೆ ಇದು ಕೌಳರ ದೇವತೆ, ಇದು ವಾಮಾಚಾರಿಗಳ ಪಂಥವಾಗಿರಬಹುದೆಂದು ಗುರುತಿಸಬಹುದು.

ಅಧ್ಯಾಯ : ೩

ಕಾಳಾಮುಖರು ಮತ್ತು ಅವರ ಪರಂಪರೆಗಳು

೩.೧ ಶಕ್ತಿ ಪರಿಷೆ ಪರಂಪರೆ

೩.೨ ಸಿಂಹ ಪರಿಷೆ ಪರಂಪರೆ

೩.೩ ಕಿಟ್ಟಗಾವಿ ಪರಂಪರೆ

ಅಧ್ಯಾಯ - ಮೂರು

ಕಾಳಾಮುಖರು ಮತ್ತು ಅವರ ಪರಂಪರೆಗಳು

೩.೧ ಶಕ್ತಿಪರಿಷೆ ಪರಂಪರೆ

ಕಾಳಾಮುಖ ಸಂಪ್ರದಾಯದ ಎರಡು ಮುಖ್ಯ ಶಾಖೆಗಳಾದ ಶಕ್ತಿಪರಿಷತ್ತು ಹಾಗೂ ಸಿಂಹಪರಿಷತ್ತುಗಳನ್ನು ಬಿಡಿಸಿ ತೋರಿಸುತ್ತವೆ. ಎರಡನೆಯ ಶಾಖೆಯು ಆಂದ್ರಪ್ರದೇಶ ಹಾಗೂ ಕರ್ನಾಟಕ ಪ್ರಾಂತಗಳನ್ನೊಳಗೊಂಡ ವಿಸ್ತೃತ ಭೂಭಾಗದಲ್ಲಿ ಕಂಡು ಬರುತ್ತದೆ. ಮೊದಲ ಶಾಖೆ ಹೆಚ್ಚಾಗಿ ಧಾರವಾಡ ಹಾಗೂ ಮೈಸೂರು ಸೀಮೆಯ ಶಿವಮೊಗ್ಗಾ ಜಿಲ್ಲೆಗೆ ಸೀಮಿತಗೊಂಡಿದೆ. ಹೀಗಿದ್ದು ಈ ವರೆಗೆ ಉಳಿದು ಕೊಂಡಿರುವ ಶಕ್ತಿಪರಿಷತ್ತಿನ ಶಾಸನಗಳ ಸಂಖ್ಯೆ ತುಂಬಾ ದೊಡ್ಡದಿದ್ದು ಅವುಗಳನ್ನು ಅನೇಕ ಕಡೆಗಳಲ್ಲಿ ಕಂಡು ಹಿಡಿಯಲಾಗಿದೆ. ಸಾಮಾನ್ಯವಾಗಿ ಅವು ಸುದೀರ್ಘವಾಗಿದ್ದು ತಮ್ಮ ಸಂಪ್ರದಾಯವನ್ನು ಕುರಿತು ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತವೆ. ಇವೆರಡೂ ಶಾಖೆಗಳಲ್ಲಿ ಶಕ್ತಿಪರಿಷತ್ತು ಹೆಚ್ಚು ಮಹತ್ವದ್ದಾಗಿತ್ತೆಂದು ಭಾವಿಸಬೇಕಾಗುತ್ತದೆ.[ಲಾರೆಂಜೆನ ಡೆವಿಡ್.; ಕಾಪಾಲಿಕರು ಮತ್ತು ಕಾಳಾಮುಖರು ಕಣ್ಮರೆಯಾದ ಎರಡು ಶೈವ ಸಂಪ್ರದಾಯಗಳು, ಅನು-ವಿರುಪಾಕ್ಷ ಕುಲಕರ್ಣಿ, ಪುಟ. ೧೩೧]

ರಾಷ್ಟ್ರಕೂಟ ಎರಡನೆಯ ಕೃಷ್ಣನ ಕಾಲದ ಕ್ರಿಶ ೯೦೦ ರ ಹಾವೇರಿ ಜಿಲ್ಲೆ ಹಿರೇಕೇರೂರ ತಾಲೂಕು ಅಣಜಿಯ ಶಾಸನ ೧೬ಸಾಲಿನ ಶಾಸನದಲ್ಲಿ 'ಶಸ್ತಿಪರಿಶೆ' ಎಂಬ ಪದ ಇರುವುದು [ಕಇ.ಸಂ,೬, ನಂ-೩] ಇದು ಬನವಾಸಿನಾಡ ಲೋಕಟೆ ಆಳೆ ಅಯಪಗವುಂಡನು ದೇಗುಲಕ್ಕೆ ೨ ಮತ್ತರು ಖುಷ್ಕಿ ಭೂಮಿ ಮತ್ತು ೧೨ ಮತ್ತರು ತೋಟವನ್ನು ದಾನ ಮಾಡಿರುತ್ತಾನೆ. ಇದು ಶಕ್ತಿ ಪರಿಷತ್ತಿನಶಾಸನ ಈ ಶಾಸನವು ಶಕ್ತಿ ಪರಿಷತ್ತಿನ ಎಲ್ಲಕ್ಕೂ ಮೊದಲನೆಯ ಶಾಸನ ಹಾಗೂ ಕಾಳಾಮುಖರ ಪ್ರಾಚೀನ ಕಾಲದ ಶಾಸನಗಳಲ್ಲೊಂದು ಇದು ನನ್ನ ಅಧ್ಯಯನದ ಕ್ಷೇತ್ರ ವ್ಯಾಪ್ತಿಯಲ್ಲಿರುವ ಶಾಸನವಾಗಿದೆ. ಕ್ಷೇತ್ರ ಕಾರ್ಯಕ್ಕೆಂದು ಅಣಜಿಗೆ ಹೋದಾಗ ಅಲ್ಲಿಯ ಗ್ರಾಮಸ್ಥರು ಶಾಸನವಿತ್ತು ಹೊಂಡದ ಏರಿಯಮೇಲೆ ಆದರೆ ಅದನ್ನು ರಸ್ತೆ ಮಾಡುವಾಗ ಅದನ್ನು ಅಲ್ಲಿಯೇ ಮುಚ್ಚಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ಈ ಶಾಸನದ ಪಾಠವನ್ನು ಮುಂದಿನ ಅಧ್ಯಾಯದಲ್ಲಿ ನೀಡಲಾಗಿದೆ.

ಶಕ್ತಿಪರಿಷೆಯ ಮೂವರು ಕೋಣೆಯ ಸಂತತಿಯ ಮೊತ್ತಮೊದಲಿನ ಉಲ್ಲೇಖ ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯದ ಶಾಸನ ಕ್ರಿಶ ೧೦೭೮ ಎಂಬುದನ್ನು ಗುರುತಿಸಲಾಗಿದೆ. ಎಸ್ ಶೆಟ್ಟರವರು ಬಳ್ಳಿಗಾವೆಯಲ್ಲಿ ಅದರ ಪ್ರವೇಶವನ್ನು ೧೧ನೆಯ ಶತಮಾನದ ಕೊನೆಭಾಗದಲ್ಲಿ ಬಹುಶಃ ಕೇದಾರಶಕ್ತಿಯ ಶಿಷ್ಯರಿಗೆ ಬಿಟ್ಟರೆ ಉಳಿದವರಿಗೆ ಅದು ಪ್ರಸ್ತುತವಾದಂತಿಲ್ಲ. ಶಕ್ತಿಪರಿಷೆಯ ಪೀಳಿಗೆಯ ಇಬ್ಬರು ಅಪ್ರತಿಮ ಶಿಷ್ಯರೆಂದರೆ ಸೋಮೇಶ್ವರ ಪಂಡಿತರು (೧೨ನೇ ಶತಮಾನದ ಮೊದಲ ಇಪ್ಪತ್ತು ವರ್ಷಗಳ ಈ ಸಂಪ್ರದಾಯಕ್ಕೆ ಮುಂದಾಳ್ತನ ವಹಿಸಿದ್ದರು) ಹಾಗೂ ವಾಮಶಕ್ತಿ ದೇವ (ಕಳಚೂರ್ಯರ ರಾಜಗುರು) ಇದಕ್ಕೆ ೧೧೫೬ರಿಂದ ೧೧೯೨ರವರೆಗೆ ಅಧಿಪತಿಗಳಾಗಿದ್ದರು. ಬಹುಶಃ ಶಕ್ತಿ ಪರಿಷೆಯ ಪರ್ವತಾವಳಿಯ ಮೂವರ ಕೋಣೆ ಸಂತತಿಯನ್ನು ಕೇದಾರಶಕ್ತಿ ದೇವರು ಬನವಾಸಿ ದೇಶಕ್ಕೆ ತಂದರು ಎಂದಿರುವರು. [ಶೆಟ್ಟರ ಎಸ್, ಬಳ್ಳಿಗಾವೆ ಮಧ್ಯಕಾಲೀನ ನಗರವೊಂದರಲ್ಲಿ ಮತ್ತು ಮತ ವೈವಿಧ್ಯತೆಯ ವಿನ್ಯಾಸ, ನಾವಡ ಎ ವಿ.; (ಸಂ)ಕನ್ನಡ ಅಧ್ಯಯನ, ಚಳಿಗಾಳಿ ಸಂಯುಕ್ತ ಸಂಚಿಕೆ ಸಂ.೧ ಪುಟ.೧೦೬] ಶಕ್ತಿಪರಿಶೆಯಲ್ಲಿ ಹಲವಾರು ಶಾಖೆಗಳಿದ್ದು ಬಳ್ಳಿಗಾವಿಯ ಮೂವರ ಕೋಣೆಸಂತತಿ [ಎಸ್‌ಐಐ,ಸಂ ೧೮ ನಂ ೨೯೭] ರಟ್ಟೇಹಳ್ಳಿಯ ಕಿಟ್ಟಗಾವೆ ಸಂತತಿ [ಕೆ.ಐ.ಸಂ.೬ ನಂ.೪೨-೪೪] ಮತ್ತು [ಎ.ಕ.ಶಿಕಾ.ಶಾ.ನಂ೧೫೩ ಪು.೨೬೦] ಬೆಳ್ಳಿಸಂತತಿ[ಎಸ್‌ಐಐ, ಸಂ-೨೦ ನಂ.೮೩] ಗಳ ಉಲ್ಲೇಖವಿರುವುದನ್ನು ಕಾಣುತ್ತೇವೆ.

ಎಂ ಚಿದಾನಂದಮೂರ್ತಿಯವರು ಜೈನ ಗುರುಗಳು ತಾವು ಸಂಬಂಧಿಸಿರುವ ಸಂಘ, ಗಣ, ಗಚ್ಛ, ಅನ್ವಯಾದಿಗಳನ್ನು ಹೇಳಿಕೊಳ್ಳುವಂತೆ ಶೈವ ಗುರುಗಳೂ ತಮ್ಮ ಪರ್ಷೆ, 'ಆಮ್ನಾಯ' (ಆವಳಿ) 'ಸಂತತಿ' ಗಳನ್ನು ಹೇಳಿಕೊಳ್ಳುತ್ತಾರೆ. ಪರ್ಷೆಗಳಲ್ಲಿ ಬಹು ಪ್ರಸಿದ್ಧವಾದವು ಎರಡು ಶಕ್ತಿಪರ್ಷೆ ಮತ್ತು ಸಿಂಹಪರ್ಷೆಗಳು [ಚಿದಾನಂದಮೂರ್ತಿ ಎಂ.; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. ೧೪೫] ಶಕ್ತಿಪರ್ಷೆಯಲ್ಲಿ ಎರಡು 'ಆಮ್ನಾಯ' ಅಥವಾ ಆವಳಿಗಳು ಒಂದು 'ಪರ್ವತಾಮ್ನಾಯ' ಅಥವಾ ಪರ್ವತಾವಳಿ [ಎ.ಕ.ಎಸ್‌ಕೆ ೩೧೬, ೧೧೯೭ ಎ.ಡಿ] ಮತ್ತೊಂದು ಭುಜಂಗಾವಳಿ [ಎ.ಕ. ೭ ಎಸ್.ಕೆ ೨೯೨ ೧೦೭೭ ಎ.ಡಿ] ನಕುಲೀಶ ಶೈವ ಪಂಥದಲ್ಲಿ ಸಿಂಹಪರ್ಷೆ ಮತ್ತು ಶಕ್ತಿಪರ್ಷೆಯೆಂದು ಎರಡು ಪ್ರಭೇದಗಳಿದ್ದು ಶಕ್ತಿಪರ್ಷೆಯಶಾಖೆಗಳಲ್ಲಿ ಮೂವರಕೋಣೆ ಸಂತತಿಯೆಂಬುದೂ ಒಂದು. ಇದು ಬಳ್ಳಿಗಾವಿ ಪ್ರದೇಶದಲ್ಲಿ ಹೆಚ್ಚು ಪ್ರಸಾರದಲ್ಲಿದ್ದಿತು. [ಕಲಬುರ್ಗಿ, ಎಂ ಎಂ.; ಮಾರ್ಗ: ಸಂಪುಟ-೪ ಪುಟ. ೨೬೪] ಶಕ್ತಿಪರಿಷೆ ಬಳ್ಳಿಗಾವೆಯಲ್ಲಿರುವ ಮತ್ತು ಮೂವರ ಕೋಣೆ ಸಂತತಿ ಬಗ್ಗೆ ತಿಳಿಸಿರುವರು.

ಶಕ್ತಿಪರ್ಷೆಯ ಭುಜಂಗಾವಳಿಯಲ್ಲಿ ಇನ್ನೊಂದು ಸಂತತಿ 'ಇಟ್ಟಿಗೆಯಸಂತತಿ' ಎಂಬ ಮತ್ತೊಂದು ಶಾಖೆ. ಈ ಪರ್ಷೆಯ ಗುರುಗಳೆಲ್ಲರನ್ನೂ ಕಾಳಾಮುಖರೆಂದು ಕರೆದಿದೆ. ಇವರು ಲಕುಳೀಶನ ಭಕ್ತರು. ಬಹುಶಃ ಇದೇ ಪರ್ಷೆಯ ಪರ್ವತಾವಳಿಯ ಅಗಸ್ತ್ಯೇಶ್ವರದ ಸಂತತಿಯ ಮಠದ ಹೆಸರು ಒಂದು ಕಡೆ ಕಂಡು ಬರುತ್ತದೆ.

ಶಕ್ತಿಪರಿಶೆಯು ೯ನೆಯ ಶತಮಾನದ ಕೊನೆಯ ಭಾಗದಲ್ಲೇ ಗಣನೀಯ ಪ್ರಾಬಲ್ಯವನ್ನು ಹೊಂದಿತ್ತು ಈ ವಿಷಯ ನಮಗೆ ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನ ಅಣಜಿಶಾಸನದಲ್ಲಿ ವಿಧಿತವಾಗುತ್ತದೆ. ನಂತರ ಬಳ್ಳಿಗಾವೆಯ ಇತಿಹಾಸದಲ್ಲಿ ಮೊತ್ತಮೊದಲ ಬಾರಿ ನಾವು ಶಕ್ತಿಪರಿಶೆಯ ಪರ್ವತಾವಳಿಯ ಮೂವರಕೋಣೆ ಸಂತತಿಯ ಕುರಿತು ಕ್ರಿಶ ೧೦೭೮ ರ ಶಾಸನವೊಂದರಲ್ಲಿ [ಎಕ, ೭, ಎಸ್‌ಕೆ, ೧೦೭] ಶಕ್ತಿಪರಿಷೆಯ ಮೊದಲ ಶಾಸನ ಕ್ರಿಶ ೧೦೭೮ ರಲ್ಲಿ ಬಳ್ಳಿಗಾವೆಯಲ್ಲಿ ಕಂಡುಬರುತ್ತದೆ. ಈ ಶಾಸನದಲ್ಲಿ 'ಧರೆಗೆಸೆವ ಶಕ್ತಿಪರ್ಷೆಯ. . . . .ಯೊಳ್ಮೂವರಕೋಣೆಯ ಸನ್ತತಿಗಾಭರಣಂ' ಎಂಬ ಉಲ್ಲೇಖವಿದೆ. ಕ್ರಿಶ ೧೦೯೪ ರ ಶಾಸನದಲ್ಲಿ 'ಧರೆಗೆಸೆವ ಶಕ್ತಿಪರ್ಶೆಗೆ ಕರಮಗ್ರಣಿಯೆನಿಪ ಪರ್ವತಾವಳಿಯೊಳ್ಮೂವರ ಕೋಣೆ ಸನ್ತತಿಗಾಭರಣಂ ಕೇದಾರಶಕ್ತಿಮುನಿ' ಎಂಬ ಉಲ್ಲೇಖವಿದೆ.

ಎಸ್ ಶೆಟ್ಟರವರು ಶಕ್ತಿಪರಿಷೆ ಪರ್ವತಾವಳಿಯ ಮೂವರ ಕೊಣೆ ಸಂತತಿಯ ಭದ್ರ ಕೋಟೆಯಾಗಿ ಕೇದಾರೇಶ್ವರ ದೇವಾಲಯ ಹನ್ನೊಂದನೆ ಶತಮಾನದಲ್ಲಿ ಬಳ್ಳಿಗಾವೆಯ ಪ್ರಮುಖ ದೇವಸ್ಥಾನಕ್ಕೆ ಯಾವುದೇ ಸ್ಥಾನಮಾನವಿರಲಿಲ್ಲ ಹನ್ನೆರಡನೆ ಶತಮಾನದ ಪ್ರಾರಂಭದಲ್ಲಿ (೧೧೦೩) ಕೇದಾರ ಶಕ್ತಿಯ ಶಿಷ್ಯಸಂತತಿಯವರಿಂದ ಸೋಮೇಶ್ವರ ಪಂಡಿತರು ಆ ದೇವಾಲಯವನ್ನು ತಮ್ಮ ಗುರುಗಳ ಸ್ಮರಣೆಗಾಗಿ ಕಟ್ಟಿಸಿದ ಸಾಧ್ಯತೆ ಇದೆ ಎಂದಿದ್ದಾರೆ. ಅಲ್ಲದೆ ಇದು [ಶೆಟ್ಟರ್ ಎಸ್.; ಪೂರ್ವೋಕ್ತ, ಪುಟ.೧೦೫] ಶಕ್ತಿ ಪರಿಷೆಯ ಸ್ಥಾನ ಭದ್ರಪಡಿಸಿಕೊಂಡ ದೇವಾಲಯವಾಗಿದೆ. ಹೆಚ್ಚಿನ ಸಂಖ್ಯೆಯ ದಾನಗಳನ್ನು ಪಡೆದು ಈ ಪರಿಶೆಯನ್ನು ಉಚ್ಛ್ರಾಯಸ್ಥಿತಿಗೆ ಕೊಂಡೊಯ್ಯಿತು. ಅದಕ್ಕೆ ಸಂಬಂಧಿಸಿದಂತೆ ೧೧೩೯ರಲ್ಲಿ ಕೋಡಿಮಠ ಎಂಬ ಹೊಸ ಮಠವು ದೇವಾಲಯದಲ್ಲಿ ಮೈಲುಗಲ್ಲಾಗಿದೆ.

ಶಕ್ತಿಪರಿಶೆಯ ಪರ್ವತಾವಳಿಯ ಮೂವರ ಕೋಣೆ ಸಂತತಿಯ ಎಲ್ಲ ಆಚಾರ್ಯರು ಕೇದಾರೇಶ್ವರ ದೇವಾಲಯಕ್ಕೆ ಸಂಬಂಧಿಸಿದ್ದರು. ಉಳಿದವರು ಬಳ್ಳಿಗಾವೆಯ ಇತರ ಕಾಳಾಮುಖ ವ್ರತ ನಡೆಸುತ್ತಿದ್ದ ಮಠಗಳಿಗೆ ಸೇರಿದ್ದರು ಹಾಗೂ

ಅವರಿಗೆ ಮೂವರ ಕೋಣೆಯ ಸಂತತಿಯ ಜೊತೆ ಸಂಬಂಧವಿರಲಿಲ್ಲ ಹಿರಿಯ ನಾಲ್ಕು ಮಠಗಳಾದ ಹಿರಿಯಮಠ, ಭೇರುಂಡೇಶ್ವರಮಠ, ಪಂಚಲಿಂಗಮಠ, ತ್ರಿಪುರಾಂತಕ ಮಠಗಳಲ್ಲಿ ಮೂವರ ಕೋಣೆ ಸಂತತಿಗೆ ಸೇರದ ಆಚಾರ್ಯರಿದ್ದರೆಂಬುದು ಸ್ಪಷ್ಟ, ತ್ರಿಪುರಾಂತಕಮಠ ಭುಜಂಗಾವಳಿಗೆ ಸೇರಿತ್ತು [ಶೆಟ್ಟರ ಎಸ್.; ಪೂರ್ವೋಕ್ತ, ಪುಟ. ೧೦೭] ಕೇದಾರೇಶ್ವರದ ಕೋಡಿಮಠವು ಮಾತ್ರ ಮೂವರ ಕೋಣೆ ಸಂತತಿಯ ಕಾಳಾಮುಖ ಆಚಾರ್ಯರಿಗೆ ಸಂಬಂಧಿಸಿದ್ದನ್ನು ಸ್ಪಷ್ಟಪಡಿಸುತ್ತಾರೆ.

ಹಾವೇರಿ ಜಿಲ್ಲೆಯಲ್ಲಿ ಹಾನಗಲ್ ತಾಲೂಕು ಆಡೂರಿನ ಕಾಳೇಶ್ವರ ದೇವರಿಗೆ, ತಪೋಧನರಿಗೆ ಶ್ರೀ ಶಕ್ತಿಪರಾಷೆಯ ಬಾಳಚಂದ್ರ ಪಂಡಿತರ ಕಾಲ್ತೊಳೆದು ತೋಟದಾನ ಮಾಡಿದ ವಿಷಯ ಕ್ರಿಶ ೧೦೬೭ರ ಶಾಸನದಲ್ಲಿದೆ. [ಎಸ್ಐಐ, ೧೮ ಕ್ರಿಶ ೧೦೬೭] ಹಾವೇರಿ ಜಿಲ್ಲೆಯ ನೆರೆಯ ಕುಂದಗೋಳ ತಾಲೂಕಿನ ಕುಯಿಬಾಳದ ಕ್ರಿಶ ೧೦೫೮ರ ಶಾಸನದಲ್ಲಿ ಶಕ್ತಿ ಪರ್ಶೆಯ ಲೋಕಾಭರಣ ಪಂಡಿತರ ಕಾಲ್ತೊಳೆದು ನೈಷ್ಟಿಕ ಸ್ಥಾನವಾಗಲು ಭೂಮಿ ದತ್ತಿಯನ್ನು ಜೋಗೇಶ್ವರ ದೇವರಿಗೆ ಬಿಡಲಾಗಿದೆ.

ಹಾವೇರಿ ಜಿಲ್ಲೆಯ ಹಾವೇರಿ ತಾಲೂಕಿನ ಹರಳಹಳ್ಳಿ ರಟ್ಟಿಹಳ್ಳಿ ಕದಂಬೇಶ್ವರ ದೇವಾಲಯಕ್ಕೆ ಪ್ರತಿಬದ್ಧವಾಗಿದ್ದು ಮೂರುಜಾವಿಪರಂಪರೆಯು ಇಲ್ಲಿ ಕಂಡುಬರುತ್ತದೆ. ಕ್ರಿಶ ೧೧೮೮ ರ ಶಾಸನದಲ್ಲಿ 'ಕಾಳಾಮುಖಯತಿತತಿಯೊಳ್ ಸವನಿಸಿದ ಶಕ್ತಿ ಪರುಷೆಯೊಳವನೀನುತೆ ಕಿಟ್ಟಗಾವೆ ಸನ್ತತಿಯೊಳ್ತು . . . ವಪ್ಪಂವಳಿಯೊಳು..' ಶಾಸನವು ಪರ್ವತಾವಳಿ ಶಕ್ತಿಪರ್ಶೆಯ ಅಮೃತೇಶ್ವರ ಶಿಷ್ಯ ಸರ್ವೆಶ್ವರನ ಕುರಿತು ಕಿಟ್ಟಗಾವಿ ಸಂತತಿಯ ಕಾಳಾಮುಖತ್ವ ಕುರಿತು ವಿವರಣೆ ನೀಡುತ್ತದೆ. ಜಿಲ್ಲೆಯ ಹಿರೇಕೆರೂರ ತಾಲೂಕು ರಟ್ಟೀಹಳ್ಳಿಯ ಕ್ರಿಶ ೧೨೫೮ರ ಶಾಸನ ಕಾಳಾಮುಖ ಪರ್ವತಾವಳಿಯ ಕಿಟ್ಟಗಾವೆ ಸಂತತಿಯ ಬಗ್ಗೆ ವಿವರಣೆ ನೀಡುತ್ತದೆ. ಇದೇ ಊರಿನ ಕ್ರಿಶ ೧೧೭೮ರ ಶಾಸನ ಶಕ್ತಿಪರಿಸೆಯ ಗುರುಪರಂಪರೆಯನ್ನು ತಿಳಿಸುತ್ತದೆ. [ಕಇ. ಸಂ.೬,ನಂ ೪೨– ೪೪] ಹೀಗೆ ಹಲವಾರು ಶಾಸನಗಳು ಈ ವ್ಯಾಪ್ತಿಯಲ್ಲಿ ಶಕ್ತಿಪರಿಶೆಯ ಸಂತತಿಗಳನ್ನು ಗುರುತಿಸುತ್ತವೆ.

ಪರ್ವತಾವಳಿಯ ಶಾಖೆಗಳಲ್ಲಿ ಬೆಳ್ಳಿ ಸಂತಾನವನ್ನು ಉಲ್ಲೇಖಿಸುವ ಶಾಸನಗಳು ಲಭಿಸುತ್ತವೆ. ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕು ಕ್ರಿಶ ೧೨೪೦ ರ ಸಾತೇನಹಳ್ಳಿ ಶಾಸನದಲ್ಲಿ 'ಬಿಳ್ಳ ಮಠ' ಅದು ಬೆಳ್ಳಿಮಠ ಬೆಳ್ಳಿಸಂತಾನವನ್ನು ಸೂಚಿಸುವುದು. ಹರಿಹರೇಶ್ವರ ದೇವಾಲಯದಲ್ಲಿರುವ ದತ್ತಿ ಶಾಸನದಲ್ಲಿ ಸೆಟ್ಟಿಕವ್ವೆಯ

ಸುದೀರ್ಘಶಾಸನದಲ್ಲಿ ಕಾಳಾಮುಖ ಪಂಥದ ಇವರು ಸೂರಿಲಿ ಅಗ್ರಹಾರದ ಬಾಯಿಲೇಶ್ವರ ದೇವರ ಆಚಾರ್ಯರು ಇವರದು ಬಿಲ್ಲಮಠ. ಈ ಶಾಸನದಲ್ಲಿ ಪಿನಾಕಪಾಣಿ > ಶಿವರಾಶಿ > ಅಮೃತರಾಸಿ > ಹರಶಕ್ತಿ ವಂಶಾವಳಿಯನ್ನು ಉಲ್ಲೇಖಿಸಿದೆ. ಭೋಜರಾಜ ಪಾಟೀಲರು ಬಿಲ್ಲಮಠದ ಕುರಿತು ಮುನಿಪುಂಗವನ ತಪಸ್ಸಿಗೆ ಬಿಲ್ಲೆಗಳನ್ನು ಕಾಮದೇವನು ತನ್ನ ಕಬ್ಬಿನ ಬಿಲ್ಲನ್ನು ಬಿಸುಟಿ ಓಡಿದನು, ಆದ್ದರಿಂದ ಪಿನಾಕಪಾಣಿ ಇವರ ಮಠಕ್ಕೆ 'ಬಿಲ್ಲಮಠ' ಎಂಬ ಹೆಸರು ಬಂದಿದೆ. ಅದು ರಾಮೇಶ್ವರ ದೇವರ ಮಠಕ್ಕೆ ಸಂಬಂಧಿಸಿದ್ದು ಇವರು 'ಬೆಳ್ಳಿಯ'ದೇವರ ಸಂತಾನೋದ್ಭವರಂ ಎನಿಸಿಕೊಂಡಿದ್ದಾರೆ. ಸಾಮವೇದಿ ಪಂಡಿತರು ಅಗಸ್ತ್ಯ ಪಂಡಿತರು ಈ ಪರಂಪರೆಯವರು ಎಂದಿರುವರು [ಪಾಟೀಲ, ಭೋಜರಾಜ.; ನಾಗರಖಂಡ ೭೦ ಒಂದು ಅಧ್ಯಯನ, ಪುಟ.೨೩೮]

೩.೨ ಸಿಂಹ ಪರಿಶೆ ಪರಂಪರೆ

ಈ ಪರಿಷೆಯ ಕುರಿತು ಉಲ್ಲೇಖಿಸಿದ ಮೊದಲಶಾಸನ ತಾಂಡಿಕೊಂಡದಶಾಸನ ತಾರೀಖನ್ನು ನಮೂದಿಸದ ದತ್ತಿಶಾಸನವಾಗಿದೆ.[ಎಇ.೨೩,೧೬೧-೧೭೦] ಇದು ಕ್ರಿ.ಶ ೯೪೬ ಹಾಗೂ ೯೭೦ರ ನಡುವಿನ ಕಾಲದಲ್ಲಿ ವೆಂಗಿ ಮತ್ತು ಕಲಿಂಗದ ಕೆಲಭಾಗಗಳಲ್ಲಿ ಆಳುತ್ತಿದ್ದ ಪೂರ್ವ ಚಾಲುಕ್ಯ ಇಮ್ಮಡಿ ಅಮ್ಮರಾಜ ಉಮಾಮಹೇಶ್ವರ ದೇವರಿಗೆ ಮೂರು ಗ್ರಾಮಗಳನ್ನು ದತ್ತಿನೀಡಿದುದನ್ನು ತಿಳಿಸುತ್ತದೆ. ಪಾಶುಪತರದು ಸಿಂಹಪರಿಶೆ. ಅವರ ವಾಹನ ಶಕ್ತಿಯವಾಹನ ಸಿಂಹ. ಸಿಂಹಪರಿಶೆಯು ಮಲೆಯಾಳಿ ಪಂಡಿತನಿಂದ ಪ್ರಾರಂಭವಾಗಿರುವಂತಿದೆ. 'ಮಲೆಯಾಳ ಸಂತತಿ' ಎಂದೂ ಕೂಡ ಪ್ರಸ್ತಾಪವಾಗುತ್ತದೆ. ಕಲ್ಕೇರಿಯ ೧೧೭೬ರ ಶಾಸನವು 'ಮಲೆಯಾಳ ತಪೋನಿಧಿ ದೇವಸಿಂಗಿ ಜೀಯ'ರನ್ನು ಸ್ಮರಿಸಿದ್ದು, ಈತ ಬಳ್ಳಾರಿ ಜಿಲ್ಲೆಯ ಮುದಿನೀರು ರಾಮೇಶ್ವರ ತೀರ್ಥದ ಮಲೆಯಾಳ ಪಂಡಿತನಲ್ಲಿ ಕೇರಳದಿಂದ ಬಂದಿದ್ದ 'ದೇವಸಿಂಗಿ' ಎಂದಷ್ಟೇ ಇದರರ್ಥವಾಗಬಹುದು ಅಥವಾ ಮಲೆಯಾಳ ಪರಂಪರೆಯವನಿರಬೇಕು ಎಂದಿದ್ದಾರೆ [ಹಿರೇಮಠ ಎಸ್.ಎಸ್, ಕಾಳಾಮುಖದರ್ಶನ, ಪುಟ. ೮೩] ಆದರೆ ಕೇರಳದಿಂದ ಸಿಂಹಪರಿಶೆ ಬಂದಿದೆ ಎಂಬುದು ಸರಿಯಾದುದಲ್ಲ ಏಕೆಂದರೆ ಕೇರಳದಲ್ಲಿ ಇವರ ಪರಂಪರೆ ಕಂಡು ಬರುವುದಿಲ್ಲ. ಮಲೆಯಾಳ ಎಂಬುದು ಮಲೆ ಎಂಬ ಪದದಿಂದ ಬಂದಿದೆ, ಮಲೆ ಅಂದರೆ ಬೆಟ್ಟ, ಕಾರಣ ಬೆಟ್ಟದ ಕಡೆಯವರಾಗಿರುವರು.

ಸಿಂಹಪರ್ಶೆಯಲ್ಲಿ ೧ ಬೆಳ್ಳೆಯ ಸಂತತಿ, ೨ ಅಮರವಟೇಶ್ವರ ದೇವಾಲಯದ ಸಂತತಿ, ೩ ಶ್ರೀಪರ್ವತ ಮಲ್ಲಿಕಾರ್ಜುನ ಕಲ್ಮಠಸಂತತಿ, ೪ ಮುದಿನೀರತೀರ್ಥದ ಮಳೆಯಾಳದೇವರ ಸಂತತಿ ಎಂದು ನಾಲ್ಕು ಒಳಬೇಧಗಳಿರುವುದಾಗಿ ಡಾ.ಬಿ.ವಿ.ಮಲ್ಲಾಪುರವರು ತಿಳಿಸಿರುವರು. ['ಸಂಶೋಧನೆ' ಸಂ.ಲಕ್ಷಣ ತೆಲಗಾವಿ] ಹತ್ತನೆಯ ಶತಮಾನದ ಕೊನೆಗೆ ಅಥವಾ ಅದಕ್ಕೂ ತುಸು ಮೊದಲು ಸಿಂಹ ಪರಿಷತ್ತಿನ ಸದಸ್ಯರು ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿ ಸ್ಥಿರವಾಗಿ ನೆಲೆಸಿದರು.

ಶಾಸನಗಳಲ್ಲಿ ಸಿಂಹಪರಿಷತ್ತಿನ ಕರ್ನಾಟಕ ಶಾಖೆಯ ಯತಿಗಳ ಪರಂಪರೆ

ಮಲೆಯಾಳ

ಜ್ಞಾನೇಶ್ವರ	ಲಕುಲೇಶ್ವರ (೧೦೭೧ ಹೂವಿನಹಡಗಲಿ)	ಚಿಕ್ಕದೇವ
ಸೋಮೇಶ್ವರ(ಮೋರೆಗೇರಿ)	ಗೌಳದೇವಮಲೆಯಾಳಜ್ಞಾನರಾಸಿ	ಈಶಾನರಾಸಿ(೧೦೭೭)
ಶಾಂತರಾಸಿ	ಧರ್ಮರಾಸಿ(೧೧೯೫ ಮನಗೋಳಿ)	ಜ್ಞಾನರಾಸಿ(೧೧೮೯ಐವೂರ
ಕಳೇಶ್ವರ (೧೧೯೩ಹಲಗೊಂದಿ)		೧೧೭೬ ಇಂಗಳೇಶ್ವರ)

೩.೩ ಕಿಟ್ಟಗಾವಿ ಸಂತತಿ

ಕಾಳಾಮುಖ ಪರಂಪರೆಯ ಕಿಟ್ಟಗಾವಿ ಸಂತತಿಯ ಮೊಟ್ಟಮೊದಲ ಉಲ್ಲೇಖ ಕ್ರಿಶ ೧೦೩೯ ರ ಬಳ್ಳಿಗಾವೆ ಶಾಸನದಲ್ಲಿದೆ. ಪರ್ವತಾವಳಿಯ ಕಾಳಾಮುಖರಗಣ್ಣ . . . ಕಿಟ್ಟಗಾವಿಸನ್ತತಿ ಇದು ಪರ್ವತಾವಳಿಯ ಮೊದಲಶಾಸನವೂ ಆಗಿದೆ. ಕಿಟ್ಟಗಾವಿ ಎಂಬ ಹೆಸರು ಬರಲು ಕಾರಣ ಶಂಭುಲಿಂಗ ಎಂಬ ಬ್ರತಿಪನ ದೇಹಕ್ಕೆ ಹಿಡಿದಿದ್ದ ಧಾತುವಿನ ಕಿಟ್ಟವು ಅವನ ತಪಃ ಪ್ರಭಾವಕ್ಕೆ ಆವಿ ಇಟ್ಟಂತಾಗಿ ಇಳಿಯಲದುವೇ ಕಿಟ್ಟಗಾವಿಯಾಯಿತು. ಎಂಬ ಅರ್ಥದಪದ್ಯ ಶಾಸನದಲ್ಲಿ 'ಆ ಮುನೀಶ್ವರನ ಗುರುಕುಲ ಪ್ರಭಾವಮೆನ್ತೆನೆ ಧೃತತನು ಧಾತು ಕಿಟ್ಟಮಿಳಿಯಲ್ತದೂಷ್ಮೆಗೆ ಕಿಟ್ಟಗಾವೆ ಸನ್ತತಿಯದು ಪರ್ಬ್ಬತಾವಳಿಯೆನಿಪ್ಪುದು. ನಿಶ್ಚಳವೃತ್ತಿಯಿಂ ನಿಯಾಮಿತ ನಿಯಮೋತ್ಥಕಾಳಮುಖದಿಂದಮೇ ಕಾಳಮುಖತ್ವಮೊಪ್ಪೆ ಶಕ್ತ್ಯತಿಶಯ ಶಕ್ತಿಪರ್ಷೆಯ ಮೃತೇಶಮುನಿಶನೊಳೊಪ್ಪಿ ತೋರುಗಂ' [ಎಸ್.ಐ.ಐ ಸಂ ೧೮, ಶಾ.ಸಂ ೨೯೫] ಈ ಪರಂಪರೆಯಲ್ಲಿ ಶ್ರೀಕಂಠ ಎಂಬ ಮುನಿ ಕರ್ನಾಟಕದವನಿರಬಾರದೇಕೆ? ಎಂಬ ಸಂಶಯ ವ್ಯಕ್ತಪಡಿಸುತ್ತ ಕಿಟ್ಟಗಾವಿ ಸಂತತಿಯಲ್ಲಿ ಮತ್ತು ಮೂವರ ಕೋಣೆ ಸಂತತಿಯಲ್ಲಿ ಶ್ರೀಕಂಠ

ಎಂಬ ಹೆಸರು ಕಂಡುಬರುತ್ತದೆ. ಫಿಲಿಯೋಜಾ ವಸುಂಧರಾ.ಕರ್ನಾಟಕದಲ್ಲಿ ಲಾಕುಳಶೈವ ಜಕ್ಕಣಾಚಾರ್ಯರು, ಪುಟ.೪೧]

ಕಿಟ್ಟಗಾವಿ ಸಂಬಂಧಿ ಗಂಗರಾಸಿ ಭಟ್ಟಾರಕರ ಶಿಷ್ಯ ಸುರೇಶ್ವರ ಪಂಡಿತರನ್ನು ವರ್ಣಿಸಿರುವುದು ಕ್ರಿ.ಶ ೧೦೫೪ ರ ಕೊತ್ತಪಲ್ಲಿ ಶಾಸನ. ಕ್ರಿ.ಶ ೧೦೬೯ರ ಶಿವಪುರ ಶಾಸನ ಇವೆರಡೂ ಆ ಪ್ರದೇಶದ ಕರ್ನೂಲ ಜಿಲ್ಲೆಯವಾಗಿವೆ. ರಾಯಚೂರು ಜಿಲ್ಲೆಯ ಮೊಸಂಗಿ (ಮಸ್ಕಿ) ಯ ಬ್ರಹ್ಮೇಶ್ವರದಾಚಾರ್ಯ ಗಂಗರಾಸಿ ಭಟ್ಟಾರಕರ ಶಿಷ್ಯ ಸುರೇಶ್ವರ ಪಂಡಿತನೆಂದೂ, ಕಿಟ್ಟಗಾವಿ ಸಂಬಂಧಿಯೆಂದು ಬಣ್ಣಿಸಿದೆ ನಂತರದ ಪರಂಪರೆ ರಟ್ಟಿಹಳ್ಳಿಯಲ್ಲಿ ಕಂಡುಬರುತ್ತದೆ.

ಕಿಟ್ಟಗಾವಿಸಂತತಿಯಲ್ಲಿ ಬಂದಿರುವ ಮೂರುಜಾವಿ ಬಹುಪ್ರಸಿದ್ಧವ್ಯಕ್ತಿ ಎಂದು ತೋರುತ್ತದೆ. ಕಿಟ್ಟಕ್ಕೆ + ಆವಿ ತನುವಿಗೆ ಹಿಡಿದ ಧಾತುಗಳ ಕಿಟ್ಟ ತಪಃ ಪ್ರಭಾವಕ್ಕೆ ಆವಿಯಾಗಿ ಹೋದದ್ದರಿಂದ ಅದು ಕಿಟ್ಟಗಾವಿಯಾಯಿತು. ರಟ್ಟಿಹಳ್ಳಿಯಲ್ಲಿರುವ ಈ ಸಂತತಿಗೂ ಇಲ್ಲಿರುವ ಮಠದ ಹೆಸರಿಗೂ ಸಂಬಂಧವಿರುವ ಬಗ್ಗೆ ಸಂಶಯ ಮೂಡುತ್ತದೆ. ಕಾರಣ ಕಬ್ಬಿಣಕಂಥಿಮಠ, ಕಂಥಿಸು=ಕರಗಿಸು, ಹದಗೊಳಿಸು. ಕಬ್ಬಿಣಕರಗಿಸುವ, ಕಬ್ಬಿಣದ ಸಲಕರಣೆಗಳನ್ನು ತಯಾರಿಸುವ ಪ್ರದೇಶವೇಕಾಗಿರಬಾರದು? ಕಾರಣ ಅನತಿದೂರದಲ್ಲಿರುವ ಶಿರಗಂಬಿ, ಇಂಗಳಗೊಂದಿ ಗ್ರಾಮಗಳ ಹೆಸರುಗಳನ್ನು ಗಮನಿಸಿದರೆ ಕಬ್ಬಿಣದ ಕೆಲಸನಡೆದಿರುವ ಬಗ್ಗೆ ತಿಳಿದುಬರುತ್ತದೆ. ಡಾ.ಭೋಜರಾಜ ಪಾಟೀಲರು ಶಿರಗಂಬಿ ಎಂದರೆ ಕಬ್ಬಿಣ ನಿಕ್ಷೇಪವಿರುವ ನೆಲೆ ಎಂದು, ಇಂಗಳಗೊಂದಿ ಎಂದರೆ ಸ್ವಲ್ಪೇ ವಿಸ್ತಾರ ಪ್ರದೇಶದಲ್ಲಿ ತಾಮ್ರದ ನಿಕ್ಷೇಪವಿರುವ ಅದಿರಿನ ಶುದ್ಧೀಕರಣ ನಡೆದ ಊರು ಎಂದು ಗ್ರಾಮನಾಮ ನಿಷ್ಪತ್ತಿ ನಿರ್ಣಯಿಸಿದ್ದಾರೆ. [ಪಾಟೀಲ ಭೋಜರಾಜ, ಹಿರೇಕೆರೂರು ತಾಲೂಕು ಗ್ರಾಮನಾಮ ಅಧ್ಯಯನ, ಪುಟ.೧೮೧,೨೯] ಸತಗಿಹಳ್ಳಿ ಬೂದಿಮಠ ಎಂಬುದು ಸಹಿತ ಇದಕ್ಕೆ ಸಾಕ್ಷೀಭೂತವಾಗಿವೆ. ಕಿಟ್ಟವೆಂದರೆ ಕಬ್ಬಿಣ ಬಳಸಿ ಉಳಿದ ಅನುಪಯುಕ್ತ ವಸ್ತುವೇ ಕಿಟ್ಟ ಈ ಊರಿನಲ್ಲಿ ಕಬ್ಬಿಣ ತಯಾರಿಕೆಯ ಕುಲುಮೆಗಳಿದ್ದು ಅವುಗಳಿಂದ ಅಪಾರ ಪ್ರಮಾಣದ ಕಿಟ್ಟದ ಅವಶೇಷಗಳು ಉಂಟಾಗುತ್ತಿರಬೇಕು. ಇದೇ ಹಿನ್ನೆಲೆಯಲ್ಲಿ ಕಿಟ್ಟಗಾವಿ ಸಂತತಿಯೆಂದು ಹೀಗೆ ಕರೆದಿರುವ ಸಾಧ್ಯತೆಗಳಿವೆ. ಈ ಕಿಟ್ಟದ ಹಳ್ಳಿಯೆ ಕಿಟ್ಟಗಾವಿ ಸಂತತಿಯ ಮೂಲ ಕೇಂದ್ರವಾಗಿರಬಹುದು ಎಂಬ ಹೇಳಿಕೆ ಸಮಂಜಸವೆನಿಸುವುದಿಲ್ಲ. ಕ್ಷೇತ್ರ ಕಾರ್ಯ ಕೈಗೊಂಡಾಗ ಈ ಹೆಸರಿನ ಕುರಿತು ಒಂದು ಐತಿಹ್ಯ ಹೀಗಿತ್ತು, ಮದಗದ ಕೆರೆಯನ್ನು

ತೆಗೆಯಿಸುವ (ಕಟ್ಟಿಸುವ) ಸಂದರ್ಭದಲ್ಲಿ ಕೆರೆಯ ಕೆಲಸಕ್ಕೆ ಉಪಯೋಗಿಸಿದ ಹಾರೆ, ಗುದ್ದಲಿ, ಸಲಾಕೆ ಮುಂತಾದವುಗಳನ್ನು ಚೂಪುಗೊಳಿಸುವ ಕೆಲಸ ಕೆರೆಯಬಳಿ ಕುಲುಮೆಯಲ್ಲಿ ನಡೆಯುತ್ತಿತ್ತು, ಆಗ ಕಬ್ಬಿಣಕ್ಕೆ ಬಡಿಯುವಾಗ ಅಥವಾ ಇನ್ನಾವುದೊ ಸಂದರ್ಭದಲ್ಲಿ ಕಿಟ್ಟಹಾರಿ ಬಂದು ಬಿದ್ದಿತು. ಹಾಗಾಗಿ ಅದು ಕಿಟ್ಟದಹಳ್ಳಿಯಾಗಿದೆ ಎಂಬ ಪ್ರತೀತಿ ಇಂದಿಗೂ ಇದೆ ಅದು ಮದಗದ ಕೆರೆಯ ಕೆಳಗಡೆಇರುವ ಊರಾಗಿರುವುದು. ಅಲ್ಲಿಂದಲೇ ಕಿಟ್ಟಗಾವಿ ಸಂತತಿ ಆರಂಭವಾಯಿತೆನ್ನುತ್ತಾರೆ. ಆದರೆ ಅದು ಅತೀ ಚಿಕ್ಕಹಳ್ಳಿಯಾಗಿರುವುದು ಯಾವುದೇ ಅವಶೇಷಗಳು ಲಭಿಸುವುದಿಲ್ಲ. ಕ್ರಿ.ಶ ೧೦೩೯ ಬಳ್ಳಿಗಾವೆ ಶಾಸನದಲ್ಲಿ ಕಿಟ್ಟಗಾವೆಸಂತತಿಯ ಉಲ್ಲೇಖಿತ ಮೊದಲಶಾಸನವಾಗಿದೆ. ನಂತರ ಕ್ರಿ.ಶ ೧೧೭೪ರ ಶಾಸನದಲ್ಲಿ ಕಿಟ್ಟಗಾವಿಯ ಸಂತತಿಯ ಉಲ್ಲೇಖ ಲಭಿಸುತ್ತದೆ. ಈ ಮಧ್ಯ ಸಂತತಿಯ ಉಲ್ಲೇಖ ಲಭಿಸದಿರುವುದು ಏಕೆ? ಎಂಬುದು ತಿಳಿದು ಬಂದಿಲ್ಲ. ಅಲ್ಲದೆ ಕಿಟ್ಟದಹಳ್ಳಿ ಶಿಕಾರಿಪುರ ತಾಲೂಕಿನದು. ರಟ್ಟಿಹಳ್ಳಿಯಿಂದ ಸುಮಾರು ಹದಿನೈದು ಕಿ.ಮೀ ಅಂತರದಲ್ಲಿರುವುದು ಕಂಡುಬರುತ್ತದೆ. ಹಾಗಾಗಿ ಈ ಕಾಳಾಮುಖರ ಸಂತತಿಗೆ ಕಿಟ್ಟಗಾವಿ ಸಂತತಿ ಎಂದು ಪರಿಗಣಿಸಬಹುದಾಗಿದೆ. ಹಾವೇರಿ ತಾಲೂಕು ಗುತ್ತಲ ಶಾಸನದಲ್ಲಿ [ಎಸ್.ಐ.ಐ. ಸಂ ೧೮, ಶಾ.ಸಂ ೨೯೭, ಕ್ರಿ.ಶ ೧೧೮೯] 'ಕಿಟ್ಟದ ಕಿಟ್ಟಗಾವೆ ಸಂತತಿ ಪರ್ವತಾವಳಿ ಬುಧಸ್ತುತಂ ಕಾಲಮುಖಾನ್ವಯಂ ಜಗಂನುತಗುರುವಂಶಲಂಬವೆನೆ.......... ದೇವರ ಪ್ರತಿಷ್ಠೆಯ ಮಹೋತ್ಸವದೊಳಾದೇವರ ರಂಗಭೋಗಕ್ಕೆ ರಾಜಗುರು ಕಲ್ಯಾಣಶಕ್ತಿ ದೇವರ ಕಾಲಂಕರ್ಚಿ' ದಾನ ನೀಡಿದ ಮಾಹಿತಿಯಿದೆ. ಕಿಟ್ಟಗಾವಿ ಗುರುಗಳ ಪ್ರಭಾವ ಹರಳಹಳ್ಳಿಯ ಗುತ್ತರು ಮತ್ತು ಕದಂಬರ ಮನೆತನದ ಮೇಲಿರುವುದನ್ನು ಕಾಣುತ್ತೇವೆ.

ಇಲ್ಲಿಯ ಹರಳಳ್ಳಿಯ ಇನ್ನೊಂದು ಶಾಸನದಲ್ಲಿ [ಎಸ್.ಐ.ಐ. ಸಂ ೧೮, ಶಾ.ಸಂ ೫೧೧ ಕ್ರಿ.ಶ ೧೧೮೮] 'ಧರಣೀಶಂ ಬೆಸಗೊಳ ಸದ್ಗುರುವಂ ಸತ್‌ಕ್ಷೇತ್ರವಂ ಸುಸಂಗ ಕೇಳ್ದಂ ಪರಮೋತ್ಸವದಿಂದಗಬಾವನನಂ ಮೆಚ್ಚಿಸುವ ಕಾಳಮುಖಯತತಿಯೋಳ್॥ ಸವನಿಸಿದ ಶಕ್ತಿಪರುಷೆಯೊಳವನೀನು ಕಿಟ್ಟಗಾವೆಸನ್ತತಿಳ್ತೋಳುವಪುಂ' ಎಂಬ ಉಲ್ಲೇಖದೊಂದಿಗೆ ಶ್ರೀಮದ್ರಾಜಗುರು ಕಲ್ಯಾಣಶಕ್ತಿ ದೇವರ ಶ್ರೀಪಾದಪದ್ಮಂಗಳ ಪೂಜಿಸಿಧಾರಾಪೂರ್ವಕವಾಗಿ ಶ್ರೀ ಸ್ವಯಂಭು ಸೋಮನಾಥ ದೇವರ ವಿಕ್ರಮೇಶ್ವರ ಗುತ್ತೇಶ್ವರ ದೇವತಾ ಪ್ರತಿಷ್ಠಾತಿಶಯದ ತ್ರಿಕೂಟದ ಮಾಟಕ್ಕೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ದೇವರ ರಂಗಭೋಗಕ್ಕೆ ದಾನ ಕೊಟ್ಟ ಉಲ್ಲೇಖವಿದೆ.

ರಟ್ಟಹಳ್ಳಿಯ ಶಾಸನದಲ್ಲಿ "ಕಾಳಾಮುಖವಾದಿಯಾಗೆ ಸಮಾಳಂಕ್ರಿತ ಸೂತ್ರ ಧಾತು ಪರ್ಬ್ಬತಾವಳಿಯೆಂದಿತಾಳೋಕಿಸೆ ಕಿಟ್ಟಗಾವೆಯನ್ವಿತದೊಳಂ ಕಾಳಾಮುಖ ಶ್ರೀವಿಳಾಸಮಣಿಮುಕುರರುಂದಂ ಎನೆ ವಾಮಶಕ್ತಿಯತಿ ಪುಣ್ಯ ನಿಧಾನಂ. . . . ಎಂದು ಸಂತತಿಯ ಪರಂಪರೆಯ ವಾಮಶಕ್ತಿ – ವಾದಿರುದ್ರಶಕ್ತಿ – ಶ್ರೀಕಂಠ – ಕ್ರಿಯಾಶಕ್ತಿ – ಸರ್ವೇಶ್ವರ – ಕಲ್ಯಾಣಶಕ್ತಿ – ಮೂಜುಜಾವಿದೇವ – ಲಕುಲೀಶ್ವರ – ಮೂಜುಜಾವಿದೇವ ಯತಿಗಳ ಪರಂಪರೆಯ ವಂಶಾವಳಿಯಿದೆ.

"ದೊಡೆಯರು ಬ್ರಹ್ಮಚರ್ಯವಿಲ್ಲದೊಡವರಂ ಮಠದಿಂ ಪೊರಮಡಿಸುವುದು ಮಠವಿದು ಕಿಟ್ಟಗಾದಕಣಿ ಎನಿಪಂ ಬ್ರಹ್ಮಚರ್ಯವಯ್ಯಾಚಾರ್ಯ್ಯಾಗ್ರಣಿ ಎನಿಪಂ ಸಮೆಯ. . . . . ಎಂದು ಉಲ್ಲೇಖವಿರುವ ವಿವರವನ್ನು ಕಾಣುತ್ತೇವೆ. ಶಕ್ತಿಪರಿಷೆಯನ್ನು ಶಸ್ತಿಪರಿಷೆ, ಶಕ್ತಿಪರಿಷತ್, ಶಕ್ತಿಹರಿಪೆ ಎಂದು ಕರೆದಿರುವ ಕನಿಷ್ಠ ಮೂರು ಕನ್ನಡ ಶಾಸನಗಳಿವೆ. ಈ ಪಂಥವನ್ನು ಬಹುಷ ಮೊದಲು ಉಲ್ಲೇಖಿಸುವುದು ಇತ್ಯಾದಿ, ಕೃಷ್ಣನ ಹಾವೇರಿ ಜಿಲ್ಲೆಯ ಅಣಜಿಶಾಸನ ಅಯಪಗಮುಂಡನು ಕಟ್ಟಿಸಿದ ದೇವಾಲಯದ ದತ್ತಿ ರಕ್ಷಿಸುವ ಹೊಣೆಯನ್ನು ಶಕ್ತಿಪರಿಸೆ ತಂಣಂಗೆ ವಹಿಸಿದ್ದನ್ನು ಇದು ತಿಳಿಸುತ್ತದೆ. ಶಿವಮೊಗ್ಗಾ ಜಿಲ್ಲೆಯ ಓಟೂರಿನ ೯೩೯ ರ ಕನ್ನರದೇವನ ಶಾಸನದಲ್ಲಿ 'ಶಕ್ತಿಹರಿಪೆ'(ಪರಿಷೆ)ಯ ಧರ್ಮಗುರು ಈಶ್ವರಯ್ಯನ ಪ್ರಸ್ತಾಪವಿದೆ. ಆದರೆ ಇಲ್ಲಿನ ಶಿವನನ್ನು ಹೆಸರಿಸಿಲ್ಲ ಕೇಶವಾದಿತ್ಯನನ್ನು ಹೆಸರಿಸಲಾಗಿದೆ.[(ಮೊಸಕಶಾ)೧೮೮, ಅದೇ೧೯೩] ಬಿಜಾಪುರ ಜಿಲ್ಲೆಯ ಸಾಲೊಟಗಿಯಲ್ಲಿ ಮುಮ್ಮಡಿ ಕೃಷ್ಣನ ಕಾಲದಲ್ಲಿ ಬರೆಸಿದ ದ್ವಿಭಾಷಾಶಾಸನದಲ್ಲಿ 'ಶಕ್ತಿ ಪರಿಷತ್ ಪರಿಷಜ್ಜನ' ದ ಪ್ರಸ್ತಾಪವಿದೆ.(ರಾ.ಶಾಸನ ೨೮೭) ಈ ಮೂರು ನಿದರ್ಶನಗಳ ಹತ್ತನೇ ಶತಮಾನಕ್ಕೆ ಸೇರಿವೆ ಎನ್ನುತ್ತಾರೆ. [ಶೆಟ್ಟರ ಷ.; ಹಳಗನ್ನಡ ಲಿಪಿ,ಲಿಪಿಕಾರ,ಲಿಪಿ ವ್ಯವಸಾಯ, ಪು.೨೯೩] ಕಾಳಾಮುಖ ಪರಂಪರೆಯ ಶಕ್ತಿಪರಿಷೆಯ ಮೊದಲಶಾಸನ ಲಭಿಸಿದ್ದು ಬಳ್ಳಿಗಾವೆಯ ಪ್ರಭಾವಿತ ಪ್ರದೇಶ ಅಣಜಿಶಾಸನ ತನ್ನದೇಆದ ಮಹತ್ವಪಡೆದಿದೆ, ಕಾಳಾಮುಖರಲ್ಲರುವ ಕಿಟ್ಟಗಾವಿ ಸಂತತಿ, ಮೂವರುಕೋಣೆ ಸಂತತಿ, ಬೆಳ್ಳೆಸಂತತಿ, ಇಟ್ಟಿಗೆಸಂತತಿಗಳಿರುವುದು, ಸಿಂಗಪರಿಷೆಯ ಕುರಿತು ಶಾಸನಗಳಲ್ಲಿ ವ್ಯಕ್ತವಾಗಿರುವುದನ್ನು ಕಾಣುತ್ತೇವೆ.

ಅಧ್ಯಾಯ ೪

ಕಾಳಾಮುಖ ದೇವಾಲಯಗಳು ಮತ್ತು ಶಾಸನಗಳು

ಅಧ್ಯಾಯ – ನಾಲ್ಕು

ಕಾಳಾಮುಖ ದೇವಾಲಯಗಳು ಮತ್ತು ಶಾಸನಗಳು

೪.೧ ಹಾವೇರಿ ಜಿಲ್ಲೆಯಲ್ಲಿ ಕಂಡುಬರುವ ದೇವಾಲಯಗಳು

ಪ್ರಕೃತಿಯಲ್ಲಿರುವ ಜೀವಿಯಾದ ಮಾನವ ಪ್ರಬಲವಾದ ಶಕ್ತಿ ತುಂಬಿರುವ ಪ್ರಕೃತಿಯ ಮುಂದೆ ನಿಸ್ಸಹಾಯಕನಾದ ಮನುಷ್ಯ ಅನೇಕ ಪ್ರಕೋಪಗಳಿಗೆ ಬೆರಗಾದ, ಅವುಗಳನ್ನು ಒಲಿಸಿಕೊಳ್ಳಲು ಭಕ್ತಿಯಿಂದ ಭಾವನಾತ್ಮಕವಾಗಿ ಪೂಜಿಸಲೆತ್ನಿಸಿದನು. ನದಿ, ಬೆಟ್ಟ, ಮರ, ಗುಡುಗು, ಮಿಂಚು, ಸೂರ್ಯ, ಚಂದ್ರ, ಮಳೆ, ಗಾಳಿ ಮುಂತಾದವುಗಳು ಪೂಜಾರ್ಹವಾದವು. ನಂತರ ಅವುಗಳಿಗೆ ಮೂರ್ತರೂಪ ನೀಡುತ್ತ ಮುನ್ನಡೆದನು ವಿವಿಧ ರೀತಿಯಲ್ಲಿ ಧಾರ್ಮಿಕ ಆಚರಣೆಗಳನ್ನು ಅಳವಡಿಸಿಕೊಂಡನು ಆ ಮೂರ್ತ ರೂಪಗಳಿಗೆ ರಕ್ಷಣೆಯನ್ನು ನೀಡುತ್ತ ಬಂದಿರುವ ತಾನು ಅನುಸರಿಸುವ ಎಲ್ಲವೂಗಳನ್ನು ದೇವರಿಗೆ ಅನ್ವಯಿಸಲು ಆರಂಭಿಸಿದನು. ಅವನಿಗೊಂದು ಮನೆ (ದೇವಾಲಯ) ಸಂಗೀತ, ನೃತ್ಯ, ಆಹಾರ ವಿಹಾರ ಇತ್ಯಾದಿ

ಮೂಲದಲ್ಲಿ ಗುಹಾಂತರ ದೇವಾಲಯಗಳಿದ್ದು ನಂತರ ಕಟ್ಟಿಗೆ, ಮಣ್ಣಿನ ಬಳಕೆಯಾಯಿತು ನಂತರ ಕಲ್ಲುಗಳ ಬಳಕೆ ಬಂದಿತು. ಕಟ್ಟಿಗೆಯ ಮೇಲೆ ಚಿತ್ರಬಿಡಿಸುವ ಕುಶಲಕರ್ಮಿ ಕಲ್ಲಿನಲ್ಲಿಯೂ ಕೆತ್ತಲೆತ್ನಿಸಿ ಸುಂದರಗೊಳಿಸಿದನು. ದೇವಾಲಯ ನಿರ್ಮಾಣದ ಮಹತ್ಕಾರ್ಯದ ಹಿಂದಿನ ಉದ್ದೇಶಗಳು ಹಲವಾರು ಅದರಲ್ಲಿ ಪ್ರಮುಖವಾದುದು ಧರ್ಮ. ದೇವಾಲಯ ನಿರ್ಮಾಣ ಮಾಡುವುದರಿಂದ ವಂಶಪಾರಂಪ'ರ್ಯವಾಗಿ ಮೋಕ್ಷ ಲಭಿಸುತ್ತದೆಂಬ ಭಾವನಾತ್ಮಕ ಸಂಬಂಧವಿತ್ತು. ದೇವಸ್ಥಾನ ನಿರ್ಮಾಣಗೊಂಡರಷ್ಟೇ ಸಾಲದು ಪ್ರತಿಷ್ಠೆಗೊಂಡ ದೇವರ ಪೂಜೆ ಪುನಸ್ಕಾರ ನಿರಂತರ ನಡೆಯುವಲ್ಲಿ ವ್ಯವಸ್ಥೆ ಮಾಡುವುದು ಜವಾಬ್ದಾರಿಯುತ ಕಾರ್ಯವಾಗಿದೆ ಈ ಕಾರ್ಯದಲ್ಲಿ ಅನೇಕ ದೇವಾಲಯಗಳ ಸ್ಥಾನಾಚಾರ್ಯರಾಗಿರುವ ಕಾಳಾಮುಖರ ಪಾತ್ರ ಪ್ರಮುಖವಾದದ್ದು.

ಕನ್ನಡ ಸಂಸ್ಕೃತಿಗೆ ಲಾಕುಳ ಶೈವರ ಮುಖ್ಯ ಕೊಡುಗೆಗಳು ಎರಡು. ಒಂದು ಹಳ್ಳಿಹಳ್ಳಿಗಳಲ್ಲಿ ಕಂಡುಬರುವ ಶಿವ ದೇವಸ್ಥಾನಗಳು ಮತ್ತೊಂದು ಸಂಸ್ಕೃತ ಭಾಷೆಯಲ್ಲಿ ನಿಕ್ಷಿಪ್ತವಾಗಿದ್ದ ಜ್ಞಾನದ ಬೆಳಕು ಆರದಂತೆ ನೋಡಿಕೊಂಡದ್ದು. ಇವರು ಬಹುದೊಡ್ಡ

ದೇವಸ್ಥಾನ ನಿರ್ಮಾಪಕರು. ತಾವು ಕಟ್ಟಿಸಿದ ಅಥವಾ ತಮಗಾಗಿ ಕಟ್ಟಿಸಿದ ದೇವಸ್ಥಾನದಲ್ಲಿ ತಾವು ವಾಸಿಸುತ್ತ ಅಲ್ಲಿ ತಮ್ಮ ವೈಯಕ್ತಿಕ ಆಧ್ಯಾತ್ಮಿಕ ಸಾಧನೆಯ ಜೊತೆಗೆ ವಿದ್ಯಾಪ್ರಸಾರದ ದೊಡ್ಡ ಹೊಣೆಯನ್ನು ಹೊತ್ತಿದ್ದರು. ಆ ಕಾಲದಲ್ಲಿ ದೇವಸ್ಥಾನವೇ ಮಠವಾಗಿ, ಮಠವೇ ಶಾಲೆಯಾಗಿತ್ತು. ಕೋಲಾರಜಿಲ್ಲೆಯ ಅವನಿಕ್ಷೇತ್ರದ 'ಸ್ಥಾನ' ವನ್ನು ನಲವತ್ತು ವರ್ಷ ಆಳಿ, ಐವತ್ತು ದೇಗುಲಗಳನ್ನು ಎರಡು ದೊಡ್ಡ ಕೆರೆಗಳನ್ನು ಕಟ್ಟಿಸಿ 'ಕಲಿಯುಗ ರುದ್ರ ' ಎಂದು ಪ್ರಸಿದ್ದನಾದ ತ್ರಿಭುವನ ಕರ್ತಾರ ದೇವರು ಕ್ರಿಶ ೯೩೧ ರಲ್ಲಿ ರುದ್ರಲೋಕ ಪ್ರಾಪ್ತರಾದ ವಿಷಯ ಶಾಸನ [ಎಕ ೧೦ ಎಂಬಿ ೬೫, ೯೩೧ ಎ.ಡಿ] ವೊಂದರಲ್ಲಿ ಬಂದಿದೆ. ಕಾಳಾಮುಖ ಶೈವರಿಗೆ ದೇವಸ್ಥಾನ ನಿರ್ಮಾಣದಲ್ಲಿದ್ದ ಆಸಕ್ತಿಗೆ ಈ ಶಾಸನ ಅತ್ಯುತ್ತಮ ನಿದರ್ಶನ [ಚಿದಾನಂದ ಮೂರ್ತಿ ಎಂ.; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. ೧೫೪]

ದೇವಾಲಯ ನಿರ್ಮಾಣದ ಹಿಂದಿರುವ ಸದಾಶಯವನ್ನು ಶಾಸನಗಳ ಆಧಾರದಿಂದ ಹೀಗೆ ವಿವರಿಸುತ್ತ.

ಪರಿಕಿಪೊಡೆ ಸಕಳ ಹೋಮಾ
ದ್ವರ ಜಪನಿಯಮಗಳಿಂದಾಗದ ಪುಣ್ಯಂ
ದೊರೆಕೊಳ್ಳುಂ ಸಲೆ ಕೇಳುವ
ಪರಮೇಶ ಪ್ರತಿಕೃತಿ ಪ್ರತಿಷ್ಠಾವಿಧಿಯಿಂ

ಯಾವ ಹೋಮ, ಜಪ ನಿಯಮಗಳಿಂದ ದೊರೆಯದ ಪುಣ್ಯ ಒಂದು ಲಿಂಗ ಪ್ರತಿಷ್ಠೆಯಿಂದ ದೊರೆಯುತ್ತದೆ. ಅಲ್ಲದೇ

ಯೋ ಲಿಂಗಂ ಸ್ಥಾಪಯೇದೇಕಂ ವಿಧಿಪೂರ್ವಕಂ ಸದಕ್ಷಿಣಂ
ಸರ್ವಾಗಮೋದಿತಂ ಪುಣ್ಯಂ ಕೋಟಿ ಕೋಟಿ ಗುಣಂ ಲಭೇತ್

ಲಿಂಗ ಪ್ರತಿಷ್ಠೆಯಿಂದ ಕೋಟಿ ಕೋಟಿ ಪುಣ್ಯ ದೊರಕುತ್ತದೆ. ಅಲ್ಲದೆ ತನ್ನ ಹೆಸರಲ್ಲಿ ಲಿಂಗ ಪ್ರತಿಷ್ಠೆ ಮಾಡಿದರೆ ಲಿಂಗವೇ ತಾನಾಗುವನೆಂಬ ಆಸೆ ಹಚ್ಚುವ ಮೂಲಕ ಭಕ್ತಿಯನ್ನು ಉನ್ನತಸ್ಥಾನಕ್ಕೇರಿಸಿ ಧಾರ್ಮಿಕವಾಗಿ ವ್ಯಾಪಿಸುವ ಮೂಲಕ ಇಡೀ ಕರ್ನಾಟಕವನ್ನು ತಮ್ಮಲ್ಲಿ ಅಡಕ ಮಾಡಿಕೊಂಡರು.[ಮನ್ವಾಚಾರ, ಕಲವೀರ.; ಲೇಖನ; ಅಬಲೂರು ಮತ್ತು ಕಾಳಾಮುಖ ಪರಂಪರೆ, ಗೌಡರ ಎಸ್ ಪಿ.;(ಸಂ) ಕಣಜ, ಪುಟ. ೧೦)

ಮಿಶ್ರಶೈವ ಇವರು ಎಲ್ಲ ದೇವ, ದೇವತೆಗಳನ್ನು ಪೂಜಿಸುವರು. ಇವರಿಗೆ ಶಿವ ಪ್ರಮುಖ. ಅನಂತರ ವಿಷ್ಣು, ಬ್ರಹ್ಮ, ಸೂರ್ಯ, ಗಣೇಶ, ಸ್ಕಂದ, ಶಕ್ತಿದೇವತೆಗಳನ್ನು ಆರಾಧಿಸುವರು. ಆದ್ದರಿಂದ ಅವರಿಗೆ "ಅಂತಶ್ಶಾಕ್ತಃ ಬಹಿಶೈವಃ ಸಭಾಮಧ್ಯೇ ಚ ವೈಷ್ಣವ' ಎಂದರೆ ಆಂತರ್ಯದಲ್ಲಿ ಶಕ್ತಿಯನ್ನು ಪೂಜಿಸುತ್ತಾ ಹೊರಗೆ ಶಿವನನ್ನು ಹಾಗೂ ಸಭೆಗಳಲ್ಲಿ ವಿಷ್ಣುವನ್ನು ಹೊಗಳುವುದರಿಂದ ಅವರಿಗೆ ಮಿಶ್ರಶೈವರೆಂದು ಹೆಸರು ಬರುತ್ತದೆ. ಈ ಮಾತು ಶಿವ ಪುರಾಣದಲ್ಲಿಯೂ ಇದೆ. ಈ ಮಿಶ್ರಶೈವರೇ ಕರ್ನಾಟಕದಲ್ಲಿ ಕಾಲಾಮುಖ ಪಾಶುಪತರೆಂಬ ಹೆಸರಿನಿಂದ ಪ್ರಸಿದ್ಧರಾಗಿದ್ದರೆಂದು ಹೇಳಿದರೆ ತಪ್ಪೇನಿಲ್ಲ, ಯಾಕೆಂದರೆ ಈ ಕಾಲಾಮುಖ, ಪಾಶುಪತರು ಕಟ್ಟಿಸಿದ ದೇವಸ್ಥಾನಗಳು "ತ್ರೈಪುರುಷಾಲಯ" ಎಂದು ಹೆಸರುಗೊಂಡಿದೆ. ಈ ದೇವಸ್ಥಾನಗಳಲ್ಲಿ ಅದರಲ್ಲೂ ೧೧-೧೨ನೆಯ ಶತಮಾನಕ್ಕಿಂತ ಮೊದಲು ಕಟ್ಟಿದ ದೇವಾಲಯಗಳಲ್ಲಿ ಮಧ್ಯದಲ್ಲಿ ಶಿವ, ಆತನ ಆಚೆ ಈಚೆ ಬ್ರಹ್ಮ, ವಿಷ್ಣು ಅಥವಾ ಸೂರ್ಯ, ರಂಗಮಂಟಪದಲ್ಲಿ ಸಪ್ತಮಾತೃಕೆಯರು, ದುರ್ಗಾ, ಗಣೇಶ ಮುಂತಾದ ಮೂರ್ತಿಗಳಿರುತ್ತವೆ. ಆದ್ದರಿಂದ ಕಾಲಾಮುಖ ಪಾಶುಪತರು ಮಿಶ್ರಶೈವರೆಂದು ಅಭಿಪ್ರಾಯಿಸುತ್ತೇವೆ. [ಫಿಲಿಯೊಜಾ ವಸುಂಧರಾ.; ಕರ್ನಾಟಕದಲ್ಲಿ ಲಾಕುಳಶೈವ ಜಕ್ಕಣಾಚಾರ್ಯರು, ಪುಟ. ೧೦೦]

ಫ್ಯೂಡಾಲಿಜಂ ಪ್ರವರ್ಧಮಾಧನಕ್ಕೆ ಬಂದಾಗ ಹುಟ್ಟಿದ ದೇಗುಲಗಳಲ್ಲಿ ದೊರೆತನ ಪರ್ಯಾಯಸುಖ, ಸೌಲಭ್ಯಗಳನ್ನೇ ಕಾಣುತ್ತೇವೆ. ಸೂಳೆಯರು, ಅಂಗಭೋಗ ರಂಗಭೋಗ, ಆಡಂಬರದ ಮೆರವಣಿಗೆ, ಜಾತ್ರೆ ಮುಂತಾದವು ಪ್ರಾಚೀನ ಶಿಲ್ಪಿಗಳು ಮಾನವ ದೇಹದಿಂದ ಪ್ರೇರಿತರಾಗಿ ದೇಗುಲಗಳನ್ನು ಕಟ್ಟಲೆತ್ನಿಸಿದರು. ದೇಗುಲದ ಭಾಗಗಳಿಗೆ ಮಾನವ ದೇಹದ ಹೆಸರುಗಳೇ ಇವೆ. ಶಿಲ್ಪಶಾಸ್ತ್ರ ಗ್ರಂಥಗಳು ಇವನ್ನು ಸೂಚಿಸಿವೆ. ಪಾದುಕ, ಪಾದ, ಪ್ರಪಾದ, ಚರಣ, ಅಂಘ್ರಿ, ಜಂಘಾ, ಊರ್ಣ, ಕಟಿ, ಕುಕ್ಷಿ, ಪಾರ್ಶ್ವ, ಗಲ, ಗ್ರೀವ, ಕಂದರ, ಕಂಠ, ಶಿಖರ, ಶಿರಸ್, ಶೀರ್ಷ, ಮೂರ್ದ್ವ, ಮಸ್ತಕ, ಮುಖ, ವಕ್ತ್ರ, ಕೂಟ, ಕರ್ಣ, ನಾಸಿಕ, ಶಿಖಾ, ಇತ್ಯಾದಿ [ಹಿರೇಮಠ ಎಸ್ ಎಸ್.; ಕಾಳಾಮುಖದರ್ಶನ, ಪುಟ.೮೬] ಸುಮಾರು ಕ್ರಿಶ ೭ನೆಯ ಶತಮಾನದ ಆದಿಭಾಗದಲ್ಲಿ ದೇಗುಲ ನಿರ್ಮಾಣ ಪ್ರಾರಂಭವಾಗಿದೆ. ಪಲ್ಲವ ಮಹೇಂದ್ರವರ್ಮನ ಕಾಲ್ಕೆ ಕ್ರಿಶ ೬೧೦ ರಲ್ಲಿ ಲಕ್ಮೀತಾಯತನ ಗುಹೆಯಶಾಸನ ಬ್ರಹ್ಮ, ವಿಷ್ಣು, ಈಶ್ವರರ ಇಟ್ಟಗೆಯಿಲ್ಲದ, ಕಟ್ಟಿಗೆಯಿಲ್ಲದ, ಧಾತುವಿಲ್ಲದ ಗುಡಿಕಟ್ಟಿದ್ದಾಗಿ ಹೇಳಿದೆ. ಇದೇ ಮೊದಲ ಗುಹಾದೇವಾಲಯವಾಗಿದೆ. ಧಾರ್ಮಿಕ ಯಜ್ಞ ಯಾಗಗಳನ್ನು ನೆರವೇರಿಸಲು ಇಟ್ಟಗೆಗಳನ್ನು ಬಳಸಿ ಯಜ್ಞ ವೇದಿಕೆಗಳನ್ನು ನಿರ್ಮಿಸುತ್ತಿದ್ದರು [ಆಚಾರ್ಯ.ಪಿ.ಕೆ. ಹಿಂದೂ

ಆರ್ಕಿಟೆಕ್ಚರ್ ಇನ್ ಇಂಡಿಯಾ ಆಂಡ ಅಬ್ರಾಡ್, ಪುಟ. ೬೪] ವೇದಗಳಕಾಲ ಮತ್ತು ನಂತರದ ಕಾಲ ಘಟ್ಟಗಳಲ್ಲಿ ದೇವಾಲಯಗಳು ನಾಶವಾಗುವ ಮರ ಹಾಗೂ ಇಟ್ಟಿಗೆಗಳಿಂದ ನಿರ್ಮಾಣಗೊಂಡಿದ್ದವು ಎಂಬ ಅಭಿಪ್ರಾಯವಿದೆ. ವಿ.ರಾಘವೇಂದ್ರರಾವ್ ಅವರು ಸಿಂಧೂನದಿ ಬಯಲಿನ ನಾಗರೀಕತೆಯ ಕಾಲ ಮತ್ತು ವೇದ ಕಾಲಕ್ಕೆ ಮುಂಚೆಯೂ ದೇವಾಲಯಗಳು ಇದ್ದವು. ಆದರೆ ಅವು ನಾಶವಾಗುವ ಮರ ಹಾಗೂ ಇಟ್ಟಿಗೆಗಳಿಂದ ನಿರ್ಮಿತವಾಗಿ ಕ್ರಮೇಣ ನಶಿಸಿ ಹೋಗಿವೆ.ಎಂದು ಅಭಿಪ್ರಾಯಪಟ್ಟಿದ್ದಾರೆ. [ರಾಘವೇಂದ್ರ ವಿ, ಸೌತ ಇಂಡಿಯನ್ ಟೆಂಪಲ್ಸ್, ಕ್ವಾಜ.ಎಂ.ಎಸ್.ಸಂ೨೩ ಪುಟ. ೬೧]

ಸಿಂಧೂಜನರ ವೈಯಕ್ತಿಕ ಪೂಜಾಪದ್ಧತಿ ವೇದಕಾಲೀನರ ಸಾಮೂಹಿಕ ಆರಾಧನಾ ಪದ್ಧತಿಯೊಂದಿಗೆ ಸಮಾವೇಶಗೊಂಡು, ದೇವಾಲಯಗಳು ಮೈತಳೆದವು ಎನ್ನಬಹುದು. ಧರ್ಮದ ಹಿನ್ನೆಲೆಯಲ್ಲಿ ಬಹುಕಾಲದವರೆಗೂ ಉಳಿದುಬರುವಂತಹ ಕಟ್ಟಡಗಳನ್ನು ನಿರ್ಮಿಸಿದವರು ಅವೈದಿಕರಾದ ಬೌದ್ಧರು. ಈಗ ದೇವಾಲಯಗಳ ಹಿನ್ನೆಲೆಯಲ್ಲಿ ಉಳಿದು ಬಂದ ಕಟ್ಟಡಗಳೆಂದರೆ ಬೌದ್ಧಸ್ತೂಪಗಳಾಗಿವೆ. [ಕುಲ್ಕರ್ಣಿ ಡಿ.ಜಿ.; ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು, ಪುಟ. ೨]

ದೇವಾಲಯಗಳ ನಿರ್ಮಾಣ ಕುರಿತಂತೆ ಬೃಹತ್ ಶಿಲಾಯುಗದ ಕಾಲ ಸಮಾಧಿಗಳು ದೇವಾಲಯಗಳ ಮೂಲ ಎಂದು ಅಭಿಪ್ರಾಯಪಡುತ್ತಾರೆ. [ವೆಂಕಟರಮಣಯ್ಯ.ಎನ್, ಆನ್ ಎಸ್ಸೆ ಆನ್ ದ ಒರಿಜಿನ್ ಆಫ್ ದ ಸೌತ್ ಇಂಡಿಯನ್ ಟೆಂಪಲ್ಸ್ ಪುಟ.೮] ಎನ್.ವೆಂಕಟರಮಣಯ್ಯರ ತೀರ್ಮಾನವನ್ನು ಒಪ್ಪಿಕೊಳ್ಳಲು ಆಗುವುದಿಲ್ಲ ವ್ಯಕ್ತಿ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸುವ ಪದ್ಧತಿ ಅಪರೂಪವಲ್ಲ, ಸಮಾಧಿಗಳ ಮೇಲೆ ದೇವಾಲಯಗಳನ್ನು ನಿರ್ಮಿಸುವ ಪದ್ಧತಿ ಮಾತ್ರ ವಿರಳವೆಂದಿದ್ದಾರೆ.

ಕೆಲವು ಶಾಸನಗಳು ಹಾಗೂ ಪ್ರಾಚ್ಯವಸ್ತು ಅವಶೇಷಗಳ ಆಧಾರಗಳಿಂದ ಕ್ರಿ.ಪೂ ೧ನೇ ಶತಮಾನಕ್ಕಾಗಲೇ ದೇವಾಲಯ ನಿರ್ಮಾಣವಾಗಿರುವುದನ್ನು ಗಮನಿಸಬಹುದಾಗಿದೆ. ಇತ್ತೀಚಿಗೆ ದ್ವಾರಕೆಯ ದ್ವಾರಕಾದೀಶ ದೇವಾಲಯದ ಎದುರು ನಡೆದಿರುವ ಸಮುದ್ರ ಶೋಧನೆಯಲ್ಲಿ ದೊರೆತ ಹೂಜಿಯೊಂದರ ಮೇಲಿನ ಬರವಣಿಗೆಯು ಹರಪ್ಪೋತ್ತರ ಕಾಲಕ್ಕೆ ಸೇರಿದ್ದು 'ಮಹಾಗಚ್ಚ ಶಪಾ'(ಸಮುದ್ರರಾಜನೆ ರಕ್ಷಿಸು) ಎಂದಿರುವ ಶಾಸನದ ಕಾಲವನ್ನು ಕ್ರಿ.ಪೂ ೧ನೇ ಶತಮಾನದಿಂದ ಕ್ರಿ.ಶ ೯ ನೇಶತಮಾನದ ದೇವಾಲಯವೊಂದು ಸಮುದ್ರದ ಉಬ್ಬರದಿಂದ

ನಾಶವಾಗಿರಬಹುದೆಂದು ವಿದ್ವಾಂಸರು ಊಹಿಸಿದ್ದಾರೆ. [ಕುಲ್ಕರ್ಣಿ ಡಿ.ಜಿ.; ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು, ಪುಟ,೫] ಕರ್ನಾಟಕದಲ್ಲಿ ದೇವಾಲಯಗಳ ಪ್ರಾಚೀನತೆಯನ್ನು ಗಮನಿಸಿದರೆ ಕ್ರಿ.ಶ ಶಕದ ಆರಂಭದ ಶತಕದಲ್ಲಿ ಇಲ್ಲಿ ದೇವಾಲಯಗಳು ಇದ್ದವೆಂದು ಪ್ರಾಚ್ಯವಸ್ತು ಅವಶೇಷಗಳು ಮತ್ತು ಲಭ್ಯ ಶಾಸನಗಳಿಂದ ಸ್ಪಷ್ಟವಾಗಿ ಹೇಳಬಹುದು. ಗುಲ್ಬರ್ಗಾ ಜಿಲ್ಲೆಯ ಸನ್ನತಿಯು ಕ್ರಿಶ ೨ನೆಯ ಶತಮಾನದ ವೇಳೆಗಾಗಲೇ ಬೌದ್ಧರ ಮುಖ್ಯ ನೆಲೆಯಾಗಿತ್ತು. ಇಲ್ಲಿ ಅವಶೇಷಗಳು ದೊರೆತಿವೆ. [ಸುಂದರ ಅ.; ಎಕ್ಸವೇಶನ್ ಎಟ್ ಸನ್ನತಿ ೧೯೮೬–೮೭ ಪುರಾತತ್ವ ಸಂ ೧೭] ಇದು ಬೌದ್ಧರು ಎರಡನೆಶತಮಾನದಲ್ಲಿಯೇ ಇರುವುದನ್ನು ಸ್ಪಷ್ಟಪಡಿಸುತ್ತದೆ. ಗದಗ ಜಿಲ್ಲೆ ನರಗುಂದ ತಾಲೂಕಿನ ವಾಸನದಲ್ಲಿ ಶಾತವಾಹನ ದೊರೆ ವಾಶಿಷ್ಟ ಪುತ್ರ ಶ್ರೀ ಪುಳುಮಾಮಿಯ ಪ್ರಾಕೃತ ಶಾಸನವೊಂದು ದೂರೆತಿದ್ದು ಅದರಲ್ಲಿ ಪುಳುಮಾಮಿಯ 'ಚಂಡಶಿವ " ದೇವತಾಯತನವನ್ನು ನಿರ್ಮಿಸಿದನೆಂದು ಉಲ್ಲೇಖಸಿದೆ. ಈ ದೇವಾಲಯವು ಕರ್ನಾಟಕದಲ್ಲಿ ಈ ವರೆಗೆ ತಿಳಿದಿರುವ ಅತೀ ಪ್ರಾಚೀನ ಶೈವ ದೇವಾಲಯದ ಉಲ್ಲೇಖವಾಗಿದೆ ಎಂದಿದ್ದಾರೆ ಕಾರಣ [ಕುಲ್ಕರ್ಣಿ, ಡಿ ಜಿ.; ಪೂರ್ವೋಕ್ತ, ಪುಟ. ೭] ತಾಳಗುಂದದ ಪ್ರಣವೇಶ್ವರ ದೇವಾಲಯಕ್ಕಿಂತ ಪ್ರಾಚೀನತಮವಾಗಿದೆ.

ಅಂಕೋಲದ ಬಳಿ ಬೋಳೆಯಲ್ಲಿ ದೊರೆತ ಶಿವಲಿಂಗವು ಮೂರು ಭಾಗಗಳಿಂದ ಕೂಡಿದ್ದು (ಬ್ರಹ್ಮ ವಿಷ್ಣು ಮಹೇಶ್ವರ)ಬ್ರಹ್ಮಸೂತ್ರವನ್ನು ಹೊಂದಿರುವುದನ್ನು ಉಲ್ಲೇಖಿಸುತ್ತಾರೆ. [ಸುಂದರ ಅ, ಇಂಡಸ್ ಸರಸ್ವತಿ ಸಿವಿಲಿಝೆಶನ ಅರ್ಲಿ ಶೈವ ಕಲ್ಪ. ಶ್ರೀ ಪುಷ್ಪಾಂಜಲಿ, ಸಿ ಆರ್ ಶ್ರೀನಿವಾಸನ್.; ಸಂಸ್ಕರಣ ಗ್ರಂಥ (ಸಾ) ರಮೇಶ.ಕೆ.ವಿ ಮತ್ತು ಇತರರು

ಕ್ರಿ.ಶ. ಸು ೪೫೦ ತಾಳಗುಂದ ಶಾಸನವು [ಎ.ಕ.ಸಂ ೮ ಶಿಕಾ ೧೭೬] ಅಲ್ಲಿಯ ಪ್ರಣವೇಶ್ವರ ದೇವಸ್ಥಾನ ಇದ್ದುದಾಗಿ ಉಲ್ಲೇಖಸಿದೆ. ಶಾತವಾಹನರು ಪೂಜಿಸುವ ಕುರಿತು ಕದಂಬ ಮೃಗೇಶವರ್ಮನ ಕಾಲದಲ್ಲಿ ರಾಜಗೌರವ ಪಡೆದ ದೇವಾಲಯವಾಗಿತ್ತು ಬನವಾಸಿ ರಾಜಧಾನಿ ಮಾಡಿಕೊಂಡು ಆಳಿದ ಬನವಾಸಿ ಕದಂಬರ ದೇವಾಲಯಗಳು (ಕ್ರಿಶ ೩೨೫–೫೪೦) ಇಂದು ಕಾಣದಿದ್ದರೂ ದೇವಾಲಯಗಳು ಇದ್ದುದರ ಬಗ್ಗೆ ಶಾಸನಗಳ ಉಲ್ಲೇಖಗಳಿವೆ.[ಸುಂದರ ಅ, ದ ಅರ್ಲಿ ಕದಂಬ ಟೆಂಪಲ್ ಆರ್ಕಿಟೆಕ್ಚರ ರಿಸೆಂಟ ನೋಟ್ಸ ಕ್ಯೂಜೆ ಎಂ.ಎಸ್, ಪುಟ. ೨೬೫] ಶಿರಸಿಯ ತಾಮ್ರಪಟ,

ಗುಡ್ನಾಪುರ ರವಿವರ್ಮಶಾಸನ, ಪಟ್ಟದಕಲ್ಲಿನ ಸುತ್ತಮುತ್ತ ಭೂಶೋಧನೆ ಮುಂತಾದ ಆಧಾರಗಳಿಂದ ಕದಂಬರ ಕಾಲದ ದೇವಾಲಯದ ಕಟ್ಟಡಗಳ ಅವಶೇಷಗಳನ್ನು ಅ. ಸುಂದರವರು ಗುರುತಿಸಿದ್ದಾರೆ. ಇಲ್ಲಿಯೇ ಹಲ್ಮಿಡಿ ಶಾಸನಕ್ಕಿಂತ ಹಳೆಯದಾದ ಕನ್ನಡ ಶಾಸನವೊಂದಿದೆ ಎಂದು ಮೈಸೂರು ಪುರಾತತ್ವ ಇಲಾಖೆಯವರು ಗುರುತಿಸಿದ್ದಾರೆ ಸ್ಪಷ್ಟವಾಗಬೇಕಿದೆ. ನಂತರ ಬಾದಾಮಿ ಚಾಲುಕ್ಯರು ಕ್ರಿ.ಶ ೬ ನೆಯ ಶತಮಾನದಿಂದ ಗುಹಾಲಯಗಳನ್ನು ಅಲ್ಲದೆ ರಚನಾತ್ಮಕ ದೇವಾಲಯಗಳ ನಿರ್ಮಾಣವನ್ನು ಆರಂಭಿಸಿ ಚಾಲುಕ್ಯ ರಚನೆಗೆ ಪೀಠಿಕೆ ಹಾಕಿದರು ಇವರ ಪ್ರಮುಖ ವಾಸ್ತು ಶಿಲ್ಪ ಕೇಂದ್ರವೆನಿಸಿದ ಐಹೊಳೆಯನ್ನು 'ದೇವಾಲಯಗಳ ನಗರ ' ಭಾರತೀಯ ದೇವಾಲಯ ವಾಸ್ತುಶಿಲ್ಪದ ತೊಟ್ಟಿಲು' ಎಂದು ಕರೆಯಲಾಗಿದೆ. [ಪರ್ಸಿಬ್ರೌನ ,ಇಂಡಿಯನ್ ಆರ್ಕಿಟೆಕ್ಚರ್(ಬುದ್ದಿಸ್ಟ ಆಂಡ್ ಹಿಂದು) ಪುಟ. ೫೨]ಇದು ಅಲ್ಲಿರುವ ಶಿಲ್ಪಕಲೆಗಳಿಗೆ ಇರುವ ಮಹತ್ವವನ್ನು ತಿಳಿಸುತ್ತದೆ.

ಗುಹಾಂತರ ದೇವಾಲಯದ ನಿರ್ಮಾಣ ಬಾದಾಮಿ ಮತ್ತು ಐಹೊಳೆಯಲ್ಲಿ ನಡೆಯಿತು. ವಾಸ್ತುಶಿಲ್ಪಕಲೆ, ಶಿಲ್ಪಗಳ ಲಾಲಿಲ್ಯ, ಗಾಂಭಿರ್ಯ ಬೆಳಕಿಗೆ ಬಂದವು. ಐಹೊಳೆ ಪಟ್ಟದಕಲ್ಲು ಆಂದ್ರಪ್ರದೇಶದ ಕಾಳಾಮುಖ ಕೇಂದ್ರವಾದ ಆಲಂಪುರಗಳಲ್ಲಿ ಇವುಗಳನ್ನು ವಿಶೇಷವಾಗಿ ಗುರುತಿಸಿರುವರು. ಚಾಲುಕ್ಯರ ಕಾಲದಲ್ಲಿ ಶಿಲ್ಪಗಳು ರೇಖಾ ನಾಗರ, ಕದಂಬನಾಗರ ಮತ್ತು ದ್ರಾವಿಡ ಶಿಖರಗಳನ್ನು ತಮ್ಮ ದೇವಾಲಯದಲ್ಲಿ ಅಳವಡಿಸಿಕೊಂಡಿದ್ದಾರೆ. ಐಹೊಳೆ ಬಾದಾಮಿ ಪಟ್ಟದಕಲ್ಲುಗಳು ಶಾತವಾಹನರ ಕಾಲದ ಕಲ್ಯಾಣ ಚಾಲುಕ್ಯರ ಕಾಲದವರೆಗೂ ನಿರಂತರವಾಗಿ ದೇವಾಲಯಗಳ ನಿರ್ಮಾಣದ ಕೇಂದ್ರಗಳಾಗಿದ್ದುದಕ್ಕೆ ಶಾಸನಗಳು ಮತ್ತು ಉಳಿದಿರುವ ದೇವಾಲಯಗಳ ಅವಶೇಷ ಸಾಕ್ಷಿಯಾಗಿವೆ. ಇಲ್ಲಿಂದ ಮುಂದೆ ವಾಸ್ತು ಶಿಲ್ಪ ಕ್ರಮವನ್ನು ಅನುಸರಿಸಿ ರಾಷ್ಟ್ರಕೂಟರು, ಕಲ್ಯಾಣಚಾಲುಕ್ಯರು, ಹೊಯ್ಸಳರು, ಹಾಗೂ ವಿಜಯನಗರ ಅರಸರು ದೇವಾಲಯ ಮತ್ತು ವಾಸ್ತುಶಿಲ್ಪಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಮೊದಮೊದಲು ರಚನೆಗಳಲ್ಲಿ ಕಾಳಮುಖೀಯ ಆಶಯಗಳೇನಿಲ್ಲ ಅಂದರೆ ತಮ್ಮ ಹೆಸರಿನ ಲಿಂಗಗಳನ್ನು ಸ್ಥಾಪಿಸುವ ಕಾಳಾಮುಖೀಯ ಆದರ್ಶ ಸ್ವಲ್ಪ ನಂತರವಷ್ಟೇ ಚಾಲ್ತಿಗೆ ಬರುತ್ತದೆ. ಕ್ರಿ.ಶ ೬೦೨ ರ ಮಹಾಕೂಟೇಶ್ವರ ದೇಗುಲ ಕಾಳಾಮುಖರದೆಂದು ಹೇಳಲಾಗುತ್ತದೆ. [ಹಿರೇಮಠ, ಎಸ್ಎಸ್.; ಕಾಳಾಮುಖದರ್ಶನ, ಪುಟ, ೮೮] ಚಾಲುಕ್ಯ ಒಂದನೆಯ ವಿಕ್ರಮಾದಿತ್ಯ ಶೈವಮತಕ್ಕೆ ಪರಿವರ್ತನೆಗೊಂಡದ್ದು ಶೈವದೇಗುಲ ಪರಂಪರೆ

ಬೆಳೆಯಲು ಕಾರಣವಾದ ಪ್ರಮುಖ ಅಂಶ. ಕ್ರಿಶ ೬೯೬ರಲ್ಲಿ ಪಟ್ಟವೇರಿದ ವಿಜಯಾದಿತ್ಯ ಪಟ್ಟದಕಲ್ಲಿನಲ್ಲಿ ವಿಜಯೇಶ್ವರ ದೇಗುಲ ಕಟ್ಟಿಸಿದ್ದು ಗಮನಾರ್ಹ.

ವ್ಯಾಪಾರಿಗಳಿಗೆ ತಾತ್ವಿಕ ಆಧಾರವಾಗಿದ್ದವರು ಕಾಳಾಮುಖರು, ಸಾಮ್ರಾಜ್ಯ ಸ್ಥಾಪನೆಗೂ, ವ್ಯಾಪಾರ, ಕೃಷಿ ಅಭಿವೃದ್ಧಿಗೂ, ಶೈವ ಈಶ್ವರ ದೇಗುಲ ನಿರ್ಮಾಣಕ್ಕೂ ಒಳಸಂಬಂಧವಿದೆ. ವ್ಯಾಪಾರಿವರ್ಗ ಮೂಲಸ್ಥಾನಗಳನ್ನು ದೊಡ್ಡ ಪ್ರಮಾಣದಲ್ಲಿ ಸ್ಥಾಪಿಸುತ್ತ ಹೋದವು. ಇವರಿಗೆ ಶೈವದೇಗುಲವೇ ಕೇಂದ್ರ, ಇದು ವ್ಯಾಪಾರಿಗಳ ತಾತ್ಕಾಲಿಕ ವಾಸಸ್ಥಾನ ಇದರಿಂದ ಸುಂಕ, ತೆರಿಗೆಗಳ ವೃದ್ದಿಯೂ ರಾಜಾದಾಯಕ್ಕೆ ತಳಹದಿಯಾಯಿತು.

ಕಾಳಾಮುಖರೂ ಜಾತ್ಯಾತೀತರಾಗಿದ್ದಲ್ಲದೆ, ಶ್ರೀಮಂತವಾಗುತ್ತಿದ್ದ ಎಲ್ಲ ಜಾತಿ ಜನರ ಈಶ್ವರ ಲಿಂಗಗಳನ್ನು ಸ್ಥಾಪಿಸಿದರು. ಬೆಳೆಯುತ್ತಿದ್ದ ಶ್ರೀಮಂತ ವರ್ಗಕ್ಕೆ ಸಾಮಾಜಿಕ ಸ್ಥಾನ ಕಲ್ಪಿಸಿದ ಕೀರ್ತಿಗೆ ಭಾಜನರಾದರು. ಅಗ್ರಹಾರದಲ್ಲಿ ಬ್ರಾಹ್ಮಣರಿಗೆ ಮಾತ್ರ ವಿದ್ಯೆ. ಆದರೆ ಕಾಳಾಮುಖ ಮಠ ದೇಗುಲ ವ್ಯವಸ್ಥೆ ಬೇರೆಯಾಗಿತ್ತು. ತೆಲ್ಲಿಗ, ನಕರ, ಗವರ, ಇಂತವೆಲ್ಲ ಬೇರೆಬೇರೆ ವಸ್ತುಗಳನ್ನು ಮಾರುತ್ತಿದ್ದ ವ್ಯಾಪಾರಿಗಳ ಸಂಘಗಳು ಇವರ ಕುಲದ ಮಕ್ಕಳಿಗೆ ವಿದ್ಯೆ ಲಭಿಸುತ್ತಿತ್ತು. ಆಗ ಕಾಳಾಮುಖರು ದುಡಿಯುವ ಜನಕುಲಗಳ ಆಚಾರ್ಯರಾದರು. ಎಲ್ಲ ವೃತ್ತಿ ಆರಾಧಕರಾದರು. ವೃತ್ತಿಕಾರರು ಈಶ್ವರರಾಗಿ ಈ ಆಚಾರ್ಯರುಗಳಿಂದ ಪೂಜಿಸಲ್ಪಟ್ಟರು.

ಪ್ರತಿಯೊಂದು ಗ್ರಾಮಕ್ಕೂ ಸ್ವಯಭೂ ದೇಗುಲ ಕಡ್ಡಾಯವೆಂಬ ಸ್ಥಿತಿ ಅಂದಿತ್ತು. ಇದು ಎಷ್ಟು ವ್ಯಾಪಕವಾದ ನಂಬಿಕೆಯಾಗಿತ್ತೆಂದರೆ, ಸ್ವಯಂಭೂ ದೇಗುಲವಿಲ್ಲದ ಗ್ರಾಮವೇ ಇದ್ದಿರಲಾರದು ಎಂಬ ಭಾವನೆಯಾಗುತ್ತದೆ. ಇನ್ನೂ ಕೆಲವೊಂದು ಕಡೆ ಸ್ವಯಂಭೂ ದೇಗುಲವಿರುವುದನ್ನು ಹಾವೇರಿ ಜಿಲ್ಲೆಯಲ್ಲಿ ಕಾಣುತ್ತೇವೆ.

ಹಾವೇರಿ ಜಿಲ್ಲೆಯು ಕರ್ನಾಟಕದ ಹೃದಯದ ಸ್ಥಾನದಲ್ಲಿದ್ದು, ಎಲ್ಲಾ ಪ್ರಮುಖ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿರುವುದು ಸಾಮಾನ್ಯ ಸಂಗತಿಯಾಗಿದೆ. ಹೀಗೆ ಆಳ್ವಿಕೆ ನಡೆಸಿದ ಬಾದಾಮಿ, ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣಚಾಲುಕ್ಯ, ಹೊಯ್ಸಳ, ಸೇವೂಣ ಮತ್ತು ವಿಜಯನಗರ ಹಾಗೂ ಸಾಮಂತ ರಾಜ ಮನೆತನಗಳು ಅನೇಕ ಗುಡಿ ಗುಂಡಾರಗಳನ್ನು ನಿರ್ಮಿಸಿ, ದಾನದತ್ತಿಗಳನ್ನು ನೀಡಿ ಶಾಸನಗಳನ್ನು ಹಾಕಿಸಿದವು. ಈ ಸಾಂಸ್ಥಿಕ ವ್ಯವಸ್ಥೆಯಿಂದಾಗಿ ದೇವಾಲಯಗಳು ಕೆಲಕಾಲ ಜೀವಂತವಾಗಿದ್ದವು ಎಂದಿರುವುದು [ಮಹದೇವ ಸಿ, ಸಿಎನ್‌ವಾಸುದೇವನ್, ರಮೇಶ ನಾಯ್ಕ.; ಕರ್ನಾಟಕ

ದೇವಾಲಯ ಕೋಶ ಹಾವೇರಿ ಜಿಲ್ಲೆ, ಪ್ರಸ್ತಾವನೆ, ಪುಟ. ೧೨] ಅನೇಕ ರಾಜರುಗಳು ಆಡಳಿತ ನಡೆಸಿ ದೇವಾಲಯ ನಿರ್ಮಾಣ ಕಾರ್ಯ ಕೈಗೊಂಡಿರುವುದು ಕಂಡುಬರುತ್ತದೆ.

ಹಾವೇರಿ ಜಿಲ್ಲೆಯಲ್ಲಿ ಶೇಕಡಾ ಎಪ್ಪತ್ತರಷ್ಟು ಗ್ರಾಮಗಳಲ್ಲಿ ಪ್ರಾಚೀನ ದೇವಾಲಯಗಳು ಕಂಡುಬರುತ್ತವೆ. ಇದರಲ್ಲಿ ತೊಂಬತ್ತರಷ್ಟು ದೇವಾಲಯಗಳು ಭಗ್ನಸ್ಥಿಯಲ್ಲಿವೆ. ಈ ಭಗ್ನ ಸ್ಥಿತಿಯಲ್ಲಿರುವ ದೇವಾಲಯಗಳಿಗೆ ಯಾವುದೇ ರೀತಿಯ ರಕ್ಷಣೆ ಇಲ್ಲ ಬೆರಳೆಣಿಕೆಯಷ್ಟು ದೇವಾಲಯಗಳು ಪುರಾತತ್ವ ಇಲಾಖೆಯ ಸಂರಕ್ಷಣೆಯಲ್ಲಿರುವುದು ಕಂಡುಬಂದಿದ್ದು ಕೆಲವೊಂದನ್ನು ಜೀರ್ಣೋದ್ಧಾರಗೊಳಿಸಿದ್ದಾರೆ.

ರಾಷ್ಟ್ರಕೂಟರ ನೇರ ಆಳ್ವಿಕೆಗೆ ಒಳಪಟ್ಟಿರುವ ಇಲ್ಲಿ ಶಾಸನಗಳು ಶಿಲ್ಪಾವಶೇಷಗಳು ವಿರಳವಾಗಿ ಕಂಡುಬರುತ್ತವೆ. ದೇವಾಲಯಗಳು ಮಾತ್ರ ಕೆಲವು ಗ್ರಾಮಗಳಲ್ಲಿ ಕಂಡು ಬರುತ್ತವೆ. ಹಿರೇಕೆರೂರು ತಾಲೂಕಿನ ಖಂಡೆಬಾಗೂರು, ಮೇದೂರು, ಅರಳಿಕಟ್ಟೆ, ಬೈರವನಪಾದ ಮತ್ತು ಶಿರಗಂಬಿಗಳಲ್ಲಿ ಈ ಕಾಲದ ದೇವಾಲಯಗಳು ಕಂಡು ಬರುತ್ತವೆ. ಶಿಗ್ಗಾವಿ ತಾಲೂಕಿನ ಮೊಟಹಳ್ಳಿ, ರಾಣೆಬೆನ್ನೂರು ತಾಲೂಕಿನ ಹಿರೇಮಾಗನೂರು ಗ್ರಾಮದ ಕಲ್ಲೇಶ್ವರದೇವಾಲಯ ರಾಷ್ಟ್ರಕೂಟರ ಕಾಲದ್ದು. ಹಾವೇರಿ ತಾಲೂಕಿನ ಹೊಮ್ಮರಡಿಯಲ್ಲಿ ರಾಷ್ಟ್ರಕೂಟರ ಕಾಲದ ದೇವಾಲಯವು, ಮೇದೂರಿನಲ್ಲಿ ರಾಷ್ಟ್ರಕೂಟರ ಎರಡು ದೇವಾಲಯಗಳಿವೆ ಹೀಗೆ ಕೆಲವು ಗೋಚರಿಸುತ್ತವೆ.

ಡಿ. ಜಿ. ಕುಲ್ಕರ್ಣಿಯವರು ಹಾವೇರಿ ಜಿಲ್ಲೆಯಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಾಣುತ್ತೇವೆ. ಕ್ರಿ.ಶ ೯೭೩ ರಿಂದ ಈಚೆಗೆ ಆಳ್ವಿಕೆ ನಡೆಸಿದ ಕಲ್ಯಾಣದ ಚಾಲುಕ್ಯ ದೊರೆಗಳು. ಶೈವ ಧರ್ಮೀಯರಾದ್ದರಿಂದ ಶೈವಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆತು ಸಹಜವಾಗಿ ಪಾಶುಪತ, ಕಾಳಾಮುಖ, ಕಾಪಾಲಿಕ ಪಂಥೀಯರು ಬಹು ಸಂಖ್ಯೆಯಲ್ಲಿ ಅನುಯಾಯಿಗಳನ್ನು ಪಡೆಯುವಂತಾಯಿತು. ಅದರಿಂದಾಗಿ ಆಗ ಸಾಕಷ್ಟು ಶಿವ ದೇವಾಲಯಗಳು ನಿರ್ಮಾಣಗೊಂಡವು. ತ್ರಿಕೂಟ ರಚನೆಗಳ ಸಂಖ್ಯೆಯು ಹೆಚ್ಚಿತು ಎಂದಿರುವುದು [ಕುಲ್ಕರ್ಣಿ ಡಿ ಜಿ.; ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು, ಪುಟ, ೨೭] ಇದು ಕಾಳಾಮುಖರ ಪ್ರಾಬಲ್ಯವನ್ನು ಸೂಚಿಸುತ್ತದೆ.

ಹಾವೇರಿ ಜಿಲ್ಲೆಯಲ್ಲಿ ಶೈವಧರ್ಮ ಹಿಂದಿನಿಂದಲೂ ಪ್ರಚಲಿತವಾಗಿತ್ತೆಂದು ತಿಳಿಯಲು ಅನೇಕ ಆಧಾರಗಳು ಲಭಿಸುತ್ತವೆ. ಹಾನಗಲ್ಲ ತಾಲೂಕಿನ ಅರಿಷಿಣಗುಪ್ಪಿ

ಗ್ರಾಮದ ಕ್ರಿ.ಶ ೮೫೯ರ ಶಾಸನವೊಂದರಲ್ಲಿ ಬಂಕದೇವ ಎಂಬುವವನು ಕಂಕಾಳ ಗೊರವ ಎಂಬ ಶೈವಯತಿಗೆ ಕೆರೆಯೊಂದನ್ನು ದಾನವಾಗಿ ಬಿಟ್ಟ ವಿಷಯ ಉಲ್ಲೇಖಗೊಂಡಿದೆ. ಬ್ಯಾಡಗಿ ತಾಲೂಕಿನ ಘಾಳಪೂಜಿಯಲ್ಲಿರುವ ರಾಷ್ಟ್ರಕೂಟ ಕನ್ನರನ ಶಾಸನದಲ್ಲಿ ಮಹಾದೇವನಿಗೆ ಹೊಲವೊಂದನ್ನು ದತ್ತಿಯಾಗಿ ಬಿಟ್ಟ ಉಲ್ಲೇಖಗಳು ಶಾಸನಗಳಲ್ಲಿವೆ. ಈ ಮಾಹಿತಿಗಳನ್ನು ಗಮನಿಸಿದಾಗ ಶೈವ ದೇವಾಲಯಗಳು ಶೈವ ಯತಿಗಳು ಪ್ರಾಚೀನಕಾಲದಿಂದಲೇ ಸಾಮಾಜಿಕ ಕಾರ್ಯಗಳಲ್ಲಿ ನಿರತರಾಗಿರುವುದನ್ನು ಗುರುತಿಸಬಹುದು. ಕಲ್ಯಾಣಚಾಲುಕ್ಯರ ಕಾಲದಲ್ಲಿ ಪ್ರಮುಖ ಪಟ್ಟಣಗಳಾಗಿ ದೇವಾಲಯಗಳ ನಿರ್ಮಾಣ ಕಂಡು ಬಂದಿವೆ. ಬಂಕಾಪುರದ ನಗರೇಶ್ವರ, ಹಾನಗಲ್ಲಿನ ತಾರಕೇಶ್ವರ, ಚೌಡದಾನಪುರದ ಮುಕ್ತೇಶ್ವರ, ಹಾವೇರಿಯ ಸಿದ್ದೇಶ್ವರ ಮುಂತಾದವು. ಮಹದೇವ ಸಿ ಎನ್ ರವರು ಕಲ್ಯಾಣಚಾಲುಕ್ಯರ ಕಾಲದಲ್ಲಿ ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮತ್ತು ಪಂಚಕೂಟ ದೇವಾಲಯಗಳು ನಿರ್ಮಾಣಗೊಂಡಿವೆ. ಜಿಲ್ಲೆಯಲ್ಲಿ ಚತುಷ್ಕೂಟ ದೇವಾಲಯ ಕಂಡುಬರುವುದಿಲ್ಲ. ಹಾನುಗಲ್ಲು ತಾಲೂಕಿನ ಅರಳೇಶ್ವರ ಗ್ರಾಮದ ಕದಂಬೇಶ್ವರ ದೇವಾಲಯವನ್ನು ಪಂಚಕೂಟವಾಗಿ ವಿಸ್ತರಿಸಿ ದಾನ ನೀಡಿದ ಉಲ್ಲೇಖ ಅಲ್ಲಿಯ ಶಾಸನದಲ್ಲಿದೆ. [ಮಹದೇವ ಸಿ, ಸಿಎನ್‌ವಾಸುದೇವನ್, ರಮೇಶ ನಾಯ್ಕ.; ಕರ್ನಾಟಕ ದೇವಾಲಯ ಕೋಶ ಹಾವೇರಿ ಜಿಲ್ಲೆ, ಪುಟ, ೧೮] ಇಂದು ಆ ದೇವಸ್ಥಾನ ಅಳಿವಿನ ಅಂಚಿನಲ್ಲಿರುವುದು ಗೋಚರವಾಗುತ್ತದೆ.

ಕಲ್ಯಾಣ ಚಾಲುಕ್ಯರ ಕಾಲದ ಶಿವ ದೇವಾಲಯಗಳಲ್ಲಿ ಬಿಡಿಶಿಲ್ಪಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಶಿಲ್ಪಗಳಲ್ಲಿ ಗಣೇಶ, ಉಮಾಮಹೇಶ್ವರ, ಕಾರ್ತಿಕೇಯ, ಮಹಿಷಮರ್ದಿನಿ, ಸಪ್ತಮಾತೃಕೆಯ ಫಲಕ, ವಿಷ್ಣು, ಸೂರ್ಯ, ಚಂದ್ರ, ಭೈರವ, ವೀರಭದ್ರ, ಸರಸ್ವತಿ, ನಂದಿ ಮುಂತಾದ ಶಿಲ್ಪಗಳನ್ನು ಹೆಸರಿಸಬಹುದು. ಇವು ಕಾಳಾಮುಖ ಪರಂಪರೆಯನ್ನು ಸೂಚಿಸುತ್ತವೆ. ೧೪ನೆಯ ಶತಮಾನಕ್ಕಿಂತ ಮುಂಚಿನ ಶಿವ ದೇವಾಲಯಗಳು ಮಧ್ಯದಲ್ಲಿ ಪ್ರತಿಸ್ಥಾಪಿತವಾದ ಶಿವನೇ ಪ್ರಮುಖ ದೇವತೆ. ವಿಷ್ಣು ಮತ್ತು ಬ್ರಹ್ಮ ಇಲ್ಲವೇ ಸೂರ್ಯ ಅವನ ಎಡ ಮತ್ತು ಬಲ ಭಾಗಗಳ ಗರ್ಭಗೃಹಗಳನ್ನು ಅಲಂಕರಿಸಿರುತ್ತಾರೆ. ರಂಗ ಮಂಟಪದ ದೇವಕೋಷ್ಟಕಗಳಲ್ಲಿ ದುರ್ಗಾ, ಗಣೇಶ ಮತ್ತು ಸಪ್ತಮಾತೃಕೆಯ ಮೂರ್ತಿಗಳುಳ್ಳ ಫಲಕ ನೈಋತ್ಯ ಮೂಲೆಯಲ್ಲಿಟ್ಟು ಪೂಜಿಸಲಾಗುತ್ತಿತ್ತು. "ಕೆಲವು ಬಾರಿ ಸರಸ್ವತಿಗಾಗಿ ಪ್ರತ್ಯೇಕ ಮಂಟಪಗಳಿರುತ್ತವೆ. ಫಿಲಿಯೋಜಾ ವಸುಂಧರರವರು ರಂಗ ಮಂಟಪದಲ್ಲಿಯೇ ಅವಳನ್ನು ಪ್ರತಿಷ್ಠಾಪಿಸಿರುತ್ತಾರೆ" [ಫಿಲಿಯೋಜಾ ವಸುಂಧರಾ.; ಧಾರವಾಡ ಜಿಲ್ಲೆಯ ಕಾಳಾಮುಖ

ಮತ್ತು ಪಾಶುಪತ ದೇವಾಲಯಗಳು, ಅನು: ಹನುಮಾಕ್ಷಿ ಗೋಗಿ, ಪುಟ.೨೬] ಎಂದಿರುವುದು ಈ ಜಿಲ್ಲೆಯಲ್ಲಿ ಗೋಚರಿಸುವುದಿಲ್ಲ ಮುಖ್ಯದೇವಸ್ಥಾನದ ದಕ್ಷಿಣಭಾಗದಲ್ಲಿ ಸರಸ್ವತಿ ಮಂಟಪಗಳಿರುವುದನ್ನು ಅಬಲೂರು, ಬಳ್ಳಿಗಾವೆ, ಕಲಕೇರಿ, ಮೇದೂರುಗಳಲ್ಲಿ ಕಾಣುತ್ತೇವೆ.

ಹೊಯ್ಸಳರಕಾಲದಲ್ಲಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ವಿವಿಧ ಪ್ರದೇಶಗಳಲ್ಲಿ ಕಂಡುಬರುತ್ತವೆ. ರಟ್ಟೀಹಳ್ಳಿಯ ಕದಂಬೇಶ್ವರ ನಾಗವಂದದ ಸಿದ್ಧೇಶ್ವರ, ರಾಣೇಬೆನ್ನೂರ ತಾಲೂಕಿನ ಅಂತರವಳ್ಳಿ ದೇವಾಲಯ ಮುಂತಾದವು ಹೊಯ್ಸಳರ ರಚನೆಗಳಾದರೂ ಕಲ್ಯಾಣ ಚಾಲುಕ್ಯರ ದೇವಾಲಯಗಳ ಶೈಲಿಯಲ್ಲಿವೆ. ಹೊಯ್ಸಳರ ಕಾಲದಲ್ಲಿ ಹಿರೇಕೆರೂರ ಸಾತೇನಹಳ್ಳಿ ಮುಂತಾದ ಪ್ರದೇಶಗಳಲ್ಲಿ ದೇವಾಲಯಗಳು ಕಂಡುಬಂದಿದೆ. ವಿಜಯನಗರ ಕಾಲದ ದೇವಾಲಯಗಳು ಹಾವೇರಿ ಜಿಲ್ಲೆಯಲ್ಲಿ ಕಂಡು ಬರುವುದು ಅಪರೂಪ. ಹಾನುಗಲ್ಲು ತಾಲೂಕು ಹೊಂಬಳಿಯ ಗಣೇಶ ಶಿಲ್ಪವು ಎತ್ತರದಲ್ಲಿ ಗಾತ್ರದಲ್ಲಿ ಹಂಪೆಯ ಬೃಹತ್ ಗಣೇಶ ಶಿಲ್ಪಗಳನ್ನು ಹೋಲುತ್ತದೆ. ಹಾವೇರಿ ತಾಲೂಕಿನ ಸಂಗೂರಿನ ಶಾಸನ ಕ್ರಿಶ ೧೪೦೭ ವೊಂದು ಒಂದನೆಯ ದೇವರಾಯನ ಕಾಲದ್ದು ಇದರಲ್ಲಿ ಕುಮಾರ ರಾಮನಾಥನ ಪ್ರತಿಮೆಯನ್ನು ಸ್ಥಾಪಿಸಿದ ಸಂಗತಿಯಿದ್ದು ದೇವಾಲಯ ನಿರ್ಮಿಸಿದ ಸೂಚನೆಯು ಕಂಡುಬರುತ್ತದೆ. ಕನ್ನಡನಾಡಿನಲ್ಲಿ ಜೈನರನ್ನು ಬಿಟ್ಟರೆ ಶೈವರೇ ಅತ್ಯಂತ ಪ್ರಭಾವಶಾಲಿಗಳಾಗಿದ್ದರು. ರಾಜಾಶ್ರಯವನ್ನು ಪಡೆದುಕೊಂಡು ಪ್ರಭಲರಾಗಿದ್ದರೆಂದು ಅಲ್ಲಿಯ ಶಾಸನಗಳು ಸೂಚಿಸುತ್ತವೆ.

ಆಂದ್ರ ಪ್ರದೇಶದ ಶ್ರೀಶೈಲವು ಸಹ ಸುಪ್ರಸಿದ್ಧ ಕಾಳಾಮುಖ ಕೇಂದ್ರವಾಗಿತ್ತು. ಹೀಗೆ ಕಾಳಾಮುಖರು ಹೆಚ್ಚು ಕಡಿಮೆ ದಕ್ಷಿಣ ಭಾರತದಲ್ಲೆಲ್ಲ ಪ್ರಭಾವಶಾಲಿಗಳಾಗಿದ್ದರು.[ಮಹಾಲಿಂಗಂ ಟಿ ವಿ.; ದ ಪಾಶುಪತಾಸ್ ಇನ್ ಸೌತ್ ಇಂಡಿಯಾ, ಜರನಲ್ ಆಫ್ ಇಂಡಿಯನ್ ಹಿಸ್ಟರಿ, ಸಂ ೨೭ ಪುಟ.೫೦] ಕಾಳಾಮುಖ ಶೈವ ಪಂಥದದವರ ಬಹುಮುಖ್ಯ ಕೊಡುಗೆ ಎಂದರೆ ಹಳ್ಳಿಹಳ್ಳಿಗಳಲ್ಲಿಯೂ ದೇವಾಲಯಗಳ ನಿರ್ಮಾಣ ಮತ್ತು ದೇವಾಲಯಗಳನ್ನು ವಿದ್ಯಾಕೇಂದ್ರಗಳನ್ನಾಗಿ ಮಾಡಿಕೊಂಡು ವಿದ್ಯಾದಾನ ಕಾರ್ಯವನ್ನು ಕೈಗೊಂಡಿದ್ದು ಕಾಳಾಮುಖರನ್ನು ಉಲ್ಲೇಖಿಸುವ ಸುಮಾರು ೧೨೫ಕ್ಕೂ ಹೆಚ್ಚು ಶಾಸನಗಳು ಬೆಳಕಿಗೆ ಬಂದಿದ್ದು, ಇವುಗಳಲ್ಲಿ ೫೦ಕ್ಕೂ ಹೆಚ್ಚು ಶಾಸನಗಳು ಬಳ್ಳಿಗಾವೆಯೊಂದರಲ್ಲೇ ದೊರೆತಿವೆ ಇವುಗಳಲ್ಲಿ ಸುಮಾರು

೮೦ ರಷ್ಟು ಶಾಸನಗಳು ಕಾಳಾಮುಖ ಯತಿಗಳ ಉಲ್ಲೇಖವಿರುವಂತವು ಹಾವೇರಿ ಜಿಲ್ಲೆಯಲ್ಲಿಯೇ ಗೋಚರಿಸುತ್ತವೆ.

ನೈಯಾಯಿಕಾಗ್ರೇಸರರ ಮುಖ್ಯ ನೆಲೆಯಾಗಿದ್ದ ಕೇದಾರೇಶ್ವರ ದೇವಾಲಯವು ತ್ರಿಕೂಟ ಮಾದರಿಯಲ್ಲೇ ಇದೆ ಮತ್ತು ಗರ್ಭಗೃಹಗಳಲ್ಲಿಯ ಶಿಲ್ಪಗಳು ಶಿವನ ಅನಿತ್ಯರೂಪಗಳನ್ನು ಸೂಚಿಸುತ್ತವೆ. ಇದೇ ಮಾದರಿಯಲ್ಲಿರುವ ಹದಿನಾರು ತ್ರಿಕೂಟ ದೇವಾಲಯಗಳನ್ನು ಹಾವೇರಿ ಜಿಲ್ಲೆಯಲ್ಲಿ ಕಾಣಬಹುದು [ಡಿ ಜಿ ಕುಲ್ಕರ್ಣಿ.; ಪೂರ್ವೋಕ್ತ, ಪುಟ.೩೫] ಇದು ಹಾವೇರಿ ಜಿಲ್ಲೆಯಲ್ಲಿರುವ ದೇವಾಲಯಗಳ ಮೇಲೆ ಪ್ರಭಾವ ಹೆಚ್ಚಾಗಿತ್ತೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳ ಮೇಲೆ ಬಳ್ಳಿಗಾವಿಯ ದೇವಾಲಯಗಳು ಸಾಕಷ್ಟು ಪ್ರಭಾವ ಬೀರಿವೆ. ವೆಂಕಟಸುಬ್ಬಯ್ಯರ ವರ್ಣನೆಯಂತೆ 'ಎ ಟ್ವೆಲ್ತ ಸೆಂಚುರಿ ಇನ್ ಮೈಸೂರ' ಎಂಬ ಹೆಗ್ಗಳಿಕೆಗೆ ಪಾತ್ರವಾದ ಬಳ್ಳಿಗಾವೆ, ಮಧ್ಯಯುಗೀನ ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳಿಗೆ ಮುಖ್ಯ ನೆಲೆಯಾಗಿ, ನಾನಾಧರ್ಮಗಳಿಗೆ, ನಂಬಿಕೆಗಳಿಗೆ ಆಶ್ರಯವಿತ್ತು.ವಿಶೇಷವಾಗಿ ಶೈವಧರ್ಮಕ್ಕೆ ಹೆಚ್ಚು ಒತ್ತುಕೊಟ್ಟಿತ್ತು. ಇದರ ಸುತ್ತಮುತ್ತಲ ಪ್ರದೇಶವು ನೇರವಾಗಿ ಇದರ ಪ್ರಭಾವಕ್ಕೆ ಒಳಪಟ್ಟಿತ್ತು. [ವೆಂಕಟಸುಬ್ಬಯ್ಯ.ಎ, (ಅನು) ವೆಂಕಣ್ಣಯ್ಯ.ಟಿ.ಎಸ್, ೧೨ನೆಯ ಶತಮಾನದ ಒಂದು ವಿಶ್ವವಿದ್ಯಾಲಯ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂ, ೧೦ ಪುಟ.೧೬] ನೈಯಾಯಿಕಾಗ್ರೇಸರರ ಮುಖ್ಯ ನೆಲೆಯಾಗಿದ್ದ ಕೇದಾರೇಶ್ವರ ದೇವಾಲಯವು ತ್ರಿಕೂಟ ಮಾದರಿಯಲ್ಲೇ ಇದೆ ಮತ್ತು ಗರ್ಭಗೃಹಗಳಲ್ಲಿಯ ಶಿಲ್ಪಗಳು ಶಿವನ ಅನಿತ್ಯರೂಪಗಳನ್ನು ಸೂಚಿಸುತ್ತವೆ. ಇದೇ ಮಾದರಿಯಲ್ಲಿರುವ ಹದಿನಾರು ತ್ರಿಕೂಟ ದೇವಾಲಯಗಳನ್ನು ಹಾವೇರಿ ಜಿಲ್ಲೆಯಲ್ಲಿ ಕಾಣಬಹುದು. [ಕುಲ್ಕರ್ಣಿ ಡಿ ಜಿ.; ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು, ಪುಟ.೩೫] ಇದು ಹಾವೇರಿ ಜಿಲ್ಲೆಯಲ್ಲಿರುವ ದೇವಾಲಯಗಳ ಮೇಲೆ ಬಳ್ಳಿಗಾವೆಯ ಪ್ರಭಾವ ಹೆಚ್ಚಾಗಿತ್ತೆಂಬುದನ್ನು ಸ್ಪಷ್ಟಗೊಳಿಸುತ್ತದೆ.

ಬಳ್ಳಿಗಾವೆಯ ಕಾಳಾಮುಖ ಶೈವ ಪಂಥದವರ ಧಾರ್ಮಿಕ ಪ್ರಭಾವ ಅದರ ಸುತ್ತಮುತ್ತಲ ಪ್ರದೇಶದಲ್ಲಿ ಬೀರಿದೆ ಎಂದರೆ, ಧರ್ಮದ ಜೊತೆಗಿದ್ದ ದೇವರು, ದೇವಾಲಯ, ವಿದ್ಯೆ, ಕಲೆ ಮುಂತಾದವುಗಳೂ ತಮ್ಮ ಪ್ರಭಾವವನ್ನು ಬೀರುವುದು ಸಹಜ ಅದು ಶಾಸನಗಳಿಂದ, ದೇವಾಲಯ ವಾಸ್ತುಶಿಲ್ಪಗಳಿಂದ ಇಂದು ಅರಿಯಬಹುದು. ಡಿ ಜಿ ಕುಲ್ಕರ್ಣಿಯವರ ಬಳ್ಳಿಗಾವೆಯ ತ್ರಿಪುರಾಂತಕೇಶ್ವರ ತ್ರಿಕೂಟ ದೇವಾಲಯವು ಹಾವೇರಿ ಜಿಲ್ಲೆಯ ತ್ರೈಪುರುಷ ತ್ರಿಕೂಟ ದೇವಾಲಯಗಳ ಮೇಲೆ ಪ್ರಭಾವ ಬೀರಿದೆ ಎಂದು

ಹೇಳಬಹುದು [ಕುಲ್ಕರ್ಣಿ, ಡಿ ಜಿ.; ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು, ಪುಟ.೯೦] ಎಂದಿರುವುದು ಅಕ್ಷರಸಹ ಸತ್ಯವಾಗಿರುವುದನ್ನು ಗಮನಿಸುತ್ತೇವೆ. ಏಕೆಂದರೆ ಬಳ್ಳಿಗಾವೆಯ ದೇವಾಲಯಗಳಿಗೆ ಪ್ರತಿಬದ್ಧವಾಗಿರುವ ನಿಡನೇಗಿಲು ಮಲ್ಲಿಕಾರ್ಜುನ ದೇವಾಲಯ, ಅಬಲೂರು ಬ್ರಹ್ಮೇಶ್ವರ, ಸೋಮೇಶ್ವರ, ತಿಳವಳ್ಳಿಯ ಶಾಂತೇಶ್ವರ ಮುಂತಾದವುಗಳು ಕಂಡುಬರುತ್ತವೆ.

ಹತ್ತನೆಯ ಶತಮಾನದ ನಂತರ ಕಾಳಾಮುಖರು ದೇವಾಲಯಗಳನ್ನು ಬೆಳಸಿ ಸಾಂಸ್ಕೃತಿಕ, ಧಾರ್ಮಿಕ, ವಿದ್ಯಾಕೇಂದ್ರಗಳನ್ನಾಗಿ ಮಾಡಿ ಅಗ್ರಹಾರಗಳಿಗಿಂತ ಹೆಚ್ಚಿನ ಅಧಿಕಾರ ಬೆಳಸಿದರು. ಅನಿವಾರ್ಯವಾಗಿ ಅಗ್ರಹಾರಗಳು ಕಾಳಾಮುಖ ದೇವಾಲಯ ಸಂಸ್ಕೃತಿಯೊಂದಿಗೆ ಹೊಂದಿಕೊಂಡವು ರಾಜಾರಾಮ ಹೆಗಡೆಯವರು ಕಾಳಾಮುಖ ಶೈವಪಂಥದ ದೇವಾಲಯಗಳು ಅಗ್ರಹಾರಗಳು ಒಂದಕ್ಕೊಂದು ಪೂರಕವಾಗಿ ಬೆಳೆದಿದ್ದನ್ನು ವಿವರಿಸುತ್ತ ದೇವಾಲಯ ಮತ್ತು ಮೂರ್ತಿ ಪೂಜೆಯನ್ನು ಬೆಂಬಲಿಸುವ ಕಾಳಾಮುಖ ಶೈವಮತಗಳನ್ನು ಅಗ್ರಹಾರಗಳು ಒಪ್ಪಿಕೊಂಡವು. ಅದರಂತೆ ಅಗ್ರಹಾರದ ಸಂಸ್ಕೃತಿಯನ್ನು ಕಾಳಾಮುಖ ಶೈವಮತಗಳು ಅಳವಡಿಸಿಕೊಂಡವು.[ಲಾರೆಂಜನ್ ಡೆವಿಡ್ ಎನ್.; ಕಾಪಾಲಿಕರು ಮತ್ತು ಕಾಳಾಮುಖರು, ಪುಟ.೭೬]

ದೇವಾಲಯ ಯಾವುದೇ ಒಂದು ಭಾವೋದ್ವೇಗದ ಹಿನ್ನೆಲೆಯಲ್ಲಿ ನಿರ್ಮಾಣಗೊಂಡು ನಿಂತುಬಿಡುತ್ತದೆ. ಆದರೆ ಅಲ್ಲಿ ಪ್ರತಿಷ್ಠೆಗೊಂಡ ದೇವರಪೂಜೆ, ದೇವಾಲಯದ ವ್ಯವಸ್ಥೆ ಇವೆಲ್ಲವೂ ನಿರಂತರ ನಡೆಯುವಂತೆ ವ್ಯವಸ್ಥೆ ಮಾಡುವುದು ಬಹುದೊಡ್ಡ ಹೊಣೆಗಾರಿಕೆ ಆದ್ದರಿಂದ ಬಹುತೇಕ ದೇವಾಲಯಗಳಿಗೆ ಸ್ಥಾನಪತಿಗಳು ನಿಯುಕ್ತಿಗೊಂಡರು. ಶೈವದೇವಾಲಯಗಳಲ್ಲಿ ಅನೇಕ ಕಾಳಾಮುಖ ಮುನಿಗಳು ಈ ಸ್ಥಾನ ತುಂಬಿದರು. ಪ್ರಾಚೀನ ದೇವಸ್ಥಾನವು ಧಾರ್ಮಿಕ ಸಂಸ್ಥೆಯೂ ಹೌದು, ಸಾಮಾಜಿಕ ಸಂಸ್ಥೆಯೂ ಹೌದು. ಧರ್ಮವು ಮುಖ್ಯವಾಗಿ ವ್ಯಕಿಯ ಉದ್ಧಾರಕ್ಕೆ ಅಥವಾ ಮೋಕ್ಷಕ್ಕೆ ದಾರಿಹಾಕಿಕೊಡುತ್ತದೆ. ಏಕೆಂದರೆ ಮೋಕ್ಷವನ್ನು ಪಡೆಯುವವನು ವ್ಯಕ್ತಿಯೇ ಹೊರತು ಸಮಾಜವಲ್ಲ, ಆದರೆ ಧರ್ಮ ಉಳಿಯಬೇಕಾದರೆ ಅದು ಸಂಘ ಅಥವಾ ಸಂಸ್ಥೆಗಳನ್ನು ಕಟ್ಟಬೇಕು.[ಚಿದಾನಂದಮೂರ್ತಿ ಎಂ.; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೨೨೨] ಶ್ರೀಮಂತರ ಐಶ್ವರ್ಯವು ಬಡವರ ಕಡೆಗೆ, ಕಲೆಯ ಕಡೆಗೆ, ವಿದ್ಯೆಯ ಕಡೆಗೆ ಹರಿಯುವಂತೆ ಮಾಡಿರುವುದರಲ್ಲಿ ದೇವಸ್ಥಾನದ ಪಾತ್ರವು ಅಗಾಧವಾದುದು. ದೇವಸ್ಥಾನವು ಹಲವರಿಗೆ ಉದ್ಯೋಗವನ್ನು ಒದಗಿಸಿಕೊಟ್ಟ ಯಜಮಾನನಾಗಿದೆ. ಅದರ

ಪರಿಚಾರಕರ ಉದ್ಯೋಗದ ಹಕ್ಕು ಅವರ ಮನೆತನಕ್ಕೆ ಸೇರಿದ್ದು, ಉದ್ಯೋಗಿಗಳಿಗೆ ಸಂಬಳವನ್ನು ಭೂಮಿಯ ರೂಪದಲ್ಲಿ, ಕೆಲವುಸಾರಿ ಹಣದರೂಪದಲ್ಲಿ ಕೊಡಲಾಗುತ್ತಿತ್ತು. ತಾತ್ಕಾಲಿಕವಾಗಿ ಉದ್ಯೋಗಿಗಳನ್ನು ನೇಮಿಸಿಕೊಳ್ಳುತ್ತಿತ್ತು. ಉದಾ- ರಿಪೇರಿ ಕೆಲಸ ಮುಂತಾದವುಗಳಿಗೆ. ದೇವಸ್ಥಾನವು ದೊಡ್ಡ ಜಮಿನ್ದಾರನು ಹೌದು, ಈ ಭೂಮಿ ಬಹುಮಟ್ಟಿಗೆ ದಾನವಾಗಿ ಬಂದದ್ದು, ಈ ಭೂಮಿಯನ್ನು ಮಾರುವುದಕ್ಕಾಗಲಿ, ಅಡಇಡುವುದಕ್ಕಾಗಲಿ ಅವಕಾಶಗಳಿದ್ದಿಲ್ಲ. ಭೂಮಿಗಳನ್ನು ಗುತ್ತಿಗೆ ಕೊಟ್ಟು ಬಂದ ಧಾನ್ಯ ಅಥವಾ ಹಣವನ್ನು ತನ್ನ ನಿಧಿಗೆ ಸೇರಿಸಿಕೊಳ್ಳುತ್ತಿತ್ತು. ದೇವಸ್ಥಾನದ ಆಡಳಿತದಲ್ಲಿ ಅನೇಕ ನಿವೇಶನಗಳೂ, ಮನೆಗಳೂ ಇರುತ್ತಿದ್ದವು. ದೇವಸ್ಥಾನವು ಬಳಕೆದಾರನು ಕೂಡ ಹೌದು, ತೆಂಗು, ಗಂಧ, ಅಕ್ಕಿ, ಅರಿಶಿಣ, ಕರ್ಪೂರ, ತುಪ್ಪ, ಅಡಕೆ, ವೀಳೆ ಮುಂತಾದವುಗಳು ಅಲ್ಲಿ ಯಥೇಷ್ಟವಾಗಿ ವಿನಿಯೋಗವಾಗುತ್ತಿದ್ದವು. ದೇವಸ್ಥಾನವು ತನ್ನ ಭಂಡಾರದಿಂದ ಸಾಲವನ್ನು ಕೊಡುತ್ತಿತ್ತು. ಊರಿನ ಕೆರೆಯ ಕಟ್ಟೆ ಒಡೆದಾಗ ಅದನ್ನು ಸರಿಪಡಿಸಲು ತುಂಬುಗೈಯಿಂದ ಹಣವನ್ನು ಕೊಡುತ್ತಿತ್ತು. ಸತ್ರಗಳನ್ನು ನಡೆಯಿಸಿ ಬಡವರಿಗೆ, ಹಸಿದವರಿಗೆ ಅನ್ನದಾನವನ್ನು ಮಾಡುತ್ತಿತ್ತು. ವಾರಸುದಾರರಿಲ್ಲದ ಆಸ್ತಿ ಬಹುತೇಕ ದೇವಸ್ಥಾನಕ್ಕೆ ಸೇರುತ್ತಿದ್ದಿತು. ನಾನಾಕಡೆಗಳಿಂದ ನಾನಾರೂಪವಾಗಿ ಐಶ್ವರ್ಯವು ಹರಿದು ಬಂದದ್ದರಿಂದ ದೇವಸ್ಥಾನಗಳು ಐಶ್ವರ್ಯದ ನೆಲೆಮನೆಗಳಾದವು.[ಅಪ್ಪಾದೊರೈ ಎ.; ಎಕನಾಮಿಕ್ ಕಂಡಿಶನ್ಸ ಇನ್ ಸೌದರ್ನ ಇಂಡಿಯಾ ೧ ಪಿಪಿ೨೭೪-೩೦೧] ಇದಕ್ಕೆ ಸಾಕ್ಷಿಯಾಗಿ ಅನೇಕ ದಾನ ದತ್ತಿ ಶಾಸನಗಳನ್ನು ನಾಡಿನಾದ್ಯಂತ ಕಾಣುತ್ತೇವೆ.

ಪ್ರಾಚೀನ ಕರ್ನಾಟಕದ ಊರಿಗೆ ದೇವಸ್ಥಾನವೇ ಕೇಂದ್ರ ಬಿಂದು. ಅದರ ಸುತ್ತ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನ ರೂಪುಗೊಳ್ಳುತ್ತಿತ್ತು. ನ್ಯಾಯಾಲಯವೂ ದೇವಸ್ಥಾನವೂ ಆಗಿದ್ದಿತು ಕಷ್ಟ, ದುಖಃದುಮ್ಮಾನಗಳು ಬಂದಾಗ ಜನರು ದೇವಸ್ಥಾನಕ್ಕೆ ಹೋಗಿ ಅಲ್ಲಿ ತಮ್ಮ ಕಷ್ಟಗಳನ್ನು ಹೇಳುತ್ತಿದ್ದರು. ದೇವಾಲಯ ನಿರ್ಮಾಣದ ಪ್ರಾರಂಭಿಕ ಹಂತದಲ್ಲಿ ಕಾಳಾಮುಖರು ಏಕಗರ್ಭಗೃಹದ ಸರ್ವ ಸಾಮಾನ್ಯ ಪದ್ಧತಿಯನ್ನೇ ಅನುಸರಿಸಿದರು. ಪಂಚವಿಶಂತಿ ಲೀಲಾಮೂರ್ತಿಗಳಾದ ನಿತ್ಯಮೂರ್ತಿ, ಉಮಾಸಹಿತಶಿವ ಇತ್ಯಾದಿ ಮೂರ್ತಿಗಳನ್ನು ಕಲೆಯಲ್ಲಿ ಮಾನವ ರೂಪವನ್ನು ಪ್ರತಿನಿಧಿಸುವ ರೀತಿಯಲ್ಲಿ ನಿರ್ಮಿಸಿ ಆರಾಧಿಸಿರುವುದನ್ನು ಜಿಲ್ಲೆಯಾದ್ಯಂತ ಕಾಣುತ್ತೇವೆ. ಜೊತೆಗೆ ವಿಷ್ಣು, ಷಣ್ಮುಖ, ಸೂರ್ಯ, ಸರಸ್ವತಿ, ಕಾರ್ತಿಕೇಯ, ಸಪ್ತಮಾತೃಕೆ ವಿಗ್ರಹಗಳನ್ನು ಸ್ಥಾಪಿಸಿರುವುದು ಗೋಚರಿಸುತ್ತದೆ.

೪.೨ ಜಿಲ್ಲೆಯ ಕಾಳಾಮುಖ ಶಾಸನಗಳು :

ಶಾಸನಗಳು ನಮ್ಮ ನಾಡಿನ ಇತಿಹಾಸ ಕಟ್ಟುವಲ್ಲಿ ಪ್ರಮುಖ ಆಕರಗಳಾಗಿವೆ. ಆಯಾ ಕಾಲದಲ್ಲಿ ಆಳಿದ ರಾಜರ ಚರಿತ್ರೆ, ರಾಜಕೀಯ ವ್ಯವಸ್ಥೆ, ಸಾಮಾಜಿಕ ಜೀವನ, ಧಾರ್ಮಿಕ ಕಲ್ಪನೆ, ಇತ್ಯಾದಿಗಳನ್ನು ಶಾಸನಗಳಲ್ಲಿ ಕಾಣುತ್ತೇವೆ. ಹಳ್ಳಿಹಳ್ಳಿಗಳಲ್ಲಿಯೂ ಶಾಸನಗಳು ಸಿಗುವುದರಿಂದ ಚರಿತ್ರೆ ರೂಪಿಸಬಹುದು. ಒಂದು ಪ್ರದೇಶದ ಸಂಸ್ಕೃತಿಯ ಆಚಾರ ವಿಚಾರ, ಧರ್ಮ, ದೇವಾಲಯ, ವ್ಯಾಪಾರ, ವಿದ್ಯೆ, ದಾನ ದತ್ತಿ ಮುಂತಾದವುಗಳನ್ನು ಪ್ರತಿನಿಧಿಸಿ ಶಾಶ್ವತವಾದ ಸಾಕ್ಷಾಧಾರಗಳಾಗಿ ನಿಂತಿವೆ. ಶಾಸನಗಳು ಹುಟ್ಟಿದ ಉದ್ದೇಶ ದಾನ ದತ್ತಿ ವಿವರಿಸಲಿಕ್ಕಾಗಿಯೋ, ಯುದ್ಧದ ಸಂಗತಿ ತಿಳಿಸಲಿಕ್ಕಾಗಿಯೋ, ರಾಜನ ಪ್ರಶಸ್ತಿ ವರ್ಣಿಸಲೋಸುಗವೋ, ಧಾರ್ಮಿಕಸಂಗತಿ ತಿಳಿಸಲಿಕ್ಕಾಯೋ ಆಗಿದ್ದರೂ ಅದರಿಂದ ಅನೇಕ ಮಹತ್ವದ ಅಂಶಗಳನ್ನು ಕಂಡುಕೊಳ್ಳುತ್ತೇವೆ. ಅನೇಕ ರಾಜರ, ಮಾಂಡಲೀಕರ, ಗಾವುಂಡರ, ದೇವಾಲಯಗಳ ಸ್ಥಾನಾಚಾರ್ಯರ, ಶಾಸನ ಶಿಲ್ಪಿಗಳ ಇತ್ಯಾದಿ ಉಲ್ಲೇಖಗಳು ಮಹತ್ವದ ಪಾತ್ರವಹಿಸುತ್ತವೆ.

ಕಾಳಾಮುಖರು ತಮ್ಮ ಎಲ್ಲಕ್ಕೂ ಹೆಚ್ಚಿನ ಪ್ರಭಾವವನ್ನು ಬೀರಿದ ನಾಡೆಂದರೆ ಇಂದಿನ ವಾಯುವ್ಯ ಕರ್ನಾಟಕದ ಶಿವಮೊಗ್ಗ, ಧಾರವಾಡ (ಹಾವೇರಿ ಜಿಲ್ಲೆ ಸೇರಿದಂತೆ) ಬೆಳಗಾವಿ ಜಿಲ್ಲೆಗಳ ಗಡಿಗಳನ್ನೊಳಗೊಂಡ ಭಾಗ. [ಲಾರೆಂಜೆನ್ ಡೆವಿಡ್ ಎನ್.; ಕಾಪಾಲಿಕರು ಮತ್ತು ಕಾಳಾಮುಖರು, ಪುಟ.೨೭೭] ಎಂಬ ಮಾತಿಗೆ ಅನೇಕ ಅವಶೇಷಗಳು ಲಭಿಸುತ್ತವೆ.

ಹಾವೇರಿ ಜಿಲ್ಲೆಗೆ ಸಂಬಂಧಿಸಿದಂತೆ ಹಿರೇಕೆರೂರ ತಾಲೂಕಿನ ಅಣಜಿಯಲ್ಲಿ ದೊರೆತ ಒಂದು ಕಿರಿದಾದ ಶಾಸನವು 'ಶಕ್ತಿಪರಿಶೆ' ಗೆ ಸಂಬಂಧಿಸಿದ ಒಂದು ದೇವಾಲಯದ ನೆಲದ ಕಾಣಿಕೆಯಿತ್ತ ಬಗ್ಗೆ ನಮೂದಿಸುತ್ತದೆ. ಈ ಶಾಸನವು ರಾಷ್ಟ್ರಕೂಟ ಅರಸ ಇಮ್ಮಡಿಕೃಷ್ಣನ ಕಾಲದ ಕ್ರಿಶ ೮೮೦-೯೧೪ರ ಇದು ಶಕ್ತಿ ಪರಿಷತ್ತಿನ ಎಲ್ಲಕ್ಕೂ ಮೊದಲನೆಯ ಶಾಸನ ಹಾಗೂ ಕಾಳಮುಖರ ತೀರ ಹಳೆಯ ಕಾಲದವುಗಳಲ್ಲಿ ಒಂದಾಗಿದೆ. ಹಿರೇಕೆರೂರು ತಾಲೂಕು ಅಣಜಿಯ ಎರಡನೆಯ ಕೃಷ್ಣನಶಾಸನದಲ್ಲಿ 'ಪನ್ನಿರ್ಮ್ಮನ್ತಂ ತೋಟಂ ನಚ್ಚಾಸಿ ಇಭರು ಧರ್ಮ್ಮಮ ಕಾವಾರು ಶಸ್ತಿಪರಿಸೆ ತಂಣಂ ಇ ಅಜಿದೊಭರು ಕಭಿಲೆ. . . . ಎಂದು ತಿಳಿಸುವ ಶಾಸನದಲ್ಲಿ ಶಸ್ತಿಪರಿಸೆ ಎಂಬ ಕಾಳಾಮುಖರ ಶಕ್ತಿರಿಷೆಯ ಉಲ್ಲೇಖವಿರುವುದು[ಕಇ.ಸಂ ೩ ಅಣಜಿ] ಇದೇ ತಾಲೂಕಿನ ಖಂಡೆ ಬಾಗೂರು ೩ನೆಯ ಇಂದ್ರನ ಕ್ರಿಶ ೯೨೪ರ ಶಾಸನದಲ್ಲಿ ಸಿಂದದೇವನಮಗ

ನಾಗಯ್ಯ, ಬಂಡಿಯಣ್ಣ, ನಾಳಪ್ರಭುಗಳು ಎಡವೆಟ್ಟೆಪ್ಪತರೊಳು ಬಾಗೂರಿನ ತೋಂಟವನ್ನು ದಾನ ನೀಡಿದ ವಿವರ (ಸಾಲು ೧೩) ಪೌಷಮಾಸದ ಕೃಷ್ಣಪಕ್ಷದ ಚಟ್ಟಿಯುಂ ಸೋಮವಾರ ಮುತ್ತರೆನಕ್ಷತ್ರಮುಂ ಸೋಭನಮೆಂಬ ಯೋಗ. . . . .ಸೋಮರಾಸಿ ಭಟರರ್ ಬಿಟ್ಟಸಿದ್ದಮ. . . .ಎಂದು ಸೋಮರಾಸಿ ಭಟಾರರ ಎದುರಿಗೆ ನೀಡಿದ ದಾನದ ಉಲ್ಲೇಖವಿದೆ.[ಕಇ.ಸಂ ೬,ಶಾ.ಸಂ.೪ ಕ್ರಿಶ ೯೨೪]

ಖಂಡಿಬಾಗೂರು ಶಾಸನದಲ್ಲಿ ದುರುಗಮ್ಮನ ಗುಡಿಹತ್ತಿರ ಕ್ರಿಶ ೯೨೪ ರಾಷ್ಟ್ರಕೂಟ ಮೂರನೆ ಇಂದ್ರನ ಕಾಲದಲ್ಲಿ ಮಹಾಸಾಮಂತ ಸಂಕಗಾವುಂಡನು ಬನವಾಸಿಯನ್ನಾಳುವಾಗ, ಸಿದ್ಧದೇವನಮಗ ವಿಕ್ರಮಾದಿತ್ಯ ನಗಯ್ಯ ಬನ್ನಿಯಣ್ಣನು, ನಾಲ್ವತ್ತಿಬ್ಬರು ಬಾಗೂರ ತೋಟ ಸೋಮರಾಸಿ ಭಟರರಿಗೆ ಬಿಟ್ಟು ದಾನ ಕೊಟ್ಟ ಉಲ್ಲೇಖವಿರುವುದು.

ಹಾನಗಲ್ಲ ತಾಲೂಕಿನ ಕುಳೇನೂರಿನ ಕಲ್ಮೇಶ್ವರ ದೇವಸ್ಥಾನದಲ್ಲಿರುವ ಎರಡನೆ ಜಯಸಿಂಹ ನ ಕ್ರಿಶ ೧೦೨೮ ರ ಶಾಸನವು ಸೋಮಕರಾಸಿ ಜೀಯ ಯತಿಗೆ ದಾನ ಕೊಟ್ಟಿರುವುದನ್ನು ಉಲ್ಲೇಖಿಸುತ್ತದೆ. ಇರಿವಬೆಡಂಗದೇವನ ಮಗ ಕುಂದರಾಜ ಬನವಾಸಿ ೧೨೦೦೦ ಮತ್ತು ಪವ್ವೆನಾಡು ಆಳುತ್ತಿರುವಾಗ ದೇವಸ್ಥಾನಕ್ಕೆ ದಾನ ನೀಡಿದ್ದಾನೆ.[ಎಸ್ಐಐ ೧೮ ಸಂ ೪೭, ೧೦೨೮] ಇದೆ ತಾಲೂಕಿನ ಬೆಳವತ್ತಿ ಕೋಗಳೇಶ್ವರ ದೇವಸ್ಥಾನದ ಹಿಂದಿರುವ ಕ್ರಿಶ ೧೦೪೭ರ ಶಾಸನದಲ್ಲಿ ಬನವಾಸಿ ೧೨೦೦೦, ಹಾನುಗಲ್ಲ ೫೦೦ ಆಳುವ ಮಯೂರವರ್ಮನು ಸ್ವಯಂಭೂ ದೇವಸ್ಥಾನಕ್ಕಾಗಿ ಕೋಗಳೇಶ್ವರ ದೇವರ ಆಚಾರ್ಯ ದೇವರಾಸಿಪಂಡಿತರಿಗೆ ಬಿಟ್ಟದತ್ತಿಯ ಉಲ್ಲೇಖವಿದೆ. [ಧಾಜಿಶಾಸೂಚಿ, ಸಂ ೧೯೯, ಪುಟ.೬೫]

ಬ್ಯಾಡಗಿ ತಾಲೂಕಿನ ಮಲ್ಲೂರು ಶಾಸನದಲ್ಲಿ [ಎಸ್ಐಐ, ಸಂ ೧೮, ಶಾ.ಸಂ ೬೦ ಕ್ರಿಶ ೧೦೪೮] ಕ್ರಿಶ ೧೦೪೮ರಲ್ಲಿ ಜೋಮದೇವರಸ ಮಲವೂರಕ್ಕೆ ಬಿಜಯಂಗೆಯ್ದು ಕವೇಶ್ವರ ದೇವರಿಗೆ ಖಂಡಸ್ಫುಟಿತ ಗಂಧಧೂಪ ನೈವೇದ್ಯಕ್ಕೆಂದು ತ್ರಿಭುವನಸಿಂಗ ಜೀಯರಿಗೆ ಕಗ್ಗೆರೆಯ ಕೆಳಗಿನ ಗದ್ದೆಯನ್ನು ದಾನ ಕೊಟ್ಟ ಉಲ್ಲೇಖವಿದೆ.

ಮೊಟೇಬೆನ್ನೂರಿನ ಶಾಸನವೊಂದರಲ್ಲಿ [ಎಸ್ಐಐ, ಸಂ ೧೮, ಶಾ.ಸಂ ೬೨, ಕ್ರಿಶ ೧೦೫೧] ಸಕವರ್ಷ ೯೭೩ನೆಯ ಖರಸಂವತ್ಸರದ ಆಶ್ವಯುಜ ಸುದ್ಧ ಬುಧವಾರದಂದು ಯಮ ನಿಯಮ ಸ್ವಾಧ್ಯಾಯ ದಾನ ಧಾರಣ ಜಪ ಸಮಾಧಿ ಶ್ರೀ ಲೋಕಾಭರಣಪಂಡಿತರು ಉಲ್ಲೇಖ ಕಾಳಾಮುಖಾಗ್ರಗಣ್ಯರಪ್ಪ ಶ್ರೀ ಮಲ್ಲೋಕಾಭರಣ –

ಜೋಗೇಶ್ವರ ಮಠದ ವಿದ್ಯಾರ್ಥಿ ತಪೋಧನರ ಅಶನಾ ಆಛ್ಛಾದನಕ್ಕೆ, ಗಂಧ ಧೂಪ ದೀಪ ಸ್ನಾನ ನೈವೇದ್ಯಕ್ಕೆ ದೇಗುಲದ ಖಂಡ ಸ್ಪುಟಿತಕ್ಕೆ ದಾನ ಬಿಟ್ಟ ಉಲ್ಲೇಖವಿದೆ.

ಹಾನಗಲ್ಲ ತಾಲೂಕಿನ ಕಲಕೇರಿಯ ಕ್ರಿ.ಶ ೧೦೫೫ ರ ಶಾಸನದಲ್ಲಿ [ಎಸ್ಐಐ, ಸಂ ೨೦ ೩೫ ಕಲಕೇರಿ ಹಾನಗಲ್ಲ] ಪಶುಪತಿದೇವನೆಂಬ ಯತಿಯ ಹೆಸರು ಉಲ್ಲೇಖವಿದೆ. ಈತನ ಹೆಸರಿನಂತೆ ಪಾಶುಪತ ಶೈವನೆಂಬುದನ್ನು ಸೂಚಿಸುತ್ತದೆ. ಶೈವಗುರುವಾದ ಇವನು ಸೋಮೇಶ್ವರ ದೇವಾಲಯದ ಸ್ಥಾನಪತಿಯಾಗಿದ್ದನು. "ಯಮನಿಯಮ ಸ್ವಾಧ್ಯಾಯ ಧ್ಯಾನ ಧಾರಣಮೋನಾನುಷ್ಠಾನ ಜಪ ಸಮಾಧಿ ಸಂಪನ್ನ" ನಾಗಿದ್ದನೆಂದು ಶಾಸನ ತಿಳಿಸುತ್ತದೆ. ಬರ್ಮಗಾವುಂಡ ಈತನ ಪಾದ ತೊಳೆದು ಸೋಮೇಶ್ವರ ದೇವರಿಗೆ ದತ್ತಿ ಬಿಡುತ್ತಾನೆ.

ಬಂಕಾಪುರದ ಶಾಸನದಲ್ಲಿ [ಎಸ್ಐಐ, ಸಂ ೧೮, ಶಾ.ಸಂ ೬೬, ಕ್ರಿ.ಶ ೧೦೬೨] ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣಮೋನಾನುಷ್ಠಾಣ ಜಪಸಮಾಧಿಶೀಳ ಸಂಪನ್ನರಪ್ಪ ಶ್ರೀ ಮದ್ಬುವನೈಕ್ಯಮಲ್ಲ ದೇವರ, ರಾಜಗುರು ಶ್ರೀವರುಣಶಿವ ಪಂಡಿತರ ದೇವರ ವಿವರವಿದೆ

ಹಾವೇರಿ ತಾಲೂಕಿನ ದೇವಗಿರಿ ಶಾಸನದಲ್ಲಿ[ಎಸ್ಐಐ, ಸಂ ೧೮, ಶಾ.ಸಂ ೩೩೪, ಕ್ರಿ.ಶ ೧೦೬೫] ರಾಜಾದತ್ಯರಸರು ಯಮನಿಯಮ ಸ್ವಾಧ್ಯಾಯ . . . . . ಗಂಗರಾಸಿಮುನಿಪರಿಗೆ ಕಾಲಂ ಕರ್ಚಿ ಗೋಯಿಶ್ವರ ದೇವರಿಗೆ ದಾನಕೊಟ್ಟ ವಿವರವಿದೆ.

ಹಾನಗಲ್ಲ ತಾಲೂಕಿನ ಬೆಳವತ್ತಿ ಗ್ರಾಮದ ಕ್ರಿ.ಶ ೧೦೬೭ರ ಶಾಸನದಲ್ಲಿ ಮಂಡಳಿಕ ಲಕ್ಷ್ಮರಸನ ವಿನಂತಿಯ ಮೇರೆಗೆ ಕೋಗುಳೇಶ್ವರ ದೇವಾಲಯದ ಆಚಾರ್ಯ ಸೋಮೇಶ್ವರ ಪಂಡಿತರಿಗೆ ಸೋಮೇಶ್ವರನಿಂದ ಎಲ್ಲೂರ ಗ್ರಾಮದಾನ[ಧಾ.ಜಿ.ಶಾಸನಸೂಚಿ, ಶಾ.ಸಂ.೨೦೨,ಪುಟ.೬೫]

ಕಲಕೇರಿಯ ಇನ್ನೊಂದು ಕ್ರಿ.ಶ ೧೦೭೧ ರ ಶಾಸನವು ಮಲೆಯಾಳ ತಪೋನಿಧಿ ದೇವಸಿಂಗಿಜೀಯರು ಸ್ಥಾನಪತಿಯಾಗಿದ್ದು. ಪ್ರಸಿದ್ಧ ಯತಿಯಾಗಿರುವುದು ಶಾಸನದ ವರ್ಣನೆಯಿಂದ ಕಂಡುಬರುತ್ತದೆ. [ಎಸ್ಐಐ, ಸಂ ೨೦ ೪೯, ಕಲಕೇರಿ ಹಾನಗಲ್ಲ]

ಪರಹಿತರೆಂದುದಾತ್ತಯಶರೆಂದು ಜಿತೇಂದ್ರಿಯರೆಂದು ಯೋಗ ಪಂ
ಕುರುಹ ದಿನೇಶರೆಂದು ಸಕಳಾಗಮ ಕೋವಿದರೆಂದು ಧರ್ಮತತ್ವ
ರರಿವರೆಂದು ಕೂರ್ತು ಮಲಯಾಳ ತಪೋನಿಧಿ ದೇವಸಿಂಗ ಜೀ
ಯರ ಪದಯುಗ್ಮಮಂ ಪಡೆದು ಕಚ್ಚಿದರರ್ತ್ಥಿಯೆ ಪುಣ್ಯಮೂರ್ತಿಗಳ್

ಪರಹಿತವನ್ನು ಯಾವಾಗಲೂ ಬಯಸುವವರು. ಇಂದ್ರಿಯಗಳನ್ನು ಗೆದ್ದವರು ಯೋಗದಲ್ಲಿ ಸೂರ್ಯನಂತೆ ಪ್ರಜ್ವಲಿಸುವವರು, ಸಕಳ ಆಗಮ ಬಲ್ಲಿದರು ಧರ್ಮತತ್ವವನ್ನರಿತ ಶ್ರೇಷ್ಠರು ಆಗಿರುವುದರಿಂದ ಕಲಕೇರಿ ಶೈವ ಕ್ಷೇತ್ರ ಪ್ರಸಿದ್ಧಿ ಪಡೆಯಿತು.

ಹಾವೇರಿ ತಾಲೂಕು ದೇವಗಿರಿಯ ಶಾಸನದಲ್ಲಿ [ಎಸ್ಐಐ, ಸಂ ೧೮, ಶಾ.ಸಂ ೭೨] ತ್ರಿಭುವನಸಿಂಗಿ ಪಂಡಿತರ ಹೆಸರಿದೆ. ಬ್ಯಾಡಗಿ ತಾಲೂಕಿನ ಕಾಗಿನೆಲೆ ಶಾಸನದಲ್ಲಿ [ಎಸ್ಐಐ, ಸಂ ೧೮, ಶಾ.ಸಂ ಕ್ರಿ.ಶ ೧೦೭೨] ಯಮನಿಯಮಸ್ವಾಧ್ಯಾಯಧ್ಯಾನಧಾರಣ ಮೋನಾನುಷ್ಠಾಣ ಜಪ ಸಮಾಧಿ ಸಂಪನ್ನರಪ್ಪ ಗ್ರಾಮೇಶ್ವರ ದೇಗುಲದ ಸದ್ಯೋಜಾತ ಪಂಡಿತರ ಕಾಲಂಕರ್ಚಿ ದಾನ ಕೊಟ್ಟ ವಿವರವಿದೆ.

ಬ್ಯಾಡಗಿ ತಾಲೂಕಿನ ಕಾಗಿನೆಲೆಯ ಶಾಸನದಲ್ಲಿ [ಎಸ್ಐಐ ೧೮ ಸಂ ೭೬, ಕ್ರಿ.ಶ ೧೦೭೨] ಕ್ರಿ.ಶ ೧೦೭೨ರಲ್ಲಿ ಎರಡನೆಯ ಸೋಮೇಶ್ವರನ ಕಾಲದ ಕಾಗಿನೆಲೆಯ ಜಕ್ಕಗಾವುಂಡನು ಸದ್ಯೋಜಾತಪಂಡಿತರ ಕಾಲಂಕರ್ಚಿ ಗ್ರಾಮೇಶ್ವರ ದೇವರ ದೀಪ, ನಿವೇದ್ಯ, ಜೀರ್ಣೋದ್ಧಾರಕ್ಕೆ, ತಪೋಧನರಿಗೆ, ವಿದ್ಯಾರ್ಥಿಗಳಿಗೆ ವಿವಿಧ ರೀತಿಯದಾನ ಕೊಟ್ಟಿರುವುದನ್ನು ತಿಳಿಸುತ್ತದೆ. ಇದು ವಿದ್ಯಾದಾನದ ಕೇಂದ್ರವಾಗಿರುವುದು ಕಂಡುಬರುತ್ತದೆ.

ತಾಲೂಕಿನ ಮತ್ತಿಹಳ್ಳಿ ಶಾಸನದಲ್ಲಿ ಬಳ್ಳಿಗಾವೆಯನ್ನು ರಾಜಧಾನಿಯನ್ನಾಗಿಸಿ ಆಳುತ್ತಿರುವ ಉದಯಾದಿತ್ಯನು ಶ್ರೀಸ್ವಯಂಭುದೇವರ್ಗೆ. . .ಚಾವುಣ್ಡರಾಯನಾಳ್ಕೆಯೊಳು ಪೆರ್ಗ್ಗಡೆ ನಾರಾಣಯ್ಯ ಪಡೆದು ಚೆಲ್ಲಪಜೀಯರ ಕಾಲಂ ಕರ್ಚಿ ಧಾರಾಪೂರ್ವಕಂ ಮಾಡಿ. . . .ಎಂದು ಯತಿ ಚೆಲ್ಲಪಜೀಯರ ಉಲ್ಲೇಖವಿರುವುದು.[ಕಇ.ಸಂ ೬ ಶಾ.ಸಂ ೧೨ ಕ್ರಿ.ಶ೧೦೭೩]

ಹಾವೇರಿ ತಾಲೂಕಿನ ಕೋಣನತಂಬಿಗೆಯ ಶಾಸನದಲ್ಲಿ [ಎಸ್ಐಐ, ಸಂ ೧೮, ಶಾ.ಸಂ ೩೩೬, ಕ್ರಿ.ಶ ೧೦೭೩] ಸಂಕಗಾವುಣ್ಡನು ಸಂಕೇಶ್ವರ ದೇವರಿಗೆ ಸ್ವಸ್ತಿ ಯಮನಿಯಮ ಸ್ವಾಧ್ಯಾಯ . . . . .ಶ್ರೀ ಮಚ್ಚಂದ್ರಾಭರಣ ಪಂಡಿತರ ಕಾಲಂ ಕರ್ಚಿ ದೇವರಸ್ನಾನ ,ನೈವೇದ್ಯ, ಖಣ್ಡಕ್ಕೆ, ಧೂಪಕ್ಕೆ, ನಂದಾದೀವಿಗೆಗೆ, ಜೀರ್ಣೋದ್ದಾರಕ್ಕೆ, ಮಠದ ತಪೋಧನರ ಆಚ್ಚಾದನಕ್ಕೆ ದಾನ ಕೊಟ್ಟಿರುವುದು ವಿವರ ಲಭಿಸುತ್ತದೆ.

ರಾಣೇಬೆನ್ನೂರು ತಾಲೂಕಿನ ಅಸುಂಡಿ ಶಾಸನದಲ್ಲಿ [ಎಸ್ಐಐ, ಸಂ ೧೮, ಶಾ.ಸಂ ೭೮ ಕ್ರಿ.ಶ ೧೦೭೪] ಆವಾವ ಆಗಮುಗಳಲ್ಲಿ ಪರಿಣಿತರೆನಿರ್ಪ ಸೋವರಾಸಿಗಳ ಉಲ್ಲೇಖವಿದೆ. ಯಮನಿಯಮಸ್ವಾಧ್ಯಾಯ ಧ್ಯಾನ.......... ಸೋವರಾಸಿ ಪಂಡಿತರಿಗೆ

ಬೀರಗಾವುಂಡ ಕಲಿದೇವಸ್ವಾಮಿ ದೇವರ ರಂಗಭೋಗಕ್ಕೆ ಕಾಲಂ ಕರ್ಚಿ ಗದ್ದೆಯ ದಾನ ಮಾಡಿದ ಉಲ್ಲೇಖವಿದೆ. ಹಾವೇರಿ ತಾಲೂಕು ದೇವಗಿರಿ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೮೧ ಕ್ರಿಶ ೧೦೭೫] ಎರಡನೇ ಸೋಮೇಶ್ವರನ ಕಾಲದಲ್ಲಿ ಗಂಗರಾಶಿ ಪಂಡಿತರಿಗೆ ದಾನ ಕೊಟ್ಟ ವಿವರಣೆಯಿದೆ.

ಹಾನಗಲ್ಲ ತಾಲೂಕಿನ ಕಲಕೇರಿ ಶಾಸನದಲ್ಲಿ ವಾಸುದೇವಮಲ್ಲಯ್ಯರು ಕ್ರಿಶ ೧೦೮೮ರಲ್ಲಿ ದೇವಾಲಯಕ್ಕೆ ....ವರ ಕಾಲಂಕರ್ಚಿ (ಯತಿಯ) ಸೋಮೇಶ್ವರದೇವರ ಗಂಧಧೂಪಕ್ಕೆ, ನಿವೇದ್ಯಕ್ಕೆ ಪುನರ್ ದತ್ತಿಕೊಟ್ಟ ಉಲ್ಲೇಖವಿದೆ. [ಎಸ್‌ಐಐ ೨೦ ನಂ ೬೦,೧೦೮೮] ಇಲ್ಲಿಯ ಯತಿಯಹೆಸರು ತೃಟಿತವಾಗಿದೆ.

ರಾಣೇಬೆನ್ನೂರು ತಾಲೂಕಿನ ಉಕ್ಕುಂದ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೯೩, ಕ್ರಿಶ ೧೦೮೮] ಶ್ರೀಮಚ್ಚಾಳುಕ್ಯವಿಕ್ರಮಕಾಲದ ೧೩ನೆಯ ವಿಭವ ಸಂವತ್ಸರದ ಚೈತ್ರ ಸುದ್ಧ ದಶಮಿ ಆದಿತ್ಯವಾರದನ್ದು ಲಿಂಗಪ್ರತಿಷ್ಠೆಯಂ ಮಾಡಿ ಶಿವಾಲಯಮನೆತ್ತಿಸಿ, ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ ಧ್ಯಾನ .... ಶ್ರೀಮತು ಗಂಗರಾಸಿ ಪಂಡಿತರ ಶಿಷ್ಯರಭಿಮಾನಸಿಂಘ ಪಂಡಿತರಿಗೆ ಉತ್ತರಾಯಣ ಸಂಕ್ರಾತಿಯೆಂದು ಕಾಲಂ ಕರ್ಚಿ ದಾಸಗಾವುಂಡ ಗದ್ದೆ ದಾನ ಕೊಟ್ಟ ವಿವರವಿದೆ.

ಬ್ಯಾಡಗಿ ತಾಲೂಕು ಮಲ್ಲೂರು ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೯೮ ಕ್ರಿಶ ೧೦೯೨] ಕ್ರಿಶ ೧೦೯೨ರಂದು ಮಲ್ಲಿಕಾರ್ಜುನ ಪಂಡಿತರ ಕಾಲಂಕರ್ಚಿ ಧಾರಾಪೂರ್ವಕಂ ಕೋಟೇಶ್ವರ ಕಲಿದೇವರಿಗೆ ಎಂಟು ಗಾವುಂಡರು ದಾನ ಕೊಟ್ಟ ಉಲ್ಲೇಖವಿದೆ.

ಸಿಗ್ಗಾವಿ ತಾಲೂಕು ಬಂಕಾಪುರ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೯೯, ಕ್ರಿಶ ೧೦೯೩] ನಕರೇಶ್ವರ ದೇವಗಿರಿಗೆ, ನಖರೇಶ್ವದಾಚಾರ್ಯ ಚಂದ್ರಭೂಷಣ ದೇವರ ಕಾಲಂ ಕರ್ಚಿ ದಾನ ಬಿಟ್ಟ ಉಲ್ಲೇಖವಿದೆ.

ಹಾವೇರಿ ತಾಲೂಕು ದೇವಗಿರಿ ಶಾಸನದಲ್ಲಿ ಕ್ರಿಶ ೧೧೦೨ರಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೧೦೫, ಕ್ರಿಶ ೧೧೦೨] ತ್ರಿಭುವನಸಿಂಗಿಪಂಡಿತರು ಯಮನಿಯಮಸ್ವಾಧ್ಯಾಯ...... ತ್ರಿಭುವನೇಶ್ವರ ದೇವರ ಪ್ರತಿಷ್ಠೆಯಂ ಮಾಡಿ ದೇವರಂಗಭೋಗಕ್ಕೆ ಪಾವುಳಕ್ಕೆ ಖಂಡಸ್ಪುಟಿತ ಜೀರ್ಣೋದ್ಧಾರಕ್ಕೆ ತಪೋಧನರಾದಾರಕ್ಕೆ ದೇವಂಗೇರಿಯ ಕೆರೆಯ ಕೆಳಗಿನ ತೋಟ, ಗದ್ದೆ ದಾನ ನೀಡಿದ ವಿವರವಿದೆ.

ಹಿರೇಕೆರೂರು ತಾಲೂಕಿನ ಅಬ್ಬಲೂರು ಶಾಸನದಲ್ಲಿ [ಎಇಂ ೫, ಎ ಮತ್ತು ಬಿ ೧೧೦೧ & ೧೧೦೪] ಕಲ್ಯಾಣಿಚಾಲುಕ್ಯರ ಕಾಲದ ಬಮ್ಮಗಾವುಂಡನು ಬ್ರಹ್ಮೇಶ್ವರ ದೇವಸ್ಥಾನಕ್ಕೆ ಮೂವರುಕೋಣೆಯ ಸಂತತಿಯ ಸೋಮೇಶ್ವರ ಪಂಡಿತರ ಅಜ್ಜ ಗುರುವನ್ನು ಕಾಲಂಕರ್ಚಿ ದಾನ ಕೊಟ್ಟ ಉಲ್ಲೇಖವಿದೆ.

ಹಿರೇಕೆರೂರ ತಾಲೂಕು ಮೇದೂರು ಗ್ರಾಮದ ಈಶ್ವರದೇವಸ್ಥಾನದ ಹತ್ತಿರವಿರುವ ಶಾಸನದಲ್ಲಿ ಕ್ರಿಶ ೧೧೧೩ [ಕ ಇ ಸಂ೪ ನಂ ೩೯ ಕ್ರಿಶ ೧೧೧೩] ರಲ್ಲಿ ಲಕುಳೀಶ್ವರ ಪಂಡಿತರಿಗೆ ಗೋವಿಂದರಸನು ದೇವಾಲಯದ ಜೀರ್ಣೋದ್ದಾರಕ್ಕೆ ದಾನ ಕೊಟ್ಟ ಉಲ್ಲೇಖವಿದೆ.

ಹನುಮಾಕ್ಷಿ ಗೋಗಿಯವರು ಹಾನಗಲ್ಲ ತಾಲೂಕಿನ ನರೇಗಲ್ ರಾಷ್ಟ್ರಕೂಟ ಶಾಸನಗಳನ್ನು ಪರಿಚಯಿಸುವಾಗ ಸರ್ವೇಶ್ವರ ದೇವಾಲಯದ ಎಡಮಗ್ಗುಲಲ್ಲಿ ಹೂತಿರುವ ವೀರಗಲ್ಲು ಶಾಸನದ ಕುರಿತು ವಿವರಿಸುತ್ತ ಪೂರ್ಣಮೇಲ್ಭಾಗದಲ್ಲಿ ಶಿವಲಿಂಗದ ಮುಂದೆ ಜಟಾಧಾರಿ ಯತಿಯೊಬ್ಬ (ಕಾಳಾಮುಖ) ಕುಳಿತಿದ್ದು ಎಡಗಡೆ ಚಕ್ರವಿದೆ ಎಂದು ತಿಳಿಸಿದ್ದಾರೆ. [ಗೋಗಿ ಹನುಮಾಕ್ಷಿ.; ಅನುಶಾಸನ ಸಂಪುಟ ೧, ಪುಟ.೧೧೨] ಕಾಳಾಮುಖ ಪಂಥದ ಹಾಗೂ ಗುತ್ತರಸರ ಗುರುವಾಗಿದ್ದ ಶಿವದೇವಮುನಿಗಳಿಗೆ(ಅಂಬಿಗರ) ಚೌಡಯ್ಯ (ಯಾರೆಂಬುದು ವಾದವಿದೆ) ಈ ಸ್ಥಳವನ್ನು ದಾನವಾಗಿ ಕೊಟ್ಟಿದ್ದರಿಂದ ಈ ಊರಿಗೆ ಚೌಡಯ್ಯ ದಾನಪುರವೆಂಬ ಹೆಸರುಬಂದಿದೆ ಎಂದು 'ಶಿವದೇವ ವಿಜಯ' ಗ್ರಂಥವನ್ನು ಸಂಪಾದಿಸಿದ ಎಂ.ಜಿ.ನಂಜುಂಡಾರಾಧ್ಯರು ಅಭಿಪ್ರಾಯಪಡುತ್ತಾರೆ. ಈ ಗ್ರಂಥದ ಮೂಲಕರ್ತೃ ಶರೀಫಕವಿ ಎಂಬುದು ತಿಳಿದುಬರುತ್ತದೆ.[ಕಾಮತ್ ಸೂರ್ಯನಾಥ (ಸಂ).; ಕರ್ನಾಟಕ ಗ್ಯಾಸೆಟಿಯರ್ ಧಾರವಾಡ ಜಿಲ್ಲೆ ಪುಟ.೯೪೧] ಚೌಡದಾನಪುರದ ಹೃದಯದಂತಿರುವ ಚಾಳುಕ್ಯ ಶಿಲ್ಪಾಲಂಕೃತವಾದ ಸುಂದರ ಭವ್ಯ ಮುಕ್ತೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು ಒಂದು ಸಂಕೀರ್ಣ ಕಟ್ಟಡವಾಗಿದೆ. ಈ ದೇವಾಲಯದ ಶಾಸನಗಳನ್ನು ಗಮನಿಸಿದಾಗ ಇದನ್ನು ಜಟಾಚೋಳವಂಶದ ಗುತ್ತರಸರ ಮಾಂಡಳಿಕನಾಗಿದ್ದ ಮಲ್ಲ ಅಥವಾ ಮಲ್ಲುಗಿ ಕ್ರಿಶ ೧೧೧೫-೧೧೨೦ ರಲ್ಲಿ ಕಟ್ಟಿಸಿದನೆಂದು ತಿಳಿದುಬರುತ್ತದೆ. ಆ ಸಮಯದಲ್ಲಿ ಗೋವಿಂದರಸನು. ಅನಂತರ ಕಾಳಾಮುಖ ಸಂಪ್ರದಾಯದ ಗುರುಗಳು ಗುತ್ತರಸರ ರಾಜಗುರುವಾಗಿದ್ದ ಶಿವದೇವರು. ಈ ದೇವಾಲಯವನ್ನು ಜೀರ್ಣೋದ್ದಾರ ಮಾಡಿದರೆಂದು ತಿಳಿದು ಬರುತ್ತದೆ.

ಹಾವೇರಿ ತಾಲೂಕು ಅಗಡಿ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೧೧೩, ಕ್ರಿಶ ೧೧೧೬] ೬ನೇ ವಿಕ್ರಮಾದಿತ್ಯನ ಕಾಲದ ಕ್ರಿಶ ೧೧೧೬ ಇದರಲ್ಲಿ ಎರಕಗಾವುಂಡನು ಬಿರುದೇಶ್ವರ ದೇವರ ನೈವೇದ್ಯಕ್ಕೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ವಾದಿಘರಟ್ಟಂ ದುರ್ದ್ದರ ವಾದಿ ಮಹಾ ಪ್ರಳಯಕಾಲಭೈರವ ರೂಪಂವಾರಿ..... ಯಪವನಂ..... ಮೇದಿನಿಯೊಳ್ ವಾದಿದೇವ ಮುನಿಪಂ ನೆಗಟ್ದ ॥ ಆ ವಾದಿ ದೇವನ ಶಿಷ್ಯರ ಪರಮ ಶಿವಾಗಮಗಗನಾನ್ತಸೂರ್ಯ್ಯಂ ಪರಮ..... ತಾರ್ಣ್ಣವಚಂದ್ರಂ ಪರಮೇಶ್ವರ ಚರಣಾಂಬುಜವರ ಬೃಂಗಂ ಶ್ರೀವರೇಶ್ವರ ಬ್ರತಿನಾಥಂ ಅನ್ತೆನಿಸಿದ ವರೇಶ್ವರ ಪಂಡಿತ ದೇವರ ಕಾಲಂಕರ್ಚಿ ದಾನ ಕೊಟ್ಟ ಉಲ್ಲೇಖವಿದೆ.

ಹಿರೆಕೇರೂರ ತಾಲೂಕಿನ ಚಿಕ್ಕೇರೂರ ಶಾಸನದಲ್ಲಿ ಕ್ರಿಶ ೧೧೧೮ ರಲ್ಲಿ [ಇಸಿ ೮ ನಂ ೩೨೫] ಗ್ರಾಮೇಶ್ವರ ದೇವಸ್ಥಾನಕ್ಕೆ ಆಯಿಶೆಟ್ಟಿಯು ಕಲ್ಯಾಣಶಕ್ತಿಯರಿಗೆ ದಾನ ನೀಡಿದ ಉಲ್ಲೇಖವಿದೆ.

ಹಿರೇಕೆರೂರು ತಾಲೂಕು ಚಿಕ್ಕೇರೂರಿನ ಗ್ರಾಮೇಶ್ವರ ದೇವರ ಸ್ಥಾನ ಕಾಳಾಮುಖ ಗುರುಗಳ ಕೇಂದ್ರವೂ ನೆಲೆಯೂ ಆಗಿತ್ತು. ಕಲ್ಯಾಣಶಕ್ತಿ ಪಂಡಿತರೆಂಬ ಗುರುವರ್ಯರು ಇಲ್ಲಿ ಕ್ರಿಶ ೧೧೧೮ ರಿಂದ ೧೧೫೫ ರವರೆಗೂ ಇದ್ದರು.[ಇ.ಕೆ ಸಂ.೮ ಸೊರಬ ೩೨೫,೩೨೮,ಬಾರಂಗಿ] ಇವರು ಗ್ರಾಮೇಶ್ವರದೇವರ ಆಚಾರ್ಯ ಕ್ರಿಯಾಶಕ್ತಿ ಪಂಡಿತದೇವರ ಶಿಷ್ಯರಾಗಿದ್ದರು.

ಹಾನಗಲ್ಲನಲ್ಲಿರುವ ಎರಡು ಶಾಸನಗಳು ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕ್ರಿಶ ೧೧೧೯ರವುಗಳಾಗಿದ್ದು ಕಾಳಾಮುಖ ದೇವಾಲಯ ಹಾಗೂ ಯತಿಗಳನ್ನು ಕುರಿತು ಉಲ್ಲೇಖಿಸುತ್ತದೆ. ಪಾಂತಿಪುರದ ಚಿಕ್ಕೇಶ್ವರ ದೇವಾಲಯಕ್ಕೆ ಪ್ರತಿಬದ್ಧಗೊಳಿಸಲಾದ ತೆಲ್ಲಿಗೇಶ್ವರ ದೇವಾಲಯಕ್ಕೆ ನೀಡಲಾದ ಇದನ್ನು ಸಕಲೇಶ್ವರ ಪಂಡಿತನ ಸೋದರನಾದ ತ್ರಿಭುವನಶಕ್ತಿ ಪಂಡಿತನಿಗೆ ಒಪ್ಪಿಸಲಾಗಿದೆ. ಪಾಂತಿಪುರದ ಮೂಲಸ್ಥಾನ ಬಿಲ್ಲೇಶ್ವರ ದೇವಾಲಯಕ್ಕಾಗಿ ದೇವರಾಸಿ ಪಂಡಿತ ಎನ್ನುವವನಿಗೆ ಒಪ್ಪಿಸಲಾದ ಕಾಣಿಕೆಯನ್ನು ನಮೂದಿಸುತ್ತದೆ.[ಕಇ.ಸಂ–೫,ನಂ ೧೮] ಕ್ರಿಶ ೧೧೨೦ ರ ಇನ್ನೊಂದು ಕ್ರಿಷ್ಣಬಟ್ ಉಡುಗಣಿ ಮನೆ ಬಳಿಯ ಶಾಸನವು ತೈಲಪದೇವನು ...ಣಶಕ್ತಿಪಂಡಿತರ ಕಾಲಂಕರ್ಚಿ ದಾನ ನೀಡಿರುವುದನ್ನು ತಿಳಿಸುತ್ತದೆ.

ನಾಗವಂದ ಗ್ರಾಮದ ಕ್ರಿಶ ೧೧೨೦ರ ಶಾಸನದಲ್ಲಿ [ಕಇ ೬ ಶಾಸಂ ೧೯.ಕ್ರಿಶ ೧೧೨೦] ಚಾಳುಕ್ಯ ವಿಕ್ರಮ ವರುಷ ೪೫ನೆಯ ಸಾರ್ವ್ವರಿ ಸಂವತ್ಸರದ ಕಾರ್ತಿಕದ

ಅಮವಾಸೆ ಆದಿವಾರದಂದು ಉಡೆಯಮ ಗೊಣ್ಣನೂರ ನಾಗಾರ್ಜುನದಲ್ಲಿ ಸೂರ್ಯಗ್ರಹಣದಂದು ದೇವರ ಭಂಟ ಬೀಚಿಗಂ ಸೂರ್ಯ ಲೋಕಪ್ರಾಪ್ತನಾದನು. ಆತನ ಗುರುಗಳಾದ ನಾಗರಾಸಿ ಪಂಡಿತರು ಕಲ್ಲಕಂಬಮನಿಲಿಸಿ ಪಡಿಸಲಿಸುತಮಿದ್ದರು ಎಂದು ನಾಗರಾಸಿ ಪಂಡಿತರ ಉಲ್ಲೇಖವಿದೆ.

ಹಾನಗಲ್ಲ ಹನುಮಂತದೇವಸ್ಥಾನ ಬಳಿಯಿರುವ ಕ್ರಿ.ಶ ೧೧೨೧ರ ಶಾಸನದಲ್ಲಿ [ಕ ಇ ೫ ನಂ ೧೯] ತೈಲಪದೇವರು.........ಪಂಡಿತರ್ಗೆ ದಾನಕೊಟ್ಟಿರುವುದನ್ನು ತಿಳಿಸುತ್ತದೆ.

ಬ್ಯಾಡಗಿ ತಾಲೂಕು ಕಾಗಿನೆಲೆ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೧೧೭, ಕ್ರಿ.ಶ ೧೧೨೧] ಶ್ರೀ ಮತ್ಕಾಳೇಶ್ವರ ದೇವರ ಅಂಗಭೋಗಕ್ಕೆ ಧೂಪ, ದೀಪ ನೈವೇದ್ಯಕ್ಕೆ ತಪೋಧನರಾಹಾರಕ್ಕೆ..... ಕಂಬದಸೂಳೆಯರಿಗೆ ಯಮ ನಿಯಮ ಸ್ವಾಧಾಧ್ಯಾಯ..... ಶ್ರೀಮತು ಲೋಕಾಭರಣ ಪಂಡಿತರ ಕಲಂಕರ್ಚಿ ಗದ್ದೆ ತೋಟಗಳನ್ನು ದಾನ ಕೊಟ್ಟ ವಿವರಣೆಯಿದೆ.

ಹಾವೇರಿ ತಾಲೂಕು ದೇವಗಿರಿ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೧೧೯, ಕ್ರಿ.ಶ ೧೧೨೧] ತ್ರಿಭುವನೇಶ್ವರ ಮತ್ತು ಭೈರವ ದೇವಸ್ಥಾನಕ್ಕೆ ತ್ರಿಭುವನಸಿಂಗಿ ಪಂಡಿತರ ಕಾಲಂಕರ್ಚಿ ದಾನ ಕೊಟ್ಟ ಉಲ್ಲೇಖವಿದೆ. ಬ್ಯಾಡಗಿ ತಾಲೂಕು ಕಾಗಿನೆಲೆ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೧೨೦, ಕ್ರಿ.ಶ ೧೧೨೨] ಕಾಳಿಸೆಟ್ಟಿ ಮಾಡಿಸಿದ ಬ್ರಹ್ಮೇಶ್ವರ ದೇವರ ನೈವೇದ್ಯಕ್ಕೆ ದೇವಾಲಯದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ತಪೋಧನರಾಹಾರಕ್ಕೆ ಯಮನಿಯಮ ಸ್ವಾದ್ಯಾಯ..... ಶ್ರೀಮತು ಶಿವಶಕ್ತಿ ಪಂಡಿತರ ಕಾಲಂ ಕರ್ಚಿ ಗದ್ದೆ ದಾನ ಮಾಡಿದ ಉಲ್ಲೇಖವಿದೆ.

ಸಿಗ್ಗಾಂವ ತಾಲೂಕು ಬಂಕಾಪುರ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೧೨೨, ಕ್ರಿ.ಶ ೧೧೨೨] ಮಾದಿಗಾವುಂಡನ ಪುತ್ರ ಹೊಲ್ಲಿಗಾವುಂಡ ಸೇನಭೋವ ಭಾಸ್ಕರಯ್ಯ ಶಿವರಾಸಿ ಪಂಡಿತರು, ಧಮ್ಮದ ಬಸವಣ್ಣ ಆಲವಳ್ಳಿಗೇತ, ಕೊವುರಕಗ್ಗಂಣ ಕಡಲೆಬಾಕಂಣ, ಎಲ್ಲರೂ ಸಹಿತ ನಗರೇಶ್ವರ ದೇವರಾಚಾರ್ಯ ಚಂದ್ರಭೂಷಣ ಪಂಡಿತ ದೇವರ ಕಾಲಂಕರ್ಚಿ , ಸೆಂಬೂರು ತೆಂಕಣ ಬಿಲಗ ಕೆರೆಯ ಕೆಳಗೆ ಗದ್ದೆ ಕಮ್ಮಂ ೬೦ ಮಂನದರ ಬಳಿಯ ಮನೆಯನ್ನು ದಾನ ಮಾಡಿದ ಬಗ್ಗೆ ತಿಳಿಸುತ್ತದೆ.

ಹಾವೇರಿ ತಾಲೂಕು ನೆಗಳೂರು ಶಾಸನದಲ್ಲಿ ಕ್ರಿ.ಶ ೧೧೨೩ [ಎಸ್‌ಐಐ, ಸಂ ೧೮, ಶಾ.ಸಂ ೧೨೩, ಕ್ರಿ.ಶ ೧೧೨೩] ಸೋವರಸ, ಉದಯಾದಿತ್ಯ, ಮನ್ನೆಯರ ಹೆಗ್ಗಡೆ ಮೂವರು ಸೇರಿ ಸಿದ್ದೇಶ್ವರ ದೇವರಿಗೆ ಅಂಗಭೋಗಕ್ಕೆ ಗಂಟೆ, ಧೂಪ, ಆರತಿ

ನಂದಾದೀವಿಗೆ ನೈವೇದ್ಯಕ್ಕೆ ದಾನ ಕೊಟ್ಟ ಉಲ್ಲೇಖ, ಕಾಳಾಮುಖಸಿದ್ಧಾಂತದೇವರ ಸಿಷ್ಯಸ್ಥಾನಚಾರ್ಯ ಜ್ಞಾನ ಶಕ್ತಿ ಪಂಡಿತರು ಎಂಬ ಉಲ್ಲೇಖವಿದೆ. ಹಾನಗಲ್ಲು ತಾಲೂಕಿನ ಬಾಳಂಬೀಡನ ಶಾಸನದಲ್ಲಿ ಬಮ್ಮಗಾವುಂಡನು ವಿಮಳಶಕ್ತಿಪಂಡಿತದೇವರ ಕಾಲಂಕರ್ಚಿ ಬಾಲದೇವರಿಗೆ ದಾನ ನೀಡಿದ ಬಗ್ಗೆ ತಿಳಿಸುತ್ತದೆ.

ಹಿರೇಕೆರೂರ ತಾಲೂಕಿನ ಕಣವಿಶಿದ್ದಗೇರಿಯ ಎರಡನೇ ಜಯಸಿಂಹನ ಕಾಲದ ಸಿದ್ದೇಶ್ವರ ದೇವಸ್ಥಾನದಲ್ಲಿರುವ ಶಾಸನದಲ್ಲಿ ಬೀರದೇವ ಮತ್ತು ಆತನ ತಮ್ಮ ಕೇತರಸನ ವಂಶಾವಳಿಯನ್ನು ಉಲ್ಲೇಖಿಸುತ್ತದೆ. ಪಿರಿಯ ಬೀರದೇವಂ ಭಗವತಿಘಟ್ಟದ ಜಮದಗ್ನಿ ರಾಮೇಶ್ವರ ದೇವರಿಗೆ ಶ್ರೀ ದೇವಕಾರ್ಯಕ್ಕೆಂದು ೧೨ ಮತ್ತರುಗದ್ದೆ, ಉತ್ತರೇಶ್ವರದೇವರಿಗೆ ಮತ್ತಲಾರು ಇತ್ಯಾದಿ ದಾನ ಮಾಡಿದರು. ೪೭ನೆಯ ಸಾಲಿನಲ್ಲಿ ರಾಮೇಶ್ವರ ದೇವರ ಕಾಲಂ ಕರ್ಚಿ ಧಾರಾಪೂರ್ವಕಂ ಮಾಡಿದ ಧರ್ಮ್ಮಮಂ ಚಂದ್ರಾರ್ಕ್ಕಸ್ಥಾಯಿಯಾಗಿ ಶಿಲಾಶಾಸನಸ್ತ ಮಾಡಿದರಲ್ಲಿಯ ಸ್ಥಾನಪತಿಗಳಪ್ಪ ರಾಮಶಕ್ತಿದೇವರು ಎಂದು ಉಲ್ಲೇಖವಿದೆ. ಮುಂದುವರೆದು ಅವರ ತನೂಭವ – ರಾಮಶಕ್ತಿ – ಧವಳಸುತನಾದ – ರಾಮಶಕ್ತಿ ಎಂದು ಸ್ಥಾನಪತಿಗಳ ವಂಶಾವಳಿಯನ್ನು ಶಾಸನ ತಿಳಿಸುತ್ತದೆ.[ಕಇ.೬ಶಾ.ಸಂ ೭,ಪುಟ.೧೧]

ರಾಣೇಬೆನ್ನೂರು ತಾಲೂಕು ಹೊನ್ನತ್ತಿಯ ಶಾಸನದಲ್ಲಿ [ಎಸ್ಐಐ, ಸಂ ೧೮, ಶಾ.ಸಂ ೧೨೪ ಕ್ರಿಶ ೧೧೨೪] ದೇಕಣ್ಣನು, ನಾಕಣ್ಣನು ಚಾಮೇಶ್ವರ ದೇವರ ದೇಗುಲದ ಖಣ್ಡ ಸ್ಪುಟಿತ ಜೀರ್ಣೋದ್ಧರಕ್ಕೆ ಗಂಧ, ಧೂಪ, ದೀಪ ನೈವೇದ್ಯಕ್ಕೆ ಚಾಮೇಶ್ವರ ದೇವರ ಸ್ಥಾನಾಚಾರ್ಯರಪ್ಪ ಬ್ರಹ್ಮರಾಸಿಜೀಯರ ಕಾಲಂಕರ್ಚಿ ಗದ್ದೆ ದಾನ ಕೊಟ್ಟ ವಿವರವಿದೆ..

ಹಾನಗಲ್ಲ ತಾಲೂಕು ಬಾಳೂರು ಶಾಸನದಲ್ಲಿ ಕ್ರಿಶ ೧೧೨೫ರಲ್ಲಿ [ಕ ಇ ೫, ನಂ ೨೦] ಕಾಳಗಾವುಂಡನು ಕಾಳಯ್ಯಜೀಯರು ಬಾಳೆಯೂರಲು ಲಿಂಗಪ್ರತಿಷ್ಠೆಯಂ ಮಾಡಿ ಸೋಮೇಶ್ವರದೇವಸ್ಥಾನಕ್ಕೆ ದಾನಕೊಟ್ಟಿರುವುದನ್ನು ತಿಳಿಸುತ್ತದೆ.

ರಾಣೇಬೆನ್ನೂರ ತಾಲೂಕು ಅಸುಂಡಿ ಶಾಸನ [ಎಸ್ಐಐ, ಸಂ ೧೮, ಶಾ.ಸಂ ೧೩೩, ಕ್ರಿಶ ೧೧೨೭] ದಲ್ಲಿ ಬರ್ಮಗಾವುಣ್ಡನು ಕಲಿದೇವಸ್ವಾಮಿ ದೇವರಿಗೆ ದಾನ ನೀಡಿರುವ ಬಗ್ಗೆ ತಿಳಿಸಿರುವಲ್ಲಿ ಸ್ವಸ್ತ್ಯನೇಕ ಶಿವತತ್ವಗಮಸಂಪನ್ನರುಂ । ಶಿಷ್ಯ ಸಂಪನ್ನರುಂ। ಸಕಳಶಾಸ್ತ್ರ ಪಾರಾಗರುಂ। ಚೌಷಷ್ಟಿಕಳಾಧಾರರುಂ। [ಪಶು] ಪತಿಮತತಪ ಪ್ರಭಾವಮಾರ್ಗ ಸುಭೋಧನಿಯಮಿತ ಮಾಹೇಶ್ವರಜನಶಿವಮುನಿಗಣ ಶಿಕ್ಷೋಕ್ತದೀಕ್ಷಾ

ದಕ್ಷರುಂ...........ಯಮ........... ಸಮಾದಿಶೀಳಸಂಯುತರಪ್ಪ ಶ್ರೀಮತುಸಿಂಗಪರಿಷೆಯ ಮತದಾಚಾರ್ಯರುಸೋಮೇಶ್ವರ ಪಣ್ಕಿತರ ಪುತ್ರ ಶಿಷ್ಯ. ಬಹ್ಮಸಿಂಗ ಮುನಿಪಂ...... ಕಾಲಂಕರ್ಚಿ ದಾನ ನೀಡಿದ ಕುರಿತು ತಿಳಿಸುತ್ತದೆ

ಸಿಗ್ಗಾಂವ ತಾಲೂಕಿನ ಬನ್ನಿಕೊಪ್ಪ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೧೩೫, ಕ್ರಿ.ಶ ೧೧೩೦] ದಂಡ ನಾಯಕ ಹೊಲಕೇಸಿ ದೇವರು ಭೀಮೇಶ್ವರ ದೇವರ ನೈವೇದ್ಯಕ್ಕೆ ಅಮ್ರಿತರಾಸಿ ಪಂಡಿತರಿಗೆ ಧಾರಾಪೂರ್ವಕ ದಾನ ನೀಡಿದ ವಿವರವಿದೆ.

ಸಿಗ್ಗಾಂವ ತಾಲೂಕಿನ ಬಂಕಾಪುರದ ನಗರೇಶ್ವರ ದೇವಸ್ಥಾನದ ಹತ್ತಿರದ ಶಾಸನ [ಎಸ್‌ಐಐ, ಸಂ ೧೮, ಶಾ.ಸಂ ೧೩೯, ಕ್ರಿ.ಶ ೧೧೩೭] ತೈಲದೇವ ನಕರೇಶ್ವರ ದೇವರಿಗೆ ಚಂದ್ರಭೂಷಣ ಪಂಡಿತರ ಕಾಲಂಕರ್ಚಿ ದಾನ ನೀಡಿದ ಬಗ್ಗೆ ಮತ್ತು ಬಮ್ಮಗಾವುಂಡ ನಗರೇಶ್ವರ ದೇವರಿಗೆ ಚಂದ್ರಭೂಷಣರ ಕಾಲಂಕರ್ಚಿ ಗದ್ದೆ ದಾನ ನೀಡಿದ ವರ್ಣನೆಯಿದೆ.

ಹಿರೇಕೆರೂರ ತಾಲೂಕಿನ ಅಬ್ಬಲೂರಿನ [ಕ್ರಿ.ಶ ೧೧೩೦ [ಎಇಂ ಸಂ೫ ಸಿ] ಬ್ರಹ್ಮೇಶ್ವರ ದೇವಸ್ಥಾನದ ಒಳಗಡೆಯಿರುವ ಶಾಸನವು ಕ್ರಿ.ಶ ೧೧೩೦ ಬಮ್ಮಗಾವುಂಡನು ಶಿವಧರ್ಮ ಕಥಾಮೃತರಸದೂಟವನು ನೀಡಿ ಶಿವಭಕ್ತಿ ಭಾಮಿನಿ ಕಯ್ಯಗ್ಗಣ್ಮೆ ತತ್ಪಣದೊಳು ತುರಂಗರೂಢನಾಗಿ ಮತ್ತೆ ಆ ತುರಂಗವು ಎಲ್ಲಿಯವರೆಗೆ ನಿಲ್ಲದೇ ಓಡುವುದು ಅಲ್ಲಿಯವರೆಗಿನ ಭೂಮಿಯನ್ನು ಬ್ರಹ್ಮೇಶ್ವರದೇವರಿಗೆ ಬಿಟ್ಟುಕೊಟ್ಟ ಕುರಿತು, ಮೂವರಕೋಣೆಯ ಸನ್ತತಿ ಪರ್ವತಾವಳಿಯೊಳರ್ವಿಭವಿಸಿದ ಆಚಾರ್ಯರಾದ ವಿದ್ಯಾಭರಣರ ಶಿಷ್ಯರಾದ ಜ್ಞಾನಶಕ್ತಿಪಂಡಿತದೇವರ ಕಾಲಂಕರ್ಚಿ ದೇವರನೈವೇದ್ಯಕ್ಕೆ, ನಂದಾದೀವಿಗೆಗೆ, ತಪೋಧನರಾಹಾರಕ್ಕೆ, ಖಣ್ಡಸ್ಪುಟಿತ ಜೀರ್ಣೋದ್ಧಾರಕ್ಕೆ ದಾನಕೊಟ್ಟಿರುವುದನ್ನು ತಿಳಿಸುತ್ತದೆ.

ರಾಣೇಬೆನ್ನೂರಿನ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೧೪೭, ಕ್ರಿ.ಶ ೧೧೪೩] ಚಾವಗಾವುಂಡನು ಹಸುಂಡಿಯ ಶ್ರೀ ಕಲಿದೇವಸ್ವಾಮಿ ಅಂಗಭೋಗಕ್ಕೆ ಬಿಟ್ಟ ಸುಂಕಮಂ ಶ್ರೀ ಬ್ರಹ್ಮಸಿಂಗಿ ಪಣ್ಡಿತರ ಕಾಲಂಕರ್ಚಿ ದಾನ ಕೊಟ್ಟಿರುವುದು ವಿವರವಿದೆ.

ಹಿರೇಕೆರೂರು ತಾಲೂಕಿನ ಚಿಕ್ಕಕೊಣತಿ ಗ್ರಾಮದ ಕರಿಯವ್ವ ದೇವಸ್ಥಾನದ ಕ್ರಿ.ಶ ೧೧೪೩ರ ೨ನೆಯ ಜಗದೇಕಮಲ್ಲನ ಕಾಲದ ಶಾಸನದಲ್ಲಿ ಸಾಸಿರ್ವರು, ಕೋಣಂಗೇರಿಯ ಐನೂರ್ವರು ಶ್ರೀದುರ್ಗೇಶ್ವರ ದೇವರ್ಗೆ ಸ್ನಾನನಿವೇದ್ಯ ನಂದಾದೀವಿಗೆ ಕಲ್ಯಾಣಶಕ್ತಿ. . . . .ಕರ್ಚಿ ಧಾರಾಪೂರ್ವಕಂಮಾಡಿ. . . ..ದಾನ ಕೊಟ್ಟ ಉಲ್ಲೇಖವಿದೆ

[ಕಇ ೪ ನಂ ೨೮] ಹಿರೇಕೆರೂರ ತಾಲೂಕಿನ ಅಬ್ಬಲೂರಿನ ಎರಡು ತೇದಿಯಿರುವ [ಎಇಂ ಸಂ೫ ಸಿ ಅಬಲೂರು ಕ್ರಿಶ ೧೧೩೦, ೧೧೪೪] ಬ್ರಹ್ಮೇಶ್ವರ ದೇವಸ್ಥಾನದ ಒಳಗಡೆಯಿರುವ ಶಾಸನವು ಕ್ರಿಶ ೧೧೪೪ರಲ್ಲಿ ಬನವಾಸಿ ೧೨೦೦೦ರ ದಂಡನಾಯಕ ಮಲ್ಲಿಬಾವರಸನು ಅಬ್ಬಲೂರಿಗೆ ಕ್ರಿಶ ೧೧೪೪ರಲ್ಲಿ ಮಲ್ಲಿಭಾವರಸನು ಬ್ರಹ್ಮೇಶ್ವರ ದೇಗುಲದ ಧರ್ಮವನ್ನು ನೋಡಿ ಮೆಚ್ಚಿ ದೇವರ ನಂದಾದೀವಿಗೆಯ ಸೊಡರೆಣ್ಣೆಗೆಯಲ್ಲಿಯೊನ್ದುಗಾಣಮುಮಂ ನೊಂದಂಗಡಿಯೊಕ್ಕಲುದೆರೆಯಂ ಸರ್ವಭಾಧಾ ಪರಿಹಾರವಾಗಿ ಬಿಟ್ಟರು. ಬ್ರಹ್ಮೇಶ್ವರದೇಗುಲದ ಧರ್ಮವನ್ನು ನೋಡಿ ಮೆಚ್ಚಿ ನಂದಾದಿವಿಗೆಗೆ, ಸೊಡರೆಣ್ಣೆಗೆ ಗಾಣದೆಣ್ಣೆಯ ದಾನಕೊಟ್ಟಿರುವುದನ್ನು ತಿಳಿಸುತ್ತದೆ.

ಹಿರೇಕೆರೂರು ತಾಲೂಕು ಚಿಕ್ಕೇರೂರಿನ ಗ್ರಾಮೇಶ್ವರದೇವರ ಸ್ಥಾನವು ಕಾಳಾಮುಖ ಕೇಂದ್ರವೂ ನೆಲೆಯೂ ಆಗಿತ್ತು. ಕಲ್ಯಾಣ ಶಕ್ತಿಪಂಡಿತರೆಂಬ ಗುರುವರ್ಯರು ಇಲ್ಲಿ ಕ್ರಿಶ ೧೧೧೮ ರಿಂದ ೧೧೫೯ರವರೆಗೂ ಇದ್ದರು.[ಎಕ.ಸಂ,೮ ಸೊರಬ ೩೨೫, ೩೨೮, ಬಾರಂಗಿ] ಇವರು ಗ್ರಾಮೇಶ್ವರದೇವರ ಆಚಾರ್ಯ ಕ್ರಿಯಾಶಕ್ತಿ ಪಂಡಿತದೇವರ ಶಿಷ್ಯರಾಗಿದ್ದರು.

ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯದ ಒಳಗೆಇರುವ ಕ್ರಿಶ೧೧೩೦ರಲ್ಲಿ ಮೂರನೇ ಸೋಮೇಶ್ವರನ ಶಾಸನದಲ್ಲಿ ಬಮ್ಮಗಾವುಂಡನು ಮೂವರು ಕೋಣೆಯ ಸನ್ತತಿ ದೇವಬ್ರತರೆಸೆವ ಪರ್ವತಾವಳಿಯೊಳ್ತಾಮಾವಿರ್ಭವಿಸಿದಮಳ ಯಶೋವಿಭವದಿ ನೂತರರೆಬರಾರ್ಚಾಕ್ಕಳ್ ॥ವ॥ ಅವರೊಳಗೆ ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೌನಾನುಷ್ಠಾನ ಜಪಸಲೋದಿಶೀಲ ಸಂಪನ್ನರುಂ ವಿಭುದ ಜನಪಸಂನರುಂ ಶ್ರೀ ಮದ್ವಾದಿ ವಿದ್ಯಾಭರಣ ಪಂಡಿತದೇವರ ಶಿಷ್ಯರುಮಪ್ಪ ಶ್ರೀಮದ್‌ಜ್ಞಾನಶಕ್ತಿ ಪಂಡಿತದೇವರ ಕಾಲಂಕರ್ಚಿ ಧಾರಾಪೂರ್ವಕಂ ಮಾಡಿದಂ. . .ದೇವರ ನೈವೇದ್ಯಕ್ಕಂ, ನಂದಾದೀವಿಗೆಗಂ ತಪೋಧನರರಾಹಾರಕ್ಕಂ ಖಂಡ ಸ್ಫುಟಿತ ಜೀರ್ಣೋದ್ದಾರಕ್ಕವೆಂದು ಕೊಟ್ಟನಿಂತೀಧರ್ಮ ಎಂದು ಬಳ್ಳಿಗಾವಿಯಯತಿ ಜ್ಞಾನಶಕ್ತಿಯ ಉಲ್ಲೇಖವಿದೆ.

ರಾಣೇಬೆನ್ನೂರು ತಾಲೂಕು ಮಾಕನೂರು ಶಾಸನದಲ್ಲಿ ಕ್ರಿಶ ೧೧೪೪ [ಎಸ್‌ಐಐ, ಸಂ ೧೮, ಶಾ.ಸಂ ೧೪೯, ಕ್ರಿಶ ೧೧೪೪] ಬೊಪ್ಪಗಾವುಂಡ ಬ್ರಹ್ಮಸಿಂಗಿ ಪಂಡಿತರ ಕಾಲಂ ಕರ್ಚಿ ಬೊಪ್ಪೇಶ್ವರ ದೇವರ್ಗೆ ಆಚಾರ್ಯರಿಗೆ ಆಹಾರದಾನಕ್ಕೆ ಭೂದಾನ ಮಾಡಿದ ವಿವರಣೆಯಿದೆ.

ಹಾನಗಲ್ಲ ತಾಲೂಕಿನ ಬಾಳೇಹಳ್ಳಿಯ ಮಂಜುನಾಥಗೌಡ ಪಾಟೀಲರ ಮನೆ ಹಿತ್ತಿಲ ಕಲ್ಲಿನಲ್ಲಿ ಶಾಸನ ಕ್ರಿ.ಶ ೧೧೪೫ರಲ್ಲಿ ಗವೇಶ್ವರ ದೇವರಂಗಭೋಗಕ್ಕೆ, ನಿವೇದ್ಯಕ್ಕಂ, ನಂದಾದೀವಿಗೆಗೆ, ಚೈತ್ರಪವಿತ್ರಕ್ಕಂ, ಬಿಟ್ಟದಾನ, ಗಡಿಯಂಕಮಲ್ಲಶೆಟ್ಟಿ, ವಡ್ಡರಾವುಳ ತಿಪ್ಪರಸರು ಕೊಟ್ಟದಾನ, ಗಡಿಯಂಕ ಮಲ್ಲಿಶೆಟ್ಟಿಯುಂ ನಾಗಜ್ಜಿಗೆರೆಯೊಳಗೆ ಗದ್ದೆ ಕಮ್ಮ ೧೫೦ ಮಂ ದೇವರ ನಿವೇದ್ಯಕ್ಕೆ ರುದ್ರಶಕ್ತಿ ಪಂಡಿತರ ಕಾಲಂಕರ್ಚಿ ಧಾರಾಪೂರ್ವಕಂ ಮಾಡಿ ಬಿಟ್ಟರು.[ಗೋಗಿ, ಹನುಮಾಕ್ಷಿ.; ಬಾಳೆಹಳ್ಳಿಶಾಸನಗಳು, ಭಟ್‌ಸೂರಿ ಕೆ ಜಿ.; (ಸಂ) ಶಾಸನ ಅಧ್ಯಯನ ಸಂ.೩, ಸಂ.೧ ಪುಟ.೮೮]

ಹಿರೇಕೆರೂರ ತಾಲೂಕು ಹಂಸಬಾವಿಯ ವೀರಗಲ್ಲು ಕ್ರಿಶ ೧೧೫೭ರ ಶಾಸನದಲ್ಲಿ [ಕ ಇ ४ ನಂ ೩೩] ಬಾಗಗಾವುಂಡನ ಉಲ್ಲೇಖದೊಂದಿಗೆ ಕೇದಾರೇಶ್ವರ ಪಂಡಿತರ ಬಗ್ಗೆ ಮಾಹಿತಿ ದೊರಕುತ್ತದೆ.

ಇದೇ ತಾಲೂಕಿನ ದೇವಿಹೊಸೂರು ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೩೪೭, ಕ್ರಿ.ಶ ೧೧೬೧] ಬಮ್ಮರಸನು ಸೋವರಾಸಿ ಗುರುಗಳಿಗೆ ಕಾಲಂ ಕರ್ಚಿ ಶ್ರೀ ಮೂಲಸ್ಥಾನ ಭೋಗೇಶ್ವರದೇವರಿಗೆ ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಶೈವ ಧರ್ಮದ ಒಂದು ಶಾಖೆಯಾದ ಕಾಳಾಮುಖ ೧೧ ನೆಯ ಶತಮಾನದ ಮಧ್ಯದವರೆಗೂ ನಾಗರಖಂಡದಲ್ಲಿ ಪ್ರಭಲವಾಗಿತ್ತು. ಇಲ್ಲಿಯ ಅನೇಕ ಶೈವ ದೇವಾಲಯಗಳಿಗೆ ಸ್ಥಾನಪತಿಗಳು ಕಾಳಾಮುಖರೇ ಆಗಿದ್ದರು. ನಾಗರಖಂಡದ ಕಾಳಾಮುಖ ಗುರುಗಳು 'ಲಾಕುಲಾಗಮ ಸಮಯ ಸಮುದ್ಧರಣರು ಪಾಶುಪತ ವೃತವನ್ನು ಊರ್ಜಿತಗೊಳಿಸಿದವರೂ ಎಂದು ಶಾಸನಗಳಲ್ಲಿ ವರ್ಣಿತರಾಗಿದ್ದಾರೆ. ನಾಗರಖಂಡದ ಕಾಳಾಮುಖ ಗುರುಗಳಲ್ಲಿ ಮತ್ತಿಹಳ್ಳಿಯ ಚೆಲ್ಲಪಜೀಯರು ಪ್ರಾರಂಭದಲ್ಲಿ ಬಂದಳಿಕೆಯ ಕಲ್ಯಾಣಶಕ್ತಿ ಪಂಡಿತರು ಕೊನೆಯಲ್ಲಿ ಕಂಡುಬರುತ್ತಾರೆ. ಇವರ ಮಧ್ಯದಲ್ಲಿ ಸುಮಾರು ೨೫ ತಪೋಧನರು ಶಾಸನೋಕ್ತರಾಗಿದ್ದಾರೆಂದು ವಿವರಿಸುತ್ತಾರೆ.[ಪಾಟೀಲ ಭೋಜರಾಜ.; ಪೂರ್ವೋಕ್ತ, ಪುಟ ೨೩೩] ನನ್ನ ಅಧ್ಯಯನ ವ್ಯಾಪ್ತಿಯ ಹಿರೇಕೆರೂರ, ಹಾನಗಲ್, ನಾಗರಖಂಡದಲ್ಲಿದ್ದು ಮತ್ತು ನೆರೆಯ ಪ್ರಭಾವಿತ ಪ್ರದೇಶದಲ್ಲಿ ಶೈವಧರ್ಮ ಮತ್ತು ಯತಿಗಳು ಅತಿ ಮಹತ್ವ ಪಡೆದಿದ್ದಾರೆಂಬುದು ಇಲ್ಲಿ ಗಮನಾರ್ಹ. ತಿಳವಳ್ಳಿ ಮತ್ತು ಎಮನೂರು ಶಾಸನದಲ್ಲಿ ಉಲ್ಲೇಖವಿರುವುದನ್ನು ಗಮನಿಸಬಹುದು[ಕಇ.ಸಂ೫ ,೪೨ ಕ್ರಿಶ ೧೨೩೯ ಮತ್ತು ಕಇ. ಸಂ४ ಕ್ರಿಶ ೧೧४೯]

ಇದೇ ತಾಲೂಕಿನ ನಿಡನೇಗಿಲು ಮಲ್ಲಿಕಾರ್ಜುನದೇವಸ್ಥಾನದ ಕ್ರಿಶ ೧೧೬೫ರ ಶಾಸನದಲ್ಲಿ ನರಸಿಯಬ್ಬೆಯ ಮಗ ವಾಮಶಕ್ತಿಯರಿಗೆ ದೇವಸ್ಥಾನದ ಜೀರ್ಣೋದ್ಧಾರಕ್ಕೆ ದಾನಕೊಟ್ಟ ಮಾಹಿತಿಯಿದೆ.[ಕ ಇ ೪ ನಂ ೧೩]

ಹಾವೇರಿ ತಾಲೂಕು ಅಗಡಿ ಶಾಸನದಲ್ಲಿ (ತೇದಿರಹಿತ)[ಎಸ್ಐಐ, ಸಂ ೧೮, ಶಾ.ಸಂ ೧೫೪,] ಬಾಜಗಾವುಂಡನು ಯಮನಿಯಮಸಾಧ್ಯಾಯ....... ಅಮಿತರಾಸಿಜೀಯರ ಪುತ್ರ ಮಾರೆಯನಾಯಕ ಬಚ್ಚೇಶ್ವರ ದೇವರಂಗಭೋಗಕ್ಕೆ ದಾನ ಕೊಟ್ಟ ಬಗ್ಗೆ ವಿವರಣೆಯಿದೆ.

ರಾಣೇಬೆನ್ನೂರ ತಾಲೂಕು ಹುಲ್ಲತ್ತಿ ಶಾಸನದಲ್ಲಿ [ಎಸ್ಐಐ, ಸಂ ೧೮, ಶಾ.ಸಂ ೧೬೩, ಕ್ರಿಶ ೧೧೮೬] ಕಾಳಾಗಾವುಂಡ ವಿಕ್ರಮಾದಿತ್ಯದೇವನು, ಸೋವಲದೇವಿಯರು ಭೂಮಿಯನ್ನು ಶೀಲಗುಣ ಸಂಪನ್ನರಪ್ಪ ಈಶ್ವರ ಪಂಡಿತರ್ಗೆ ದಾನ ನೀಡಿದ್ದಾರೆ.

ಹಾವೇರಿ ತಾಲೂಕಿನ ಬಮ್ಮನಕಟ್ಟಿ ಶಾಸನವು ಗುತ್ತ ವಂಶದ ವಿಕ್ರಮಾದಿತ್ಯ ದೇವರಿಗೆ ರಾಜಗುರು ಕಲ್ಯಾಣದೇವರ ಸನ್ನಿದಾನದೊಳು.......ಎಂದು ಉಲ್ಲೇಖಿಸುತ್ತದೆ. [ಎಸ್ಐಐ, ಸಂ ೧೮, ಶಾ.ಸಂ ೧೬೪]

ಹಾವೇರಿ ತಾಲೂಕು ದೇವಗಿರಿ ಶಾಸನದಲ್ಲಿ [ಎಸ್ಐಐ, ಸಂ ೧೮, ಶಾ.ಸಂ ೧೭೭, ಕ್ರಿಶ ೧೧೬೦] ಮಾಚಿದೇವರಸರು ತನ್ನ ತಂಗೆ ಲಚ್ಚಲದೇವಿಗೆ ಶ್ರೇಯವಾಗಿ ಬಿಟ್ಟ ಧರ್ಮ ಯಮ ನಿಯಮ ಸಾಧ್ಯಾಯ....... ಶ್ರೀಮತು ರಾಮಸಿಂಗ ಪಂಡಿತರ ಕಾಲಂಕರ್ಚಿ ದೇವರಂಗ ಭೋಗನೈವೇದ್ಯಕ್ಕೆ ಖಂಡಸ್ಪುಟಿತ ಜೀರ್ಣೋದ್ಧಾರಕ್ಕೆ ಚೈತ್ರಪವಿತ್ರಕ್ಕೆ ದಾನ ನೀಡಿದ ಉಲ್ಲೇಖವಿದೆ.

ಹಾವೇರಿ ತಾಲೂಕು ಗುತ್ತಲದ ಶಾಸನದಲ್ಲಿ [ಎಸ್ಐಐ, ಸಂ ೧೮, ಶಾ.ಸಂ ೨೯೩, ಕ್ರಿಶ ೧೧೬೨] ದೇವರಸ್ಥಾನಾಚಾರ್ಯ ಸೋಮೇಶ್ವರ ಪಂಡಿತದೇವರು ಧರ್ಮಕ್ಕನುಕೂಲರಾಗಲು........... ಎಂಬ ಉಲ್ಲೇಖವಿದೆ

ವಾಮಶಕ್ತಿಯ ಹೆಸರು ಕಳಚೂರಿ ಅರಸನಾದ ಬಿಜ್ಜಳನ ಆಳ್ವಿಕೆಯಕಾಲದ (ಅವಿಭಜಿತ) ಧಾರವಾಡ ಜಿಲ್ಲೆಯ ಹಳೆನಿಡನೇಗಿಲು ಗ್ರಾಮದ ಕ್ರಿಶ ೧೧೬೫ ರ ದತ್ತಿಯನ್ನು ಕುರಿತಾದ ಶಾಸನವೊಂದರಲ್ಲಿ ಉಲ್ಲೇಖಿತವಾಗಿದೆ.[ಅಣ್ಣಿಗೇರಿ ಎಂ ಎಂ.; (ಸಂ) ಕರ್ನಾಟಕ ಇನ್ಸಕ್ರಿಪಶನ್ ೪ ಸಂ ೧೩] ಈ ದಿವಸ ಅರಸನ ಮಾಂಡಳಿಕನಾದ ಸಿಂಧ ಮಹಾಮಂಡಲೇಶ್ವರನು ಈ ಗ್ರಾಮದ ಮಲ್ಲಿಕಾರ್ಜುನ ದೇವಾಲಯಕ್ಕೆ ಬಲಿಪುರಂ

ಪಟ್ಟಣದ ದಕ್ಷಿಣ ಕೇದಾರೇಶ್ವರ ದೇವಾಲಯದ ಯತಿ ವಾಮಶಕ್ತಿ ಪಂಡಿತದೇವನ ಪಾದ ತೊಳೆದು ಕಾಣಿಕೆಯನ್ನು ಸಲ್ಲಿಸಿರುವುದನ್ನು ಸೂಚಿಸುತ್ತದೆ.

ಹಾನಗಲ್ ತಾಲೂಕು ಸಂಗೂರಿನ ಶಾಸನವು [ಎಸ್‌ಐಐ, ಸಂ ೧೮, ಶಾ.ಸಂ ೧೭೯, ಕ್ರಿ.ಶ ೧೧೬೭] ಬಮ್ಮರಸರು ಯಮನಿಯಮ ಸಾಧ್ಯಾಯಧ್ಯಾನ....... ಶ್ರೀಮತ್ಕಲಿದೇವ ಪಣ್ಡಿತರ ಮಗ ಶ್ರೀ ಬ್ರಹ್ಮೇಶ್ವರ ದೇವಚಾರ್ಯ್ಯ, ಬ್ರಹ್ಮಸಿರಿಪಂಡಿತರಿಗೆ ದಾನ ನೀಡಿದ ಮಾಹಿತಿ ನೀಡುತ್ತದೆ.

ಹಿರೇಕೆರೂರ ತಾಲೂಕಿನ ರಟ್ಟಿಹಳ್ಳಿಯ ಕದಂಬೇಶ್ವರ ದೇವಸ್ಥಾನದ ಒಳಮಂಟಪದಲ್ಲಿ ಕ್ರಿ.ಶ ೧೧೭೪ ರ [ಕಇ.ಸಂ೬.ಶಾ.ಸಂ ३೭, ೧೧೭೪] (೬೪ ನೇಸಾಲು) ದೇವಸ್ಥಾವು ಊರ್ಜಿತಗೊಳ್ಳಲು ಆಚಾರ್ಯರೆನಿಸಿದ ಕಲ್ಯಾಣ ಶಕ್ತಿ ದೇವರಿಂದ ಅವರ ಗುರುಗಳ ಉನ್ನತಿ ಹೇಗಿದೆಯಂದರೆ. ಕಾಳಾಮುಖವಾದಿಯಾಗಿ ಸಮಾಳಂಕ್ರಿತ ಸೂತ್ರ ಧಾತು ಪರ್ವತದಿಂದ ಅವಲೋಕಿಸಿದಾಗ ಕಿಟ್ಟಗಾವಿಯಾನ್ವತದೊಳು ಕಾಳಾಮುಖ ಶ್ರೀ ವಿಳಾಸ ಮಣಿಮುಕುರವಾಗಿರುವುದು ಎಂದರೆ ವಾಮದೇವ ಯತಿಯ ಪುಣ್ಯ ನಿಧಾನ ಪ್ರಸಿದ್ಧಿಯನ್ನು ಪಡೆದ ಮುನೀಶನ ಶಿಷ್ಯನು ಮನುಚರಿತನು ಅವನ ಶಿಷ್ಯ ಹೆಸರುವಾಸಿಯಾದ ನಿಖಿಳ ಅವನಿಯಲ್ಲಿ ಕ್ರಿಯಾಶಕ್ತಿ ಹೆಸರಿನಿಂದರುವವನು, ತಪಸ್ಸಂನ್ನನು ಅವನ ಶಿಷ್ಯ ಅಮೃತರಾಸಿಯತೀಶನು. ಪ್ರಸಿದ್ಧಿ ಪಡೆದ ಶ್ರೀಕಂತದೇವ ಭುಧನಿಧಿ ತದಪತ್ಯಂ ತದೀಯೋದ್ಧಶಿಷ್ಯಂ ಕುಸುಮಾಸ್ತ್ರತ್ರಕ್ಷ್ಯನುರ್ವಿ ಪ್ರಥಿತಗುಣನಿವಾಸನು ಆದ ಕ್ರಿಯಾಶಕ್ತಿ ದೇವನು. ಅವನ ಶಿಷ್ಯನಾದ ವಿನತ ನೃಪಲಸನ್ಮೌಳಿ ಮಾಣಿಕ್ಯ ಕಾಂತಿ ಪ್ರಸರೊದ್ಯತ್ ಕೇಸರಾಂಘ್ರಿದ್ವಯ ಸರಸೀಹೊದ್ಭಾಸಿ ಸರ್ವೆಶ್ವರಾರ್ಯ್ಯಂ ಅವನ ಮನಪ್ರೀಯ ಶಿಷ್ಯ ಮಾತಿನಲ್ಲಿಚತುರ ವಾಣಿವಿಹರಣಸದನ. ಸಂತತ ನೇತ್ರಪೂರ್ಣದಯಾಪಾತ್ರ, ಸ್ವಹಸ್ತವಿತರಣ ಕರುಣೆಗೆ ಹೆಸರಾದವ ಆತ್ಮೀಯವಾಗಿ ಹೃದಯದಲ್ಲಿಟ್ಟುಕೊಳ್ಳುವವ ತತ್ರ್ಯಕ್ಷಂ ಯತಿತತಿ ತನಗಿಲ್ಲವೆಂಬ ನತ್ಯಸತ್ಯ ಪರಿಪಾಲಿಸುವವ ಕಲ್ಯಾಣಶಕ್ತಿ ಬ್ರತಿಪತಿಯು ನೆಗಳ್ದ ಪೂತವೃತ್ತಾವದಾತಂ ಜನಮಂ ಮೋಹಿಪ ಮೂರ್ತಿ,ಮೂರ್ತಿಗೆಣೆಯಾದುರ್ರ್ಯದು ಉದಾತ್ತ ತಪವು ಆತಪಕ್ಕನುರೂಪನಪ್ಪ ಚರಿತೆ ಆ ಚರಿತದಿಂ ಮೂಲೋಕವು ಕೂಡೆ ಪಾವನವನ್ನು ಮಾಳ್ಪಜಸಂಪೊಗಳದತೆವಡೆಗುಂ ಕಲ್ಯಾಣಶಕ್ತಿ ಬ್ರತೀಂದ್ರನೊಳ್॥ಶೋ॥ ಚಿತ್ತಂ ವಿದ್ವನ್ಮುಖಾಬ್ಜಾನಾಂ ಸ್ಮೇರತಾಂ ಕುರುತೇನ್ವಹಂ ಕಲ್ಯಾಣಶಕ್ತಿ ದೇವಸ್ಯ ವದನಾಮೃತದೀಧಿತಿ॥ ಅದೇರೀತಿ ಸಮುದ್ಭವನೀಶ್ವರ ಪಾದಕಮಲ ಬ್ರಮರನಾಗಂ ಆಬ್ಜಾತ ಸಮಭ್ಯದಿಹೆ ದಶಶತ ಮಯೂಖ ಮದನೋಗ್ರ

ಮೂಜುಜಾವಿದೇವ ಬ್ರತಿಪಂ ತೊಳಪ ಸುಧಾಂಶುವನ್ನು ಉದರದಲ್ಲಿ ಹೊಂದಿದನಕಾಂತಿಯಂತಿರೆ ಮೃಡ ಉಜ್ಜಳಿಸೆ ನಿಜ ಹೃಯದೊಳಗಾಗಳೆ ಕಾಣುವ ಮೂಜುಜಾವಿದೇವ ಮುನೀಂದ್ರಂ ಅವನ ಶಿಷ್ಯನುಘ ಕುಜಬ್ರಜ ವಿಚ್ಚೇದನ ಪಟುಕುಠಾರನು ಶ್ರೇಷ್ಠ ವಿದ್ವತಶರಣನಾದ ಲಕುಳೀಶ್ವರನು ಅಚ್ಚ ಗುಣಾಂಭೋದಿ ಗುರುಕುಳಾಂಭುದಿ ಚಂದ್ರಂನಾಗಿರುವವನು.॥ಕಂ॥ ಈ ಲಕುಳಿಶ್ವರದೇವ ಸುಲಲಿತಸಿತ ಕೀರ್ತಿಬಳ್ಳಿಯನ್ನು ಬಳಸುವ ಶ್ರೇಷ್ಠ ಚರಣಕಾಂಚನ ಜಲಧಾರೆಯಿಂದ ಅಖಿಳಲೋಖವನ್ನು ಪರ್ವುವಿನಂ॥ ಅಂತಿರುವ ಯಮ ನಿಯಮ ಸ್ವಾದ್ಯಾಯ ಧ್ಯಾನಮೋನಾನುಷ್ಠಾನ ಜಪ ಸಮಾಧಿ ಶೀಲ ಸಂಪನ್ನರುಂಗುರು ಕುಲಸಮುದ್ಧರಣರುಮಪ್ಪ ಕಲ್ಯಾಣಶಕ್ತಿದೇವರ ಕಾಲಂ ಕರ್ಚಿ ಶ್ರೀಕಡಂಬೇಶ್ವರ ದೇವರಂಗಭೋಗಖಣ್ಡಸ್ಪುಟಿತ ಜೀರ್ಣೋದ್ದಾರಕ್ಕವೆಂದು, ಶಕವರ್ಷ ೧೦೯೭ [ಕ್ರಿ.ಶ ೧೧೭೪ ಜೂನ ೧] ರವಿವಾರ ಸೂರ್ಯ ಗ್ರಹಣದಂದು ಶ್ರೀಮಹಾಮಂಡಲೇಶ್ವರ ಪಾಂಡ್ಯದೇವರಸ ಕುಮಾರ ಹಡವಳ ಚೌಂಡರಸನು ಧಾರಾಪೂರ್ವಕವಾಗಿ ನೂರುಂಬಾಡದೊಳಗೆ ಸೀಮೆ ಸಹಿತ ಊರೂರೊಳು ಗದ್ಯಾಣವೊಂದು, ಸೂಳೆಕೇರಿಯ ದಕ್ಷಿಣ ಕೇರಿಯ ಒಂದು ದೇವರ ನಂದಾದೀಪಕ್ಕೆ ಗಾಣದ ಎರಡು, ಕಲಿದೇವರ ಪೂರ್ವ ದಿಕ್ಕಿನ ಹೂದೋಟವುಒಂದು, ಮಠದ ಪೂರ್ವಕ್ಕೆ ಸಾವಿರಮಠದ ತೋಂಟದಸ್ಥಳ, ಎಡೆಗೊಡು ಹೋತುಮಣ್ಣುಗದ್ದೆ ಮತ್ತರು ಇಂದು ಸ್ಥಳ ವೃತ್ತಿಯ ಭೂಮಿಯ ಪ್ರಮಾಣ ದೇವರ ಕಳಸವ ಹತ್ತಿನೋಡಲು ಕುಮದ್ವತಿಯ ಪೂರ್ವ ದೃಷ್ಟಿ ಮರೆಯಾಗಿದೆ. ಉತ್ತರದ ಮೂಕೊರತಿಯ (ಮಕರಿ) ಹೊಳೆಯಿಂದ ಹೆದ್ದಾರಿವಿಡಿದೆಡೆ ಎಡಗೋಡ ಕೆರೆಯ ಪಡುವಣ ಕೋಡಿ ಮೇರೆ. ದಕ್ಷಿಣಕ್ಕೆ ಕೊಳಕನ ಕೆರೆಯ ತೆಂಕಗೋಡಿಸೀಮೆ, ಮತ್ತಂ ಹೊಸಗೆರೆಯ ಗದ್ದೆಯಂ ಪೂರ್ವಕ್ಕೆ ಹಗಲೂಟಗೆಯ್ಮತ್ತರೊಂದು.ಇನ್ತನುತಮಂಬಿಟ್ಟರು.

ಈ ಶಾಸನದಂತೆ ಯತಿಗಳ ಪರಂಪರೆ ಇಂತಿದೆ.

ವಾಮದೇವ ->ವಾದಿರುದ್ರ -> ಕ್ರಿಯಾಶಕ್ತಿ -> ಅಮೃತರಾಸಿ -> ಶ್ರೀಕಂಠದೇವ -> ಸರ್ವೇಶ್ವರ -> ಕಲ್ಯಾಣಶಕ್ತಿ -> ಮೂಜುಜಾವಿದೇವ -> ಲಕುಳೀಶ

ಹಿರೇಕೆರೂರು ತಾಲೂಕು ಹಿರೇಕಬ್ಬಾರ ಕ್ರಿ.ಶ ೧೧೭೬ ರ ಗುತ್ತರಶಾಸನದಲ್ಲಿ ಕಲಿಯಮಗೌವುಂಡ ರುದ್ರಾಶಕ್ತಿ ಪಂಡಿತರಿಗೆ ದಾನ ನೀಡಿದ ಉಲ್ಲೇಖವಿದೆ.[ಕ ಇ ೪ ನಂ ೩೮]

ಹಾವೇರಿ ತಾಲೂಕು ಕೆಂಗೊಂಡ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೨೯೪, ಕ್ರಿಶ ೧೧೭೭] ಹೊನುಗಲಿಯ ಮೂಲಸ್ಥಾನ ಶ್ರೀ ಮಲ್ಲಿಕಾರ್ಜುನ ದೇವರರಂಗ ಭೋಗಕ್ಕೆ ನಿವೇದ್ಯ, ನಂದಾದೀವಿಗೆ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಧರ್ಮರಾಶಿ ಪಂಡಿತರ ಕಾಲಂಕರ್ಚಿ ದಾನ ಕೊಟ್ಟ ಉಲ್ಲೇಖವಿದೆ. ಸಿಗ್ಗಾಂವ ತಾಲೂಕು ಬಂಕಾಪುರದ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೨೯೦, ಕ್ರಿಶ ೧೧೭೮] ವಿಮಳಶಕ್ತಿ ಯತಿಗಳ ಕಾಲಂಕರ್ಚಿ ಕೀರ್ತಿದೇವರಸ ದಾನ ನೀಡಿದ ಉಲ್ಲೇಖವಿದೆ. ಕಾಳಾಮುಖ ಕುಳಕಮಳನೀಪೂರ್ಣಚಂದ್ರ........ ಎಂಬ ವರ್ಣನೆಯಿದೆ. ಇಲ್ಲಿಯ ಇನ್ನೊಂದು ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೨೯೧] ಶಿವಶಕ್ತಿ ಪಂಡಿತ ದೇವರಿಗೆ ಇಂದ್ರೇಶ್ವರ ದೇವರ ನಂದಾದೀವಿಗೆಗೆ, ತೋಂಟದ ಸುಂಕವನ್ನು ನೀಡಿದ ವಿವರಣೆಯಿದೆ.

ರಾಣೇಬೆನ್ನೂರು ತಾಲೂಕು ಮೇದೂರು ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೧೯೦ ಕ್ರಿಶ ೧೧೮೨] ಗುಡಿಗೇರಿಯ ಕಾಮಗಾವುಂಡನು ಶ್ರೀಮೂಲಸ್ಥಾನ ಕಲಿದೇವರಿಗೆ ಜೀರ್ಣೋದ್ಧಾರ, ರಂಗಭೋಗ, ಲಿಂಗಭೋಗ ನಿತ್ಯ ಪೂಜೆ ನೈವೇದ್ಯ ನಂದಾದೀವಿಗೆ ಸಲುವಾಗಿ ಚಂದ್ರಮೌಳಿ ಪಂಡಿತರ ಕಾಲಂಕರ್ಚಿ ದತ್ತಿ ಬಿಟ್ಟ ಕುರಿತು ವಿವರಣೆಯಿದೆ. ಇದೇ ತಾಲೂಕಿನ ಹೂಲಿಹಳ್ಳಿ ಶಾಸನವೊಂದರಲ್ಲಿ [ಎಸ್‌ಐಐ,. ಸಂ ೧೮, ಶಾ.ಸಂ ೧೯೧ ಕ್ರಿಶ ೧೧೮೨] ಕೇತಗಾವುಂಡನು ಶ್ರೀರಾಮೇಶ್ವರ ದೇವರ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ನೈವೇದ್ಯಕ್ಕೆ ಭೂಮಿಯನ್ನು ಯಮನಿಯಮಸಾಧ್ಯಾಯಧಾನ......... ಕಲ್ಯಾಣಶಕ್ತಿ ಪಂಡಿತರ್ಗೆ ದಾನ ನೀಡಿದ ಮಾಹಿತಿಯಿದೆ.

ಗುಡ್ಡದ ಆನ್ವೇರಿ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೧೯೨, ಕ್ರಿಶ ೧೧೮೩] ವಿಕ್ರಮಾದಿತ್ಯದೇವರಸ, ತತುಪುತ್ರನಪ್ಪ ಜೋಯಿದೇವರಸರು ಕೂಡಿ ಸೋಮೇಶ್ವರ ಪಂಡಿತರಿಗೆ ಸ್ಥಾನಾಚಾರ್ಯತ್ವವನ್ನು ಸುಪ್ರತಿಷತಂ ಮಾಡಿ ಮಲ್ಲಿಕಾರ್ಜುನ ದೇವರಿಗೆ ದಾನ ಕೊಟ್ಟ ಮಾಹಿತಿಯಿದೆ.

ಹಾವೇರಿ ತಾಲೂಕಿನ ಹರಳಹಳ್ಳಿಯ ಕ್ರಿಶ ೧೧೮೪ ಮತ್ತು ೧೧೮೮ರ ಶಾಸನದಲ್ಲಿ [ಕಇ.ಸಂ ೬ ಶಾ.ಸಂ ೩೯ ೧೧೮೧,೧೧೮೮] ಜೋಯಿದೇವರಸ ಗುತ್ತರಅರಸ ಹೊಂನವರ್ತಿ ಹನ್ನೆರಡರ ಬಳಿಯ ಬಾಡಂ ಗೊಟ್ಟಗಡಿ. . . . ಸರ್ವಬಾಧಾ ಪರಿಹಾರಮುಂ ಸರ್ಬ್ಯಾಭ್ಯಂತರದ ಶುದ್ದಮುಂ ಸರ್ಬ್ಯನಮಸ್ಯಮುಂಮಾಗೆ ಜಲತರುಪಾಷಾಣಕರ ತೃಣಾತಿಶಯ ನಿಧಿನಿಧಾನ ನಿಕ್ಷೇಪದಂಡದೊಂದಾ. . . ದ್ಯಾಗನ್ತುಕ

ಲಾಭಸಹಿತವಾಗಿ ಶ್ರೀಮದ್ರಾಜಗುರು ಕಲ್ಯಾಣಶಕ್ತಿದೇವರ ಶ್ರೀಪಾದಪದ್ಮಂಗಳ ಪೂಜಿಸಿ ಧಾರಾಪೂರ್ವಕಮಾಗಿ ಶ್ರೀ ಸ್ವಯಂಭು ಸೋಮನಾಥ ದೇವರ ವಿಕ್ರಮೇಶ್ವರ ಗುತ್ತೇಶ್ವರ ದೇವತಾ ಪ್ರತಿಷ್ಠಾತಿಶಯದ ತ್ರಿಕೂಟಮಂ ಖಂಡಸ್ಫುಟಿತ ಜೀರ್ಣೋದ್ಧಾರಕ್ಕಂ ದೇವರಂಗಭೋಗ ಚೈತ್ರ . .ಇತ್ಯಾದಿಗಳಿಗೆ ದಾನಕೊಟ್ಟ ಉಲ್ಲೇಖವಿದೆ

ರಾಣೇಬೆನ್ನೂರು ತಾಲೂಕು ಹೊನ್ನತ್ತಿ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೩೦೨, ಕ್ರಿಶ ೧೧೮೭] ಜೋಯಿದೇವರಸರು ರಾಜೇಶ್ವರದೇವರ ಆಚಾರ್ಯ ವಿರುಪಾಕ್ಷದೇವ ತ್ರಿಲೋಚನದೇವರ ಕಾಲಂ ತೊಳೆದು ದಾನಕೊಟ್ಟ ಉಲ್ಲೇಖವಿದೆ.

ಇದೇ ತಾಲೂಕಿನ ಹರಳಹ'ಳ್ಳಿ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೨೯೫, ಕ್ರಿಶ ೧೧೮೮] ಮಾಚರಸನು ಶ್ರೀ ಮದ್ರಾಜಗುರು ಕಲ್ಯಾಣಶಕ್ತಿ ದೇವರ ಕಾಲಂ ಕರ್ಚಿ ದಾನ ನೀಡಿದ ಉಲ್ಲೇಖವಿದೆ. ಇಲ್ಲಿಯ ಇನ್ನೊಂದು ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೫೧೧ ಕ್ರಿಶ ೧೧೮೮] ಧರಣೀಶಂ ಬೆಸಗೊಳ ಸದ್ಗುರುವಂ ಸತ್‌ಕ್ಷೇತ್ರವಂ ಸುಸಂಗ ಕೇಳ್ದಂ ಪರಮೋತ್ಸವದಿಂದಗಬಾವನನಂ ಮೆಚ್ಚಿಸುವ ಕಾಳಮುಖಯತತಿಯೋಳ್॥ ಸವನಿಸಿದ ಶಕ್ತಿಪರುಷೆಯೊಳವನೀನು ಕಿಟ್ಟಗಾವೆಸನ್ತತಿಳ್ತೋಜುವಪುಂ ಎಂಬ ಉಲ್ಲೇಖದೊಂದಿಗೆ ಶ್ರೀಮದ್ರಾಜಗುರು ಕಲ್ಯಾಣಶಕ್ತಿ ದೇವರ ಶ್ರೀಪಾದಪದ್ಮಂಗಳ ಪೂಜಿಸಿಧಾರಾಪೂರ್ವಕವಾಗಿ ಶ್ರೀ ಸ್ವಯಂಭು ಸೋಮನಾಥ ದೇವರ ವಿಕ್ರಮೇಶ್ವರ ಗುತ್ತೇಶ್ವರ ದೇವತಾ ಪ್ರತಿಷಾತಿಶಯದ ತ್ರಿಕೂಟದ ಮಾಟಕ್ಕೆ ಖಂಡಸ್ಫುಟತ ಜೀರ್ಣೋದ್ಧಾರಕ್ಕೆ ದೇವರ ರಂಗಭೋಗಕ್ಕೆ ದಾನ ಕೊಟ್ಟ ಉಲ್ಲೇಖವಿದೆ. ೧೧೮೮ ರ ಶಾಸನದ ಪ್ರಕಾರ ವೀರವಿಕ್ರಮಾದಿತ್ಯದೇವ ಶ್ರೀಮದ್ರಾಜಗುರು ಕಲ್ಯಾಣಶಕ್ತಿದೇವರ್ಗ್ಗೆ ಸ್ವಯಂಭು ಸೋಮನಾಥದೇವರ ಸಂನಿಧಾನಲ್ಧಾರಾಪೂರ್ವಕಂ ಕೊಟ್ಟ ಮತ್ತರಿಪ್ಪತ್ತುಮನುದ್ಯತಪೋಧನರಾಹಾರಕ್ಕೆ. . .ವಿವಿಧ ಸ್ಥಳಗಳಿಂದ ದಾನ ಕೊಟ್ಟ ವಿವರಣೆಯಿದೆ.(೭೩ನೆ ಸಾಲು) ಮುಖಯತಿತತಿಯೊಳ॥ ಸವನಿಸಿದ ಶಕ್ತಿಪರುಷೆಯೊಳವನೀನುತ. . . . ಎಂಬ ಶಕ್ತಿಪರಿಷೆಯ ಉಲ್ಲೇಖವಿದೆ. (೭೫ನೆಸಾಲು) ಯತಿನಾಥಂ ವಾಮದೇವಂ ಬ್ರತಿಪತಿತರದಿಂ ಮೂವರುಂ ದೇವರುಂಕೂಡೆ ಮೂರುದೇವರು. . .ಬ್ರಹ್ಮ ವಿಷ್ಣು ಮಹೇಶ್ವರರ ಉಲ್ಲೇಖವಿರುವುದು. ಅಲ್ಲದೇ ವಾಮದೇವ–> ವಾದಿರುದ್ರಪಂಡಿತದೇವ–>ಕ್ರಿಯಾಶಕ್ತಿದೇವ–> ಅಮೃತರಾಶಿ–> ಸರ್ವೇಶ್ವರ–> ಕಲ್ಯಾಣಶಕ್ತಿ.

ಹಾವೇರಿ ತಾಲೂಕು ಗುತ್ತಲ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೨೯೭, ಕ್ರಿಶ ೧೧೮೯] ಕಿಟ್ಟದ ಕಿಟ್ಟಗಾವೆ ಸಂತತಿ ಪರ್ವತಾವಳಿ ಬುಧಸ್ತುತಂ ಕಾಲಮುಖಾನ್ವಯಂ ಜಗಂನುತಗುರುವಂಶಲಂಬವೆನೆ.......... ದೇವರ ಪ್ರತಿಷ್ಠೆಯ ಮಹೋತ್ಸವದೊಳಾದೇವರ ರಂಗಭೋಗಕ್ಕೆ ರಾಜಗುರು ಕಲ್ಯಾಣಶಕ್ತಿ ದೇವರ ಕಾಲಂಕರ್ಚಿ ದಾನ ನೀಡಿದ ಮಾಹಿತಿ ಇದೆ.

ಹಾವೇರಿ ತಾಲೂಕು ಗುತ್ತಲ ಶಾಸನದಲ್ಲಿ [ಎಸ್‌ಐಐ, ಸಂ ೧೮.೨೯೭ ಕ್ರಿಶ ೧೧೮೯] ಕಿಟ್ಟದ ಕಿಟ್ಟಗಾವೆ ಸಂತತಿ ಪರ್ವತಾವಳಿ ಭುಧ ಸ್ತುತಂ ಕಾಲಾಮುಖಾನ್ವಯಂ ಜಗಂನುತಗುರು ವಂಶಲಂಬಮೆನೆ. . . .ದೇವರ ಪ್ರತಿಷ್ಠೆಯ ಮಹೋತ್ಸವದೊಳಾ ದೇವರ ರಂಗಭೋಗಕ್ಕೆ ರಾಜಗುರು ಕಲ್ಯಾಣಶಕ್ತಿದೇವರ ಕಾಲಂ ಕರ್ಚಿ ದಾನ ನೀಡಿದ ಮಾಹಿತಿ ಇದೆ.

ರಾಣೇಬೆನ್ನೂರ ತಾಲೂಕು ಚೌಡದಾನಪುರ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೨೯೯, ಕ್ರಿಶ ೧೧೯೨] ಶ್ರೀಮನು ಮುಕ್ತೇಶ್ವರ ದೇವರ ಅಂಗರಂಗಭೋಗಕ್ಕೆ ಜೀರ್ಣೋರ್ದ್ಧಾರಕ್ಕೆ ಮುಕ್ತಜೀಯರ ಕಾಲಂಕರ್ಚಿ ದಾನ ಕೊಟ್ಟ ಉಲ್ಲೇಖವಿದೆ.

ಬ್ಯಾಡಗಿ ತಾಲೂಕು ಕುಮ್ಮೂರು ಶಾಸನದಲ್ಲಿ [ಕಇ.ಸಂ ೬.ಶಾ.ಸ ೩೩ ಕ್ರಿಶ ೧೧೯೫] ರಲ್ಲಿ ಬಾಗಗಾವುಂಡನು ಶ್ರೀರಾಮನಾಥ ದೇವರ ನೈವೇದ್ಯಕ್ಕಂ ಚೈತ್ರ ಪವಿತ್ರಕ್ಕೆ ತಪೋಧನರರಾಹಾರದಾನಕ್ಕಂ ಜೀರ್ನೋದ್ಧಾರಕ್ಕೆ, ಕೇದಾರಪಂಡಿತ ದೇವರ ಕಾಲಂ ಕರ್ಚಿ ಧಾರಾಪೂರ್ವಕಂ ಮಾಡಿಬಿಟ್ಟ ಭೂಮಿ. ಈ ಶಾಸನದಲ್ಲಿ ಯತಿಗಳ ವಂಶಾವಳಿಯನ್ನು ಉಲ್ಲೇಖಿಸಲಾಗಿದೆ.

ಯಮ ನಿಯಮ ಸ್ವಾಧ್ಯಾಯಧ್ಯಾನಧಾರಣ ಮೋನಾನುಷ್ಠಾಣಜಪ ಸಮಾಧಿ ಸೀಳ ಗುಣ ಸಂಪನ್ನರುಂ ಶ್ರೀ ರಾಮಾನಾಥದೇವರ ಶ್ರೀ ಪಾದಾರಾಧಕರುಮಪ್ಪ ವಕ್ತ್ರಶಿವಪಂಡಿತರ ಮಗನಪ್ಪ ವಾಮಶಕ್ತಿ ದೇವರ ಮಗನಪ್ಪ ವಾಮಶಕ್ತಿದೇವರ ಮಗನಪ್ಪ ಮಲ್ಲಿಕಾರ್ಜುನದೇವರ ಮಗನಪ್ಪ ಕೇದಾರ ಪಣ್ಡಿತದೇವರ ಕಾಲಂ ಕರ್ಚಿ ಧಾರಾಪೂರ್ವಕಂ ಮಾಡಿ ಬಿಟ್ಟ ಭೂಮಿ ಶ್ರೀರಾಮನಾಥದೇವರಿಂ ಪಡುವಡಲು ಜೀಯಗೆರೆಯಯಿಡಿಗೆರೆಯಾಗಿ ಗರ್ದ್ದೆ.ಈ ಶಾಸನದ ಯತಿಗಳ ವಂಶಾವಳಿ ಪರಂಪರೆ ಇಂತಿದೆ.

ವಕ್ತ್ರಶಿವ ಪಣ್ಡಿತರು–> ವಾಮಶಕ್ತಿದೇವರು–> ಮಲ್ಲಿಕಾರ್ಜುನ–> ಕೇದಾರಪಣ್ಡಿತ

ಹಿರೇಕೆರೂರು ತಾಲೂಕು ಅಬ್ಬಲೂರಿನ ಸೋಮೇಶ್ವರ ದೇವಾಲಯದ ಒಳಗಡೆಯಿರುವ ಕ್ರಿಶ ೧೨೦೦ರ ಏಕಾಂತರಾಮಯ್ಯನ ಶಾಸನ ಏಕಾಂತರಾಮಯ್ಯನ ಘಟನೆಯನ್ನು ಕುರಿತಂತೆ ಏಕಾಂತರಾಮಯ್ಯನ ಅಬಲೂರು ಶಾಸನದಲ್ಲಿ ನಾಲ್ಕು ದೊರೆಗಳ ಆಡಳಿತದ ಕುರಿತ ಉಲ್ಲೇಖಗಳು ಬರುತ್ತವೆ. ಕಾಮದೇವನು ಸೂರ್ಯಗ್ರಹನ ವ್ಯತಿಪಾತ ಸಂಕ್ರಮಣ ಪುಣ್ಯಕಾಲದಲ್ಲಿ ಏಕಾಂತರಾಮಯ್ಯಂಗಳಿಗೆ ದಾನ ಕೊಟ್ಟರುತ್ತಾನೆ. ಈ (ತೇದಿಯು) ದಾನಕೊಟ್ಟ ಕಾಲ ೧೧೯೧ ಡಿಸೆಂಬರ ೧೮ ಬುಧವಾರದಂದು ೪ ಗಂ ೪೭ ನಿಮಿಷಕ್ಕೆ ಸೂರ್ಯಗ್ರಹಣವಿದ್ದು ಅಮವಾಸೆ ಅಲ್ಲದೆ ಅದು ಸಂಕ್ರಮಣದಿನವೂ ಆಗಿದೆ. ಈ ತೇದಿಯನ್ನು ಹೊರತುಪಡಿಸಿ ಬಿಜ್ಜಳನ ಕಾಲದಲ್ಲಾಗಲಿ, ಸೋಮೇಶ್ವರನ ಕಾಲದಲ್ಲಾಗಲಿ, ಕಾಮದೇವರಸನ ಕಾಲದಲ್ಲಾಗಲಿ, ಮಲ್ಲಿದೇವರಸನ ಕಾಲದಲ್ಲಾಗಲಿ ಏಕಾಂತರಾಮಯ್ಯಂಗಳ ಶಿರಸ್ಸು ಪವಾಡದ ತೇದಿಗಳು ಉಲ್ಲೇಖವಾಗಿಲ್ಲ.

ಹಿರೇಕೆರೂರ ತಾಲೂಕಿನ ಕಣವಿ ಸಿದ್ದಗೇರಿಯ ೧೨ನೆಯಶತಮಾನದ ತಿಥಿ ರಹಿತ ಒಂದು ಶಾಸನದಲ್ಲಿ ಕಾಳಾಮುಖ ಯತಿಗಳದ್ದಾಗಿಬಹುದಾದ ಇನ್ನೊಂದು ಪರಂಪರೆ ಜಮದಗ್ನಿ ರಾಮೇಶ್ವರ ದೇವಾಲಯಕ್ಕೆ ನೀಡಲಾದ ರಾಮಶಕ್ತಿ ಎನ್ನುವವನ ಶಿಷ್ಯ ಮಾಣಿಕರಾಶಿ ಪಂಡಿತನ ಶಿಷ್ಯ ಸ್ಥಾನಾಚಾರ್ಯ ರಾಮಶಕ್ತಿ ದೇವನಿಗೆ ಒಪ್ಪಿಸಲಾದ ಕಾಣಿಕೆ ಉಲ್ಲೇಖವಿದೆ. .[ಕಇ.ಸಂ-೬,ನಂ ೭]

ಹಾವೇರಿ ತಾಲೂಕು ಹರಳಳ್ಳಿ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೩೦೦, ಕ್ರಿಶ ೧೨೧೩] ಶ್ರೀ ಮದ್ರಾಜಗುರು ಗೊಟ್ಟಗಡಿಯ ಸೋಮನಾಥ ದೇವರ ಸ್ಥಾನಾಚಾರ್ಯ ತ್ರಿಲೋಚನ ದೇವರ ಪಾದ ಪ್ರಕ್ಷಾಳನ ಮಾಡಿ ದಾನ ಮಾಡಿದ ವಿವರವಿದೆ.

ಹಾವೇರಿಯ ಪುರಸಿದ್ದೇಶ್ವರ ದೇವಾಲಯದಲ್ಲಿರುವ ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೨೦೬ ಕ್ರಿಶ ೧೨೨೭] ಶ್ರೀಸಿದ್ದನಾಥದೇವರ ಶ್ರೀ ಪಾದಪದುಮಾರಾಧಕರುಮಪ್ಪ ಜ್ಞಾನರಾಸಿದೇವರು ಮುಖ್ಯವಾಗಿ ಪತ್ರ ವಹಿಸಿದ್ದರು. ದಾನ ಕೊಡುವಾಗ ಎಂಬ ಮಾಹಿತಿಯಿದೆ.

ಇಲ್ಲಿಯ ಇನ್ನೊಂದು ಶಾಸನದಲ್ಲಿ [ಎಸ್‌ಐಐ, ಸಂ ೧೮, ಶಾ.ಸಂ ೨೦೭, ಕ್ರಿಶ ೧೨೨೮] ಮೈಲಿಸೆಟ್ಟಿಯ ಪುತ್ರರಾದ ದೇಚ್ಚಿಶೆಟ್ಟಿ, ಮಾಯಿಶೆಟ್ಟಿಯರು ಅಖಂಡ ನಂದಾದೀವಿಗೆಗೆ ಪುಷ್ಪಕ್ಕೆ ಶ್ರೀಮದ್ರಾಜಗುರು ಜ್ಞಾನರಾಸಿದೇವರ ಕೈಯಲು ಕೊಟ್ಟು ಎಂಬ ದಾನ ನೀಡಿದ ಮಾಹಿತಿಯಿದೆ. ಇನ್ನೊಂದು ಶಾಸನದಲ್ಲಿ ವಿನಾಯಕ ದೇವರ

ಉಪಹಾರಕ್ಕೆ ಜ್ಞಾನರಾಸಿದೇವರಿಗೆ ಗದ್ಯಾಣಗಳನ್ನು ಕೊಟ್ಟ ಉಲ್ಲೇಖವಿದೆ. [ಎಸ್ಐಐ, ಸಂ ೧೮, ಶಾ.ಸಂ ೨೦೯ ಕ್ರಿಶ ೧೨೨೮]

ರಟ್ಟಿಹಳ್ಳಿಯ [ಕಇ ಸಂ೬ ಶಾ.ಸ ೪೨] ಶಾಸನದಲ್ಲಿ ಎರಡನೆಯ ದತ್ತಿಯು ಕ್ರಿಶ ೧೨೩೮ ಕ್ಕೆ ಸಂಬಂಧಿಸಿದ್ದು ಇಮ್ಮಡಿ ಸಿಂಘಣನ ಅಧೀನದಲ್ಲಿರುವ ಕದಂಬರ ಕಾಲದ್ದು. ಲಕುಲೀಶ್ವರನ ಶಿಷ್ಯನಾದ ಎರಡನೆಯ ಮೂಜುಜಾವಿದೇವ ದಾನವನ್ನು ಸ್ವೀಕರಿಸಿದ ಬಗ್ಗೆ ತಿಳಿದುಬರುತ್ತದೆ. ಈ ಯತಿಗಳು ಪರ್ವತಾವಳಿಯ ಕಿಟ್ಟಗಾವೆ ಸಂತತಿಗೆ ಸಂಬಂಧಿಸಿದವರು. ಈ ರಟ್ಟಹಳ್ಳಿಯ ಎರಡನೆಯ ಮೂಜುಜಾವಿ ಗುರುಗಳಿಗೆ 'ಎಪ್ಪತ್ತೇಳು ಸ್ಥಾನಗಳ ಗುರು ಎಂಬ ವಿಶೇಷಣ ಬಳಸಲಾಗಿದೆ. ಈ ಯತಿಗೆ 'ರಾಜಗುರು' ಎಂಬ ಪದವಿ ನೀಡಿರುವುದು ಕಂಡುಬರುತ್ತದೆ

ರಟ್ಟಿಹಳ್ಳಿಯ ಇನ್ನೊಂದು ಕ್ರಿಶ ೧೨೩೮ ರ ಶಾಸನದಲ್ಲಿ [ಕ.ಇ.ಸಂ೬.ಶಾ.ಸಂ ೪೨, ೧೨೩೮] ಮಹಾಪ್ರಧಾನಂ ಕರಣದ ಕಲ್ಲರಸರು. ಹೇಮಳಂಬಿ ಸಂವತ್ಸರದ ಫಾಲ್ಗುಣ ಮಾಸದ ಅಮವಾಸೆ ಆದಿವಾರ ಸೂರ್ಯಗ್ರಹಣದಂದು ಮೂಜುಜಾವಿದೇವರ ಕಾಲಂ ತೊಳೆದು ಧಾರಾಪೂರ್ವಕಂ ಮಾಡಿಕೊಟ್ಟರು ಎಂದು ದಾನದ ವಿವರಣೆ ಜೊತೆಗೆ ಮೂಜುಜಾವಿದೇವರ ಉಲ್ಲೇಖವಿದೆ. ಇದೇ ದೇವಸ್ಥಾನದ ಇನ್ನೊಂದು ಕಂಬದಲ್ಲಿ ಕ್ರಿಶ ೧೨೩೮ರಲ್ಲಿ ಗುಬ್ಬಿಯ ಕಲ್ಲೆಯನು (೨೩ನೆಸಾಲು) ಶ್ರೀ ಕಡಂಬೇಶ್ವರ ದೇವರ್ಗ್ಗೆ ನಂದಾವಳಕಂ ಶ್ರೀಗಂಧಕೆಂದು ಮೂಜುಜಾವಿದೇವರ್ಗ್ಗೆ ಗುಬ್ಬಿಯಕಲ್ಲೆಯ ಪಾದಪ್ರಕ್ಷಾಳನಂ ಗೆಯ್ದು ಧಾರಾಪೂರ್ವಕ ಮಾಡಿ ಕೊಟ್ಟ ಹನ್ನೊಂದೆತ್ತಿನ ಸುಂ ೧ ಗ ಕವನು ಎಂಬ ಉಲ್ಲೇಖವಿದೆ [ಕಇ.ಸಂ ೬ ಶಾ.ಸಂ ೪೩ ೧೨೩೮]

ಕಿಟ್ಟಗಾವಿಯ ಸಂತತಿಯ ಕಾಳಾಮುಖ ಶ್ರೀವಿಳಾಸಮಣಿಯಮುಕುರದ ಹಾಗಿರುವ ವಾಮಶಕ್ತಿ. ಪುಣ್ಯದಲ್ಲಿ ಸಂಪತ್ತಿನಲ್ಲಿ ಪ್ರಸಿದ್ಧಿ ಪಡೆದ ಮುನಿಯ ಶಿಷ್ಯನಾದ ಮನುಚರಿತೆಸಮುದ್ರವನು, ಮದೇಭನಖಯುಧನೆನಿಸಿದ ವಾದಿರುದ್ರಶಕ್ತಿ ಮುನಿಯು.. ಅವರ ಶಿಷ್ಯರು ಪ್ರಸಿದ್ಧಿ ಪಡೆದ ಶ್ರೀಕಂಠದೇವ ಬುದನಿಧಿ ವಿದ್ವಾಂಸರ ನಿಧಿ ತದಪತ್ಯತದೀಯೋದ್ಘಶಿಷ್ಯ ಕುಸುಮಾಸ್ತ್ರ ತ್ರಕ್ಷನು ಉರ್ಬ್ಬಿ ಪ್ರಥಿತಗುಣನಿವಾಸನಾದ ಕ್ರಿಯಾಶಕ್ತಿದೇವಂ ದಶವತತ್ಶಿಷ್ಯನಾಂತವಿನುತ ಫಲಶ್ರುಹಿ ಮೌಳಿ ಮಾಣಿಕ್ಯ, ಕಾಂತಿ ಪ್ರಸರೋದ್ಯತು ಕೇಸರಾಂಘ್ರಿದ್ವಯ ಸರಸೀರುಹೋದು ಭಾತಿ ಸರ್ಬ್ವೇಶ್ವರಾರ್ಯ ಅವರ ತನುಮನ ಪ್ರಿಯಶಿಷ್ಯನಾದ ವದನಂ ಚಾತುರ್ಯ್ಯ ವಾಣೀ ವಿಹರಣ ಸದನ ಸಂದವಾದ ತಂನೇತ್ರವಾ ಪೂರ್ಣ ದಯಾಪಾತ್ರನು. ಸ್ವಹಸ್ತ ವಿತರಣನು ಚರಣಾಭ್ಯಸ್ತ ಆತ್ಮೀಯ

ವಕ್ಷಂ ವಿದಿತತತ್ವಕ್ಷಂ. .ಸದ್ರಿಕ್ಷಾಯತಿತತಿ ತನಗಿಲ್ಲೆಂಬಿನಂ ನಿತ್ಯ ಸತ್ಯಾಭ್ಯುದಯಂನಾದ ಕಲ್ಯಾಣಶಕ್ತಿ ಬ್ರತಿಪತಿ ಪ್ರಸಿದ್ಧಿ ಹೊಂದಿದವನು, ಚಿತ್ರಂ ವಿದ್ವನ್ಮುಖಾಭುಜಾನಾಂ ಮೇರುತಾಂ ಕುರುತೇನ್ವಹಂ ಕಲ್ಯಾಣಶಕ್ತಿದೇವಷ್ಯ ವದನಾಮ್ರಿತಧೀದಿತಿಂ ಅದೇ ರೀತಿ ಸಮುದ್ಭವ ಈಶ್ವರ ಪದ ಕಮಳ ಬ್ರಮರಂ ಆಗಮಬುಜಾತ ಸಮಬ್ಯುಧಿತ ದಶಶತಮಯೂಖ, ಮದನೋಗ್ರನು ಆಗದ ಮೂಜುಜಾವಿದೇವ ಬ್ರತಿಪನು. ತೊಳಪ ಸುಧಾಂಶುವನುರ ಸ್ಥಳದೊಳು ತಳೆದು ಇಂದು ಕಾಂತದಂತಿರೆ ಮೃಡನು ಉಜ್ವಳಿಸೆ ನಿಜ ಹೃದಯದೊಳ ಆಗಳು ಎಸೆವ ಮೂಜುಜಾವಿದೇವ ಮುನೀಂದ್ರ, ಅವನ ಶಿಷ್ಯ ನಖ ಕುಜಬ್ರಜವಿಶ್ಸೇದನ ಪಟು,ಕುಠಾರನು ಉರುತರ ಉನ್ನತ ವಿದ್ವತ್ ಶರಣ ಲಕುಲೀಶ್ವರನ ಅಚ್ಚಗುಣಾಬೋಧಿ ಗುರುಕುಳಸಮುದ್ರ ಚಂದ್ರನಾಗಿರುವ ಅವನ ಶಿಷ್ಯ ಮಾನಸ ವಾಚಕ ಕಾಯಕದಿಂ ಸಮಹೊಂದಲು ಆಗದಿಹ ಪರಸುಖಜ್ಞಾನವನ್ನೆ ಬಿಟ್ಟು ಶವನ ಧ್ಯಾನದಿ ನೆಲೆಗೊಂಡ ಮೂಜುಜಾವಿಬ್ರತಿಪನು. ಸುದತಿಯರ ಕಣ್ಣಿನಬಾಣಗಳು ಮದನ ಹೂ ಬಾಣಗಳಮೃತಕಿರಣ ಕಿರಣಾಸ್ಪದದ ಬಾಣ ಬಂದು ತಾಗಲು ಹೃದಯ ಕಲ್ಲು ಹೃದಯ ಮೂಜುಜಾವಿಪ್ರತಿಪ್ಪ ಎಂದು ಶಾಸನದಲ್ಲಿ ಯತಿಗಳನ್ನು ವರ್ಣಿಸಿರುವುದು ಕಂಡುಬರುತ್ತದೆ. ಇದು ಅವರ ಪ್ರಸಿದ್ಧಿಯನ್ನು ವ್ಯಕ್ತಪಡಿಸುತ್ತದೆ. ಕ್ರಿಶ ೧೨೩೮ ರ ಶಾಸನದ ಪ್ರಕಾರ ಕಾಳಾಮುಖ ಯತಿ ಪರಂಪರೆ ಕೆಳಗಿನಂತಿದೆ. (೪೨ನೇ ಸಾಲು)

ವಾಮಶಕ್ತಿ -> ವಾದಿರುದ್ರಶಕ್ತಿ -> ಶ್ರೀಕಂಠದೇವ -> ಕ್ರಿಯಾಶಕ್ತಿ -> ಸರ್ವೇಶ್ವರ -> ಕಲ್ಯಾಣಶಕ್ತಿ -> ಮೂಜುಜಾವಿದೇವ -> ಲಕುಳೀಶ್ವರ -> ಮೂಜುಜಾವಿದೇವ ಹೀಗೆ ಕಾಳಾಮುಖ ಪರಂಪರೆಯನ್ನು ರಟ್ಟಹಳ್ಳಿ ಕ್ರಿಶ ೧೨೩೮ ರ ಶಾಸನವು ವರ್ಣಿಸುತ್ತದೆ.

ಹಾನಗಲ್ಲ ತಾಲೂಕಿನ ತಿಳವಳ್ಳಿಗೆ ಸಂಬಂಧಿಸಿದ್ದು ೧೨೩೯ ರ ಇದು ಸೇವುಣ ಯಾದವ ಇಮ್ಮಡಿ ಸಿಂಘಣನ ಆಳ್ವಿಕೆಯ ಕಾಲದ್ದಾಗಿದೆ. ಸಂಸ್ಕೃತ ಹಾಗೂ ಕನ್ನಡ ಭಾಷೆಯದಾದ ಇದು ಅರಸನ ಅಧಿಕಾರಿಯೊಬ್ಬನ ಇಬ್ಬರು ಗಂಡು ಮಕ್ಕಳು ಸಾವಂತೇಶ್ವರ ಹೆಸರಿನಿಂದ ಶಿವನಿಗಾಗಿ ಒಂದು ದೇವಾಲಯ ಕಟ್ಟಿಸಿ ಒಂದು ಗ್ರಾಮ ದತ್ತಿ ನೀಡಿದುದನ್ನು ತಿಳಿಸುತ್ತದೆ. ಈ ಗ್ರಾಮವನ್ನು ಕಾಳಾಮುಖ ಯತಿ ರುದ್ರಶಕ್ತಿಗೆ ಒಪ್ಪಿಸಲಾಗಿದ್ದು ಅವನ ಪರಂಪರೆಯನ್ನು ವರ್ಣಿಸಲಾಗಿದೆ. ವಿದ್ಯಾಭರಣ – ಗೋಕರ್ಣ – ಕುಮಾರ – ಸರ್ವೇಶ್ವರದೇವ – ಶಕ್ತಿದೇವ – ರುದ್ರಶಕ್ತಿ. [ಕಇ.ಸಂ-೫ ,ನಂ ೪೨]. ಈ ಶಾಸನದದಲ್ಲಿ ವಿದ್ಯಾಭರಣಗುರುವಿಗೆ "ಸಪ್ತಹತ್ತನಿಷ್ಠಾಚಾರ್ಯನು" ಎಂಬ ಉಲ್ಲೇಖವಿದೆ ಲಾಕುಲಾಮ ಸಿದ್ಧಾಂತಗಳನ್ನು ಎತ್ತಿ ಹಿಡಿಯುವವನೆಂದು. ಕಬ್ಬಿನ

ಸಿರಿವೂರ ಶ್ರೀ ಸಿದ್ಧನಾಥ ದೇವರ ಆರಾಧಕನೆಂದು ಕಿಟ್ಟ ಕ್ರೊಮ ಮಠದ ಬೋಧ'ಕ ಯತಿಯೆಂದು ಹಾಗೂ "ಕಾಳಾಮುಖರ" ನಾಯಕನೆಂದು ಕರೆಯುಲಾಗಿದೆ.

ಶಿವಮೊಗ್ಗಾ ಜಿಲ್ಲೆಯ ಕುಪ್ಪಟೂರಿನ ಬಳಿಯ ದೇವಸ್ಥಾನ ಹಕ್ಕಲು ಎಂಬಲ್ಲಿ ಕೋಟೀಶ್ವರ ದೇವಾಲಯದ ಮುಖ್ಯಸ್ಥನೆಂದು ರುದ್ರಶಕ್ತಿಯ ಶಿಷ್ಯ ಸರ್ವೇಶ್ವರಶಕ್ತಿ ಕಾರ್ಯನಿರ್ವಹಿಸಿದ ಬಗ್ಗೆ ಮತ್ತು ಅಬ್ಬಲೂರಿನ ಗ್ರಾಮೇಶ್ವರ, ತಿಳುವಳ್ಳಿಯ ಸಾವಂತೇಶ್ವರ ಹಾನಂಗಲದ ಮೂಲಸ್ಥಾನಗಳು ಪ್ರತಿಬದ್ಧವಾಗಿರುವುದನ್ನು ತಿಳಿಸುತ್ತದೆ. [ಎಕ.ಸಂ-೮ ಎಸ್‌ಬಿ, ೨೭೫] ಹೀಗೆ ಜಿಲ್ಲೆಯಲ್ಲಿ ಸುಮಾರು ೮೬ ಶಾಸನಗಳಲ್ಲಿ ಯತಿಗಳ ಉಲ್ಲೇಖ, ದಾನದತ್ತಿ, ನೀಡಿದ್ದನ್ನು ಕಾಣುತ್ತೇವೆ.

ಕಾಳಾಮುಖರು ಪೂಜಿಸುವ ದೇವತೆಗಳಲ್ಲಿ ಸಪ್ತಮಾತೃಕೆಯರು ಮಹತ್ವ ಪಡೆದಿದ್ದಾರೆ. ಜಿಲ್ಲೆಯ ಕಲ್ಲೇಶ್ವರ ಅಥವಾ ಕಲ್ಮೇಶ್ವರ ದೇವಾಲಯಗಳಲ್ಲಿ ಹೆಚ್ಚಾಗಿ ಸಪ್ತಮಾತೃಕೆ ಶಿಲ್ಪಗಳಿರುವುದು ಕಾಳಾಮುಖ ಪರಂಪರೆಗೆ ಸಾಕ್ಷಿಯಾಗಿವೆ. ಕಾಳಾಮುಖರಿಂದ ವಿಶೇಷವಾಗಿ ಆರಾಧನೆಗೆ ಒಳಪಟ್ಟಿರುವ ಸಪ್ತಮಾತೃಕೆ, ಸರಸ್ವತಿ, ಸೂರ್ಯ, ಭೈರವ, ಕಾರ್ತಿಕೇಯ, ಷಣ್ಮುಖ, ಗಣೇಶ, ಶಿಲ್ಪಗಳಾಗಿವೆ. ಅವುಗಳಲ್ಲಿ ಸಪ್ತಮಾತೃಕೆ, ಸರಸ್ವತಿ, ಸೂರ್ಯ, ಭೈರವ, ಶಿಲ್ಪಗಳ ಬಗ್ಗೆ ತಿಳಿಯುವಾ.

ಸಪ್ತಮಾತೃಕೆಯರು

ಸಪ್ತಮಾತೃಕೆಯನ್ನು ಕಾಳಾಮುಖರು ಪೂಜಿಸುವ ಪದ್ಧತಿ ಇತ್ತೆಂದು ಕಾಳಾಮುಖ ದೇವಾಲಯಗಳಲ್ಲಿ ಕಾಣುತ್ತೇವೆ. 'ದುರ್ಗಾಸಪ್ತಶತಿ' ಯಲ್ಲಿ ಹೇಳುವಂತೆ ಕೌಶಿಕ ದುರ್ಗೆಯು ರಕ್ತಬೀಜಾಸುರನೊಂದಿಗೆ ಯುದ್ಧಕ್ಕೆ ನಿಂತಾಗ ಅವನನ್ನು ಸಂಹರಿಸಲು ಅವಳಿಂದಲೇ ಏಳು ರೂಪಗಳು ಹೊರಹೊಮ್ಮಿದವು. ಈ ಏಳು ರೂಪಗಳನ್ನು ಸಪ್ತಮಾತೃಕೆಯರು ಎಂದು ಕರೆಯಲಾಗಿದೆ. [ಮಿಶ್ರಾ ಒ.ಪಿ.; ಐಕನೋಗ್ರಫಿ ಆಫ್ ದ ಸಪ್ತಮಾತೃಕಾಸ್, ಪುಟ. ೨] ಈ ಮೂರ್ತಿಗಳ ಲಕ್ಷಣಗಳನ್ನು ಅಗ್ನಿ ಪುರಾಣ, ಪೂರ್ವಪುರಾಣ, ಕಾರಣಾಗಮ, ಮತ್ಸ್ಯಪುರಾಣ, ರೂಪಮಂಡನ, ಶ್ರೀತತ್ವನಿಧಿ ಗ್ರಂಥಗಳು ವಿವರಿಸಿವೆ. ಈ ಏಳುಮತೃಕೆಯರು ಕ್ರಮವಾಗಿ ಬ್ರಾಹ್ಮೀ, ವೈಷ್ಣವಿ, ಮಾಹೇಶ್ವರಿ, ಕೌಮಾರಿ, ವರಾಹಿ, ಇಂದ್ರಾಣಿ, ಚಾಮುಂಡಿ ಇವರೆಲ್ಲ ಕ್ರಮವಾಗಿ ಬ್ರಹ್ಮ, ವಿಷ್ಣು, ಶಿವ, ಸ್ಕಂದ, ವರಾಹ, ಇಂದ್ರ, ಶಕ್ತಿಯ ರೂಪಗಳು 'ವಿರೇಶ್ವರಶ್ಚ ಮಾತೃಣಾಮಗ್ರತೋ ಭವೇತ್, ಅಂತೇತೇಷಾಂ ವಿನಾಯಕಃ ಮಧ್ಯೇ ಚ ಮಾತರಃ ಕಾರ್ಯ' [ಅದೇ,ಪುಟ ೩] ಈ ಶ್ಲೋಕದಂತೆ ವೀಣಾಧರ ವೀರಭದ್ರನು ಸಪ್ತಮಾತೃಕೆ

ಪಟ್ಟಿಯ ಎಡದಲ್ಲಿ, ಗಣೇಶನನ್ನು, ಬಲಭಾಗದಲ್ಲಿ ಇರಿಸಬೇಕೆಂದು ಮಧ್ಯೆ ಮಾತೃಕೆಯರ ಶಿಲ್ಪವಿರಬೇಕೆಂದು ತಿಳಿಸುತ್ತದೆ.

ಇವರಿಗೆ ಸಂಬಂಧಿಸಿದ ಆಯುಧಗಳು ವಾಹನಗಳು ಈ ಕೆಳಗಿನಂತಿದೆ.

ಬ್ರಾಹ್ಮೀ –ಹಂಸವಾಹಿನಿ, ಚತುರ್ಭುಜೆ, ಪುಸ್ತಕ, ಅಕ್ಷಮಾಲೆ, ಅಂಕುಶ, ಕಮಂಡಲಗಳನ್ನು ಧರಿಸಿರುವಳು.[ಮಿಶ್ರಾ, ಒ ಪಿ.; ಐಕನೋಗ್ರಫಿ ಆಫ್ ದ ಸಪ್ತಮಾತೃಕಾಸ್, ಪುಟ.೧೦೦]

ವೈಷ್ಣವಿ – ಗರುಡವಾಹನ, ಚತುರ್ಭುಜೆ, ಚಕ್ರ, ಶಂಖ, ಗಧೆ,ಅಭಯಹಸ್ತ ಹೊಂದಿರುವಳು. .[ಅದೇ, ಪುಟ.೧೦೧]

ಮಾಹೇಶ್ವರಿ – ವೃಷಭ(ಬಸವ)ರೂಢಳು.ತ್ರಿಶೂಲ, ಡಮರು, ಅಭಯಕಪಾಲಹಸ್ತ ಹೊಂದಿರುವಳು. [ಅದೇ, ಪುಟ.೧೦೨]

ಕೌಮಾರಿ – ನವಿಲುವಾಹನ, ಚತುರ್ಭುಜೆ, ವಜ್ರ, ತ್ರಿಶೂಲ, ಈಟಿ, ಅಭಯಹಸ್ತಗಳು. [ಅದೇ,ಪುಟ.೧೦೩]

ವರಾಹಿ – ಕೋಣವಾಹನ, ವರಾಹಮುಖದವಳು, ಗಂಟೆ, ಚಾಮರ, ಚಕ್ರ, ದಂಡಹಸ್ತೆಯಾಗಿರುವಳು. [ಅದೇ, ಪುಟ.೧೦೪]

ಇಂದ್ರಾಣಿ – ಗಜ(ಆನೆ) ಚತುರ್ಭುಜೆ, ಪಾಶ, ಅಂಕುಶ, ಅಭಯ, ವರದಹಸ್ತೆಯಾಗಿರುವಳು. [ಅದೇ, ಪುಟ.೧೦೫]

ಚಾಮುಂಡಾ _ ಗೂಬೆ. ಇವಳು ಚತುರ್ಭುಜೆಯಾಗಿದ್ದು, ಕಪಾಲ, ಕಮಲ, ವರದಅಭಯ ಹಸ್ತಳಾಗಿರುವಳು. [ಅದೇ, ಪುಟ.೧೦೫] ಹಾವೇರಿ ಜಿಲ್ಲೆಯಲ್ಲಿ ಸುಮಾರು ೯೦ ದೇವಾಲಯಗಳಲ್ಲಿ ಸಪ್ತಮಾತೃಕೆಯರ ಫಲಕಗಳನ್ನು ಕಾಣುತ್ತೇವೆ. ಕೆಲವು ದೇವಾಲಯಗಳಲ್ಲಿ ನವರಂಗದ ಬಲಭಾಗದಲ್ಲಿ ಕೋಷ್ಟಕವನ್ನು ಅಗಲವಾಗಿ ರಚಿಸಿ ಇಟ್ಟಿರುವುದನ್ನು ಕಾಣುತ್ತೇವೆ. ಕೆಲವು ಕಡೆ ಗೋಡೆಯಲ್ಲಿ ಇಟ್ಟಿರುವುದು, ಇನ್ನೂಕೆಲವು ಕಡೆ ದೇವಸ್ಥಾನದ ಬಯಲಲ್ಲಿ ಬಿದ್ದಿರುವುದನ್ನು ಕಾಣುತ್ತೇವೆ. ಇವುಗಳ ಕುರಿತು ತಾಲೂಕುವಾರು ಪಟ್ಟಿಯಲ್ಲಿ ಮಾಹಿತಿ ನೀಡಲಾಗಿದೆ.

ಶ್ರೀ ಕಪಾಲಿಶಾಸ್ತ್ರಿಯವರು ತಮ್ಮ 'ಉಮಾಸಹಸ್ರಮ್' ಭಾಷ್ಯದಲ್ಲಿ ನೀಡಿರುವ ಸಪ್ತಮಾತೃಕೆಯ ಬಗೆಗಿನ ವಿವರಣೆಯನ್ನು ಆರ್.ಎಲ್.ಕಶ್ಯಪರವರು ಹೀಗೆ ಉಲ್ಲೇಖಿಸಿರುವರು. ಬ್ರಾಹ್ಮೀ, ವೈಷ್ಣವಿ, ಮಾಹೇಶ್ವರಿ, ಕೌಮಾರಿ,ವಾರಾಹಿ, ಇಂದ್ರಾಣಿ ಮತ್ತು ಚಾಮುಂಡಿ. ಇವರು ಸಪ್ತಮಾತೃಕೆಯರು.

ಬ್ರಾಹ್ಮೀಯು ಭೂಮಿ ಮತ್ತು ಆಕಾಶದ ನಡುವಿನ ಸಮಸ್ತ ಪ್ರದೇಶವನ್ನು ನಾದ ಸ್ವರೂಪಿಣಿಯಾಗಿ ಆವರಿಸಿದ್ದಾಳೆ. ನಾದವು ಮುಂದೆ ಪ್ರಕಟಗೊಳ್ಳುವ ಶಬ್ದದ ಕಾರಣಾವಸ್ಥೆಯಾಗಿದೆ. ಪ್ರಕಟಗೊಂಡ ಶಬ್ದದ ವಾಕ್‌ನ ಹಿಂದಿರುವ ಶಕ್ತಿಯೂ ಆಗಿದ್ದಾಳೆ.

ವೈಷ್ಣವಿಯು ಸಮಸ್ತ ಜಗಜ್ಜಾಲಗಳ ಸೃಷ್ಟಿಕರ್ತೆ, ಅಜ್ಞಾನ ಮೂಲಾವಸ್ಥೆಯಿಂದ ಹೊರಗೆ ಬಂದಿರುವ ಎಲ್ಲ ರೂಪಗಳ ಹಿಂದಿರುವ ಶಕ್ತಿಯನ್ನು ಆಕೆ ಪ್ರತಿಪಾದಿಸುತ್ತಾಳೆ.

ಮಾಹೇಶ್ವರಿಯು ಭೂರಂಗದ ಸಮಸ್ತ ನಾಟಕದ ಸೂತ್ರದಾರಿಣಿ.ಆಕೆ ಪ್ರತಿಯೊಂದರಹೃದಯದಲ್ಲೂ ವ್ಯಕ್ತಿತ್ವದ ಬೀಜವನ್ನಿಟ್ಟು ಪ್ರತಿಯೊಬ್ಬ ವ್ಯಕ್ತಿಯೂ ಆಡಬೇಕಾದ ಆಟವನ್ನು ಆಡಿಸುತ್ತಾಳೆ.

ಕೌಮಾರಿ ಸತ್ಯದ ಬೆಳಕಿನ ಶಕ್ತಿ ಯಾರ ಅಂತರಂಗವು ಶುದ್ಧವಾದ ಆಹಾರದಿಂದ ಪರಿಶುದ್ಧವಾಗಿಯೇ ಅವರಲ್ಲಿ ಈ ಸತ್ಯದ ಜ್ಯೋತಿಯು ಬೆಳಗುತ್ತದೆ. ಇಲ್ಲಿ ಆಹಾರವು ವಸ್ತುರೂಪದ ಆಹಾರದೊಂದಿಗೆ ಇಂದ್ರಿಯಗಳು ಮತ್ತು ಮನಸ್ಸಿನ ಮೂಲಕ ಪಡೆಯುವ ಮಾನಸಿಕ ಆಹಾರವನ್ನು ಒಳಗೊಳ್ಳುತ್ತದೆ.

ವಾರಾಹಿಯು ಸೃಷ್ಟಿಯಲ್ಲಿರುವ ಎಲ್ಲ ಜೀವಿಗಳು ಆಹಾರವನ್ನು ಸೇವಿಸಿ ಅದನ್ನು ಜೀರ್ಣಿಸಿಕೊಂಡು ಸಂತೋಷದಿಂದಿರುವುದರ ಮೂಲಕ ಪಡೆಯುವ ಆನಂದದ ಶಕ್ತಿಯನ್ನು ಪ್ರತಿನಿಧಿಸುತ್ತಾಳೆ.

ಇಂದ್ರಾಣಿ ಅತ್ಯಂತ ಭಯಂಕರ ದುಷ್ಟಶಕ್ತಿಗಳನ್ನು ನಾಶಪಡಿಸುವ ಅಥವಾ ನಾಶಪಡಿಸಲು ಅನುವಾಗುವ ಶಕ್ತಿಯ ಪ್ರತೀಕ.

ಚಾಮುಂಡಿ ಆಲೋಚನೆಗಳನ್ನು ನುಂಗಿ ಹಾಕುತ್ತ ಅದನ್ನೇ ಆಹಾರವಾಗಿಸಿಕೊಂಡ ಯೋಗಶಕ್ತಿಯ ಪ್ರತೀಕವೇ ಚಾಮುಂಡಿ. ಹಲವು ರೀತಿಯ ತೊಂದರೆಗಳಿಂದ ಕೂಡಿರುವ ದೇಹದ ಮೂಲದಲ್ಲಿ ಸುಪ್ತವಾಗಿರುವ ದೈವಿಶಕ್ತಿಗಳನ್ನು ಆಕೆ ಮುಕ್ತಗೊಳಿಸುತ್ತಾಳೆ. ಚಾಮುಂಡಿಯು ಮನಸ್ಸಿನ ಅಲೆದಾಟವನ್ನು ಹೋಗಲಾಡಿಸಿ ನಮ್ಮ ಇಡೀ ಅಸ್ತಿತ್ವವನ್ನು ಆನಂದದಲ್ಲಿರಿಸುತ್ತಾಳೆ.

ಬಂದಳಿಕೆ ಶಾಸನದಲ್ಲಿ ಬರುವ ಪಂಚಕಾರುಕ ಯತಿ ಪರಂಪರೆ ತನ್ನ ಅವನತಿಯತ್ತ ಸಾಗಿರುವ ಸಮಯದಲ್ಲಿ ಬಂದ ಹಾಗೆ ಕಂಡುಬರುತ್ತದೆ. ಹೀಗೆ ಕಾಳಾಮುಖರ ದೇವಾಲಯಗಳಲ್ಲಿನ ಕಂಡುಬರುವ ಸಪ್ತಮಾತೃಕೆಯ ವಿಗ್ರಹಗಳು ಇದೆ ಸಂಗತಿಯನ್ನು ಸೂಚಿಸುತ್ತದೆ. ಆ ಕಾರಣಕ್ಕಾಗಿಯೇ ಶಕ್ತಿ ಪರಿಷತ್ತು ಎನ್ನುವುದು ಹೆಣ್ಣು

ದೇವತೆಯನ್ನು ಪೂಜಿಸುವರ ಗುಂಪು ಎನ್ನುವ ಮಾತು ಸರಿಯಾಗಿಯೇ ಕಾಣುತ್ತದೆ. [ಮನ್ವಾಚಾರ ಕಲವೀರ.; ಲೇಖನ; ಅಬಲೂರು ಮತ್ತು ಕಾಳಾಮುಖ ಪರಂಪರೆ, ಗೌಡರ, ಎಸ್ ಪಿ (ಸಂ).; ಕಣಜ, ಪುಟ. ೨೧] ಇಂದಿಗೂ ಸಹ ಅನೇಕ ಕಲ್ಮೇಶ್ವರ ದೇವಾಲಯಗಳಲ್ಲಿ ಕಾಳಾಮುಖರ ಆರಾಧನೆಯ ಶಕ್ತಿದೇವತೆಗಳಾದ ಸಪ್ತಮಾತೃಕೆಯರ ವಿಗ್ರಹಗಳು ಕಂಡುಬರುತ್ತದೆ.

ಹಾವೇರಿ ಜಿಲ್ಲೆಯಲ್ಲಿ ಸಪ್ತಮಾತೃಕೆ ವಿಗ್ರಹವಿರುವ ದೇವಾಲಯಗಳು ಬ್ಯಾಡಗಿ ತಾಲೂಕು ಕದರಮಂಡಲಗಿ, ಕಾಗಿನೆಲೆ, ಘಾಳಪೂಜಿ, ಚಿಕ್ಕಬಾಸೂರು, ಬೆಳಕೇರಿ, ಮತ್ತೂರು, ಶಿಡೆನೂರು, ಹಳೆಕುಮ್ಮೂರು, ಹಿರೆಹಳ್ಳಿಗಳಲ್ಲಿ ೯, ರಾಣೇಬೆನ್ನೂರು ತಾಲೂಕಿನ ಅಂತರವಳ್ಳಿ, ಅಸುಂಡಿ, ಉಕ್ಕುಂದ, ಕರೂರು, ಗುಡ್ಡದ ಆನ್ವೇರಿ, ಚೌಡದಾನಪುರ, ಜೋಯಿಸರಹರಳಹಳ್ಳಿ, ಬೆನಕನಕೊಂಡ, ಬಿಲ್ಲಹಳ್ಳಿ, ನದಿಹರಳಹಳ್ಳಿ, ನಂದಿಹಳ್ಳಿ, ನಿಟ್ಟೂರು, ಮುದೇನೂರು, ರಾಣೆಬೆನ್ನೂರಲ್ಲಿ ೨, ಹಿರೇಬಿದರಿ, ಹಿರೇಮಾಗನೂರು, ಹೀಲದಹಳ್ಳಿ, ಹೊನ್ನತ್ತಿಗಳಲ್ಲಿ ಒಟ್ಟು ೨೦ ಶಿಲ್ಪಗಳು. ಹಾವೇರಿ ತಾಲೂಕಿನಲ್ಲಿ ಕನವಳ್ಳಿ, ಕಬ್ಬೂರು, ಕರ್ಜಗಿ, ಕಾಟೇನಹಳ್ಳಿ, ಕುಳೆನೂರು, ನೀರಲಗಿ, ಸಂಗೂರು, ಹಾವನೂರು, ಹಾವೇರಿ, ಹೊಮ್ಮರಡಿಗಳಲ್ಲಿ ಹತ್ತು ಶಿಲ್ಪಗಳು, ಹಿರೇಕೆರೂರು ತಾಲೂಕಿನ ಅಬ್ಬಲೂರಲ್ಲಿ ೨, ಆಲದಗೇರಿ, ಇಂಗಳಗೊಂದಿ, ಕಚವಿ, ಕುಡುಪಲಿ, ಚಿಕ್ಕೇರೂರು, ಜಾವಳ್ಳಿ, ನಾಗವಂದ, ನೂಲಗೇರಿ, ಮತ್ತಿಹಳ್ಳಿ, ಮಡ್ಲೂರು, ಮೇದೂರಲ್ಲಿ ೨, ರಟ್ಟಹಳ್ಳಿ, ಸಾತೇನಹಳ್ಳಿಯಲ್ಲಿ ೨, ಹಂಸಭಾವಿ, ಹಳ್ಳೂರ, ಹಿರೇಕೆರೂರು, ಹುಲ್ಲತ್ತಿ ಗ್ರಾಮಗಳ ದೇವಸ್ಥಾನಗಳಲ್ಲಿ ಒಟ್ಟು ೨೧ ಶಿಲ್ಪಗಳನ್ನು ಕಾಣುತ್ತೇವೆ. ಶಿಗ್ಗಾವ ತಾಲೂಕಿನ ಕಬನೂರು, ಬನ್ನೂರು, ಮಡ್ಲಿ, ಶಿಗ್ಗಾವಿ, ಹುಲಸೋಗಿಗಳಲ್ಲಿ ೫ ಶಿಲ್ಪಗಳು, ಹಾನಗಲ್ಲ ತಾಲೂಕಿನ ಅಕ್ಕಿಆಲೂರು, ಅರಳೇಶ್ವರ ಕಲಕೇರಿ, ಚಿಕ್ಕಣಗಿ, ಚಿಕ್ಕೇರಿಹೊಸಳ್ಳಿ, ತಿಳವಳ್ಳಿಯಲ್ಲಿ ೨, ನಿಡಸಂಗಿ, ಬಾಳಂಬೀಡದಲ್ಲಿ ೨, ಬಾಳೆಹಳ್ಳಿ, ಮಂತಗಿ, ಮಲ್ಲಿಗಾರ, ಯಳವಟ್ಟಿ, ಕನ್ನೆಶ್ವರ, ಶ್ಯಾಡಗುಪ್ಪಿ, ಶೇಷಗಿರಿ, ಶಿರಗೋಡ, ಸಮ್ಮಸಗಿ, ಸಾಂವಸಗಿ, ಹರನಗಿರಿ, ಹರವಿ, ಹಳೆಗೆಜ್ಜಿಹಳ್ಳಿ, ಹಾನಗಲ್ಲ, ಹಾವಣಗಿ, ಹಿರೆಹುಲ್ಲಾಳದಲ್ಲಿ೨, ಹಿರೇಬಾಸೂರು ಮುಂತಾದ ಗ್ರಾಮಗಳಲ್ಲಿ ಒಟ್ಟು ೨೭ ಶಿಲ್ಪಗಳಿವೆ. ಹೀಗೆ ಜಿಲ್ಲೆಯಾದ್ಯಂತ ಸುಮಾರು ೯೭ ಸಪ್ತಮಾತೃಕೆ ಶಿಲ್ಪಗಳು ಕಂಡುಬರುತ್ತವೆ.

ಸೂರ್ಯಾರಾಧನೆ

ಆಕಾಶದಲ್ಲಿ ಪ್ರಜ್ವಲವಾಗಿ ಬೆಳಗುವ ಸೂರ್ಯನು ಹಗಲು ಇರುಳುಗಳ ಸೃಷ್ಟಿಕರ್ತ ಅವನಿಂದಲೇ ಭೂಮಿಯ ಮೇಲೆ ಜೀವಿ ಬದುಕಬಲ್ಲದು. ಭೂಮಿಗೆ ಪ್ರಕಾಶ ಮತ್ತು ಉಷ್ಣತೆಗಳನ್ನು ಒದಗಿಸುವವನೂ ಅವನೇ ಎಂಬುದು ತಿಳಿದ ವಿಷಯವೇ ಆಗಿದೆ. ಈ ಮೂಲಭೂತ ಸಂಗತಿಗಳು ಪ್ರಾಚೀನರ ಮನಸ್ಸಿನ ಮೇಲೆ ಪರಿಣಾಮ ಬೀರಿರಬೇಕು. ಇಂಥ ಸೂರ್ಯನ ಉಪಕಾರ ಸ್ಮರಣೆಗಾಗಿ ಸೂರ್ಯಾರಾಧನೆ ಹುಟ್ಟಿಕೊಂಡಿತು. [ಗೋಪಾಲರಾವ್ ಎಚ್‌ಎಸ್.; ಕಲ್ಯಾಣ ಚಾಲುಕ್ಯ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪುಟ. ೧೯೯] ಋಗ್ವೇದದಲ್ಲಿ ಸೂರ್ಯನು ಪ್ರಮುಖ ದೇವತೆಯೆಂದು ಪರಿಣಿತನಾಗಿದ್ದಾನೆ. ರಾವಣನನ್ನು ಸಂಹರಿಸುವ ಮುನ್ನ ಶ್ರೀರಾಮಚಂದ್ರನು ಆದಿತ್ಯ ಹೃದಯವೆಂಬ ಸೂರ್ಯಸ್ತೋತ್ರವನ್ನು ಜಪಿಸಿದನಂತೆ. ಮಹಾಭಾರತದಲ್ಲಿಯೂ ಆದಿತ್ಯ ಸ್ತೋತ್ರಗಳಿವೆ. [ಲಲಿತಾ ಪ್ರಸಾದ ಪಾಂಡೆ.; ಸನ್‌ವರ್‌ಷಿಪ್ ಇನ್ ಏನ್ಶಂಟ್ಸ್ ಇಂಡಿಯಾ, ಪುಟ ೧] ಋಗ್ವೇದದಲ್ಲಿ ಸೂರ್ಯನು ಪ್ರಮುಖ ದೇವತೆಯೆಂದು ಪರಿಗಣಿತನಾಗಿದ್ದಾನೆ. ರಾವಣನನ್ನು ಸಂಹರಿಸುವ ಮುನ್ನ ಶ್ರೀರಾಮಚಂದ್ರನು ಆದಿತ್ಯ ಮಂತ್ರವನ್ನು ಜಪಿಸಿದನಂತೆ.

ಹಿಂದೂಧರ್ಮದ ಉಪನಯನ ಮೊದಲಾದ ಸಂಸ್ಕಾರಗಳಲ್ಲಿ ಪ್ರಾಚೀನ ಕಾಲದಿಂದಲೂ ಸೂರ್ಯನಿಗೆ ಮಹತ್ತರ ಸ್ಥಾನವಿದೆ. ಈಗಲೂ ದ್ವಿಜರು ಬಲು ನಿಷ್ಠೆಯಿಂದ ಜಪಿಸುವ ಗಾಯಿತ್ರಿ ಮಂತ್ರವು ಸವಿತೃ ಸ್ವರೂಪಿ ಸೂರ್ಯಪರವಾದದ್ದು ಅವರು ಸಲ್ಲಿಸುವ ಸಂಧ್ಯಾವಂದನವು ಸೂರ್ಯನಿಗೆ ಸಂಬಂಧಿಸಿದುದಾಗಿದೆ. ನವಗ್ರಹ ಪೂಜೆಯಲ್ಲಿ ಪ್ರಧಾನವಾದವನೂ ಸೂರ್ಯನೇ, ಇವನು ಕೌಸ್ಯ ಮತ್ತು ಅದಿತಿಯ ಪುತ್ರ. ಉಷಾ ಅವನ ಪತ್ನಿ[ನಂದಿಮಠ ಎಸ್ ಸಿ.; ಕರ್ನಾಟಕ ಧರ್ಮಗಳು] ಮಧ್ಯಕಾಲೀನ ಜನತೆಯಲ್ಲಿನ ಸೂರ್ಯಾರಾಧನೆಯ ಕಲ್ಪನೆ ಹೇಗಿತ್ತು ಎಂಬ ಅಂಶವನ್ನು ನೋಡಿದರೆ ರಾಜರು ಸಾಮಂತರು ಅಥವಾ ಜನಸಾಮಾನ್ಯರೂ ಸಹ ಪುಣ್ಯ ಪ್ರಾಪ್ತಿಗಾಗಿ ದೇವಾಲಯಗಳನ್ನು ನಿರ್ಮಿಸಲೆಂದು ಮತ್ತು ದೇವರ ನಂದಾದೀವಿಗೆಗೆ ಖಂಡಸ್ಫುಟಿತಕ್ಕೆ ವಿದ್ಯಾದಾನ, ಅನ್ನದಾನ ಮೊದಲಾದ ಪುಣ್ಯಕಾರ್ಯಗಳಿಗೆ ದಾನ ಕೊಡುವಾಗ ಆದಷ್ಟು ಸೂರ್ಯನನ್ನೇ ಆಧರಿಸಿ ನಿರ್ದಿಷ್ಟ ದಿನವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಭಾನುವಾರವನ್ನು ಬಳಸಿಕೊಳ್ಳುತ್ತಿದ್ದರು. [ರಾಜಾರಾಮ ಹೆಗಡೆ.; ಲೌಕಿಕ ಅಲೌಕಿಕ, ಟಿಪ್ಪಣಿ ೨೧೯] ಉತ್ತರಾಯಣ ಸಂಕ್ರಾಂತಿ ಹಾಗೂ ಸೂರ್ಯಗ್ರಹಣವನ್ನು ಲಕ್ಷದಲ್ಲಿ

ಇಟ್ಟುಕೊಳ್ಳುತ್ತಿದ್ದು ಬಹಳಷ್ಟು ಶಾಸನಗಳಿಂದ ತಿಳಿದು ಬರುತ್ತದೆ. ಸರಸ್ವತಿಯನ್ನೋ ಅಥವಾ ಬ್ರಹ್ಮನನ್ನೋ ಪ್ರತಿಷ್ಠಾಪಿಸಬೇಕಿದ್ದ ಸ್ಥಾನವನ್ನು ಕಾಳಾಮುಖ ಗುರುಗಳು ಸೂರ್ಯನಿಗೆ ಮೀಸಲಾಗಿ ಇಟ್ಟಿರುವಲ್ಲಿಯೂ ಒಂದು ವಿಶೇಷತೆ ಇದೆ. ಹೊಂಬಳದ ಶಾಸನದಲ್ಲಿ [ಕರ್ನಾಟಕ ಇನ್‌ಕ್ರಿಪ್‌ಷನ್ ಸಂ. ೬ ಶಾಸನ ಸಂ.೮] ಬೆಳ್ಳಿಯ ಸಂತಾನದ ಕಾಳಾಮುಖಮುನೀಶ್ವರನಾದ ಬೊಂತೆಯ ಮುನಿಯನ್ನು [ಅದೇ ಶಾ.ಸಂ.೨೦] ಲಕುಲೀಶ್ವರ ಪರನಾಮಧೇಯನೆನಿಸಿದ್ದ ಈ ಮಹಾನುಭಾವನನ್ನು ವರ್ಣಿಸುವಾಗ ಕಾಳಾಮುಖರಿಗೂ ಸೂರ್ಯನಿಗೂ ಇದ್ದ ಸಂಬಂಧವು ಸ್ಪಷ್ಟವಾಗುತ್ತದೆ. ಶಾಸನವು

ನುಡಿ ಕರ್ತೃವಾದಮಂ ತೊಡ
ರ್ದಡೆದೇವ ಮನುಷ್ಯ ಯಕ್ಷ ರಾಕ್ಷಸರೊಡನಾ
ದಡ ಮೆಂದನುಗ್ರಹಂ ಗೆ
ಯ್ದಡೆ ದಿನಪಂ ಪಡೆದನತ್ತಿ ಬೊಂತೆಯ ಮುನಿಪ॥

ಎಂಬ ಉಲ್ಲೇಖದಲ್ಲಿ ದೇವ ಮನುಷ್ಯ ಯಕ್ಷ ರಾಕ್ಷಸರೊಡನೆ ತೊಡರಿದಾಗ ಕರ್ತೃವಾದ ವನ್ನು ನುಡಿಯೆಂದು ಸೂರ್ಯನು ಅನುಗ್ರಹ ಗೈಯಲು ಬೊಂತೆಮುನಿಯ ಅದನ್ನು ಪಡೆದನು. [ಲೊರೆಂಜನ್ ಡೆವಿಡ್‌ಎನ್.; ಕಾಪಾಲಿಕರು ಮತ್ತು ಕಾಪಾಲಿಕರು ಪುಟ.೧೩೧] ಇದರಿಂದ ಕಾಳಾಮುಖರಿಗೆ ಕರ್ತೃವಾದವು ಸೂರ್ಯದೇವನಿಂದ ಕೊಡಲ್ಪಟ್ಟಿತು, ಎಂದು ಸ್ಪಷ್ಟವಾಗುತ್ತದೆ. ನೈಯಾಯಿಕರಾದ ಕಾಳಾಮುಖರ ನಂಟು ವಿಶೇಷವಾಗಿ ಇದ್ದದ್ದು ಸಹಜ ಈ ಸಂದರ್ಭದಲ್ಲಿ ಮೂಉಜಾವಿದೇವರ ಪ್ರಕರಣವನ್ನು ನೆನೆಯಬಹುದು. [ಕಪಟರಾಳ ಕೃಷ್ಣರಾಯ, ಕರ್ನಾಟಕ ಲಾಕುಳ ಶೈವರ ಇತಿಹಾಸ, ಪುಟ. ೮೪]

ಸೂರ್ಯ ಸಂಜ್ಞೆಯರ ಪುತ್ರ ರೇವಂತ ಮಧ್ಯಕಾಲೀನ ಭಾರತದಲ್ಲಿ ರೇವಂತಾರಾಧನೆ ಜನಪ್ರೀಯವಾಗಿದ್ದಂತೆ ತೋರುತ್ತದೆ. ಆಳರಸರೂ ಕುದುರೆ ಸವಾರರೂ, ಸೇನಾನಿಗಳು ಈ ಅಶ್ವದೇವತೆಯನ್ನು ಪೂಜಿಸಿ ಅಶ್ವವಿದ್ಯೆಯ ಪ್ರವೀಣರಾಗಿದ್ದರು. ಈ ಕಾಲದ ಅನೇಕ ಶಾಸನಗಳಲ್ಲಿ ಹಾಗೂ ಮೂರ್ತಿಶಿಲ್ಪಗಳಲ್ಲಿ ರೇವಂತ ಚಿತ್ರಿತನಾಗಿರುವುದೇ ಇದಕ್ಕೆ ಸಾಕ್ಷಿಯಾಗಿದೆ. [ರಘುನಾಥಭಟ್ಟ ಎಚ್.ಆರ್. ಶಾಸನಗಳಲ್ಲಿ ರೇವಂತ ಕರ್ನಾಟಕ ಭಾರತಿ ಸಂ ೯:೩ ಪುಟ.೮]

ಹಿರೇಕೊಣತಿಯ ಪ್ರಾಥಮಿಕ ಶಾಲೆಯ ಹಿಂಬಾಗದಲ್ಲಿ ಚಿಕ್ಕೊಣತಿಯ ಬಯಲ ಹನುಮಂತದೇವರ ಎದುರಿನಲ್ಲಿ, ತಿಳವಳ್ಳಿಯ ಶಿಬಾರದ ಹಳೆವಿಗ್ರಹ ಮುಂತಾದ ಕಡೆ ರೇವಂತನ ಶಿಲ್ಪವಿರುವ ಶಿಲೆಗಳು ಕಂಡುಬಂದಿವೆ. ಕೆಲವು ಶಾಸನಗಳಲ್ಲಿ ರೇವಂತನ ಉಲ್ಲೇಖವಿರುವುದನ್ನು ಕಾಣಬಹುದು 'ತುರಗರೇವಂತ' ನೆಂದು ಸಾತೇಹಳ್ಳಿಯ ಶ್ರೀಮನ್ಮಹಾಪ್ರಧಾನ ಗೋವಿಂದರಸನನ್ನು ವರ್ಣಿಸಿರುವುದು ಶಾಸನದಲ್ಲಿದೆ.[ಕಇ. ಸಂ ೪ ಸಾತೇನಹಳ್ಳಿ ೩ ಕ್ರಿ.ಶ ೧೧೧೪] ಹಾನಗಲ್ಲ ಕದಂಬತೈಲಪದೇವರಸನನ್ನು 'ರೇಖಾರೇವಂತ' ನೆಂದು ಕರೆದಿರುವುದು ಮಡಲೂರು ಶಾಸನ ತಿಳಿಸುತ್ತದೆ.[ಕಇ.ಸಂ ೪ ಮಡಲೂರು.೪೮ ೧೯೯೦] ಅಬಲೂರಿನಲ್ಲಿ ಮಹಾಸಾಮಂತಾಧಿಪತಿ ಮಹದೇವರಸನನ್ನು 'ತುರುಗರೇವಂತ' ನೆಂದು ಬಣ್ಣಿಸಿದೆ.[ಎಇ ಸಂ ೫ ೨೩೬ಅಬಲೂರು ೧೧೫೩] ಚಿಕ್ಕಮಾಗಡಿಶಾಸನದಲ್ಲಿ ನಾಗರಖಂಡವನ್ನಾಳುತ್ತಿದ್ದ ಬೊಮ್ಮಿದೇವನನ್ನು ಹಯಪ್ರವುಢ ರೇಖಾರೇವಂತ' ಎಂದಿದೆ.[ಸಇ ಶಿಕಾ.ಚಿಕ್ಕಮಾಗಡಿ ೩೬೧ ಕ್ರಿಶ ೧೨೭೫]

ಕಾಳಾಮುಖರಿಗೆ ಯೋಗ ಪ್ರಾಧಾನ್ಯ ಆದ್ದರಿಂದ ಸೂರ್ಯ ನಮಸ್ಕಾರ ಮುಖ್ಯ ಅವರು ಶಿವದೇವರಿಗೆ ನಮಸ್ಕರಿಸುವ ಮುನ್ನ ಸೂರ್ಯನಿಗೆ ನಮಸ್ಕರಿಸುತ್ತಿದ್ದರು. ಲಾಕುಳಶೈವರಿಗೆ ಸೂರ್ಯನು ಶಿವನೊಂದಂಗ ಆದ್ದರಿಂದ ಅವನೊಂದಿಗೆ ಸೂರ್ಯಮೂರ್ತಿ ಇಲ್ಲದಿದ್ದಲ್ಲಿ ಈ ಅರ್ಧಕಂಬ ನಿಲ್ಲಿಸಲಾಗುತ್ತದೆಂದು ತೋರುತ್ತದೆ. [ಫಿಲಿಯೋಜ ವಸುಂಧರಾ.; ಕರ್ನಾಟಕದಲ್ಲಿ ಲಾಕುಳ ಜಕ್ಕಣಾಚಾರ್ಯರು, ಪುಟ.೫೧] ಇದು ಕಾಳಾಮುಖರಿಗೆ ಸೂರ್ಯರಾಧನೆ ಪ್ರಮುಖವಾಗಿತ್ತೆಂಬುದನ್ನು ಸ್ಪಷ್ಟಗೊಳಿಸುತ್ತದೆ.

ಭೈರವ

ಭೈರವನು ಶಿವನ ಒಂದು ಭಯಂಕರರೂಪ .ಇವನು ಶಿವನ ರಕ್ತದಿಂದ ಹುಟ್ಟಿದವನು. ವರಾಹಪುರಾಣ ಮತ್ತು ಕೂರ್ಮ ಪುರಾಣಗಳು ಭೈರವನಿಗೆ ಸಂಬಂಧಪಟ್ಟ ಕಥೆಯನ್ನು ಹೇಳುತ್ತವೆ. ದುರಹಂಕಾರಿಯಾದ ಬ್ರಹ್ಮನನ್ನು ಶಿಕ್ಷಿಸಲು ಶಿವನು ತನ್ನ ಉಗುರುನಿಂದ ಬ್ರಹ್ಮನ ಐದನೆಯ ತಲೆಯನ್ನು ಕತ್ತರಿಸಿದನು. ಆದರೆ ಆ ಶಿರವು ಶಿವನ ಅಂಗೈಯಲ್ಲಿ ಅಂಟಿಕೊಂಡಿತು ಈ ಪಾಪವನ್ನು ಕಳೆದುಕೊಳ್ಳಲು ಶಿವನು ಹನ್ನೆರಡು ವರ್ಷ ಭಿಕ್ಷುಕನಾಗಿ ಅಲೆದಾಡಿದನು. ವಾರಣಾಸಿಯ 'ಕಪಾಲಮೋಚನ ತೀರ್ಥದಲ್ಲಿ ಸ್ನಾನ ಮಾಡಿದಮೇಲೆ ಅವನ ಪಾಪವು ತೊಳೆಯಿತು ಎಂದು ಪುರಾಣಗಳು ಹೇಳುತ್ತವೆ. ತಂತ್ರಸಾರ, ವಿಷ್ಣುಧರ್ಮೋತ್ತರ ಪುರಾಣ ಹಾಗೂ ಕಾಳಿಕಾ ಪುರಾಣಗಳೂ

ಭೈರವನ ಕುರಿತುಮಾಹಿತಿ ಒದಗಿಸುತ್ತವೆ.[ಕೃಷ್ಣಶಾಸ್ತ್ರಿ ಎಚ್.; ಸೌತ ಇಂಡಿಯನ್ ಇಮೇಜಸ್ ಆಫ್ ಗಾಡ್ಸ ಆಂಡ ಗಾಡೆಸಸ್, ಪುಟ.೭೩] ಭೈರವನ ಮೂರ್ತಿರೂಪಗಳು ವಿವಿಧ ಪ್ರಬೇಧಗಳನ್ನು, ಉಗ್ರರೂಪಗಳನ್ನು ತಳೆದಿವೆ. ತ್ರಿಪುರಾಂತಕಭೈರವ, ಉಗ್ರಭೈರವ, ಬಾಡವಾನಲಭೈರವ, ಅಗ್ನಿಭೈರವ, ಕಾಲಭೈರವ, ಕರಾಳಭೈರವ ಮುಂತಾದವುಗಳು. ಶಿಲ್ಪದ ಪ್ರಕಾರ ಭಯಂಕರ ಮುಖವುಳ್ಳವನಾದ ಇವನು ನಾಲ್ಕು ಕೈಗಳನ್ನು ಹೊಂದಿದ್ದು, ಖಡ್ಗ, ತ್ರಿಶೂಲ, ಢಮರು ಮತ್ತು ರುಂಡವನ್ನು ಹಿಡಿದಿರುತ್ತಾನೆ. ಕೋರೆಹಲ್ಲುಗಳನ್ನು ಹೊಂದಿದವನಾಗಿ ತಲೆ ಕೂದಲು ನೆಟ್ಟಗೆ ನಿಂತಿರುತ್ತವೆ. ಕೊರಳಲ್ಲಿ ರುಂಡಮಾಲೆ ಧರಿಸಿದವನು ಹಾವುಗಳಿಂದ ಅಲಂಕರಿಸಿಕೊಂಡಿರುವನು. ಮತ್ತು ನಾಯಿಯೊಂದಿಗೆ ಇವನನ್ನು ಗುರುತಿಸಲಾಗುತ್ತದೆ. ಆದುದರಿಂದ ಭೈರವನನ್ನು ಕ್ಷೇತ್ರಪಾಲನೆಂದೂ ಹೇಳಲಾಗುತ್ತದೆ. [ಗೋಪಿನಾಥರಾವ್ ಟಿ ಎ.; ಎಲಿಮೆಂಟ್ಸ ಆಫ್ ಹಿಂದೂ ಐಕನೋಗ್ರಫಿ ಸಂ.೧ ಪುಟ ೧೭೪] ಇಂತಹ ವಿಗ್ರಹಗಳು ಜಿಲ್ಲೆಯಾದ್ಯಂತ ಕಂಡು ಬಂದಿವೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕಾಳಾಮುಖರಲ್ಲಿಯೂ ಭೈರವನ ಆರಾಧನೆ ಪ್ರಬಲವಾಗಿರುವುದು ಗೋಚರಿಸುವುದೆಂಬುದು ಚಿಂತನೀಯವಾಗಿದೆ. [ಕಡಪಟ್ಟಿ ಎನ್ ಎಮ್.; ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ, ಪುಟ.೨೦೯]

ಕದಂಬೇಶ್ವರ ದೇಗುಲ ರಟ್ಟೀಹಳ್ಳಿಯ ತ್ರಿಕೂಟ ಶಿಖರಗಳ ಕೋಷ್ಟಕಗಳಲ್ಲಿ ಭೈರವ ಭೈರವಿಯರ ಸುಂದರ ಶಿಲ್ಪಗಳನ್ನು ಕಾಣಬಹುದು. ಕರ್ನಾಟಕದಲ್ಲಿ ಕಾಳಾಮುಖ ಪಾಶುಪತ ಪರಂಪರೆಯಲ್ಲಿ ಶೈವದೇವಾಲಯಗಳಲ್ಲಿ ಭೈರವನ ವಿಗ್ರಹ ಪ್ರತಿಷ್ಠಾಪನೆಯ ಬಹುಸಾಮಾನ್ಯವಾಗಿತ್ತೆಂದು ಅಧ್ಯಯನದಿಂದ ತಿಳಿದು ಬರುತ್ತದೆ. ಹಾವೇರಿ ಜಿಲ್ಲೆಯಲ್ಲಿ ದೇವಾಲಯಗಳ ಶಿಖರಗಳಲ್ಲಿಯವುಗಳನ್ನು ಹೊರತು ಪಡಿಸಿ, ಒಟ್ಟಾರೆ ಸುಮಾರು ೩೭ ಭೈರವನ ವಿಗ್ರಹಗಳು ಕಂಡುಬರುತ್ತವೆ.

ಅಬ್ಬಲೂರು ಬ್ರಹ್ಮೇಶ್ವರ ದೇವಾಲಯ

ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯದ ಕ್ರಿ.ಶ ೧೧೩೦ ಹಾಗೂ ೧೧೪೪ ರ ದತ್ತಿ ಶಾಸನದಲ್ಲಿ ಮೂವರಕೋಣೆಯ ಸಂತತಿಯ ವಿದ್ಯಾಭರಣ ಪಂಡಿತದೇವನ ಶಿಷ್ಯನಾದ ಜ್ಞಾನಶಕ್ತಿ ಪಂಡಿತ ದೇವನೆಂಬ ಹೊಸ ಯತಿಯನ್ನು ಪರಿಚಯಿಸುತ್ತದೆ. ಈ ಶಾಸನವು ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯವನ್ನು ಬಮ್ಮಗಾವುಂಡನ ತಂದೆ ಅಜ್ಜಂದಿರಿಂದ ಏಳಿಗೆ ಹೊಂದಿತ್ತೆಂದು ಇದೇರೀತಿ ಅವನು ಈ ದೇವಾಲಯಕ್ಕಾಗಿ ದಾನಧರ್ಮಗಳನ್ನು ನೀಡಬೇಕೆಂದೂ ಅವನಿಗೆ ಜ್ಞಾಪಕ ಮಾಡಿಕೊಡಲಾಯಿತೆಂಬುದನ್ನು ದಾಖಲಿಸುತ್ತದೆ. ಈ

ಬಗೆಯಾಗಿ ಬಮ್ಮಗಾವುಂಡನು ಶಿವಭಕ್ತಿಯೆಂಬ ಹೆಣ್ಣಿನ ಮಿಲನಕ್ಕೆ ಎಂದಿಗಿಂತಲೂ ಹೆಚ್ಚು ಕೆರಳಿದ್ದನು.ಆಗ ಅವನೊಂದು ಕುದುರೆಯನ್ನೇರಿ ವೇಗದಿಂದ ಓಡಿಸಿ ಅದು ಕ್ರಮಿಸಿದಷ್ಟು ನೆಲವನ್ನು ದಾನ ಕೊಡುವುದಾಗಿ ಮಾತುಕೊಟ್ಟನು. ಅಸಾಮಾನ್ಯವಾದ ಈ ಕಿರಿಯ 'ಅಶ್ವಮೇಧ' ತರುವಾಯ ಅವನು ಜ್ಞಾನಶಕ್ತಿಗೆ ತನ್ನ ಮಾತಿನಂತೆ ಅಷ್ಟು ನೆಲವನ್ನು ದಾನ ಮಾಡಿದನು. ಇದು ೧೧೩೦ ರಲ್ಲಿ ನಡೆದುದು. ಮಲ್ಲಿಭಾವರಸ ಎಂಬ ದಂಡನಾಯಕನು ೧೧೪೪ ರಲ್ಲಿ ಬ್ರಹ್ಮೇಶ್ವರ ದೇವಾಲಯಕ್ಕೆ ಇನ್ನೊಂದು ದತ್ತಿಯನ್ನು ನೀಡಿದನು.ಇವೆರಡೂ ದತ್ತಿಗಳು ಬಮ್ಮಗಾವುಂಡ ಮತ್ತು ಮಹಾಯತಿಯಾದ ಜ್ಞಾನಶಕ್ತಿದೇವನಿಂದ ಕಾಪಾಡಲಾದವುಗಳು.[ಲಾರೆಂಜೆನ್ ಎನ್ ಡೆವಿಡ್.;ಕಾಪಾಲಿಕರು ಮತ್ತು ಕಾಳಾಮುಖರು, ಪುಟ.೧೫೭]

೧೧೪೯ ರ ಶಾಸನದ ಪುರವಣಿಯಲ್ಲಿ 'ಕೋಡಿಯ ಮಠದ ದಕ್ಷಿಣ ಕೇದಾರೇಶ್ವರ ಸೋಮನಾಥ ಹಾಗೂ ಅಬ್ಬಲೂರಿನ ಬ್ರಹ್ಮೇಶ್ವರ ದೇವರ ಅಲಂಕರಣಕ್ಕಾಗಿ ಬಿಜ್ಜಳನು ಹಲವಾರು ಗ್ರಾಮಗಳ ಭೂಕಂದಾಯವನ್ನು ದತ್ತಿಯಾಗಿ ನೀಡಿದ್ದು ಕಂಡು ಬರುತ್ತದೆ. [ಎಕ.ಸಂ-೭ ಎಸ್‌ಕೆ, ೧೦೩-೧೧೪೯]

ಕಾಳಾಮುಖ - ಪಾಶುಪತರ ದೇವಸ್ಥಾನಗಳೂ ಮಠಗಳೂ ಒಂದು ರೀತಿಯಲ್ಲಿ ಅಭಿನ್ನವಾಗಿದ್ದವು. ಹನ್ನೆರಡನೆಯ ಶತಮಾನದಲ್ಲಿ ಈ ಶೈವಧರ್ಮದ ಪ್ರತಿಸ್ಪರ್ಧಿಯಾಗಿ ವೀರಶೈವ ಧರ್ಮವು ಪ್ರಭಲಗೊಂಡು ದೇವಸ್ಥಾನವನ್ನು ಸ್ಥಾವರಲಿಂಗ ಪೂಜೆಯನ್ನು ವಿರೋಧಿಸಿತು. ಕಾಳಾಮುಖ ಶೈವರ ಪ್ರಭಾವವು ಕಡಿಮೆಯಾದಂತೆ ಅವರ ಮಠಗಳು ಮರೆಯಾದವು. ಆದರೆ ಅವರು ಕಟ್ಟಿಸಿದ ದೇವಸ್ಥಾನಗಳು ಮಾತ್ರ ಹಾಗೆಯೇ ಉಳಿದುಕೊಂಡವು. ವೀರಶೈವ ಧರ್ಮವು ಏನೇ ಹೇಳಲಿ, ಅದರ ಅನುಯಾಯಿಗಳಾದ ಸಾಮಾನ್ಯರು ಈ ದೇವಸ್ಥಾನಗಳನ್ನು ಪೂಜಿಸುವುದನ್ನು ಮಾತ್ರ ನಿಲ್ಲಿಸಲಿಲ್ಲ. ವೀರಶೈವ ಧರ್ಮವು ಕ್ರಮೇಣ ಸ್ಥಾವರಲಿಂಗ ಪೂಜೆಯ ತತ್ವವನ್ನು ಒಪ್ಪಿಕೊಂಡಿತು. [ಚಿದಾನಂದಮೂರ್ತಿ ಎಂ.; ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೨೨೫]

ಸರಸ್ವತಿಶಿಲ್ಪಗಳು

ವೇದದಲ್ಲಿ ವಾಗ್ದೇವಿ ಎನಿಸಿಕೊಂಡ ಇವಳ ಬಗ್ಗೆ ವಿವಿಧ ಪುರಾಣಗಳು ವರ್ಣಿಸಿವೆ. ಬಿಳಿಕಮಲದ ಮೇಲೆ ನಿಂತಿರುವವಳು, ಬಿಳಿವಸ್ತ್ರವನ್ನು ತೊಟ್ಟಿರುವವಳು. ತನ್ನ ನಾಲ್ಕು ಕೈಗಳಲ್ಲಿ ಅಕ್ಷಮಾಲೆ, ವ್ಯಾಖ್ಯಾನಮುದ್ರಾ, ಪುಸ್ತಕ ಹಾಗೂ ಬಿಳಿಕಮಲದ ಹೂವನ್ನು ಹಿಡಿದಿರುವವಳು[ಗೋಪಿನಾಥರಾವ್ ಓ ಎ.; ಎಲಿಮೆಂಟ್ಸ ಆಫ್ ಹಿಂದೂ

ಐಕನೋಗ್ರಫಿ ಸಂ.೧ ಪುಟ.೩೭೭] ಮತ್ಸ್ಯಪುರಾಣದಲ್ಲಿ ಎರಡು ಕೈಯಲ್ಲಿರುವ ಪುಸ್ತಕ ಜಪಮಾಲೆ, ಪಾಶ ಮತ್ತು ಅಂಕುಶವನ್ನು ಧರಿಸಿರುವಳು.ಅವಳು ಧರಿಸಿದ ಆಯುಧಗಳಿಂದ ಅವಳು ಜ್ಞಾನ ಮತ್ತು ಉಪಾಸನೆಯ ದೇವತೆ ಎಂದು ತಿಳಿದು ಬರುತ್ತದೆ. ಇವಳು ಲಲಿತಕಲೆಗಳ ತಾಯಿಯೂ ಹೌದು ಎಂದಿದೆ.[ಭಟ್ಟಾಚಾರ್ಯ ಬಿ ಸಿ.; ಇಂಡಿಯನ್ ಇಮೇಜಿಸ್, ಪುಟ.೪೪]

ಹಾವೇರಿ ಜಿಲ್ಲೆಯಲ್ಲಿ ಹದಿಮೂರು ಸರಸ್ವತಿ ವಿಗ್ರಹಗಳು ಮತ್ತು ಸರಸ್ವತಿ ಮಂಟಪಗಳ ರಚನೆ ಇರುವುದನ್ನು ಗಮನಿಸುತ್ತೇವೆ. ಎಂಟು ತ್ರೈಪುರಷ ದೇವಾಲಯಗಳು ಮಠಗಳನ್ನು ಹೊಂದಿದ್ದು ವಿದ್ಯಾದಾನ ಕಾರ್ಯವನ್ನು ಕೈಗೊಂಡಿದ್ದವು. ಅಬಲೂರಿನ ಬ್ರಹ್ಮಲಿಂಗೇಶ್ವರ ಕಲಕೇರಿಯ ಸ್ವಯಂಭೂಸೋಮೇಶ್ವರ, ಮೇದೂರಿನ ಮಾಕಾಳೇಶ್ವರ, ದೇವಾಲಯಗಳ ಆವರಣದಲ್ಲಿ ಸರಸ್ವತಿ ಮಂಟಪಗಳು ಶಾಲೆಯನ್ನು ನಡೆಸಲೆಂದೇ ಉದ್ದೇಶಿತವಾಗಿರುತ್ತಿದ್ದವು. ಎಂದು ಬಾ.ರಾ.ಗೋಪಾಲ ರವರು ಅಭಿಪ್ರಾಯಿಸಿದ್ದಾರೆ. [ಗೋಪಾಲ ಬಾ ರಾ.; ಚಾಲುಕ್ಯಾಸ ಆಫ್ ಕಲ್ಯಾಣ ಆ್ಯಂಡ್ ಕಲಚೂರಿಸ್ ಪುಟ. ೪೨೧] ಸರಸ್ವತಿ ಮಂಟಪಗಳು ದೇವಾಲಯಗಳಲ್ಲಿ ವಿದ್ಯಾಭ್ಯಾಸಕ್ಕೆಂದೇ ಮೀಸಲಾಗಿದ್ದ ವಿಶಾಲವಾದ ಕೊಠಡಿಗಳು. ಅಬಲೂರಿನ ಸರಸ್ವತಿ ಮಂಟಪವು ವಿಶಾಲವಾದ ನವರಂಗದಂತಹ ರಚನೆಯನ್ನು ಹೊಂದಿದೆ ಮತ್ತು ಗರ್ಭಗೃಹ ಭಾಗವೂ ಆಯತಾಕಾರದಲ್ಲಿದ್ದು ಮಧ್ಯದಲ್ಲಿ ಸರಸ್ವತಿ ಮಂಟಪವು ವಿಶಾಲವಾದ ನವರಂಗದಂತಹ ರಚನೆಯನ್ನು ಹೊಂದಿದೆ ಮತ್ತು ಗರ್ಭಗೃಹ ಭಾಗವೂ ಆಯತಾಕಾರದಲ್ಲಿದ್ದು ಮಧ್ಯದಲ್ಲಿ ಸರಸ್ವತಿ ಮಂಟಪವು ವಿಶಾಲವಾದ ನವರಂಗದಂತಹ ರಚನೆಯನ್ನು ಹೊಂದಿದೆ ಮತ್ತು ಗರ್ಭಗೃಹ ಭಾಗವೂ ಆಯತಾಕಾರದಲ್ಲಿದ್ದು ಮಧ್ಯದಲ್ಲಿ ಸರಸ್ವತಿ ವಿಗ್ರಹವನ್ನು ಇಡಲಾಗಿದೆ. ಅಕ್ಕ ಪಕ್ಕದಲ್ಲಿ ಕೊಠಡಿಗಳಿವೆ. ಇಲ್ಲಿ ನಡೆಯುವ ವಿದ್ಯಾಭ್ಯಾಸವು ಕಟ್ಟುನಿಟ್ಟಿನದಾಗಿರುವುದು. ಶೈವ ಗುರುಗಳು ಅಖಂಡ ಬ್ರಹ್ಮಚಾರಿಗಳಾಗಿದ್ದುಕೊಂಡು ಬ್ರಹ್ಮಚಾರಿ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದ್ದ ಸ್ಥಾನವೇ ನೈಷ್ಠಿಕಸ್ಥಾನ ಎಂದು ಎಂ.ಚಿದಾನಂದಮೂರ್ತಿ ತಿಳಿಸುತ್ತಾರೆ. [ಚಿದಾನಂದಮೂರ್ತಿ ಎಂ.; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. ೧೪೦]

ಸರಸ್ವತಿ ಶಿಲ್ಪಗಳು ಎರಡು ಕೈ ಅಥವಾ ನಾಲ್ಕು ಕೈಗಳಿಂದಿರುವವು ಕಂಡು ಬರುತ್ತವೆ. ಎರಡು ಕೈಗಳಲ್ಲಿ ಪುಸ್ತಕ ಮತ್ತು ಜಪಮಾಲೆಯನ್ನು ಧರಿಸಿರುವಳು. ನಾಲ್ಕು ಕೈ

ಇರುವಲ್ಲಿ ಪುಸ್ತಕ, ಜಪಮಾಲೆ, ಪಾಳ ಮತ್ತು ಅಂಕುಶವನ್ನು ಧರಿಸಿರುವಳು. ಅವಳು ಧರಿಸಿದ ಆಯುಧಗಳಿಂದ ಅವಳು ಜ್ಞಾನ ಮತ್ತು ಉಪಾಸನೆಯ ದೇವತೆ ಎಂದು ತಿಳಿದು ಬರುತ್ತದೆ. ಇವಳು ಲಲಿತ ಕಲೆಗಳ ತಾಯಿಯೂ ಹೌದು ಎಂದು ಮತ್ಸ್ಯಪುರಾಣವು ಹೇಳುತ್ತದೆ. [ಭಟ್ಟಾಚಾರ್ಯ ಸಿ.; 'ಇಂಡಿಯನ್ ಇಮೇಜಸ್ ದ ಬ್ರಹ್ಮಾನಿಕ್ ತಿಕೆನೋಗ್ರಫಿ ಹಿಂದುಯಿಸಮ್, ಬುದ್ದಿಸಮ್, ಜೈನಿಸಮ್ ಪುಟ. ೪೪] ಸರಸ್ವತಿ ಕೈಯಲ್ಲಿರುವ ಪುಸ್ತಕವು ಲೌಕಿಕ ವಿಜ್ಞಾನವನ್ನು ಸಂಭೋದಿಸಿದರೆ, ಅಕ್ಷಮಾಲೆಯು ಆತ್ಮಜ್ಞಾನ ಯೋಗ ವಿಜ್ಞಾನವನ್ನು ಸಂಭೋಧಿಸುತ್ತದೆ. ವೀಣೆಯು ಲಲಿತಕಲೆಗಳ ಪ್ರತೀಕವಾಗಿದೆ [ಸ್ವಾಮಿ ಹರ್ಷಾನಂದ.; ಹಿಂದೂ ಗಾಡ್ಸ ಡ್ಯಾಂಡ್ ಗಾಡೆಸಸ್, ಪುಟ. ೭೮] ಈ ಸರಸ್ವತಿ ಮಂಟಪಗಳು ದೇವಾಲಯಗಳ ದಕ್ಷಿಣ ದಿಕ್ಕಿನಲ್ಲಿ ಉತ್ತರಾಭಿಮುಖವಾಗಿ ಮತ್ತು ಸರಸ್ವತಿ ವಿಗ್ರಹಗಳಿರುವುದುದನ್ನು ಕಾಣುತ್ತೇವೆ.

ಪ್ರಸ್ತುತ ಹಾವೇರಿ ಜಿಲ್ಲೆಗೆ ಸಂಬಂಧಿಸದಂತೆ ಸುಮಾರು ೧೩ ಸರಸ್ವತಿಶಿಲ್ಪಗಳನ್ನು ಕಾಣುತ್ತೇವೆ. ಅಬ್ಬಲೂರಿನಲ್ಲಿ ಬ್ರಹ್ಮೇಶ್ವರ ದೇವಾಲಯದ ಆವರಣದ ದಕ್ಷಿಣಕ್ಕೆ ಸರಸ್ವತಿ ದೇವಾಲಯದಲ್ಲಿರುವುದು. ಮೇದೂರು ಮಾಕಾಳೇಶ್ವರ ದೇವಾಲಯದ ಆವರಣದ ದಕ್ಷಿಣದಿಕ್ಕಿನ ದೇವಾಲಯದಲ್ಲಿ ಕಾಣುತ್ತೇವೆ. ಅಲ್ಲದೆ ಕಲಕೇರಿಯಲ್ಲಿ ದೇವಾಲಯವಿದ್ದು ವಿಗ್ರಹವನ್ನು ಬಸವೇಶ್ವರ ದೇವಸ್ಥಾನಕ್ಕೆ ಸ್ಥಳಾಂತರಿಸಿ ಪೂಜಿಸುತ್ತಿರುವುದನ್ನು ಕಾಣುತ್ತೇವೆ. ಅಲ್ಲದೆ ಬ್ಯಾಡಗಿಯ ತಾಲೂಕು ಕುಮ್ಮೂರನ ರಾಮಲಿಂಗೇಶ್ವರ ದೇವಸ್ಥಾನದಲ್ಲಿ, ರಾಣೇಬೆನ್ನೂರಿನ ತಾಲೂಕಿನ ಹೂಲಿಹಳ್ಳಿ ಕಲ್ಲೇಶ್ವರ ದೇವಸ್ಥಾನದಲ್ಲಿ, ಹಾನಗಲ್ಲ ತಾಲೂಕಿನ ಅರಳೇಶ್ವರ, ಕದಂಬೇಶ್ವರ ದೇಗುಲ, ಕಲಕೇರಿ ಬಸವಣ್ಣ, ಚಿಕ್ಕಣಗಿ ಈಶ್ವರ ದೇವಾಲಯದಲ್ಲಿ ಸರಸ್ವತಿ ವಿಗ್ರಹಗಳು ಕಂಡು ಬರುತ್ತವೆ. ವಿದ್ಯಾದಾಯಿನಿಯಾದ ಇವಳನ್ನು ಕಾಳಾಮುಖರು ಆರಾಧಿಸಿರುವ ಬಗ್ಗೆ ಸಾಕ್ಷಿಯಾಗಿವೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಿದಾಗ ಹಾವೇರಿ ಜಿಲ್ಲೆಯ ಶಾಸನಗಳಲ್ಲಿ ಯತಿಗಳು ಮತ್ತು ದೇವಾಲಯಗಳ ರಚನೆ, ಶಿಲ್ಪ ಇತ್ಯಾದಿ ದೊರೆತ ಮಾಹಿತಿಯನುಸಾರ ಕಾಳಾಮುಖ ಪರಂಪರೆಯ ಸಂಸ್ಕೃತಿಯನ್ನು ಅವರ ಕೊಡುಗೆಗಳನ್ನು ಚರ್ಚಿಸಲಾಗಿದೆ.

ಶಾಸನೋಕ್ತ ಕಾಳಾಮುಖ ಯತಿಗಳ ಪರಂಪರೆ ಯಾದಿ

ರಟ್ಟಿಹಳ್ಳಿ

ವಾಮಶಕ್ತಿ
|
ರುದ್ರಾಶಕ್ತಿ
|
ಶ್ರೀಕಂಠದೇವ
|
ಕ್ರಿಯಾಶಕ್ತಿ
|
ಸರ್ವೇಶ್ವರಚಾರ್ಯ
|
ಕಲ್ಯಾಶಕ್ತಿ
|
ಮೂರುಜಾವಿದೇವ
|
ಲಕುಳೀಶ್ವರ
|
ಮೂರುಜಾವಿದೇವ(ಶಿಷ್ಯ)

ತಿಳವಳ್ಳಿ

ವಿದ್ಯಾಭರಣ
|
ಗೋಕರ್ಣ
|
ಕುಮಾರ
|
ಸರ್ವೇಶ್ವಶಕ್ತಿ
|
ರುದ್ರಾಶಕ್ತಿ
|
ಚಿಕ್ಕ ಸರ್ವೇಶ್ವರಶಕ್ತಿದೇವರ

ಸಾತೇನಹಳ್ಳಿ

ಪಿನಾಕ ಪಾಣಿ
|
ಸಿವರಾಶಿ
|
ಅಮೃತರಾಶಿ
|
ಹರಶಕ್ತಿ [೧೨೦೪]

ಕಣವಿಸಿದ್ಧಗೇರಿ

ಮಾಣಿಕರಾಶಿಪಂಡಿತ

।

ರಾಮಶಕ್ತಿ(ಶಿಷ್ಯ)

ಹರಳಹಳ್ಳಿ

ಅಮೃತರಾಶಿ

।

ಸರ್ವೇಶ(ಶಿಷ್ಯ)

।

ಕಲ್ಯಾಣಶಕ್ತಿ(ಶಿಷ್ಯ)

ಕುಮ್ಮೂರು

ವಕ್ತ್ರಶಿವಪಂಡಿತ

।

ವಾಮಶಕ್ತಿ(ಶಿಷ್ಯ)

।

ಮಲ್ಲಿಕಾರ್ಜುನದೇವ(ಶಿಷ್ಯ)

।

ಕೇದಾರಪಂಡಿತದೇವ

ಅಧ್ಯಾಯ : ೫

ಚಲನಶೀಲ ಸಮಾಜ ಮತ್ತು ಬಳ್ಳಿಗಾವಿ ಕಾಳಾಮುಖರು

೫.೧ ಬಳ್ಳಿಗಾವೆ ಪರಿಸರದಲ್ಲಿ ಕಂಡುಬರುವ ಕಾಳಾಮುಖ ಪರಂಪರೆ

೫.೨ ಆಚರಣೆಗಳು

ಅಧ್ಯಾಯ – ಐದು

ಚಲನಶೀಲ ಸಮಾಜ ಮತ್ತು ಬಳ್ಳಿಗಾವಿ ಕಾಳಾಮುಖರು

೫.೧ ಬಳ್ಳಿಗಾವೆ ಪರಿಸರದಲ್ಲಿ ಕಂಡು ಬರುವ ಕಾಳಾಮುಖ ಪರಂಪರೆ

ಬಳ್ಳಿಗಾವೆಯು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನಲ್ಲಿರುವ ಒಂದು ಸುಪ್ರಸಿದ್ಧ ಐತಿಹಾಸಿಕ ಸ್ಥಳವಾಗಿದೆ. ಇದು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ನೆರೆಯ ಗ್ರಾಮ. ಹಿರೇಕೆರೂರಿನಿಂದ ಸುಮಾರು ೨೫ ಕಿ.ಮೀ ದೂರದಲ್ಲಿ ಇದೆ. ಈಗ ಇದು ಒಂದು ದೊಡ್ಡ ಹಳ್ಳಿಯಾಗಿದ್ದು ಶಿರಾಳಕೊಪ್ಪದಿಂದ ೨ ಕಿ.ಮೀ ಅಂತರದಲ್ಲಿದೆ. ಇದು ಇತಿಹಾಸ ಕಾಲದಲ್ಲಿ ೧೦ ರಿಂದ ೧೫ ನೇ ಶತಮಾನದವರೆಗೆ ಬನವಾಸಿ ಹನ್ನೆರಡುಸಾವಿರ ಎಂಬ ಆಡಳಿತ ವಿಭಾಗಕ್ಕೆ ಕೇಂದ್ರ ಸ್ಥಾನವಾಗಿ, ವ್ಯಾಪಾರ ಕೇಂದ್ರವಾಗಿ, ಅನೇಕ ತೀರ್ಥಸ್ಥಾನಗಳನ್ನೊಳಗೊಂಡ ಪುಣ್ಯಕ್ಷೇತ್ರವಾಗಿ ಪ್ರಸಿದ್ಧಿ ಪಡೆದಿತ್ತು. ಆ ಕಾಲದ ನೂರಾರು ಶಾಸನಗಳು ಹಾಗೂ ದೇವಾಲಯಗಳ ಅವಶೇಷಗಳು ಇದರ ಗತ ಕಥೆಯನ್ನು ಬಿತ್ತರಿಸುತ್ತವೆ. ಶಾಸನಗಳಲ್ಲಿ ಸಾಮಾನ್ಯವಾಗಿ ಬಳ್ಳಿಗಾವೆ ಎಂಬುದಾಗಿ ಉಲ್ಲೇಖವಿದ್ದರೂ ಬಳ್ಳಿಗ್ರಾಮೆ, ವಲ್ಲಿಗ್ರಾಮ, ಬಲಿಪುರ, ಬಲಿರಾಜಧಾನಿ ಎಂಬೆಲ್ಲ ಹೆಸರುಗಳಿಂದಲೂ ಈ ಪಟ್ಟಣವನ್ನು ಕರೆಯಲಾಗಿದೆ. [ನೀಲಾ ಮಂಜುನಾಥ.; ಬಳ್ಳಿಗಾವೆ ಪುಟ. ೨]

ಈ ರಾಜಧಾನಿ ಪಟ್ಟಣವನ್ನು ಮಹಾನಗರ ವೀರಬಳಂಜ ಪಟ್ಟಣ ಮುಂತಾದ ಶಾಸನಗಳಲ್ಲಿ ವರ್ಣಿಸಲಾಗಿದೆ. ಚಾಲುಕ್ಯ ಮತ್ತು ಹೊಯ್ಸಳ ಕಾಲದ ಹಲವು ದೇವಾಲಯಗಳನ್ನು ಹೊಂದಿದೆ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿತ್ತು. ದಕ್ಷಿಣ ಭಾರತದಾದ್ಯಂತ ವ್ಯವಹಾರವನ್ನು ನಡೆಸುತ್ತಿದ್ದ ಅಯ್ಯಾಹೊಳೆ ಐನೂರ್ವರೆಂಬ ಸುಪ್ರಸಿದ್ಧ ವ್ಯಾಪಾರಿ ಶ್ರೇಣಿಯು ಈ ಪಟ್ಟಣವನ್ನು ಒಂದು ಪ್ರಾದೇಶಿಕ ಕೇಂದ್ರವನ್ನಾಗಿ ಮಾಡಿಕೊಂಡಿತ್ತು ಅಂಗಡಿ ಮುಂಗಟ್ಟುಗಳನ್ನು ಹೊಂದಿದ ನಖರಗಣ ಎಂಬ ಪ್ರಕಾರದ ಮತ್ತೊಂದು ವ್ಯಾಪಾರಿ ಸಂಘವಿತ್ತೆಂದು ತಿಳಿದು ಬರುತ್ತದೆ. ಪಂಚಲೋಹಗಳಲ್ಲಿ ಕೆಲಸ ಮಾಡುತ್ತಿದ್ದ ಲೋಹಕಾರರು, ತೆಲ್ಲಿಗರು, ಶಿಲ್ಪಿಗಳು, ಚರ್ಮಕಾರರು, ಬಿದಿರು ಕೆಲಸ ಮಾಡುವವರು, ತಂಬುಲಿಗರು, ಮಾಲೆಕಾರರು, ಬಡಗಿಗಳು, ಮುಂತಾದ ಕುಶಲಕರ್ಮಿಗಳು ಹಾಗೂ ದೇವಾಲಯಗಳಲ್ಲಿ ಕೆಲಸ

ಮಾಡುತ್ತಿದ್ದ ವಿಭಿನ್ನ ವೃತ್ತಿಗಳವರು ಬೇರೆ ಬೇರೆ ಕೇರಿಗಳಲ್ಲಿ ವಾಸವಾಗಿದ್ದರು ಎಂದು ತಿಳಿದು ಬರುತ್ತದೆ. ೧೧-೧೨ನೆಯ ಶತಮಾನದ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ೧೩ಮಠಗಳನ್ನು ದಾಖಲೆಗಳು ಉಲ್ಲೇಖಿಸುತ್ತವೆ ಎಂದು ಅವುಗಳ ಪಟ್ಟಿ ಕೊಟ್ಟಿದ್ದಾರೆ. ಒಂದು ಬೌದ್ಧ, ಎರಡು ವೈಷ್ಣವ, ಮೂರು ಜೈನ, ಒಂದು ಅದ್ವೈತ, ಒಂದು ಶೋತ್ರೀಯ ಹಾಗೂ ಆರು ಕಾಳಾಮುಖ ಮಠಗಳನ್ನು ಕುರಿತು ಬೆಳಕು ಚೆಲ್ಲುತ್ತವೆ. ಶೈವಮಠಗಳು ಐದುಮಠಗಳಾಗಿದ್ದು (ಪಂಚಮಠ) ೧೨ನೆಯ ಶತಮಾನದ ಕೋಡಿಮಠವು ಅವುಗಳಲ್ಲಿ ಒಂದರ ಬದಲಾಗಿ ಸೇರಿಕೊಂಡಿರಬಹುದೆಂದು ವಿವರಿಸುತ್ತಾರೆ.[ಶೆಟ್ಟರ ಎಸ್, ಬಳ್ಳಿಗಾವೆ ಮಧ್ಯಕಾಲೀನ ನಗರವೊಂದರಲ್ಲಿ ಮತ್ತು ಮತ ವೈವಿದ್ಯತೆಯ ವಿನ್ಯಾಸ, ನಾವಡ ಎ ವಿ.; (ಸಂ)ಕನ್ನಡ ಅಧ್ಯಯನ, ಪುಟ. ೯೮]

ಇಲ್ಲಿ ದೇವಾಲಯಗಳು ಮಠಗಳಾಗಿ ಕಾರ್ಯನಿರ್ವಹಿಸುತ್ತ, ಮಠ ಬೇರೆಯಲ್ಲ ದೇವಾಲಯ ಬೇರೆಯಲ್ಲ ಗುರುಗಳು ಯಾವ ದೇವಸ್ಥಾನದ ಆಚಾರ್ಯರಾಗಿರುತ್ತಿದ್ದರೋ ಆ ಮಠ ಆಚಾರ್ಯರೆಂದು ಕರೆಯುತ್ತಿರುವುದು ಕಂಡು ಬರುತ್ತದೆ. ಇಲ್ಲಿಯ ಶಾಸನಗಳಲ್ಲಿ ಪಂಚಮಠ, ಪಂಚಮಠಗಳು, ಪಂಚಲಿಂಗಮಠ ವೆಂದು ಹಲವು ಹೆಸರುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಪಂಚಮಠಗಳು ಕಾಳಾಮುಖರಿಗೆ ಸೇರಿದ ಐದುಪ್ರತ್ಯೇಕ ಮಠಗಳಾಗಿರುವುದು ಗೋಚರಿಸುತ್ತದೆ. ಕ್ರಿಶ ೧೦೯೫ ರಲ್ಲಿ ಪಂಚಮಠ ಸ್ಥಾನಕ್ಕೆ ಪ್ರಾಚೀನತಮ ಉಲ್ಲೇಖ ದೊರಕುತ್ತದೆ.[ಎಕ. ೭ ಶಿಕಾ ೧೮೯ ಕ್ರಿಶ ೧೧೬೭] ಇನ್ನೊಂದು ಶಾಸನದಲ್ಲಿ [ಎಕ. ೭ ಶಿಕಾ ೧೦೬ ೧೧೬೨ ಎ.ಡಿ]'ಪಂಚಲಿಂಗದಾಚಾರ್ಯರು ಶ್ರೀಕಂಠಪಂಡಿತದೇವರು ಶ್ರೀಮತ್ರಿಪುರಾಂತಕದಾಚಾರ್ಯ ಚತುರಾನನ ಪಂಡಿತರು ಶ್ರೀಮೂಲಸ್ಥಾನಮುಖ್ಯಮಾಗಿ ಪಂಚಮಠದಾರ್ಯ್ಯ ಮೂಲಿಗಹೊಂನ್ನೆಯಜೀಯರು' ಇಲ್ಲಿ ಮೂಲಿಗ (ಮೂಲತಃವಿರುವ)ಹೊನ್ನಜೀಯ ಎಂಬುವವರು ಹಿರಿಯಮಠದ ಆಚಾರ್ಯರಾಗಿದ್ದೆಂದು ತಿಳಿದುಬರುತ್ತದೆ. ಭೇರುಂಡೇಶ್ವರ ಮಠ, ಪಂಚಲಿಂಗಮಠ, ತ್ರಿಪುರಾಂತಕಮಠ, ಕೋಡಿಮಠ, ಪ್ರಾಚೀನತಮವಾದವುಗಳು ಇತ್ತೀಚಿಗೆ ಹೊಸಮಠ, ಕಲ್ಲುಮಠ, ಕಾಶಿಮಠ, ವಿರಕ್ತಮಠ, ಆರಿದ್ರೆಮಠ, ಸಮಯಾಚಾರಮಠ ಎಂಬುದಾಗಿ ದಾಖಲೆಯಲ್ಲಿ ಇಲ್ಲದಿದ್ದರೂ ಉಳಿದುಬಂದಿರುವುದು ಗೋಚರಿಸುತ್ತವೆ.

ಕೋಡಿಮಠ

ಕಾಳಾಮುಖರ ಬಹುಮುಖ ಚಟುವಟಿಕೆಗಳಿಗೆ ಅತ್ಯುತ್ತಮ ನಿದರ್ಶನವೆಂದರೆ ಬಳ್ಳಿಗಾವೆಯ ಕೇದಾರಮಠ ಅಥವಾ ಕೋಡಿಮಠ ದಕ್ಷಿಣದ ಕೇದಾರವೆಂದು ೧೧-೧೨ಿಯ ಶತಮಾನದಲ್ಲಿ ಪ್ರಸಿದ್ಧಿ ಪಡೆದಿತ್ತು. ಸೃಷ್ಟಿಕಾರರಾದ ಬ್ರಹ್ಮಚಾರಿ ಮುನಿಗಳ ವಾಸಸ್ಥಾನವಾಗಿತ್ತು. ಅಲ್ಲಿ ನಾಲ್ಕು ವೇದಗಳು, ಕೌಮಾರ, ಶಾಕಟಾಯನ, ಪಾಣಿನಿಯ ಮುಂತಾದ ವ್ಯಾಕರಣಗಳ, ನ್ಯಾಯ, ವೈಶೇಷಿಕ, ಮಿಮಾಂಸಾ, ಸಾಂಖ್ಯ, ಬೌದ್ಧ ಮುಂತಾದ ದರ್ಶನಗಳ, ಲಾಕುಳ ಸಿದ್ಧಾಂತ, ಪತಂಜಲಿಯ ಯೋಗಶಾಸ್ತ್ರ, ಕಾವ್ಯ ನಾಟಕ, ಅಷ್ಟಾದಶ ಪುರಾಣಗಳ ಅಧ್ಯಯನ ನಡೆಯುತ್ತಿತ್ತು. ದೇಶದ ಎಲ್ಲೆಡೆಗಳಿಂದ ಕುರುಡರು, ಕುಂಟರು, ದೀನರು, ಅನಾಥರು, ಮೂಕರು, ಕಥಕರು, ಗಾಯಕರು, ವಾದಕರು, ನರ್ತಕರು, ವೈತಾಳಿಕರು, ನಗ್ನಭಗ್ನ ಕ್ಷಪಣಕರು, ಏಕದಂಡಿ, ತ್ರಿದಂಡಿ ಹಂಸ ಪರಮಹಂಸ ಮುಂತಾದ ಭಿಕ್ಷು ಸಾಧುಜನರು ಬಂದು ದಾನವನ್ನು ಪಡೆಯುತ್ತಿದ್ದರು. ದೇಶದ ಎಲ್ಲೆಡೆಗಳಿಂದ ಅನಾಥರೋಗಿ ಜನರು ಬಂದು ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುತ್ತಿದ್ದರು. ಎಲ್ಲ ರೀತಿಯ ಜನರಿಗೂ ಅದು ಅಭಯ ಸ್ಥಾನವಾಗಿತ್ತು. [ಎಕ. ೭ ಶಿಕಾ ೧೦೨-೧೧೬೨ ಎ.ಡಿ]

ಪ್ರಾಚೀನ ಕರ್ನಾಟಕದ ಅತೀ ಪ್ರಸಿದ್ಧ ಶೈವ ಮಠವೆಂದರೆ ಕೇದಾರೇಶ್ವರ ದೇವಸ್ಥಾನದ ಕೋಡಿಮಠ. ಕೇದಾರೇಶ್ವರ ದೇವಸ್ಥಾನವು ಕೇದಾರ ಪರ್ವತದ ತಪಸ್ವಿಗಳಿಗೆ ಸಮಾನರೆಂದು ಆ ಮಠವನ್ನು ಹಲವು ಸ್ಥಾನಪತಿಗಳು ಬೆಳಗಿದರೆಂದು ಒಂದು ಶಾಸನವು ತಿಳಿಸುತ್ತದೆ. [ಇಸಿ. ೭ ಎಸ್‌ಕೆ ೧೦೦] ಇಂಥಹ ಪ್ರಸಿದ್ಧ ಮಠದ ಕೀರ್ತಿಯನ್ನು ಕೇಳಿ ದಕ್ಷಿಣ ದಿಗ್ಭಾಗವನ್ನು ಸಾಧಿಸುವುದಕ್ಕೆಂದು ಬಂದಿದ್ದ ಬಿಜ್ಜಳನು ಆ ಮಠದಲ್ಲಿ ಏನಾದರೂ ಧರ್ಮಕಾರ್ಯವನ್ನು ಮಾಡಬೇಕೆಂದು ನಿಶ್ಚಯಿಸಿ ಕೇದಾರೇಶ್ವರ ದೇವರ ಅಂಗಭೋಗಕ್ಕೆ ತಪೋಧನರ ಆಹಾರದಾನಕ್ಕೆ ವಿದ್ಯಾದಾನಕ್ಕೆ ದತ್ತಿ ಬಿಟ್ಟು ಕೊಡುತ್ತಾನೆ ಇಷ್ಟೊಂದು ಬಹುಮುಖವಾದ ಚಟುವಟಿಕೆಗಳ ಕೇಂದ್ರವಾಗಿದ್ದ ದೇವಸ್ಥಾನಗಳು ಬಹಳ ಕಡಿಮೆ ಆದರೂ ಒಂದು ಗ್ರಾಮದ ಅಥವಾ ನಗರದ ಜೀವನ ಅಲ್ಲಿಯ ದೇವಸ್ಥಾನದ ಸುತ್ತ ಹೇಗೆ ವರ್ತಿಸುತ್ತಿತ್ತು ಎಂಬುದಕ್ಕೆ ಇದೊಂದು ಅತ್ಯುತ್ತಮ ನಿದರ್ಶನ. [ಚಿದಾನಂದಮೂರ್ತಿ ಎಂ.; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. ೨೧೨]

ಬಳ್ಳಿಗಾವೆಯ ಕಾಳಾಮುಖ ವಿದ್ಯಾಕೇಂದ್ರವಾಗಿದ್ದ ಕೋಡಿಮಠವು ಒಂದು ವಿಶ್ವವಿದ್ಯಾನಿಲಯದಂತೆ ಕಾರ್ಯನಿರ್ವಹಿಸಿದ್ದು ಕರ್ನಾಟಕದ ಬೇರೆ ಜಿಲ್ಲೆಗಳ ಐದಾರು ಮಠಗಳ ಮೇಲೂ ತನ್ನ ನಿಯಂತ್ರಣವನ್ನು ಹೊಂದಿ ಅಲ್ಲಿನ ವಿದ್ಯಾದಾನಾದಿ ಚಟುವಟಿಕೆಗಳನ್ನು ನಡೆಸುವ ಮೂಲಕ ಭವ್ಯ ಪರಂಪರೆಗೆ ಹಾಗೂ ಕರ್ನಾಟಕದಲ್ಲಿ ಕಾಳಾಮುಖರ ಭದ್ರ ಬುನಾದಿಗೆ ಕಾರಣವಾಗಿದೆ. 'ಪರ್ವತಾವಳಿಯ' 'ಮೂವರ ಕೋಣೆಯ ಸಂತತಿ'ಯ ಮುಖ್ಯ ಕೇಂದ್ರ ಬಳ್ಳಿಗಾವೆಯಲ್ಲಿದ್ದರೂ ಅದರ ನಿಯಂತ್ರಣವು ಹೆಚ್ಚಿನದಾಗಿ ಸುತ್ತಲ ಐದು ಸ್ಥಾನಗಳಿಗೂ ವಿಸ್ತರಿಸಿತ್ತು. ಈ ಸ್ಥಾನಗಳೆಂದರೆ ಅಬಲೂರಿನ ಬ್ರಹ್ಮೇಶ್ವರ ದೇವಾಲಯ, ಹಳೆನಿಡನೇಗಿಲದ ಮಲ್ಲಿಕಾರ್ಜುನ ದೇವಾಲಯ, ಗದುಗಿನ ತ್ರಿಕೂಟೇಶ್ವರ ದೇವಾಲಯ ಹಾಗೂ ಸೂಡಿಯ ನಗರೇಶ್ವರ ದೇವಾಲಯ. ಇವುಗಳಲ್ಲಿ ಅಬಲೂರು, ಹಳೆನಿಡನೇಗಿಲು, ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನವು. [ವಸಂತಕುಮಾರ ಬಿ ವಿ.; ಶಿಕಾರಿಪುರ ತಾಲೂಕಿನ ಸಾಂಸ್ಕೃತಿಕ ಸಂಕಥನ, ಪುಟ. ೧೦೪] ಹಾವೇರಿ ಜಿಲ್ಲೆಯ ಅನೇಕ ದೇವಸ್ಥಾನಗಳು ಬಳ್ಳಿಗಾವೆಯ ಕೋಡಿಮಠಕ್ಕೆ ಪ್ರತಿಬದ್ಧವಾಗಿದ್ದವೆನ್ನುವುದು ಕಂಡು ಬರುತ್ತದೆ. ಶೈವರು ಈಶ್ವರ ದೇವಾಲಯಗಳನ್ನು ಕಲ್ಲೇಶ್ವರವೆಂದು ಪೂಜಿಸುವ, ಆರಾಧಿಸುವ ದೇವಾಲಯಗಳು ಈ ಬಳ್ಳಿಗಾವೆಯ ಆಚರಣೆಗಳನ್ನು ಅನುಸರಿಸಿರುವುದು ಸ್ಪಷ್ಟವಾಗಿದೆ. ೧೧ ನೇಯ ಶತಮಾನದ ಪ್ರಾರಂಭದಲ್ಲಿ ವಾದಿರುದ್ರಗಣ ಲಕುಲೀಶ್ವರ ಪಂಡಿತನೆಂಬವನಿದ್ದನು. ಈ ಪಂಡಿತರು ಶಿವಪಾರಮ್ಯವನ್ನು ವೇದಗಳನ್ನು ವರ್ಣಾಶ್ರಮಗಳನ್ನು ಆಧರಿಸಿದ ಧರ್ಮವನ್ನು ಪ್ರತಿಪಾದಿಸಿದರು. ಅವರು ಮಹಾನ್ ವಾದಿ ಹಾಗೂ ತರ್ಕಶಾಸ್ತ್ರಜ್ಞರಾಗಿದ್ದರು. ಅವರಿಂದಾಗಿ ಬಳ್ಳಿಗಾವೆಯು ಒಂದುಪ್ರಸಿದ್ಧ ಕಾಳಾಮುಖ ಬ್ರಹ್ಮಚಾರಿ ಸ್ಥಾನವಾಗಿ ಬೆಳೆಯಿತು. ಇವರು ಬಳ್ಳಿಗಾವೆಯ ಪಂಚಲಿಂಗ ದೇವಾಲಯವನ್ನು ಕಟ್ಟಿಸಿ, ನಿರ್ವಹಿಸಿದ ಮೊತ್ತಮೊದಲಿಗರು, ಬಳ್ಳಿಗಾವೆಯಲ್ಲಿ ಲಕುಲೀಶ ಕಾಳಾಮುಖ ಸಂಪ್ರದಾಯವನ್ನು ಸ್ಥಾಪಿಸಿದರು.[ಶೆಟ್ಟರ ಎಸ್, ಬಳ್ಳಿಗಾವೆ ಮಧ್ಯಕಾಲೀನ ನಗರವೊಂದರಲ್ಲಿ ಮತ್ತು ಮತ ವೈವಿದ್ಯತೆಯ ವಿನ್ಯಾಸ, ನಾವಡ ಎ ವಿ.; (ಸಂ)ಕನ್ನಡ ಅಧ್ಯಯನ, ಚಳಿಗಾಳಿ ಸಂಯುಕ್ತ ಸಂಚಿಕೆ ಸಂ.೧ ಪುಟ. ೧೦೪]

ಕಾಳಾಮುಖ ಯತಿಗಳು

ಕೋಡಿಮಠದ ಇತಿಹಾಸ ಕ್ರಿ.ಶ ೧೦೩೬ ರಿಂದ ಪ್ರಾರಂಭವಾದರೆ ಕಾಳಾಮುಖರ ದಾಖಲೆ ಕ್ರಿ.ಶ ೧೦೧೯ ರಿಂದಲೇ ಬಳ್ಳಿಗಾವೆಯ ಪರಿಸರದಲ್ಲಿ

ಸಿಗುತ್ತದೆ.[ವಸಂತಕುಮಾರ ಬಿ ವಿ.; ಶಿಕಾರಿಪುರ ತಾಲೂಕಿನ ಸಾಂಸ್ಕೃತಿಕ ಸಂಕಥನ, ಪುಟ. ೧೨೦]

ಯತಿಗಳು		ಕಾಲ(ಕ್ರಿ.ಶ)	ದೇವಾಲಯ/ಮಠ
ಮೂಲಗಿ ಶಿವಶಕ್ತಿ	–	೧೦೧೯	ನಂದಿಕೇಶ್ವರ ದೇವಾಲಯ
ವಾದಿರುದ್ರಗಣ ಲಕುಳೀಶ್ವರ ಪಂಡಿತ	–	೧೦೩೬	ಪಂಚಲಿಂಗ ದೇವರ ದೇಗುಲ
ಕ್ರಿಯಾಶಕ್ತಿ ಪಂಡಿತ	–	೧೦೩೯	ಸಿದ್ದೇಶ್ವರ ದೇವರ ದೇಗುಲ
ಮೂಲಿಗ ಜ್ಞಾನ ಶಿವ ದೇವರು	–	೧೦೫೪	ಸೋಮೇಶ್ವರ ದೇವರ ದೇಗುಲ
ಸರ್ವೇಶ್ವರ ಪಂಡಿತ ದೇವರು	–	೧೦೫೪	ಪಂಚಲಿಂಗದ ಮಠ
ಜ್ಞಾನಶಕ್ತಿ ದೇವರು	–	೧೦೫೪	ತ್ರಿಪುರಾಂತಕ ಮಠ
ಕೇದಾರಶಕ್ತಿ > ರುದ್ರಾಭರಣ > ವಾಲ್ಮೀಕಿ	–	೧೦೭೮	ನಗರೇಶ್ವರ ದೇಗುಲ
ಕೇದಾರಶಕ್ತಿ > ಶ್ರೀಕಂಠಪಂಡಿತ> ಸೋಮೇಶ್ವರ ಪಂಡಿತ	–	೧೦೭೮	ನಗರೇಶ್ವರ ದೇಗುಲ
ಕಾಶ್ಮೀರ ದೇವರ ಸಂತಾನ > ತ್ರಿಲೋಚನಮುನಿ > ವರೇಶ್ವರ ದೇವ	–	೧೦೯೬	ಪಂಚಲಿಂಗ ಮಠ
ಕೇದಾರಶಕ್ತಿ > ಶ್ರೀಕಂಠ ಪಂಡಿತ	–	೧೦೯೮	ಪಂಚಲಿಂಗ ಮಠ

ಕ್ರಿ.ಶ ೧೦೧೯ ರಿಂದ ೧೦೯೮ರ ನಡುವಿನ ಕಾಲದಲ್ಲಿಯ ಕಾಳಾಮುಖ ಪಂಡಿತರ ಕಾಲ ಮತ್ತು ಪಟ್ಟಿ ದೇಗುಲಗಳನ್ನು ಗುರುತಿಸಲಾಗಿದೆ. ಇದು ಅವರ ಕಾಲದಲ್ಲಿ ನಿರ್ಮಿಸಿದ ಮತ್ತು ಜೀರ್ಣೋದ್ಧಾರಗೊಳಿಸಿದ ಬಗ್ಗೆ ತಿಳಿಸುತ್ತದೆ.

ಬಳ್ಳಿಗಾವೆಯ ಕಾಳಾಮುಖ ಯತಿಪರಂಪರೆ ಕ್ರಿ.ಶ ೧೦೭೮ರ ಶಾಸನದಲ್ಲಿ ಉಲ್ಲೇಖಿಸಿರುವುದನ್ನು ಗಮನಿಸಬಹುದು

ಕೇದಾರಶಕ್ತಿ

ರುದ್ರಾಭರಣ
ವಾಲ್ಮೀಕಿಮುನಿ(೧೦೭೮)

ಶ್ರೀಕಂಠಪಂಡಿತ ೧
ಸೋಮೇಶ್ವರ ಪಂಡಿತದೇವ
(೧೦೯೪,೧೧೦೩,೧೧೦೧-೦೪,೧೧೧೩)
ವಿದ್ಯಾಭರಣ (೧೧೨೯)

ವಾಮಶಕ್ತಿ ೧ (೧೧೨೯)

ಜ್ಞಾನಶಕ್ತಿ ೧
(೧೧೩೦-೧೧೪೪)

ಚಂದ್ರಭೂಷಣ
(೧೧೯೧,೧೧೯೨,೧೧೯೯)

ಗೌತಮಮುನಿ (೧೧೩೯ -೧೧೪೯)

ಕ್ರಿಯಾಶಕ್ತಿಪಂಡಿತ(೧೨೧೩,೧೨೨೫)

ವಾಮಶಕ್ತಿಪಂಡಿತ ೨(೧೧೫೬ - ೧೧೯೨)
ಜ್ಞಾನಶಕ್ತಿದೇವ ೨(೧೧೮೧)
ಶ್ರೀಕಂಠದೇವ ೨
ವಾಮಶಕ್ತಿದೇವ ೩(೧೨೧೫)

ಚಾಳುಕ್ಯರ ತ್ರಿಭುವನ ಮಲ್ಲದೇವನು ಅಳುತ್ತಿದ್ದ ಕಾಲದಲ್ಲಿ ಚಾವುಂಡ ಚಮೂಪತಿ ಹಾಗೂ ಪತ್ನಿ ಕೆಳೆಯ ಕಬ್ಬೆಗೆ ನಾಗವರ್ಮ ದಂಡಾಧೀಶನು ಮಗ. ನಾಗವರ್ಮನ ಪತ್ನಿ ನಾಗಿಯಕ್ಕ ಈ ದಂಪತಿಗಳಿಗೆ ಸರ್ವ್ವದೇವ ಹಾಗೂ ಚಾವುಂಡದಂಡೇಶ ಎಂಬ ಮಕ್ಕಳು. ಇವರಲ್ಲಿ ಸರ್ವದೇವ ಬೆಳೆದು ಚಮೂಪನಾಗುತ್ತಾನೆ. ಆತನ ಪತ್ನಿ ಶಾಂತಲಾದೇವಿ ಅವರಿಬ್ಬರ ಮಗ ಸೋವಿದೇವ ಕುಮಾರ [ಎಕ ೭ ಶಿಕಾ ೧೧೪, ೧೦೯೬ ಬಳ್ಳಿಗಾವೆ]

ಸರ್ವದೇವನು ದೇವಾಲಯವನ್ನು ಕಟ್ಟಿಸಿ ಕಾಳಾಮುಖ ಗುರುವಾದ ವರೇಶ್ವರ ಪಂಡಿತ ದೇವರ ಕಾಲಂಕರ್ಚಿ ದತ್ತಿ ನೀಡಿದ್ದಾನೆ. ಇಲ್ಲಿ ಕಾಳಾಮುಖರ ವರೇಶ್ವರ ಮುನೀಂದ್ರನು ಶಿಕ್ಷಣ ನೀಡಿದ ಕಾರಣದಿಂದಾಗಿ ಸರ್ವದೇವನು ಸರ್ವೇಶ್ವರಾಲಯವನ್ನು

ನಿರ್ಮಿಸಿದ್ದಾನೆಂಬುದು ಮಹತ್ವ ಪೂರ್ಣ ಸಂಗತಿ. ಕ್ರಿಶ ೧೧೯೬ರ ಹೊತ್ತಿಗೆ ಕಾಳಾಮುಖರು ಪೂಜ್ಯನೀಯರಾಗಿದ್ದರು.

ವರ ಕಾಳಾಮುಖ ಚಕ್ರವರ್ತಿ ಮುನಿದಿವ್ಯಜ್ಞಾನಿ ಕಾಶ್ಮೀರ ದೇ

ವರ ಸಂತಾನದಲ್ಲಿ ತ್ರಿಳೋಚನ ಮುನೀದ್ರಂಗಗ್ರ ಶಿಷ್ಯ ವರೇ

ಶ್ವರ ದೇವರ ತಪದಂಕಕಾಜಿನಮಳ ನಿಷ್ಪಾಪರಂ ಪಂಡಿತಾ

ಭರಣಂ ದೇವರ ದೇವನೀಶ್ವರನ ಪಾದಾರಾಧಕಂ ಧಾರ್ಮಿಕಂ [ಅದೇ,ಪುಟ]

ತ್ರಿಳೋಚನ ಮುನಿಂದ್ರ, ಆತನ ಅಗ್ರಶಿಷ್ಯ ವರೇಶ್ವರದೇವನು ದೇವರ ದೇವನಾದ ಈಶ್ವರನು ಪಾದಾರಾಧಕನಾಗಿ ಧಾರ್ಮಿಕನಾಗಿ ಕಾರ್ಯಪ್ರವೃತ್ತನಾಗಿದ್ದನು. ಆತ ನೀಡಿದ ಶಿಕ್ಷಣದ ಕಾರಣ ನಿರ್ಮಲ ಭಾವೋಕ್ತಿಯ ಸರ್ವದೇವ ದೇಗುಲ ಕಟ್ಟುತ್ತಾನೆ. ಕೋಡಿ ಮಠದ ಗುರುಕುಲ ಕ್ರಮವನ್ನು ಈ ಶಾಸನದಲ್ಲಿ [ಎಕ ೭ ಶಿಕಾ ೧೦೦, ೧೧೨೯ ಬಳ್ಳಿಗಾವೆ] ಕಾಣುತ್ತವೆ.

ಮೂವರ ಕೋಣೆಯ ಸಂತತಿ
ದೇವಬ್ರತನೆಸೆವ ಪರ್ವತಾವಳಿಯೊಳ್ತಾ
ನಾವಿರ್ಭವಿಸಿದನಮಳಯ
ಶೋ ವಿಭು ಕೇದಾರಶಕ್ತಿ ಪಂಡಿತ ದೇವಂ ॥

ಶ್ರೀ ಕಂಠಂ ಮೌಕ್ತಿಕ ಮಾ
ಳಾ ಕಳ್ಪಿತಂ ಕಂಠವೆಸೆವಸರಸತಿಗೆನೆ ವಿ
ದ್ಯಾಕನಕನಿಕಷನಾತನ
ಲೋಕಂ ತಿಚ್ಚಪ್ಯನೆಸೆದನಲ್ಲಿಂ ಬಳಿಯಂ ॥

ಆ ಮುನಿಪನ ಶಿಷ್ಯಂ ವಿ
ದ್ಯಾಮಹಿಮ ಕ್ಷೀರವಾರ್ಧಿವರ್ಧನ ಸೋಮಂ
ಸೋಮೇಶ್ವರಾರ್ಯ್ಯನೆಸೆದಂ
ಕಾಮವಿನೀಳಾಬ್ಜ ಷಂಡಚಂಡದ್ಯೋತಂ ॥

ಆಭಾರಭೂತಿಗೆಣೆಯೆನಿ
ಪಾಭಗಮನ್ಮುನಿಪನನುಜನೆಸೆದಿರ್ದ್ದವಿ

ದ್ಯಾಭರಣಂ ನಿರ್ಮಳ ವಿ

ದ್ಯಾಭರಣಂ ಚತುರಕೀರ್ತಿಕಾಂತಾಭರಣಂ ॥

ಮೂವರ ಕೋಣೆಯ ಸಂತತಿಯ ಪರ್ವತಾವಳಿಯಲ್ಲಿ ಹುಟ್ಟಿದ ಕೇದಾರ ಶಕ್ತಿ ಪಂಡಿತ ದೇವನು. ಅಮಳ ಯಶೋ ವಿಭುವಾಗಿದ್ದನು. ಶ್ರೀಕಂಠನು ಸರಸ್ವತಿ ಕೊರಳ ಮುತ್ತಿನಹಾರ ವಿದ್ಯೆ ಎಂಬ ಬಂಗಾರವನ್ನು ಒರೆ ಹಚ್ಚುವವನಾಗಿದ್ದನು. ಆ ಮುನಿಯ ಶಿಷ್ಯ ವಿದ್ಯಾ ಮಹಿಮೆಯ ಹಾಲ್ಗಡಲು ಉಕ್ಕಲು ಕಾರಣನಾದ ಚಂದ್ರನಂತಿರುವವನು. ಸೋಮೇಶ್ವರಾರ್ಯ, ಆ ಸಂಸ್ಕೃತ ವಿದ್ವಾಂಸರಾದ ಭಾರವಿ–ಭವಭೂತಿಗಳಿಗೆ ಸಮಾನವೆನಿಸಿದ್ದ ಸೋಮೇಶ್ವರಾರ್ಯನ ಅನುಜ ವಿದ್ಯಾಭರಣನು ವಿದ್ಯೆಗೆ ಆಭರಣದಂತಿರುವನು ಎಂದು ಅವರನ್ನು ವರ್ಣಿಸಿದೆ. ವಿದ್ಯಾಭರಣನ ಶಿಷ್ಯ – ಗುರು ಕುಲ ಸಮುದ್ಧರಣ ವಾಮಶಕ್ತಿ ಇವನು ಕೋಡಿಮಠಕ್ಕೆ ಅಧಿಪತಿಯಾಗುತ್ತಾನೆ ಬಳ್ಳಿಗಾವೆಯಲ್ಲಿ ಕ್ರಿಶ ೧೦೯೯ ರಿಂದ ಆರಂಭವಾದ ಈ ಪರಂಪರೆಯು ಕಾಳಾಮುಖರನ್ನು ಚಕ್ರವರ್ತಿಗಳು ಎಂಬ ಎತ್ತರಕ್ಕೆ ತಂದು ನಿಲ್ಲಿಸಿತ್ತು ಎಂದು ತಿಳಿಯಬಹುದು.

ಬಳ್ಳಿಗಾವೆಯಲ್ಲಿ ಕ್ರಿಶ ೧೨೧೫ರ ವರೆಗೂ ಇವರ ವಿದ್ಯಾದಾನ ಮತ್ತು ಧರ್ಮ ಪ್ರಧಾನ ಚಟುವಟಿಕೆಗಳು ನಡೆಯುತ್ತಿದ್ದುದರ ಬಗ್ಗೆ ದಾಖಲೆಗಳಿವೆ ಕ್ರಿಶ ೧೧೦೩ ರ ಶಾಸನದಲ್ಲಿ ಕೇದಾರಶಕ್ತಿ ಶಿಷ್ಯ ಶ್ರೀಕಂಠದೇವ ಆತನ ಶಿಷ್ಯ ಸೋಮೇಶ್ವರ ಪಂಡಿತನ ವ್ಯಕ್ತಿತ್ವ ಚಿತ್ರಣ ಉಲ್ಲೇಖವಾಗಿರುವುದು ಹೀಗೆ – ಭೂಮಿಯಲ್ಲಿ ಶೋಭಿಸುತ್ತಿರುವ ಶಕ್ತಿ ಪರ್ಷೆಯ ಅಗ್ರಣಿ ಮೂವರ ಕೋಣೆಯ ಸಂತತಿಗೆ ಆಭರಣ, ಲೋಕಪ್ರಸ್ತುತನಾಗಿದ್ದವನು. ಕೇದಾರಶಕ್ತಿಯತಿ ಪತಿ ಆತನಿಗೆ ಅಮಳಗುಣಾನೀಕನೂ, ಯಶಸ್ವಿನ ಪತಾಕನೂ, ವಿಬುಧಚೂತವನ ಕಳಕಂಠನೂ ಆಗಿದ್ದ ಶ್ರೀಕಂಠಪಂಡಿತ ಶಿಷ್ಯನಾಗಿದ್ದನು. ಈ ಶ್ರೀಕಂಠ ಪಂಡಿತನು ಲೋಕಸ್ತುತನಾದ ಕೇದಾರಶಕ್ತಿ ಎಂಬ ಮುನೀಂದ್ರನ ಶಿಷ್ಯ, ಶ್ರೀಕಂಠ ಆತನು ಅತಿ ನಿರ್ಮಲ ಗುಣಗಳ ಸಮೂಹಗಳಿಂದ ಕೂಡಿದ ಯಶಸ್ವಿನ ಪತಾಕೆಯಂತೆಯೂ, ವಿದ್ವಾಂಸರೆಂಬ ಮಾವಿನತೋಪಿನಲ್ಲಿರುವ ಕೋಗಿಲೆಯಂತೆಯೂ ಇದ್ದ. ಅವನು ಶಿವನ ಪಾದ ಕಮಲಗಳಲ್ಲಿ ತನ್ನ ಮನಸ್ಸನ್ನೂ ಶೋಭಾಯಮಾನವಾದ ತನ್ನ ಮುಖ ಕಮಲದಲ್ಲಿ ಸುಂದರವಾದ ಸರಸ್ವತಿಯನ್ನು ಚಾರಿತ್ರ್ಯದಲ್ಲಿ ನಿರ್ಮಳತೆಯನ್ನು, ಎಲ್ಲ ದಿಗಂತಗಳಲ್ಲಿಯೂ ಇಂದ್ರನ ದಿಗ್ಗಜಗಳಂತಹ ಕೀರ್ತಿಕಾಂತಿಯನ್ನೂ ತುಂಬಿ ವಿಸ್ತಾರವಾಗುವಂತೆ ಮಾಡಿದ. ಶ್ರೀಕಂಠನು

ಸದ್ಗುಣಾಢ್ಯನೂ, ಮುನೀಂದ್ರಾಭರಣನೂ, ಬುಧಕುಲಕ್ಕೆ ತಿಲಕದಂತೆಯೂ ತರ್ಕ ವಿದ್ಯೆಯ ಮಹಾ ಸಾಗರದಂತೆಯೂ ಇದ್ದನು. [ವಸಂತಕುಮಾರ ಬಿ ವಿ.; ಶಿಕಾರಿಪುರ ತಾಲೂಕಿನ ಸಾಂಸ್ಕೃತಿಕ ಸಂಕಥನ, ಪುಟ. ೧೨೪]

ಅಖಿಲ ದಿಕ್ಕುಗಳಿಗೂ ತನ್ನ ಕೀರ್ತಿಯನ್ನು ಪಸರಿಸಿದ ಶ್ರೀಕಂಠ ಪಂಡಿತನ ಕುರಿತು ಕ್ರಿಶ ೧೧೦೩ ರಲ್ಲಿ ವರ್ಣನೆ ಈ ರೀತಿಯಿದೆ. ಪಾಪ ರಹಿತನಾದ ಶ್ರೀಕಂಠನು ವಿದ್ವಾಂಸರಿಂದ ಸ್ತುತಿಸಲ್ಪಡುವವನು ಕೇದಾರ ಶಕ್ತಿಯಸೂನು, ಹೃದಯ ಕಮಲಾಸನದಲ್ಲಿ ಶಿವನಿರತನು, ಮುನಿಪತಿ ಕೇದಾರ ಶಕ್ತಿಯು ನೀಡಿದ ವಿಶೇಷವಾದ ಮಾತುಗಳಿಗೆ ಶ್ರೀಕೊರಳಾದವನು. ಅಂತಹ ಶ್ರೀಕಂಠನು ಪರಮಾತ್ಮಾಗಮಜ್ಞಾನಿಯಾಗಿಯು, ವಾದದಲ್ಲಿ ಮೇಧಾವಿಯಾಗಿಯೂ, ಚಿನ್ನವೆಂಬ ಲೋಹಕ್ಕೆ ಪರಿಮಳ ಬಂದಿತೇನೋ ಎಂಬಂತೆ ಸಲ್ಲಲ್ಪಟ್ಟವನು ಈಶ್ವರನ ಪಾದ ಕಮಲಗಳನ್ನು ಧರಿಸಿದವನೂ, ದೃಢವಾದ ತಪಸ್ಸೆಂಬ ಶ್ರೀಪತ್ನಿಗೆ ಪತಿಯಾಗಿದ್ದ ಶ್ರೀಕಂಠ ಯೋಗೀಶ್ವರನು ಆಚಾರ್ಯ ಗುಣಗಳಿಂದ ಸೋಲಿಸುತ್ತಿದ್ದನು. ಸೋಮೇಶ್ವರ ಪಂಡಿತನನ್ನು ಕುರಿತು ಕ್ರಿಶ ೧೧೦೩ ರ ಶಾಸನವು

ಅಕಳಂಕಾಂಬ್ರಮಹೀಜ ಚೈತ್ರ ಸಮಯಂ ಲೋಕಾಯತಾಂಭೋದಿಶೀ

ತಕರಂ ಸಾಂಖ್ಯಾಧರಾದೀಶಾರದನಿ ಮೀಮಾಂಸಾಂಗನಾಕಂಬುಕ

ಣ್ಠಕನೌಕ್ತಿಕ ಭೂಷಣಂ ಸುಗತ ನೀರೇಜಾತ ಚಣ್ಡಾಂಶು ತಾ

ರ್ಕ್ಕಿಕ ಸೋಮೇಶ್ವರ ಸೂರಿ ಪೆಂಪುವಡೆದಂ ನೈಯಾಯಿಕಾಗ್ರೇಸರಂ ॥

ಕೆಲಬರ್ ತರ್ಕ್ಕವಿಶಾರದರ್, ಕೆಲಬರ್ ಆಪ್ತಾಲಾಪಸಂಬೋಧಕರ್

ಕೆಲಬರ್ ನಾಟಕಕೋವಿದರ್, ಕೆಲಬರ್, ಒಳ್ಗಬ್ಯಂಗಳಂ ಬಲ್ಲವರ್

ಕೆಲಬರ್ ವ್ಯಾಕರಣಜ್ಞರ ಇನ್ತಿನಿತುಮಂಬಾಪ್ಪಿನ್ತು ವಿಶ್ವಾಂಭರಾ

ತಳದೊಳ್ ಬಲ್ಲವರಾರ್ ಎನಲ್ಕೆ ನೆಗಳ್ದಂ ವಿದ್ಯಾಬ್ಧಿ ಸೋಮೇಶ್ವರಂ ॥

ಸ್ವಸ್ತಿಯಮನಿಯಮ ಸ್ವಾಧ್ಯಾಯ ಧ್ಯಾನ ಧಾರಣಾ ಮೌನಾನುಷ್ಠಾನ ಜಪಸಮಾ

ಧಿಶೀಳ ಸಂಪನ್ನಂ । ವಿಬುಧಜನ ಪ್ರಸಂನಂ । ನ್ಯಾಯಶಾಸ್ತ್ರ ವಿಸ್ತ್ರಿತಸರೋಜವನ

ದಿವಾಕರಂ । ವೈಶೇಷಿಕ ವಾರ್ಧಿವರ್ದ್ಧನ ಶರತ್ಸುಧಾಕರಂ । ಸಾಂಖ್ಯಾಗಮಪ್ರವಿಣ

ಮಾಣಿಕ್ಯಭರಣಂ । ಗುರುಚರಣ ಸರಸೀರುಹ ಷಟ್ಚರಣಂ । ನಿರುಪಮೋಪನ್ಯಾಸ

ದೇವನದೀ ಪ್ರವಾಹಂ। ನಿಜದತ್ತ ಮಂತ್ರಪ್ರಭಾವ ಸಂವರ್ದ್ಧಿತ ಶಿಷ್ಯ ಸಂದೋಹಂ। ಸಾಹಿತ್ಯ ವಿದ್ಯಾಮಹಾನದೀ ಪ್ರವಾಹ ನಿಮ್ನಗಾಧೀಶ್ವರಂ। ಭಕ್ತಿ ಪ್ರಭಾವ ಪರಿತುಷ್ಟ ಪರಮೇಶ್ವರಂ। ನಿರವದ್ಯ ನಿರ್ಮಳ ತಪೋಗುಣೈಕನಿಳಯಂ। ಕೀರ್ತಿಕೌಮುದೀ ಮುದಿತ ಮೇದಿನೀವಳಯಂ ನಾಮಾದಿ ಪ್ರಶಸ್ತಿಸಹಿತಂ ಶ್ರೀಮತ್ಸೋಮೇಶ್ವರ ಪಂಡಿತ ದೇವರ [ಎಕ ೭ ಶಿಕಾ ೯೮, ೧೧೦೩ ಬಳ್ಳಿಗಾವೆ]

ಕ್ರಿ.ಶ ೧೧೦೪ ರಲ್ಲಿಯೇ ಅಬಲೂರಿನ ಬ್ರಹ್ಮೇಶ್ವರ ದೇವಸ್ಥಾನ ಬಳ್ಳಿಗಾವೆಗೆ ಪ್ರತಿಬದ್ಧವಾಗಿತ್ತು. ಈ ಶಾಸನ ಪಾಠವನ್ನು ಓದಿ ಕನ್ನಡಕ್ಕೆ ತಂದವರು ಡಾ. ಕಲವೀರ ಮನ್ವಾಚಾರವರು ಅಬಲೂರಿನ ಶಾಸನದಲ್ಲಿ ಗೋವಿಂದೇಶ್ವರನು ಮುರಿಗನಹಳ್ಳಿ ದಾನ ಕೊಡುವ ಕೇದಾರ ಶಕ್ತಿಯ ಶಿಷ್ಯ ಸೋಮೇಶ್ವರನನ್ನು ವರ್ಣಿಸಿದ್ದಾರೆ. ಅಬಲೂರಿನ ಕ್ರಿ.ಶ ೧೧೦೧ ರ ಶಾಸನ ಮೊದಲು ನಂತರ ಬಳ್ಳಿಗಾವೆಯದು ಎಂದಿದ್ದಾರೆ ಡಾ ಕಲವೀರ ಮನ್ವಾಚಾರವರು. ಅಬಲೂರಿನ ಶಾಸನದಲ್ಲಿ ಕೆಲಬರ್....... ಪದ್ಯ ಮೊದಲಿಗೆ ಬಂದಿದೆ, ನಂತರ ಅಕಳಂಕಾಂಬ್ರಮಹೀಜ ಬಂದಿದೆ, ಅಬಲೂರಿನ ೧೧೦೧ ರ ಯ ಶಾಸನದಂತೆಯೇ ಬಳ್ಳಿಗಾವೆಯಲ್ಲಿ [ಎಕ ೭ ಶಿಕಾ ೯೮ ಬಳ್ಳಿಗಾವೆ]ಎರಡು ಪದ್ಯಗಳನ್ನು ಮೇಲೆ ಮತ್ತು ಕೆಳಗಾಗಿ ಬರೆಯಲಾಗಿದೆ ಶಾಸನದ ಅರ್ಥ ಕೆಳಗಿನಂತಿದೆ.

ಕೆಲವರು ತರ್ಕದಲ್ಲಿ ಪ್ರವೀಣರು, ಕೆಲವರು ಆಪ್ತಮಾತಿನವರು ಹಾಗೂ ಸಂಭಾಷಣಾ ಚತುರರು, ಕೆಲವರು ನಾಟಕದಲ್ಲಿ ಪಂಡಿತರು, ಕೆಲವರು ಒಳ್ಳೆಯ ಕಾವ್ಯವನ್ನು ತಿಳಿದವರು, ಕೆಲವರು ವ್ಯಾಕರಣ ತಜ್ಞರು. ಈ ಎಲ್ಲಾ ವಿದ್ಯೆಗಳನ್ನು ತಿಳಿದವರು ಯಾರಿದ್ದಾರೆ? ಎಂದಾಗ ಸೋಮೇಶ್ವರಪಂಡಿತನಿದ್ದಾನೆ, ಎನ್ನುವಂತೆ ವಿದ್ಯಾಸಾಗರನಾದ ಸೋಮೇಶ್ವರ ಪಂಡಿತನು ಪ್ರಸಿದ್ಧನಾಗಿದ್ದನು. ಲೋಕಾಯತ, ಸಾಂಖ್ಯಸಿದ್ಧಾಂತ, ಹಾಗೂ ಮಿಮಾಂಸೆಗಳ ಬಗೆಗಿನ ಉಲ್ಲೇಖ ಗೊಂದಲವಾಗಿವೆ ಅವುಗಳನ್ನು ಬೆಂಬಲಿಸದೇ ವಿರೋಧಿಸುವವನು ಸೋಮೇಶ್ವರನಾಗಿದ್ದಾನೆ. ಎಲ್ಲ ಧರ್ಮಗಳನ್ನು ಅನ್ಯೋನ್ಯತೆಯಿಂದ ಕಂಡಿದ್ದನೆಂಬುದು ಸಾಕ್ಷಿಯಾಗಿದೆ.

ಅಕಳಂಕವೆಂಬ ಮಾವಿನ ಮರಕ್ಕೆ ಚೈತ್ರ ಕಾಲವಾಗಿಯೂ, ಲೋಕಾಯತವೆಂಬ ಸಮುದ್ರಕ್ಕೆ ಚಂದ್ರನಾಗಿಯೂ, ಸಾಂಖ್ಯವೆಂಬ ಧರೆಯ ದಿಕ್ಕುಗಳಿಗೆ ದಿಗ್ಗಜನಾಗಿಯೂ, ಮೀಮಾಂಸೆ ಎಂಬ ಅಂಗನೆಯ ಶಂಖಸದೃಶ ಮುತ್ತಿನ ಕಂಠಾಭರಣವಾಗಿಯೂ,

ಬೌದ್ಧವೆಂಬ ಕಮಲಕ್ಕೆ ಸೂರ್ಯನಾಗಿಯೂ ನಯ್ಯಾಯಿಕಾಗ್ರೇಸರನಾಗಿ ಅವೆಲ್ಲವುಗಳ ಏಳ್ಗೆಗೆ ಕಾರಣನಾಗಿ ಕೀರ್ತಿ ಪಡೆದಿದ್ದಾನೆ.

ಅವನು ಯಮ, ನಿಯಮ, ಸ್ವಾಧ್ಯಾಯ, ಧ್ಯಾನ, ಧಾರಣ, ಮೌನಾನುಷ್ಠಾನ, ಜಪ, ಸಮಾಧಿಗಳೆಂಬ ಶೀಲ ಸಂಪನ್ನನಾಗಿದ್ದನು. ವಿಬುಧ ಜನಕ್ಕೆ ಪ್ರಸನ್ನ, ನ್ಯಾಯಶಾಸ್ತ್ರವೆಂಬ ಕಮಲಾಕರಕ್ಕೆ ದಿನಕರ, ವೈಶೇಷಿಕವೆಂಬ ಸಮುದ್ರದ ಹೆಚ್ಚಳಕ್ಕೆ ಕಾರಣನಾದ ಚಂದ್ರ, ಸಾಂಖ್ಯಾಗಮ ಪ್ರವೀಣ ಮಾಣಿಕ್ಯಾಭರಣ, ಗುರುವಿನ ಪಾದ ಕಮಲಗಳಲ್ಲಿ ದುಂಬಿ, ಶಬ್ದಶಾಸ್ತ್ರವೆಂಬ ರಸಪೂರ್ಣ ಮಾವಿನ ವನಕ್ಕೆ ವಸಂತಋತು, ಪ್ರಜ್ಞೋದಯದಲ್ಲಿ ಬೌದ್ಧ, ಲಾಕುಳ ಸಿದ್ಧಾಂತಿ, ಉಪಮಿಸಲು ಬಾರದಂತಹ ಉಪನ್ಯಾಸದ ಗಂಗಾ ನದಿ ಪ್ರವಾಹ, ಮಂತ್ರ ಪ್ರಭಾವದಿಂದ ವಿಕಸಿತರಾದ ಶಿಷ್ಯ ಸಮೂಹವನ್ನು ಹೊಂದಿದವ, ಸಾಹಿತ್ಯ ವಿದ್ಯೆಯ ಮಾಹಾನದೀ ಪ್ರವಾಹಕ್ಕೆ ಹಿಮಾಲಯ ಕಣಿವೆ, ಭಕ್ತಿ ಪ್ರಭಾವದಿಂದ ಪರಿತುಷ್ಟನಾದ ಪರಮೇಶ್ವರ, ನಿರ್ಮಲವಾದ ತಪೋಗುಣಕ್ಕೆ ಮನೆ. ಕೀರ್ತಿಯಬೆಳದಿಂಗಳು ಪಸರಿಸಿದ ಭೂಮಿ ಎಂಬ ಹೆಸರುಗಳಿಗೆ ಪಾತ್ರನಾದವನು. ಅಂಥ ಹೆಸರು ಪ್ರಶಸ್ತಿ ಸಹಿತ ಪ್ರಸಿದ್ಧನಾದ ಕಾಳಾಮುಖ ಗುರು ಸೋಮೇಶ್ವರ ಪಂಡಿತರು, ಕುಂತಳನಾಡಿನ ತುರುಬಿನಂತೆ ಶೋಭಿಸುವ ಬನವಾಸಿ ೧೨೦೦೦ ರ ಅಲಂಕಾರಿಕವಾಗಿ ತೋರುತ್ತಿದ್ದ ಬಳ್ಳಿಗಾವೆಯ ತಾವರೆಕೆರೆಯ ದಕ್ಷಿಣ ಕೇದಾರ ದೇವರ ಸ್ಥಾನದಾಚಾರ್ಯರಾಗಿದ್ದರು ಎಂದು ತಿಳಿದು ಬರುತ್ತದೆ. ಸೋಮೇಶ್ವರ ಪಂಡಿತರು ಲಾಕುಳಾಗಮದ ಮಹಾನ್ ಪ್ರತಿಪಾದಕರು ಹಾಗೂ ಅಕಳಂಕ, ಲೋಕಾಯತ, ಸಾಂಖ್ಯ, ಮಿಮಾಂಸೆ, ಸೌಗತ ಮೊದಲಾದ ತತ್ವಗಳಲ್ಲೂ ಪ್ರವೀಣರಾಗಿದ್ದರು. ಸರ್ವತತ್ವಗ್ರಾಹೀಗುಣವು ಬಳ್ಳಿಗಾವೆಯನ್ನು ಹರಿ, ಹರ, ಬ್ರಹ್ಮ, ಜಿನ ಹಾಗೂ ಬೌದ್ಧರಿಗೆಲ್ಲ ಒಂದು ಸಮಾನ ಸ್ಥಾನವಾಗಿ ಬೆಳೆಯಿತು. ಅವರೇ ಕೇದಾರಸ್ಥಾನದ ನಿಜವಾದ ಪ್ರತಿಷ್ಠಾಪಕರಾಗಿದ್ದರು. ನಂತರ ಗೌತಮಾರ್ಯ ಹಾಗೂ ವಾಮಶಕ್ತಿಗಳು ಆ ಸ್ಥಾನ ಪ್ರಸಿದ್ಧವಾಗಲು ಕಾರಣವಾದರು. [ಶೆಟ್ಟರ ಎಸ್. ಲೇಖನ– ಚಳಿಗಾಳಿ. ಸಂಯುಕ್ತ ನಾವಡ ಎ ವಿ (ಸಂ).; ಕನ್ನಡ ಅಧ್ಯಯನ,ಸಂಚಿಕೆ. ಸಂ ೧೦. ೨ ಪುಟ. ೧೦೮]

ಶ್ರೀಕಂಠಪಂಡಿತರ ತರುವಾಯ ಎರಡನೆಯವರಾದ ಇನ್ನೊಬ್ಬ ಯತಿಯೆಂದರೆ, ಸೋಮೇಶ್ವರ ಪಂಡಿತದೇವ. ಇವನು ನಾಲ್ಕು ದತ್ತಿಗಳನ್ನು ಪಡೆದಿದ್ದನು. ಅವುಗಳಲ್ಲಿ ಮೂರು ಕ್ರಿಶ ೧೯೯೪, ೧೧೦೩ ಮತ್ತು ೧೧೧೩ ರಲ್ಲಿ ಕೇದಾರೇಶ್ವರ ದೇವಾಲಯದಿಂದ ಹಾಗೂ ಒಂದು ಅಬಲೂರಿನಿಂದ ೧೧೦೧ ರಲ್ಲಿ ಪಡೆದವು.

ಒಬ್ಬೊಬ್ಬ ಯತಿಗೆ ತಲಾ ಇಪ್ಪತ್ತೈದು ವರ್ಷಗಳಂತೆ ಕಳೆಯುತ್ತಾ ಹೋದರೆ ಕೇದಾರಶಕ್ತಿಯ ೧೦೨೫ ರಿಂದ ೧೦೫೦ ರ ಕಾಲಾವಧಿಯಲ್ಲಿ ಮಠಾಧಿಪತಿಯಾಗಿದ್ದಿರಲು ಸಾಕು.

ಅಬಲೂರಿನ ಬಹ್ಮೇಶ್ವರ ದೇವಾಲಯದಲ್ಲಿ ದೊರೆತ ಕ್ರಿಶ ೧೧೦೧ರ ಮೂಲಶಾಸನ, ೧೧೦೪ ರ ಪ್ರತಿಯ ಶಾಸನವು ಈ ದೇವಾಲಯವು ಅದನ್ನು ಕಟ್ಟಿಸಿದ ಅಧಿಕಾರಿಯ ಹೆಸರಿನಿಂದಾಗಿ ಬ್ರಹ್ಮೇಶ್ವರ ದೇವಾಲಯವೆನಿಸಿದುದನ್ನು ತಿಳಿಸುತ್ತದೆ. [ಎಇಂ ೫ ನಂ ಎ.ಬಿ ಸಂ & ಅನು-ಫ್ಲೀಟ] ಈ ಶಾಸನದಿಂದ ಕೇದಾರಶಕ್ತಿಯ ಶಿಷ್ಯನಾದ ಸೋಮೇಶ್ವರನ ಕಾಲಂಕರ್ಚಿ ದಂಡನಾಯಕನಾದ ಗೋವಿಂದರಸನು ಮುರಗನಹಳ್ಳಿ ಎಂಬ ಗ್ರಾಮವನ್ನು ದೇವಾಲಯಕ್ಕೆ ಕೊಟ್ಟನೆಂದು ತಿಳಿದು ಬರುತ್ತದೆ. ಬಳ್ಳಿಗಾವೆಯ ೧೧೦೩ ರ ಶಾಸನವು ಇದೇ ದಂಡನಾಯಕನಾದ ಗೋವಿಂದರಸನು ಸೋಮೇಶ್ವರನ ಪಾದಗಳನ್ನು ತೊಳೆದು ದಕ್ಷಿಣ ಕೇದಾರೇಶ್ವರ ದೇವಾಲಯಕ್ಕೆ ಧೂಪ, ದೀಪ, ನೈವೇದ್ಯಗಳಿಗಾಗಿ ನೀಡಿದ ಒಂದು ದತ್ತಿಯಾಗಿದೆ. [ಎಕ ೭ ಶಿಕಾ, ೯೮]

ಕ್ರಿಶ ೧೦೪೮ ರ ಹೊತ್ತಿಗಾಗಲೇ ಬಳ್ಳಿಗಾವೆಯಲ್ಲಿ ಜೈನ, ವೈಷ್ಣವ, ಶೈವ, ಬೌದ್ಧ, ಕಾಳಾಮುಖ ಮೊದಲಾದ ದೇವಾಲಯಗಳಿದ್ದವು. ಮುನಿಗಣನಿಳೆಯಂ ಎಂದರೆ 'ಕೇದಾರಶಕ್ತಿಮುನಿಪತಿ' ಎಂದಿರುವ ಕಾರಣ ಕಾಳಾಮುಖರ ನಿಳಯವಾಗಿರಬೇಕು. ಏಕೆಂದರೆ ಕ್ರಿಶ ೧೦೭೮ ನೆಯ ಕಾಲದ ಶಾಸನದಲ್ಲಿ 'ಧರೆಗೆಸೆವ ಶಕ್ತಿಪರ್ಷೆ.....ಯೊಳ್ಮೂವರ ಕೋಣೆಯ ಸಂತತಿಗೆ ಆಭರಣಂ ಕೇದಾರಶಕ್ತಿ ಮುನಿಪತಿ ನೆಗರ್ದ್ದ....' ಎಂದಿದೆ. ಮೂವರಕೋಣೆಯ ಸಂತತಿಗೆ ಆಭರಣದಂತಿದ್ದ ಮುನಿಗಳಿಗೆ ಪತಿಯಂತಿದ್ದ, ಕೇದಾರಶಕ್ತಿಯ ಶಿಷ್ಯ ರುದ್ರಾಭರಣ, ಆತ ಯಶಶ್ರೀಧಾಮನಾಗಿದ್ದ ಲಾಕುಳ ಸಮಯಲಲಾಮನಾಗಿದ್ದ. ಅಂಥ ರುದ್ರಾಭರಣ ಮೂರ್ತಿ ರುದ್ರಾಭರಣನ ಶಿಷ್ಯ ವಾಲ್ಮೀಕಿಮುನಿಯು ಕ್ರಿಶ ೧೦೭೮ ರಲ್ಲಿರುವುದನ್ನು ಸೂಚಿಸುತ್ತದೆ.

ನಂತರ ವಿದ್ಯಾಭರಣರು ಕೋಡಿಮಠದ ಆಚಾರ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಕ್ರಿಶ ೧೧೨೯ ರ ಶಾಸನವು ಇವರ ಬಗ್ಗೆ ವರ್ಣಿಸುತ್ತದೆ.

ಶ್ರೀ ವಿದ್ಯಾಭರಣಾರ್ಯ್ಯ ನಿರ್ಮ್ಮಳಮುನೇರಾಜ್ಞಾಪ್ರಸಾದಾರ್ಪ್ಪಿತ

ಶ್ರೀ ಕೇದಾರ ಮಠಾಧಿಪತ್ಯ ಪದವೀ ವಿಭ್ರಾಜಮಾನಂ ಸದಾ ।

ಕೇದಾರೇಶ್ವರ ದೇವವನಿರ್ಬ್ಭರ ದಯಾದಿ ವ್ಯಾಮೃತಾಲೋಕನಂ

ಪ್ರತ್ಯಕ್ಷೀಕೃತ ಪೂರ್ವ ಗೌತಮಮುನಿ ಶ್ರೀ ಗೌತಮಂರಕ್ಷತಾತ್। [ಎಕ ೭ ಶಿಕಾ ೧೦೦ – ೧೧೨೯ ಬಳ್ಳಿಗಾವೆ] ಈ ಶಾಸನವು ಗೌತಮಾರ್ಯರನ್ನು ಪರ್ವತಾವಳಿಯ ಮೂವರ ಕೋಣೆಯ ಸಂತತಿಗೆ ಸೇರಿಸುತ್ತದೆ. ಕೇದಾರಶಕ್ತಿಯ ಶಿಷ್ಯರ ವಂಶದಲ್ಲಿ ಅವರನ್ನು ಗುರುತಿಸುತ್ತದೆ.

'ವಿದ್ಯಾಭರಣವ್ಯಾಸಂಗವಲ್ಲದಿತರವ್ಯಾಸಂಗಮನೊಲ್ಲದೆಮತವ್ಯಾಸಂಗಮಂ ನಿಜಾಗ್ರ ಶಿಷ್ಯನುಂ ಗುರುಕುಲಸಮುದ್ಧರಣ ವಾಮಶಕ್ತಿಯುಮೆನಿಸಿದ ವಾಮಶಕ್ತಿ ಮುನೀಶ್ವರನೊಳ್ನಿ ಯೋಜಿಸಿದಾಗಳ್'

ವಿದ್ಯಾಭರಣರ ನಂತರ ಮೊದಲನೆಯ ವಾಮಶಕ್ತಿ ಕೋಡಿಮಠದ ಅಧಿಪತಿಯಾಗುತ್ತಾನೆ. ವಾಮಶಕ್ತಿಯು ಕೇದಾರೇಶ್ವರ ಮಠವನ್ನು ನೋಡಿಕೊಂಡಿದ್ದಾನೆ. ನಂತರ ಏಕೋ ವಿದ್ಯಾಭರಣರೇ ಜವಾಬ್ದಾರಿ ಹೊತ್ತು ಶಿಷ್ಯನಾದ ಗೌತಮನಿಗೆ ವಹಿಸಿದ್ದಾರೆ. ಈತನು ಅಧಿಪತಿಯಾಗಿದ್ದಾಗ 'ಬಾವಣನುಂರಾವಣನುಮಿಬ್ಬರುಂ ನಿಜಶಿಲ್ಪಿಕುಳಕಳಂಕಮಂ ಕಳೆಯಲೆಂದು ಕುಸುವೇಶ್ವರದೇವರ ಪ್ರತಿಷ್ಠೆಯಂಮಾಡಿ ....' ಬಾವಣ, ರಾವಣ ಎಂಬ ಶಿಲ್ಪಿಗಳಿಬ್ಬರು ಸತ್ಯವಾದ ಕುಲಕ್ಕೆ ಅಂಟಿದ ಅಪವಾದವನ್ನು ಹೋಗಲಾಡಿಸಲು ಕುಸುಮೇಶ್ವರ ದೇವರನ್ನು ಪ್ರತಿಷ್ಠಾಪನೆ ಮಾಡಿದರೆಂಬ ಅಂಶವು ಕ್ರಿಶ ೧೧೪೯ ರ ಶಾಸನವು ತಿಳಿಸುತ್ತದೆ. ಏನು ಕಳಂಕವೆಂಬುದು ತಿಳಿದುಬಂದಿಲ್ಲ ಬಹುಶಃ ೧೦ ವರ್ಷ ಹಿಂದಿನ ವಾಮಶಕ್ತಿ ಬಂಧನದ ಘಟನೆಯಿಂದಾದುದಗಿರಬಹುದೇ ? ಸಂಶಯವಿದೆ. ವಿದ್ಯಾಭರಣ ಶಿಷ್ಯ ಗೌತಮಮುನಿ ಕಾರ್ಯ ನಿರ್ವಹಿಸುವ ಹೊತ್ತಿಗಾಗಲೇ ಈ ವಿದ್ಯಾಕೇಂದ್ರ ಸರ್ವಧರ್ಮ ಸರ್ವ ವಿದ್ಯೆಗಳ ಸಂಗಮ ಸ್ಥಾನವಾಗಿತ್ತು. ಇವನ ಕಾಲದಲ್ಲಿ ಕೋಡಿಮಠಕ್ಕೂ ಕುಶಲಕರ್ಮಿ ಶ್ರಮ ಜೀವಿಗಳಿಗೂ ಸಂಬಂಧವಿರುವುದನ್ನು ಕಾಣುತ್ತೇವೆ. ವ್ಯಾಪಾರಿ ವರ್ಗದವರು ವಿವಿಧ ವೃತ್ತಿ ವರ್ಗದವರು ಗೌಡರು ವಿದ್ಯಾಕೇಂದ್ರದ ಏಳಿಗೆಗೆ ತಮ್ಮ ಶ್ರಮದ ದಾನ ಮಾಡಿರುವುದು ಶಾಸನದಲ್ಲಿ ಉಲ್ಲೇಖಗೊಂಡಿದೆ. [ಎಕ ೭ ಶಿಕಾ ೧೧೨ ಕ್ರಿಶ ೧೧೪೯ ಬಳ್ಳಿಗಾವೆ] ಈ ಶಾಸನದಲ್ಲಿ ಜೈನರಾಜ ಜಗದೇವರಸ ಮತ್ತು ಆತನ ಕುಮಾರ ಬಮ್ಮರಸರು ಒಂದಾಗಿ ಗೌತಮ ಪಂಡಿತರ ಕಾಲಂಕರ್ಚಿ ದತ್ತಿ ನೀಡಿರುವುದು ಧರ್ಮ ಸಾಮರಸ್ಯವನ್ನು ಸೂಚಿಸುತ್ತದೆ.

ಗೌತಮಮುನಿಯ ಬಳಿಕ ಎರಡನೆಯ ವಾಮಶಕ್ತಿ ಮಠದ ಅಧಿಪತಿಯಾಗಿ ಗೌತಮನ ಅನುಜನಾಗಿ ಚಿತ್ರಿತಗೊಂಡಿದ್ದಾನೆ. ಇವನು ಕ್ರಿಶ. ೧೧೨೯ ರಲ್ಲಿ ಒಮ್ಮೆ ಮಾತ್ರ ಶಕ್ತಿ ಪರಿಷೆಯ ಜೊತೆ ಸಂಬಂಧ ಹೇಳಿಕೊಂಡಿದ್ದು, ಅವನ ೨೭ ವರ್ಷಗಳ

ಅಧಿಕಾರದಲ್ಲಿ ಎಲ್ಲಿಯೂ ಹೇಳಿಕೊಂಡಿಲ್ಲ. ೧೧೪೯ರ ಶಾಸನದಲ್ಲಿ ಒಮ್ಮೆ ಮಾತ್ರ ಮೂವರಕೋಣೆ ಸಂತತಿಯ ಸಂಬಂಧ ಹೇಳಿಕೊಳ್ಳುತ್ತಾರೆ. ವಾಮಶಕ್ತಿ ಇಡೀ ಅರ್ಧಶತಮಾನದ ಅಧಿಪತ್ಯದಲ್ಲಿ ಒಮ್ಮೆ ಮಾತ್ರ ಮೂವರ ಕೋಣೆ ಸಂತತಿ ಹಾಗೂ ಪರ್ವತಾವಳಿ ಬಗ್ಗೆ ಮಾತ್ರ ಸ್ಮರಿಸಿರುವುದು, ೧೨ ನೆಯ ಶತಮಾನದ ಉತ್ತರಾರ್ಧದಲ್ಲಿ ಶಕ್ತಿ ಪರಿಷೆಯ ಸಂಪ್ರದಾಯದಲ್ಲಿ ವ್ಯತ್ಯಯ ಉಂಟಾದುದನ್ನು ಸೂಚಿಸುತ್ತದೆ ಎಂದಿದ್ದಾರೆ. ಇದಕ್ಕೆ ಬಹುಶಃ ಜವಾಬ್ದಾರನೂ ಆದವರೆಂದರೆ ವಾಮಶಕ್ತಿ ಪಂಡಿತದೇವರು. [ಶೆಟ್ಟರ ಎಸ್, ಲೇ: ನಾವಡ ಎ ವಿ (ಸಂ).; ಪೂರ್ವೋಕ್ತ, ಪುಟ. ೧೦೯] ಕ್ರಿಶ ೧೧೫೬ ರ ಶಾಸನವು

ಮೂವರ ಕೋಣೆಯ ಸಂತತಿ

ದೇವ ವ್ರತನೆಸೆವ ಪರ್ವತಾವಳಿಯೊಳ ತಾ

ನಾವಿರ್ಭವಿಸಿದನಮಳಯ

ಶೋವಿಭವವಿನೂತನೆನಿಪ ಗೌತಮಮುನಿಪಂ

ಆ ಗೌತಮ ತನೂಜಂ

ಶ್ರೀ ಗಿರಿಜಾಪತಿ ಪದಾಂಬುಜೋನ್ಮದ ಭೃಂಗಂ

ರಾಗ ಪರಾಙ್ಮುಖನುಚಿತೋ

ದ್ಯೋಗಂ ಶ್ರೀ ವಾಮಶಕ್ತಿ ಪಂಡಿತ ದೇವಂ ॥ [ಎಕ ೭ ಶಿಕಾ ೧೦೪, ೧೧೫೬ ಬಳ್ಳಿಗಾವೆ]

ಇವನು ದಕ್ಷಿಣ ಕೇದಾರೇಶ್ವರ ದೇವರ ಸ್ಥಾನದಾಚಾರ್ಯನಾಗಿ ಮಠದ ಏಳ್ಗೆಗೆ ಶ್ರಮಿಸಿದ್ದಾನೆ.

"ಸ್ವಸ್ತಿಶ್ರೀ ಮತು ಭುಜಬಳ ಚಕ್ರವರ್ತಿ ಬಿಜ್ಜಣದೇವರಸರು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರೆ ಬನವಸೆನಾಡದಣ್ಣನಾಯಕಂ ಪದ್ಮರಸನ ಬೆಸದಿಂ ದಕ್ಷಿಣ ಕೇದಾರದೇವರ ಪಾದಾರಾಧಕರುಮಪ್ಪ ವಾಮಶಕ್ತಿದೇವರ ಬಂದಿಯಹಿಡಿದಲ್ಲಿ ಕೋಣವತ್ತಿಯ ಮೆಚಿ್ಗಾಜಿ ಬಾಚೆಯ ನಾಯಕ ಕಾದಿ ಸ್ವರ್ಗಸ್ಥನಾದಲ್ಲಿ ಅಳಿಯ ಮದುಕೆಯ ಬಾಚೆಯ ಕಲ್ಲಂನಿರಿಸಿ ವೀರಸಾಳನೆತ್ತಿಸಿದ ಶ್ರೀ" [ಎಕ ೭ ಶಿಕಾ ೧೩೯, ೧೧೬೦ ಬಳ್ಳಿಗಾವೆ] ೧೧೬೦ ರಲ್ಲಿ ವಾಮಶಕ್ತಿ ದೇವರು ಬಿಜ್ಜಳ ರಾಜನ ಕಾಲದ

ಬನವಾಸೆ ನಾಡ ದಂಡ ನಾಯಕ ಪದ್ಮರಸನ ಆಜ್ಞೆಯ ಮೇರೆಗೆ ಬಂಧಿಸಲ್ಪಟ್ಟಿದ್ದಾನೆ. ಈ ಮುನಿಯ ಬಂಧನವನ್ನು ವಿರೋಧಿಸಿ ಕೊಣವತ್ತಿಯ ಮೆಱೆಗಾಱ ಬಾಬೆಯ ನಾಯಕನೆಂಬಾತ ಹೋರಾಡಿ ಪ್ರಾಣರ್ಪಣೆ ಮಾಡಿದ್ದಾನೆ. ಇದಕ್ಕೆ ಸಂಬಂಧಿಸಿದ ಸ್ಪಷ್ಟನೆ ಲಭ್ಯವಿಲ್ಲ. ಈ ಕುರಿತು ವಿದ್ವಾಂಸರಲ್ಲಿ ಚರ್ಚೆ ನಡೆದಿದೆ. ಮೊದಲನೆಯ ವಾಮಶಕ್ತಿಯೆಂದು ಚಿದಾನಂದಮೂರ್ತಿಯವರು, ದೇವರಕೊಂಡಾರೆಡ್ಡಿಯವರು ಬಿಜ್ಜಳ ಕಸಪಯ್ಯನನ್ನು ಕೆಳಗಿಳಿಸಲು ಪ್ರಯತ್ನಿಸಿದ ಬಿಜ್ಜಳ ವಿರೋಧಿಗಳು ಅವನನ್ನು ಬಂಧಿಸಲು ಪ್ರಯತ್ನಿಸಿರಬಹುದೆಂದು ಉಹೆ ಮಾಡಿ ಎರಡನೆ ವಾಮಶಕ್ತಿಯೆಂದು ಉಹಿಸಿದ್ದಾರೆ. [ದೇವರಕೊಂಡಾರೆಡ್ಡಿ ಲೇ: ಬಳ್ಳಿಗಾವೆಯ ಕೋಡಿಮಠ, ಸಾಧನೆ (ಸಂ) ಜಿಎಸ್‌ಶಿವರುದ್ರಪ್ಪ ಸಂ- ೨ ನಂ-೨, ೧೯೭೩ ಎಪ್ರಿಲ್ ಮೇ, ಪುಟ. ೮೧] ವಿದ್ಯಾಭರಣರು ಮೊದಲ ವಾಮಶಕ್ತಿಗೆ ಬಿಟ್ಟುಕೊಟ್ಟು ನಂತರ ತಕ್ಷಣ ಗೌತಮನಿಗೆ ಮಠಾಧಿಪತ್ಯ ಕೊಟ್ಟಿದ್ದನ್ನು ಉಲ್ಲೇಖಿಸಿ ವಸಂತಕುಮಾರ.ಬಿ.ವಿ ಯವರು ಮೊದಲನೆ ವಾಮಶಕ್ತಿ ಬಂಧಿತವಾದವನು ಎಂದಿದ್ದಾರೆ. [ವಸಂತಕುಮಾರ ಬಿ ವಿ.; ಶಿಕಾರಿಪುರ ತಾಲೂಕಿನ ಸಾಂಸ್ಕೃತಿಕಸಂಕಥನ, ಪುಟ. ೧೩೯]

ಪ್ರಚಂಡ ಶಕ್ತಿಯಿಂದ ಪ್ರಖರವಾದ ಏಳ್ಗೆಯ ಹಾದಿಯಲ್ಲಿದ್ದ ೨ನೆಯ ವಾಮಶಕ್ತಿಯ ಬೆಳವಣಿಗೆ ಸಹಿಸಲಾರದ ಪದ್ಮರಸ ವಾಮಶಕ್ತಿಯ ಪ್ರಭಾವವನ್ನು ತಗ್ಗಿಸಲು ಬಂಧಿಸಿರಬಹುದು ಆದರೆ ಜನ ಬಂಧನದ ವಿರುದ್ಧ ಹೋರಾಡಿದಾಗ ಬಹುಶಃ ಬಿಜ್ಜಳನ ಮಧ್ಯ ಪ್ರವೇಶದಿಂದ ವಾಮಶಕ್ತಿ ಬಿಡುಗಡೆಯಾಗಿ ಪದ್ಮರಸನ ಪದಚ್ಯುತಿಯಾಗಿರಬೇಕು. ಮುಂದೆ ೨ ನೆಯ ವಾಮಶಕ್ತಿ ರಾಜಗುರುವಾಗಿ ಬೆಳೆದಿದ್ದಾನೆ. ಕ್ರಿಶ ೧೧೬೮ ರಲ್ಲಿ ರಾಜಗುರುವಾಗಿ ಬೆಳೆದಿರುವ ಉಲ್ಲೇಖವಿದೆ. [ವಸಂತಕುಮಾರ ಬಿ ವಿ.; ಶಿಕಾರಿಪುರ ತಾಲೂಕಿನ ಸಾಂಸ್ಕೃತಿಕ ಸಂಕಥನ, ಪುಟ.೧೪೨] ಕ್ರಿಶ ೧೧೬೨ ರ ಶಾಸನವನ್ನು ಗಮನಿಸಿದರೆ ಕೋಡಿಮಠದ ಚಟುವಟಿಕೆಗಳು ಇವನ ಕಾಲದಲ್ಲಿ ಉತ್ತುಂಗಕ್ಕೆ ಏರಿದ್ದವೆಂದು ತಿಳಿದುಬರುತ್ತದೆ. ಇದು ಮೊದಲ ವಾಮಶಕ್ತಿಯು ಬಂಧನವಾಗಿರುವುದನ್ನು ಪುಷ್ಟೀಕರಿಸುವುದಿಲ್ಲ ಗೌತಮನ ನಂತರ ಮೊದಲನೆಯ ವಾಮಶಕ್ತಿ ನೇಮಕಗೊಂಡಾಗ ಅವನ ಮಧ್ಯ ಯಾವುದೋ ವಿಷಯಕ್ಕೆ ಸಂಬಂಧಿಸಿದಂತೆ ಅವಘಡ ನಡೆದಾಗ ಅವನನ್ನು ಬಂಧಿಸಿದ್ದು ನಂತರ ಅವನು ಅವಮಾನ ತಾಳಲಾರದೆ ಮರಣಿಸಿರಬೇಕು ಕಾರಣ ಕೆಲವೇ ದಿನಗಳಲ್ಲಿ ಜ್ಞಾನಶಕ್ತಿ ದೇವನನ್ನು ಮಠಾಧಿಪತ್ಯಕ್ಕೆ ವಹಿಸಿದ್ದು ಕಂಡುಬರುತ್ತದೆ.

ಕೇದಾರದೇವರ ಪಾದಾರಾಧಕನಾದ ವಾಮಶಕ್ತಿದೇವನನ್ನು ಸೆರೆ ಹಿಡಿದಾಗ ಬಾಬೆಯ ನಾಯಕನೆಂಬಾತನು ಕಾದಿ ಸ್ವರ್ಗಸ್ಥನಾದಂತೆ ಶಾಸನವೊಂದು ತಿಳಿಸುತ್ತದೆ. [ಎಕ ೭ ಶಿಕಾ ೧೩೯] ಏಕೆ ಸೆರೆಹಿಡಿದರು, ಅನಂತರ ಏನಾಯಿತು ಎಂಬ ಪ್ರಶ್ನೆಗಳಿಗೆ ಉತ್ತರ ಸಿಕ್ಕುವುದಿಲ್ಲ, ಬಹುಶಃ ಯಾವುದೋ ಅಪ್ರಿಯ ವ್ಯವಹಾರಕ್ಕೆ ವಾಮಶಕ್ತಿಮುನಿ ಕೈ ಹಾಕಿರಬೇಕು. ಈ ವಾಮಶಕ್ತಿ ಬಹುಶಃ ಮೊದಲನೆಯ ವಾಮಶಕ್ತಿ ಅವನನ್ನು ಸೆರೆ ಹಿಡಿದು ಹೊರಹಾಕಿದರೋ ಅವನೇ ಬಳ್ಳಿಗಾವೆಯನ್ನು ಬಿಟ್ಟು ಹೋದನೋ ತಿಳಿಯದು ಅವನ ಹೆಸರನ್ನು ಎತ್ತುವುದು ಅವಮಾನವೆಂದು ಮುಂದಿನ ಕೆಲವು ಶಾಸನಗಳು ಭಾವಿಸುವಂತೆ ಕಾಣುತ್ತದೆ. [ಚಿದಾನಂದಮೂರ್ತಿ ಎಂ.; ಕನ್ನಡ ಶಾಸನಗಳು ಸಾಂಸ್ಕೃತಿಕ ಅಧ್ಯಯನ, ಪುಟ. ೨೪೪] ಹೀಗೆ ಬಂಧಿತನಾದ ವ್ಯಕ್ತಿಯನ್ನು ಇನ್ನೊಂದು ರೀತಿ ಊಹಿಸಿ ಇವನು ಎರಡನೆ ವಾಮಶಕ್ತಿಯಾಗಿರಬೇಕು. ಬಿಜ್ಜಳ ಕಸಪಯ್ಯರನ್ನು ಕೆಳಗಿಳಿಸಲು ಪ್ರಯತ್ನಿಸಿದ ಬಿಜ್ಜಳ ವಿರೋಧಿಗಳು [ವೀರಶೈವರು] ಅವನನ್ನು ಬಂಧಿಸಲು ಪ್ರಯತ್ನಿಸಿರಬಹುದೆಂದೂ ಊಹೆ ಮಾಡಿದ್ದಾರೆ. [ಅದೇ, ಪುಟ] ಈ ಹೇಳಿಕೆಯನ್ನು ಗಮನಿಸಿದಾಗ ಕಾಳಾಮುಖ ಯತಿಗಳ ಉನ್ನತಿ, ದೇವಾಲಯ ಸಂಸ್ಕೃತಿ, 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ವೀರಶೈವರಿಗೆ ಹಿಡಿಸಲಿಲ್ಲವೇನೋ ಕಾರಣ ಬಂಧಿಸಿರಬಹುದೆಂದು ಊಹಿಸಲೂಬಹುದು.

ಎರಡನೇ ವಾಮಶಕ್ತಿಯಿಂದ ಕೇದಾರಸ್ಥಾನದ ಹೆಸರು ಲೋಕವಿಖ್ಯಾತವಾಯಿತೆಂದು ಇವನನ್ನು ರಾಜಗುರುವೆಂದೂ ಶಾಸನಗಳು ಕರೆದಿವೆ. ಈತನು ಅದ್ಭುತ ವಿದ್ವಾಂಸನಲ್ಲದೆ ಅತ್ಯಂತ ಪ್ರಭಾವಶಾಲಿಯೂ, ಮೇಧಾವಿಯೂ ಆಗಿದ್ದು ಬಹುಮುಖ ವ್ಯಕ್ತಿತ್ವದವನಾಗಿದ್ದನು. ನಲವತ್ತಾರು ವರ್ಷ ಸ್ಥಾನಪತಿಗಳಾಗಿದ್ದು ಕೇದಾರೇಶ್ವರ ಮಠವನ್ನು ಅದರ ಕೀರ್ತಿಯ ಶೃಂಗಕ್ಕೆ ಏರಿಸಿದನು. ಅವನ ಬಳಿಕ ಬಂದ ಸ್ಥಾನಪತಿಗಳು [ಜ್ಞಾನಶಕ್ತಿ > ಶ್ರೀಕಂಠಪಂಡಿತ > ಮೂರನೇ ವಾಮಶಕ್ತಿ ದುರ್ಬಲರಾಗಿದ್ದರಿಂದಲೋ ಏನೋ ಅವರು ಅಷ್ಟು ಪ್ರಸಿದ್ಧರಾಗಲಿಲ್ಲವಷ್ಟೇ ಅಲ್ಲ, ಕ್ರಿಶ ೧೨೧೧ ರ ಬಳಿಕ ಮಠದ ಹೆಸರೂ ಮಾಯವಾಯಿತು [ಚಿದಾನಂದಮೂರ್ತಿ ಎಂ.; ಕನ್ನಡ ಶಾಸನಗಳು ಸಾಂಸ್ಕೃತಿಕ ಅಧ್ಯಯನ, ಪುಟ. ೨೪೫] ಎಂದಿರುವುದು ಸಮಂಜಸವಲ್ಲ ಮುಂದಿನ ಶಾಸನಗಳಲ್ಲಿ ಉಲ್ಲೇಖವಿಲ್ಲವೆಂದರೆ ಕೋಡಿಮಠ ಇಲ್ಲವೆಂದಲ್ಲ ಇತ್ತು.

ವಾಮಶಕ್ತಿದೇವರ ವರ್ಣನೆ [ಶಿಕಾ. ೧೦೫, ೧೧೯೨]

ತದೀಯ ಸ್ಥಾನಾಚಾರ್ಯರಪ್ಪ ಶ್ರೀ ಮದ್ರಾಜಗುರು ವಾಮಶಕ್ತಿಯ ತಪ ಪ್ರಭಾವಮುಂ ನೀಡುಂ ನೋಡಿ, ಆ ಮಹಾನುಭಾವರ ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೌನ ಅನುಷ್ಠಾನ ಜಪಸಮಾಧಿಶೀಲ ಸಂಪನ್ನರುಂ ಅಷ್ಟಾಂಗಯೋಗ ನಿಷ್ಠಾ ಪ್ರತಿಷ್ಠಿತ ನೈಷ್ಠಿಕಚ್ಛಾತ್ರ ಸಂತತಿ ಸಂಪನ್ನರುಂ, ಸಮಸ್ತ ವಸ್ತು ವಿಸ್ತೀರ್ಣ ಅರ್ಣವ ಮೇಖಳಾಂಕಿತ ಸಕಳಧಾತ್ರಿ ಸಮುದ್ಧರಣ ದಕ್ಷ ದಕ್ಷಿಣ ಕೌಕ್ಷೇಯ ಕವಿರಾಜ ಮಾನಾನದ್ರುಮಕಮ್ರಕೋಣೀಶ ಮೌಳಿಖಳಿತ ಹರಿ ನೀಳರೋಳಂಬಜಾಳ ಪರಿರಂಜಿತ ನಿಜಪದ ಪ್ರಯೋಜರುಂ, ಕವಿ, ಗಮಕಿ, ವಾದಿ, ವಾಗ್ಮಿ, ಪ್ರಮುಖ ವಿವಿಧ ವಿದ್ವಜ್ಜನಾನಂದ ಕಾರಣ ಜಂಗಮಕಳ್ಪಭೂಜರುಂ, ವೇದಾಂತ, ಸಿದ್ಧಾಂತ, ಆಗಮ, ಷಟ್ತರ್ಕ, ಸಕಳವ್ಯಾಕರಣ, ನಿರ್ಮಳಧರ್ಮಶಾಸ್ತ್ರದ ಶೇಷಶಾಸ್ತ್ರಾರ್ಥ, ನಿರ್ನ್ನಯನಿರ್ನ್ನಿಕ್ತರುಂ, ಪರವಾದಿ ಪರ್ವತ ಪೇಟನ, ಪಾಟನಪಟುತರವಿವಿಧಣ್ಡ ಪ್ರಖ್ಯಾತಯುಕ್ತಿಯುಂ, ಅನವರತನತನಿಳಿಂಪಾಧೀಶ ಮಣಿಮಕುಟಘಟ್ಟಿತ ಪ್ರಬ್ಯಕ್ಯಮುಕ್ತಾ ಫಳ, ಸ್ಥಾರತಾರಾರಾಜಿತ ಚಂದ್ರಚೂಡಾಚರಣನಖ ಕಿರಣ ಹರಿಣಾಂಕ ಚಂದ್ರಿಕಾ ಚಕೋರರುಂ, ಸಕಳಸುಕವಿ ನಿಕುರಂಬಾಧಾರರುಂ, ಅನ್ನದಾನ, ಸುವರ್ಣದಾನ, ಕನ್ಯಾದಾನ, ಗೋದಾನ, ಭೂದಾನ, ಅಭಯಬೈಶಜ್ಯಾದ್ಯ ಅನೇಕ ದಾನ ಪ್ರಸಂಗರುಂ, ಹರಚರಣ ಸರೋಜ ಭೃಂಗರುಂ, ಶಾರದನೀರದ ಪಾರದ ತಾರಾಚಳ, ಕ್ಷೀರನೀರಾಕಾರ ಶರದಿಂದು ಚಂದ್ರ ಚಂದ್ರಿಕಾ ಸ್ಪಟಿಕ ಮಳಯಜಸ್ಮೇರ ಗೋಕ್ಷೀರ ನೀಹಾರ ಶಂಖ ಶಂಕರಾಂಗ ವಿಶದ ಯಶ ಸುಧಾಧವಳಿತ ದಶದಿಶೋವಳಯರುಂ, ತಪ ಶ್ರೀಕಾಂತ ಕಮನೀಯ ನಿಳಯರುಂ, ದಾರುಣ ದಾರಿದ್ರ್ಯದಾವಪಾವಕೋಪಾಹತ ವಿವಿದ ವಂದಿತ ಸಂದೋಹ ಕಾಂತಾರಾಂತ ಸಂತರ್ಪ್ಪಣ ಕರಣ ಕಾರಣ, ಕನಕವರ್ಷಾಕಾಲ ಮೇಘರುಂ, ದೂರಿಕೃತದುರಿತೌಘರುಂ.ಅಸತ್ಯದೋಷ ದುರ್ಲ್ಲಭರುಂ,ಆಶ್ರಿತಜನವಲ್ಲಭರುಂ ಅನಾದಿಪಟ್ಟಣ ರಾಜಧಾನಿ ಬಲಿಪುರದ ಶ್ರೀಮದ್ದಕ್ಷಿಣ ಕೇದಾರೇಶ್ವರ ದೇವರ ದಿವ್ಯ ಶ್ರೀಪಾದ ಪದ್ಮಾರಾಧಕರುಂ ವಿಶಿಷ್ಟ ನಾನಾಮಂತ್ರ ಸಾಧಕರಪ್ಪ ಶ್ರೀಮದ್ರಾಜಗುರು ವಾಮಶಕ್ತಿದೇವರ್' ಕಾಳಾಮುಖರ ಶ್ರೀಕಾರ್ಯ ಎಂತಹದು ಎಂಬುದನ್ನು ಸಂಸ್ಕೃತ ಶಾಸನದಲ್ಲಿ ಉಲ್ಲೇಖವಿದೆ. ಇವನ ಕಾಲದ ಮಠದ ಪ್ರಸಿದ್ಧಿ ಹಾಗೂ ಆಚಾರ್ಯ ಸಾಧನೆಗಳನ್ನು ತಿಳಿದು ಮೆಚ್ಚಿದ ಬಿಜ್ಜಳನು ದೇವಸ್ಥಾನಕ್ಕೆ ಏಳುಹಳ್ಳಿಗಳನ್ನು ದಾನ ಮಾಡಿದನು ವಾಮಶಕ್ತಿಯನ್ನು ಸನ್ಮಾನಿಸಿದನು. ೧೧೬೮ ರಿಂದ ೧೧೯೨ ರವರೆಗಿನ ಶಾಸನಗಳಲ್ಲಿ ವಾಮಶಕ್ತಿ 'ರಾಜಗುರು' ವೆಂದು ಕರೆಯಲಾಗಿದೆ.

ಸೋಮೇಶ್ವರನು ಏಕಕಾಲಕ್ಕೆ ನಗರೇಶ್ವರ ದೇವಾಲಯ, ಬ್ರಹ್ಮೇಶ್ವರ ದೇವಾಲಯ ಹಾಗೂ ದಕ್ಷಿಣ ಕೇದಾರೇಶ್ವರ ದೇವಾಲಯಗಳಿಗೆ (ಈ ಕಾಲದವರೆಗೆ ಅವನು ತನ್ನ ಮೊದಲಿನ ಹುದ್ದೆಗಳನ್ನು ಬಿಟ್ಟಿರದಿದ್ದರೆ) ಆಚಾರ್ಯನಾಗಿದ್ದನು [ಲಾರೆಂಜನ್ ಎನ್ ಡೆವಿಡ್.; ಕಾಪಾಲಿಕರು ಮತ್ತು ಕಾಳಾಮುಖರು, ಪುಟ. ೧೫೧]

ಬಳ್ಳಿಗಾವೆಯ ೧೦೨ ನೆಯ ಶಾಸನದಲ್ಲಿ ೧೧೬೨ ರಲ್ಲಿ ಶ್ರೀಮದ್ ರಾಜಗುರು ವಾಮಶಕ್ತಿ ದೇವರ ಕಾಲಂಕರ್ಚಿ ಧಾರಾಪೂರ್ವಕಂ ಮಾಡಿಕೊಟ್ಟರು. ಎಂದು ದಾನನೀಡಿರುವಲ್ಲಿ "ಸತ್ತಳಿಗೆ ಕಂಪಣದೊಳು ಸಿಡಿಯನೂರು ದೀವಿಗೆಯು ಮಂತ್ರಿ ಭೋಗಾಭ್ಯಂತರ ಸಹಿತ ಧಾರಾಪೂರ್ವಕಂಯಾಗಿ ಕೊಟ್ಟರು, ಮತ್ತಂ ಬಾಸೂರು ಕಂಪಣದೊಳು ಚಂಗೂರು, ಮತ್ತಿಹಳ್ಳಿಯುಮ ನಾಗರಖಂಡೆಯದೊಳಗಣ ಜಾವಳಿಯು ಮಂತ್ರಿ ಭೋಗಾಭ್ಯಂತರ ಸಹಿತವಾಗಿ" ಎಂಬುದು ಜಿಲ್ಲೆಯ ಬ್ಯಾಡಗಿ ತಾಲೂಕಿನ ಇಂದಿನ ಸಂಗೂರು ಮತ್ತು ಮತ್ತಿಹಳ್ಳಿ ಹಿರೇಕೆರೂರ ಜಾವಳ್ಳಿಗಳಿಗೆ ದಾನ ನೀಡಿದ ಉಲ್ಲೇಖವಿರುವುದು ಬಳ್ಳಗಾವಿಯ ಪ್ರಭಾವ ವಿಸ್ತಾರವಾಗಿರುವ ಬಗ್ಗೆ ಮನದಟ್ಟಾಗುತ್ತದೆ. ಮತ್ತು ಅದೆ ಶಾಸನದಲ್ಲಿ, ಬಂದಳಿಕೆಯ ಸೋವಿದೇವರಸರು ಚಂಡುಗಿದೇವ, ಲಕುಮಿದೇವ, ದಂಡನಾಯಕರು ಬಿನ್ನಹಗೈಯ್ಯಲು ಕೋಡಿಮಠದ ಶ್ರೀ ದಕ್ಷಿಣ ಕೇದಾರೇಶ್ವರ ರಂಗಭೋಗಕ್ಕೆ ಶ್ರೀ ಸೋಮನಾಥ ದೇವರ ರಂಗಭೋಗಕ್ಕೆ, ಅಬ್ಬಲೂರ ಬ್ರಹ್ಮೇಶ್ವರ ದೇವರ ರಂಗಭೋಗಕ್ಕೆ ನಾಗರಖಂಡ ಕಂಪಣದೊಳು ಕರಿನೆಲೆ, ಮರುವಸೆ, ಮುತಿಗನಹಳ್ಳಿ, ಕುಂದರಗಿ, ಹಾನಗಲ್ಲು ಕಂಪಣದೊಳು ಚಿಕ್ಕಣುಗೆಯ ಮಂತ್ರಿಗಳು ಭೋಗಾಭ್ಯಂತರ ಸಹಿತವಾಗಿ ಸರ್ವರು ನಮಸ್ಯವಾಗಿ ಕೊಟ್ಟರು ಎಂದು ತಿಳಿಸುತ್ತದೆ.

ಬಳ್ಳಿಗಾವೆ ಗ್ರಾಮದ ಸೋಮೇಶ್ವರ ದೇವಾಲಯಕ್ಕೆ ಎದುರಾಗಿ ಪಟೇಲರ ಹಿತ್ತಿಲಲ್ಲಿ ಎರಡನೆಯ ವೀರಗಲ್ಲಿನಲ್ಲಿ ಅಬ್ಬಲೂರು ಕಾಳಗದಲ್ಲಿ ಕಲುಕಣಿಯ ವ್ಯಕ್ತಿಯೊಬ್ಬ ಮರಣಿಸಿದ ಉಲ್ಲೇಖ ಲಭಿಸುತ್ತದೆ. [ಎಕ ೭. ರಿವೈಜ್ಡ ಇನ್ಸಕ್ರಿಪಶನ್ ಶಿಕಾ. ೩೫೮] ವಾಮಶಕ್ತಿಯ ಹೆಸರು ಕಳಚೂರಿ ಅರಸನಾದ ಬಿಜ್ಜಳನ ಆಳ್ವಿಕೆಯ ಕಾಲದ ಹಾವೇರಿ ಜಿಲ್ಲೆಯ ಹಳೆನಿಡನೇಗಿಲ ಗ್ರಾಮದ ಕ್ರಿ.ಶ. ೧೧೬೫ ರ ದತ್ತಿಯನ್ನು ಕುರಿತಾದ ಬೇರೊಂದು ಶಾಸನದಲ್ಲಿ ಕಾಣಿಸಿಕೊಳ್ಳುತ್ತದೆ.[ಕಇ.೪ ನಂ.೧೩] ಈ ದಿನದಂದು ಈ ಅರಸನ ಮಾಂಡಲಿಕನಾದ ಸಿಂದ ಮಹಾಮಂಡಲೇಶ್ವರನು ಗ್ರಾಮದ ಮಲ್ಲಿಕಾರ್ಜುನ ದೇವಾಲಯಕ್ಕೆ 'ಬಲಿಪುರ' ಪಟ್ಟಣದ ದಕ್ಷಿಣ ಕೇದಾರೇಶ್ವರ ದೇವಾಲಯದ ಯತಿಯಾದ ವಾಮಶಕ್ತಿ ಪಂಡಿತದೇವನ ಪಾದಗಳನ್ನು ತೊಳೆದು ಕಾಣಿಕೆ ಸಲ್ಲಿಸಿದನು.

ಮಲದಲಿಕಾರ್ಜುನ ದೇವಾಲಯದ ಪ್ರಭಾವಿಯಾದ ಪ್ರಮುಖನ ಹೆಸರನ್ನು ನಮೂದಿಸಿಲ್ಲ [ಲಾರೆಂಜನ್ ಡೆವಿಡ್.; ಕಾಪಾಲಿಕರು ಮತ್ತು ಕಾಳಾಮುಖರು, ಪುಟ. ೧೭೦] ಶಿವಮೊಗ್ಗಾ ಜಿಲ್ಲೆ ಕುಪ್ಪಟೂರು ಹತ್ತಿರದ ದೇವಸ್ಥಾನ ಹಕ್ಕಲು ಎಂಬಲ್ಲಿ ಕೋಟೀಶ್ವರ ದೇವಾಲಯವು ಕಾಳಾಮುಖರು ನೆಲೆಸಿದ ಬೀಡಾಗಿದ್ದು ಇವರ ಒಂಬತ್ತು ಶಾಸನಗಳು ಇಲ್ಲಿ ದೊರೆತಿವೆ. ಈ ಕೋಟಿಶ್ವರದೇವಾಲಯಕ್ಕೆ ಅನೇಕ ದೇವಾಲಯಗಳನ್ನು ಪ್ರತಿಬದ್ಧಗೊಳಿಸಲಾಗಿತ್ತು. ಅದರಲ್ಲಿ ಹಾವೇರಿಯ ಜಿಲ್ಲಾ ವ್ಯಾಪ್ತಿಯ ಮುಳಗುಂದದ ಸ್ವಯಂಭೂ ದೇವಾಲಯ, ಕಿರುವಡೆಯ ರಾಮನಾಥದೇವಾಲಯ, ಅಬ್ಬಲೂರಿನ ಗ್ರಾಮೇಶ್ವರ, ತಿಳವಳ್ಳಿಯಮೂಲಸ್ಥಾನ ವೊಸಂತೇಶ್ವರ, ಹಾನಗಲ್ಲದ ಮೂಲಸ್ಥಾನ ರಾಮನಾಥ ದೇವಾಲಯಗಳಾಗಿದ್ದವು ಎಂಬುದು ಶಾಸನಗಳಿಂದ ತಿಳಿದು ಬರುತ್ತದೆ. ಇವುಗಳೆಲ್ಲ ಬಳ್ಳಿಗಾವೆಯ ಪರಿಸರದ ಎಲ್ಲ ದೇವಾಲಯಗಳೊಡನೆ ಇರುವ ಸಾಮರಸ್ಯ ಮತ್ತು ಕೊಡುಕೊಳ್ಳುವಿಕೆ ಅತ್ಯುತ್ತಮವಾಗಿರುವ ಮಾಹಿತಿಯಾಗಿದೆ. ಹೀಗೆ ಕಾಳಾಮುಖರು ಸರ್ವ ಜನರ ಹಿತಕ್ಕಾಗಿ ಸಮಾಜೋಪಯೋಗಿ ಕಾರ್ಯನಿವಹಿಸುತ್ತಿದ್ದರೆಂಬುದು ಸ್ಪಷ್ಟವಾಗಿದೆ.

೫.೨ ಆಚರಣೆಗಳು

ಕಾಳಾಮುಖ ಯತಿಗಳು ಹಾಗೂ ಅವರ ದೇವಾಲಯಗಳು ಬರಿ ಆಚರಣೆಗಳು ವೈದಿಕ ಆಚರಣೆಗಳ ಕೇಂದ್ರಗಳಾಗಿರಲಿಲ್ಲ. ಅವರು ಸಮುದಾಯಗಳ ನಡುವೆ ನಿಂತ ಯತಿಗಳು ಸಮುದಾಯದ ಶ್ರೇಯಸ್ಸಿಗಾಗಿ ಇದ್ದವರು. ತಮ್ಮದೇ ಆದ ಕೋಟೆಯನ್ನು ಕಟ್ಟಕೊಂಡವರಲ್ಲ ಅನ್ನದಾನ, ಸುವರ್ಣದಾನ, ಕನ್ಯಾದಾನ, ಗೋದಾನ, ಭೂದಾನ, ಅಭಯಬೈಷಜ್ಯದಾನ ಮೊದಲಾದ ದಾನಗಳಿಗೆ ತಮ್ಮನ್ನು ಸಮರ್ಪಿಸಿಕೊಂಡವರು. ಬಡವರು, ಅಸಹಾಯಕರು, ಕುಂಟರು, ಕಿವುಡರು, ಕಥಾಕಥನ ಗಾಯಕರು, ಸಂಗೀತಗಾರರು, ಗಮಕಿಗಳು, ವಿಕಟಕವಿಗಳು, ನಗ್ನಭಗ್ನರು, ಕ್ಷಪಣಕರು, ಏಕದಂಡಿ ತ್ರಿದಂಡಿ ಹಂಸ ಪರಮಹಂಸರು, ನಾನಾಜನ ಸಮುದಾಯಕ್ಕೆ ಆಹಾರ ಭೈಷಜ್ಯವನ್ನು ನೀಡುವ ಸ್ಥಳ ಅಲ್ಲದೇ ಅಸಹಾಯಕರು ಕುಷ್ಟರೋಗದಂತೆ ರೋಗಿಗಳಿಗೂ ಸಹ ಚಿಕಿತ್ಸೆಯನ್ನು ಒದಗಿಸುವ ತಾಣ. ಅಷ್ಟು ಮಾತ್ರವಲ್ಲ ಪ್ರಾಣಿ ಮಾತ್ರರಿಗೆಲ್ಲ ಸುರಕ್ಷತೆಯನ್ನು ಒದಗಿಸುವ ತಾಣವಾಗಿದ್ದನ್ನು ಕೋಡಿಮಠದ ಶಾಸನ ತಿಳಿಸುತ್ತದೆ.

ಕಾಳಾಮುಖ ಯತಿಗಳು ಬರೀ ಸಂಗೀತ ನೃತ್ಯಗಳಿಗೆ ಗಮನ ಕೊಟ್ಟವರಲ್ಲ ವಾಸ್ತು-ಶಿಲ್ಪ, ನಗರ ನಿರ್ಮಾಣ, ಕೆರೆ ನಿರ್ಮಾಣದಂತಹ ಕಾರ್ಯದಲ್ಲಿ

ತೊಡಗಿಕೊಂಡವರು. ಅವರು ಕೆಲಸಗಳಲ್ಲಿ ಅವರು ಕ್ರಿಯೆ ಮತ್ತು ಜ್ಞಾನಗಳಲ್ಲಿ ಅಪಾರ ಪರಿಶ್ರಮ ಹೊಂದಿದ್ದನ್ನು ಹಲವಾರು ಶಾಸನಗಳು ಕೊಟ್ಟಿವೆ. ಇಂಥವುಗಳನ್ನು ಸಂಶೋಧಕರು ಗಮನಿಸದೇ ಹೋಗಿದ್ದಾರೆ. ಎಂಬುದು ಅಕ್ಷರ ಸಹ ಸತ್ಯವಾಗಿದೆ.

ಕಾಳಾಮುಖ ಸಮಯದ ಸ್ವರೂಪವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಕಾಳಾಮುಖದ ಕುರಿತು ಸಹಾನುಭೂತಿ ಇಲ್ಲದವರುಅವರ ಕುರಿತು ಕಟ್ಟಿಕೊಟ್ಟ ಚಿತ್ರವನ್ನು ಸರಿಪಡಿಸಬೇಕಾಗುತ್ತದೆ. ಬಳ್ಳಿಗಾವೆಯ ಶಾಸನಗಳು ಕೇವಲ ಲಕುಲೀಶ ಮತ್ತು ಕಾಳಾಮುಖರನ್ನು ಉಲ್ಲೇಖಿಸುತ್ತವೆಯೇ ವಿನಾ ಒಮ್ಮೆಯೂ ಪಾಶುಪತ ಮತ್ತು ಕಾಪಾಲಿಕರನ್ನು ಕುರಿತು ಹೇಳುವುದಿಲ್ಲ. ಅದಲ್ಲದೇ ಲಕುಲೀಶ ಮತ್ತು ಕಾಳಾಮುಖರ ಮಧ್ಯೆ ಈ ದಾಖಲೆಗಳು ಅವೆರಡೂ ಒಂದೇ ಪಂಥದ ಎರಡು ಹೆಸರು ಎಂಬಂತೆ ಯಾವುದೇ ಭಿನ್ನತೆಯನ್ನು ಮಾಡದೇ ಬಳಸುತ್ತವೆ. ಒಟ್ಟಿನ ನಿರ್ಣಯವೆಂದರೆ ಪಾಶುಪತ ಪಂಥವು ಉಳಿದ ಪಂಥಗಳಿಗಿಂತ ಪ್ರಾಚೀನವಾದದ್ದು ಲಕುಲೀಶ–ಕಾಳಾಮುಖ ಪಂಥವು ಅದರಿಂದ ಉಗಮವಾಯಿತೆಂಬುದಾಗಿದೆ. [ಶೆಟ್ಟರ,ಎಸ್.; ಬಳ್ಳಿಗಾವೆ ಮಧ್ಯಕಾಲೀನ ನಗರವೊಂದರಲ್ಲಿ ಮತವೈವಿದ್ಯತೆಯ ವಿನ್ಯಾಸ(ಭಾಗ–೧)ನಾವಡ ಎ ವಿ (ಸಂ).; ಕನ್ನಡ ಅಧ್ಯಯನ ಸಂಪುಟ ೧೦.]

ಎಸ್ ಶೆಟ್ಟರವರು ಬಳ್ಳಿಗಾವೆಯ ಲಕುಲೀಶ– ಕಾಳಾಮುಖರು ತೀರ ಉದಾರಿಗಳು, ಸರ್ವತತ್ವಗ್ರಾಹಿಗಳು ಆಗಿದ್ದರು. ಅವರು ಶಿವನ ಭಕ್ತರಾಗಿದ್ದರೂ, ವಿಷ್ಣು ಹಾಗೂ ಬ್ರಹ್ಮನನ್ನು ಪೂಜಿಸಿದರು ಅವರು ಪ್ರಾರ್ಥಿಸುವಾಗಲೆಲ್ಲ ತ್ರಿಮೂರ್ತಿಗಳನ್ನು ಸೇರಿಸಿಕೊಂಡಿದ್ದರು. ಅವರು ವೇದಗಳನ್ನು, ವರ್ಣಾಶ್ರಮ ಹಾಗೂ ಆಗಮಗಳನ್ನು ಒಪ್ಪಿಕೊಂಡಿದ್ದರು. ಅನ್ಯಮತಗಳನ್ನು ಸಹಿಸಿದ್ದಷ್ಟೇ ಅಲ್ಲದೇ ಅವರ ಉದ್ದೇಶಗಳನ್ನು ಬೆಂಬಲಿಸಿದರು. [ಶೆಟ್ಟರ,ಎಸ್.; ಬಳ್ಳಿಗಾವೆ ಮಧ್ಯಕಾಲೀನ ನಗರವೊಂದರಲ್ಲಿ ಮತವೈವಿದ್ಯತೆಯ ವಿನ್ಯಾಸ(ಭಾಗ–೧)ನಾವಡ ಎ ವಿ (ಸಂ).; ಕನ್ನಡ ಅಧ್ಯಯನ ಸಂಪುಟ ಪುಟ. ೧೦೨] ಎಂಬುದು ಸರ್ವಧರ್ಮ ಸಮನ್ವಯಿಗಳೆಂಬುದು ಸ್ಪಷ್ಟವಾಗಿಲ್ಲ, ಏಕೆಂದರೆ ಇವರಿಗೆ ವೈಷ್ಣವರ ಜೊತೆ ಸಂಬಂಧವಿಲ್ಲ ದ್ವೈತಾದ್ವೈತ ವಿವರ್ಜಿತರಾಗಿದ್ದರು. ವೈಷ್ಣವ ಮತ್ತು ಹೋಮವಿರೋಧಿಗಳಾಗಿದ್ದವರು. ಇಲ್ಲಿ ಬುದ್ಧ, ಜೈನರು ಶಾಕ್ತರ ಕಡೆ ನಿಲ್ಲುವುದು ಕಾಣುತ್ತದೆ.

ವೈಷ್ಣವ ಟೀಕಾಕಾರರಾದ ಯಮುನಾಚಾರ್ಯ, ರಾಮಾನುಜಾಚಾರ್ಯ ರಂತವರು ೧೧ನೆಯ ಶತಮಾನದಲ್ಲಿ ಅವರನ್ನು ವೇದವಿರೋಧಿಗಳು, ವಾಮಾಚಾರಿಗಳು

ಎಂದು ಬಣ್ಣಿಸಿರುವುದು ವಿರೋಧಾಭಾಸವಾಗಿದೆ. 'ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧಾರಣಮೋನ ಅನುಷ್ಠಾನ ಜಪ ಸಮಾಧಿ ಶೀಲಸಂಪನ್ನ' ಆಚಾರ್ಯ ಪರಂಪರೆಯಾಗಿದೆ. ಇದು ಶಾಕ್ತರ ಯೋಗ ವಿದ್ಯೆಯ ವೈವಿಧ್ಯಮಯ ಸುಧಾರಿತ ದಾರಿಗಳೇ ಹೊರತು ಕೇವಲ ಬ್ರಾಹ್ಮಣರ ವಿದ್ಯಾದಾರಿ ಮಾತ್ರವಲ್ಲ, ಇದು ಎಲ್ಲ ಹಿಂದೂಗಳ, ಕಾಳಾಮುಖರ ಆಚರಣೆಯ ವಿಧಾನವೂ ಆಗಿದೆ.

'ಯಮ' ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹಗಳು.

'ನಿಯಮ' ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರಪ್ರಣಿಧಾನಗಳು.

'ಆಸನ' ಸ್ಥಿರವೂ ಸುಖವೂ ಆಗಿರುವುದು.

'ಪ್ರಾಣಾಯಾಮ' ಶ್ವಾಸ ಪ್ರಶ್ವಾಸಗಳನ್ನು ನಿಲ್ಲಿಸುವುದು.

'ಪ್ರತ್ಯಾಹಾರ' ಇಂದ್ರಿಯಗಳು ವಿಷಯಸಂಪರ್ಕದಲ್ಲಿ ಇಲ್ಲದಿರುವಾಗ ಅವು ನಿರೋಧಿಸಲ್ಪಟ್ಟ ಚಿತ್ತದ ಸ್ವರೂಪವನ್ನು ಅನುಸರಿಸುವುದು.

'ಧಾರಣ' ಧ್ಯಾನಗಳ ಆಂತರಿಕ ಸಾಧನೆಗಳು. ನಾಭಿಚಕ್ರ, ಹೃದಯಪುಂಡರೀಕ, ಮೂರ್ಧದಲ್ಲಿರುವ ಜ್ಯೋತಿಸ್ಸು, ನಾಸಿಕಾಗ್ರ, ಜಿಹಾಗ್ರ ಅಥವಾ ಬಾಹ್ಯ ವಿಷಯ ಇವುಗಳಲ್ಲಿ ಚಿತ್ತವನ್ನು ವೃತ್ತಿಯ ರೂಪದಿಂದ ಬಂಧಿಸುವುದು.

'ಧ್ಯಾನ' ಯಾವ ವಿಧವಾದ ಪ್ರತ್ಯಯಾಂತರವಿಲ್ಲದೆ ಧ್ಯೇಯ ವಸ್ತುವಿನಲ್ಲಿ ಅವಲಂಬಿಸಿರುವ ಪ್ರತ್ಯಯವು ಅವಿಚ್ಛಿನ್ನವಾಗಿ ಹರಿಯುವುದು.

'ಸಮಾಧಿ' ನಿರಂತರ ಧ್ಯಾನವು ಧ್ಯೇಯ ವಸ್ತುವಿನೊಂದಿಗೆ ಒಂದಾಗಿ ತನ್ನ ಸ್ವರೂಪವನ್ನು ಕಳೆದುಕೊಂಡಂತೆ ಆಗುವುದು.

'ಸಂಯಮ' ಒಂದೇ ವಸ್ತುವಿನಲ್ಲಿ ಧಾರಣ ಧ್ಯಾನ ಸಮಾಧಿಗಳಾದರೆ ಈ ಅವಸ್ಥೆಗೆ ತಾಂತ್ರಿಕ ಪರಿಭಾಷೆಯಲ್ಲಿ 'ಸಂಯಮ' ಎಂದಿದ್ದಾರೆ. [ಆದಿದೇವಾನಂದ.;ಪಾತಂಜಲಿ ಯೋಗದರ್ಶನ]

ಬಳ್ಳಿಗಾವೆಯು ಶಕ್ತಿಪರಿಶೆಯ ಪ್ರಬಲಕೇಂದ್ರವಾಗಿತ್ತೆಂಬುದನ್ನು ಎಸ್ ಶೆಟ್ಟರವರು ಹೀಗೆ ಸ್ಪಷ್ಟಪಡಿಸಿದ್ದಾರೆ. ಬಳ್ಳಿಗಾವೆಯ ಲಕುಲೀಶ ಕಾಳಾಮುಖರು, ಪರ್ವತಾವಳಿಯನ್ನು ಶಕ್ತಿ ಮಧ್ಯಮ ಮೂವರಕೋಣೆಯ ಸಂತತಿಗೆ ಸೇರಿದ್ದರು. ಈ ಸ್ಥಳದ ಒಂದು ಶಾಸನವೂ ಸಿಂಹಪರ್ಷೆಯನ್ನು ಕುರಿತು ಉಲ್ಲೇಖಿಸುವುದಿಲ್ಲ. ಶಕ್ತಿಪರ್ಷೆಯ ಕೇಂದ್ರ

ಭೂಮಿ ಇಂದಿನ ಶಿವಮೊಗ್ಗಾ(ಬಳ್ಳಿಗಾವೆ ಅದರ ಅತ್ಯಂತ ಪ್ರಬಲ ಕೇಂದ್ರವಾಗಿತ್ತು) ಶಕ್ತಿ ಪರಿಷೆಯ ಮೂವರು ಕೋಣೆ ಸಂತತಿ ಎಂದು ಕರೆಯಲಾಗಿದೆ. [ಶೆಟ್ಟರ,ಎಸ್.; ಬಳ್ಳಿಗಾವೆ ಮಧ್ಯಕಾಲೀನ ನಗರವೊಂದರಲ್ಲಿ ಮತವೈವಿದ್ಯತೆಯ ವಿನ್ಯಾಸ(ಭಾಗ-೧)ನಾವಡ ಎ ವಿ (ಸಂ).; ಕನ್ನಡ ಅಧ್ಯಯನ ಸಂಪುಟ ಸಂಪುಟ ೧೦.]

ಬಳ್ಳಿಗಾವೆಯ ಲಕುಲೀಶ ಕಾಳಾಮುಖ ಸಮಯವು ಸಮಾಜದಲ್ಲಿ ಬೆರೆತು ಎಲ್ಲ ಮತ ಪಂಥಗಳ ಜೊತೆಗೂ ಸಹಬಾಳ್ವೆ ನಡೆಸುವ ಗುರಿಯನ್ನು ಹೊಂದಿತ್ತು. ಕೇವಲ ವಾದ-ವಿಚಾರಗಳಲ್ಲದೆ ಅನ್ಯ ಮತ ಸಂಪ್ರದಾಯಗಳನ್ನು ಉದ್ದೇಶಪೂರ್ವಕವಾಗಿ ವಿರೋಧಿಸಲು ಅದು ಎಂದೂ ಪ್ರಯತ್ನಿಸಲಿಲ್ಲ. ಅವರು ತಮ್ಮ ಸಾಮಾಜಿಕ ಮತ್ತು ಸಮಯ ಧರ್ಮಕ್ಕೆ ಪೂರಕವಾದ ಎಲ್ಲಾ ರೀತಿಯ ಸಂಸ್ಥೆಗಳನ್ನು, ಕಾರ್ಯಗಳನ್ನು ಉದಾರವಾಗಿ ಪ್ರೋತ್ಸಾಹಿಸಿದರು. ಅವು ದೇವಾಲಯಗಳು, ಮಠ, ಛತ್ರಗಳು, ಚಿಕಿತ್ಸಾಲಯಗಳು, ಪಾಠಶಾಲೆಗಳು, ಅನಾಥಾಲಯಗಳು, ಆಶ್ರಮಗಳು ಮುಂತಾದವುಗಳು ತಮಗೆ ದಾನವಾಗಿ ಬಂದ ಸಂಪತ್ತನ್ನು ಕೇವಲ ಸಂಗ್ರಹಿಸದೇ ಅದನ್ನು ಸಾಮೂಹಿಕ ಏಳ್ಗೆಗಾಗಿ ವಿತರಿಸಿದರು. ಅನ್ಯಮತಗಳ ಆಹ್ವಾನವನ್ನು ಸ್ವೀಕರಿಸುವಲ್ಲಿ ಅವರಿಗೆ ಏನೂ ಹಿಂಜರಿಕೆ ಇರಲಿಲ್ಲ ಹಾಗೂ ಅನ್ಯರ ಪೂಜೆ ಮತ್ತು ವಿಧಿ,ಆಚರಣೆಗಳಲ್ಲಿ ಪೌರೋಹಿತ್ಯವನ್ನು ವಹಿಸಲೂ ಅವರು ಹಿಂದೇಟು ಹಾಕಲಿಲ್ಲ. [ಶೆಟ್ಟರ,ಎಸ್.; ಬಳ್ಳಿಗಾವೆ ಮಧ್ಯಕಾಲೀನ ನಗರವೊಂದರಲ್ಲಿ ಮತವೈವಿದ್ಯತೆಯ ವಿನ್ಯಾಸ(ಭಾಗ-೧)ನಾವಡ ಎ ವಿ (ಸಂ).; ಕನ್ನಡ ಅಧ್ಯಯನ ಸಂಪುಟ ೧೦, ಪುಟ. ೧೦೩] ಅತಿಸಹಿಷ್ಣುತೆಯು ಕಾಳಾಮುಖರು ಜನಪ್ರೀಯರಾಗಲಿಕ್ಕೆ ಹಾಗೂ ಉಳಿದವರ ಗೌರವ ಮತ್ತು ವಿಧೇಯತೆಯನ್ನು ಗಳಿಸಲಿಕ್ಕೆ ಸಹಕರಿಸಿದರೂ ಕಾಲಾಂತರದಲ್ಲಿ ಅದು ಕಾಲಾಮುಖರ ಹಿತಾಸಕ್ತಿಗೆ ಮುಳುವಾಯಿತು. ಬಸವೇಶ್ವರ ನೇತೃತ್ವದಲ್ಲಿ ಕಲ್ಯಾಣದಲ್ಲಿ ಪ್ರಭಲ ಚಳುವಳಿಯನ್ನು ನಡೆಸಿದ ಕ್ರಾಂತಿಕಾರಿ ಸುಧಾರಕರಿಗೆ ಅವರು ಹೆಚ್ಚು ಹತ್ತಿರವಾಗುವಂತೆ ಮಾಡಿತು. ವೀರಶೈವರೂ ಕೂಡ ಇಂಥ ಉಗ್ರ ಕಾಳಾಮುಖರನ್ನು ತಮ್ಮ ಉದ್ದೇಶಕ್ಕೆ ವಿರುದ್ಧವಾಗಿ ತಮ್ಮೊಳಗೆ ಸೇರಿಸಿಕೊಳ್ಳಬೇಕಾಯಿತೆಂಬುದು ಬೇರೆ ವಿಷಯ. [ಶೆಟ್ಟರ,ಎಸ್.; ಬಳ್ಳಿಗಾವೆ ಮಧ್ಯಕಾಲೀನ ನಗರವೊಂದರಲ್ಲಿ ಮತವೈವಿದ್ಯತೆಯ ವಿನ್ಯಾಸ(ಭಾಗ-೧)ನಾವಡ ಎ ವಿ (ಸಂ).; ಕನ್ನಡ ಅಧ್ಯಯನ, ಸಂಪುಟ ೧೦, ಪುಟ. ೧೦೩] ಎಂಬುದು ಶೆಟ್ಟರವರ ಅಭಿಮತವಾಗಿದೆ.

ಕೋಡಿಮಠದಲ್ಲಿ ಆಚರಣೆಗಳನ್ನು ಶಾಸನದಲ್ಲಿ ಈ ರೀತಿ ವರ್ಣಿಸಿದ್ದಾರೆ.[ಎಕ ೭ ಶಿಕಾ ೧೦೨, ೧೧೬೨]

ಇದು ದಕ್ಷಿಣಕೇದಾರಸ್ಥಾನ. ಶಿವಲಿಂಗ ಪೂಜೆಯಿಂದ ನವಿರೆದ್ದ ಮೈಯಂತೆ, ತಲೆಯತ್ತಿನಿಂತ ಬೆಳೆಗಳಿಂದ ಕಂಗೊಳಿಸುವ ವನ್ಯದಂತಹ ತಾಣ.

ಆಜೀವ ಬ್ರಹ್ಮಚರ್ಯೆಯಿಂದ ಧಾರ್ಮಿಕ ವಿದ್ಯಾರ್ಥಿಗಳಾಗಿ ಬಾಳುವ ಶೈವಯತಿಗಳ ಮತಾಚರಣೆಗಳಿಗಾಗಿ ಇದ್ದ ನೈಷ್ಟಿಕತಾಣ

ನಾಲ್ಕು ವೇದಗಳಾದ 'ಋಗ್ ಯಜುರ್, ಸಾಮ, ಹಾಗೂ ಅಥರ್ವಣ ವೇದಗಳ ಜೊತೆಗೆ ಅವುಗಳ ಉಪವೇದಗಳ ಸಾಂಗವಾಗಿ ಅಧ್ಯಯನಿಸುವ ತಾಣವಾಗಿದೆ.

ಕೌಮಾರ, ಪಾಣಿನಿ, ಶಾಕಟಾಯನ, ಶಬ್ದಾನುಶಾಸನ ಹಾಗೂ ವಿವಿಧ ವ್ಯಾಕರಣ ಗ್ರಂಥಗಳನ್ನು ಕುರಿತು ವ್ಯಾಖ್ಯಾನಗಳನ್ನು ರಚಿಸುವ ತಾಣವಾಗಿದೆ.

ನ್ಯಾಯ, ವೈಷೇಶಿಕ, ಮಿಮಾಂಸೆ, ಸಾಂಖ್ಯ, ಬೌದ್ಧ ಮೊದಲಾದ ಷಡ್ದರ್ಶನಗಳನ್ನು ವ್ಯಾಖ್ಯಾನಿಸುವ ಸ್ಥಾನವಾಗಿದೆ.

ಲಾಕುಳ ಸಿದ್ಧಾಂತ ಹಾಗೂ ಪತಂಜಲಿ ಅಲ್ಲದೆ ಬೇರೆ ಯೋಗಶಾಸ್ತ್ರಗಳಿಗೆ ಭಾಷ್ಯ ರಚಿಸುವತಾಣ.

ಹದಿನೆಂಟು ಪುರಾಣಗಳು, ಧರ್ಮಶಾಸ್ತ್ರ, ನ್ಯಾಯಶಾಸ್ತ್ರ ಹಾಗೂ ಎಲ್ಲ ಬಗೆಯ ಕಾವ್ಯರಚನೆ, ನಾಟಕ, ಲಘುಪ್ರಹಸನಗಳಲ್ಲದೆ ಹಲವು ಬಗೆಯ ವಿದ್ಯೆಗಳ ಅಧ್ಯಯನಕ್ಕಾಗಿರುವ ತಾಣ.

ಬಡವರು, ಅಸಹಾಯಕರು, ಕುಂಟರು, ಕುರುಡರು, ಕಿವುಡರು, ಹಾಗೂ ವೃತ್ತಿಪರ ಕಥಾಕಥನಕಾರರು, ಗಾಯಕರು, ಸಂಗೀತಗಾರರು, ಹಾಡುವಕವಿಗಳು, ಆಟಗಾರರು, ಮತ್ತು ನಿದ್ರಿಸುವ ತಮ್ಮ ಒಡೆಯರನ್ನು ಸಂಗೀತ ಮತ್ತು ಹಾಡುಗಳಿಂದ ಎಚ್ಚರಿಸುವ ವಿಕಟಕವಿಗಳು ಅಲ್ಲದೆ, ನಗ್ನ-ಭಗ್ನರು ಮತ್ತು(ಜೈನ ಬೌದ್ಧ) ಭಿಕ್ಷುಗಳು, (ಕ್ಷಪಣಿಕರು) 'ಏಕದಂಡಿ' ಮತ್ತು 'ತ್ರಿದಂಡಿ' ಗಳಾದ 'ಬ್ರಾಹ್ಮಣ' ಬಿಕ್ಷುಕರು, ಅಲ್ಲದೆ ಹಂಸ ಮತ್ತು ಪರಮಹಂಸ ಸನ್ಯಾಸಿಗಳು, ಮತ್ತು ನಾನಾದೇಶ ಬಿಕ್ಷುಕ ಜನಕ್ಕೆಲ್ಲ ಯಾವಾಗಲೂ ಅನ್ನ ನೀಡುವ ತಾಣ.

ಅಸಹಾಯಕರು ಮತ್ತು ರೋಗಿಗಳಿಗೆ ಆಸರೆನೀಡಿ, ಚಿಕಿತ್ಸೆಯನ್ನು ಒದಗಿಸುವ ತಾಣ. ಪ್ರಾಣಿ ಮಾತ್ರರಿಗೆಲ್ಲ ಸುರಕ್ಷತತೆಯನ್ನು ಒದಗಿಸುವ ತಾಣ ಎಂದು ಅಲ್ಲಿಯ ಆಚರಣೆಗಳು ಕಂಡುಬರುತ್ತವೆ.

ಬಳ್ಳಿಗಾವೆಯು ಕ್ರಿಶ ೧೧೯೪ರ ಶಾಸನದಲ್ಲಿನ ದತ್ತಿಯ ವಿವರದಲ್ಲಿ ಶ್ರಮಜೀವಿಗಳು ಕೋಡಿಮಠಕ್ಕೆ ನೀಡಿದ ದಾಖಲೆ ಅಪೂರ್ವವಾದವು. ಈ ಶಾಸನದಲ್ಲಿ ತಂಬುಲಿಗರೊಳ್ಪಣ ೧, ತೆಲ್ಲಿಗರೊಳ್ಪಣ ೧, ಜಗತಿಯಬೂವೊಗಳ್ಪಣ ೧, ಅವರೊಕ್ಕೆಲೋಳ್ವೀಸ ೧೦, ಅರವತ್ತುಕೊತ್ತಳಿಯೋಳ್ವೀಸ ೧೦, ನಗರದ ವಶವತ್ತಿಗಳಪ್ಪ ಬಿನುಂಗಿನೋಳ್ವೀಸವಂ ೧೦, ಮಾನ್ಯ ಸಾಮ್ಯದೊಳ್ಪಣ ೧, ಮುಮ್ಮರಿದಂಡ ಪಸುಂಬೆಯೊಳ್ಪಣ ೧, ವೇಹಾರಿಗಳ್ಮುಖ್ಯ ಮಾಗಿಯಯ್ವತ್ತೊಕ್ಕಲುಮಿಱು, ದೇವರ ನಂದಾದೀವಿಗೆಗಂ, ಮಠದಸೊಡರಿಗಂ, ಗಾಣಂಗಳೊಳೆಂಣ್ನೆ ಸೊಂಟಿಗೆ ೧, ಇನಿತುಮನ್ ಅಶೇಷ ನಗರಂ ನೆರೆದಿದ್ದು ಕೊಟ್ಟರು.[ಎಕ.೭ ಶಿಕಾ ೯೪, ಕ್ರಿಶ ೧೧೯೪ ತಾಳಗುಂದ] ವೀಳೆಯದ ಎಲೆ ಮಾರುವವರಿಂದ, ಎಣ್ಣೆತೆಗೆಯುವರು ಮುಂತಾದ ವೃತ್ತಿಯವರು ದತ್ತಿನೀಡಿ ಪ್ರೋತ್ಸಾಹಿಸಿದ ಮಾಹಿತಿ ಲಭಿಸುತ್ತದೆ.

ಸುರಪತಿಯಂತೆ ಸರ್ವ ವಿಭುಧಾಶ್ರಯರಿಂದ ಗಜೇಂದ್ರದಂತೆ ಭಾ
ಸುರತರ ದಾನ ಸಂಪದಧಿಕೋನ್ನತರಿಂದವಿನಂತೆ ಸತ್ಕಳಾ
ಧರ ರಹಿರಾಜನಂತೆ ನಿಖಿಳಕ್ಷಮೆಗಾಸ್ಪದರೆನ್ನೊಡೀಗಳಾ
ದ್ಧೊರೆಯರೊ ಬಳ್ಳಿಗಾವೆಯ ಮಹಾನಗರಂಗಳೊಳೀ ಧರಿತ್ರಿಯೊಳ್

[ಎಕ ೭ ಶಿಕಾ ೧೦೦, ೧೧೩೯ ಬಳ್ಳಿಗಾವೆ]

ಬಳ್ಳಿಗಾವೆಯು ಸುರಪತಿಯಂತೆ ಎಲ್ಲ ವಿದ್ವಾಂಸರಿಗೆ ಆಶ್ರಯದಾತರು ಇಂದ್ರನಗಜೇಂದ್ರದಂತೆ ಪ್ರಕಾಶಮಾನವಾದ ದಾನ ಸಂಪತ್ತಿನಿಂದ ಅಧಿಕ ಉನ್ನತಿ ಪಡೆದವರು ಚಂದ್ರನಹಾಗೆ ಸುಂದರ ಕಲಾವಿದ'ರು, ಸರ್ಪರಾಜನಂತೆ ನಿಖಿಳಕ್ಷಮೆಗೆ ಆಸ್ಪರು ಈ ಭೂಮಂಡಲದಲ್ಲಿ ಬಳ್ಳಿಗಾವೆಯ ಮಹಾನಗರದಲ್ಲಿ ಈ ಜನರಿಗೆ ಸಮಾನರು ಯಾರಿದ್ದಾರೆ ಎಂದು ಪ್ರಶ್ನಿಸಿರುವುದು ಅಲ್ಲಿಯ ಮಹತ್ವವನ್ನು ಸಾರುತ್ತದೆ.

ಪರಹಿತರೇಕವಾಕ್ಯರರಿವಿಂಗೆ ತವರ್ಮ್ಮನೆ ಧರ್ಮದಾಗರಂ
ಸರಸ ಕವೀಶ್ವರಾವಳಿಗೆ ಕೇಳಿಗೃಹಂ ಕಣಿ ಪೆರ್ಮ್ಮ ಗೊರ್ಮ್ಮೆಯುಂ

ಹರಿಹರ ಪಂಕಜಾಸನ ಜಿನಾದಿ ವಿನಿರ್ಮ್ಮಳ ಧರ್ಮರೆಂದೊಡಾ

ದ್ದೊರೆಯರೊ ಬಳ್ಳಿಗಾವೆಯ ಮಹಾನಗರಂಳೊಳೀ ಧರಿತ್ರಿಯೊಳ್ [ಎಕ ೭ ಶಿಕಾ ೧೦೦, ೧೧೨೯ ಬಳ್ಳಿಗಾವೆ]

ಬಳ್ಳಿಗಾವೆ ಮಹಾನಗರದ ಜನತೆಯು ಪರಹಿತರು, ಏಕವಾಕ್ಯರು, ಅರಿವಿಗೆ ತವರುಮನೆ, ಧರ್ಮದಾಗರ, ಸರಸಕವಿಸಮೂಹಕ್ಕೆ ಆಟದಮನೆ, ಹೆಮ್ಮೆಯ ಗಣಿ, ಹರಿ, ಹರ, ಪಂಕಜಾಸನ(ಬ್ರಹ್ಮ) ಮತ್ತು ಜೈನಾದಿಗಳ ನಿರ್ಮಳ ಧರ್ಮರು ಆಗಿರುವ ಇವರಿಗೆ ಭೂಮಂಡಲದಲ್ಲಿ ಸಮಾನರಾರಿದ್ದಾರೆ ಎಂದು ವಿವರಿಸಿರುವರು. ಅವರ ಅಸಾಮಾನ್ಯ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಇಲ್ಲಿ ಮಠದ ಅಭಿಮಾನಕ್ಕೆ ನಾಡಿನ ಜನರ ಅಂತರಂಗದ ಅರಮನೆಯಲ್ಲಿ ಗುರುಮನೆ ನಿರ್ಮಾಣವಾಗುತ್ತದೆ. ಎಂಬುದಕ್ಕೆ ಈ ಬಳ್ಳಿಗಾವಿ ಕುರಿತ ಶಾಸನದ ಸಾಲುಗಳೇ ಆಧಾರ.

ಸೋಮೇಶ್ವರ ದೇವಾಲಯವನ್ನು ಸೋವಿಶೆಟ್ಟಿ ಎಂಬ ಬಣಜಿಗ ವರ್ತಕನೊಬ್ಬನು ೧೧ನೆಯ ಶತಮಾನದಲ್ಲಿ ಕಟ್ಟಿಸಿದ್ದನು. ಅದನ್ನು ಕ್ರಿಶ ೧೧೬೩ರಲ್ಲಿ ಬಳ್ಳಿಗಾವಿಯ ಬಣಜಿಗರು ಜೀರ್ಣೋದ್ದಾರ ಮಾಡಿ ಅದಕ್ಕೆ ಗವರೇಶ್ವರ ಎಂಬ ನಾಮಕರಣ ಮಾಡಿದರು ಗವರೆಗಳು ಎಂದರೆ ಸರಕುಗಳನ್ನು ಸಾಗಿಸಿ ವ್ಯಾಪಾರ ಮಾಡುವವರು. ಕಾರಣ ಈ ದೇವಾಲಯ ವ್ಯಾಪಾರಿಗಳ ಸಮುದಾಯಕ್ಕೆ ಸೇರಿತ್ತು. ಈ ದೇವಾಲಯಕ್ಕೆ ವ್ಯಾಪಾರಿಗಳು, ಅಕ್ಕಸಾಲಿಗರು, ಕರ್ಪೂರ, ಕುಂಕುಮ ಮಾರಾಟಗಾರರು, ಜವಳಿವ್ಯಾಪಾರಿಗಳು, ಮಾಲೆಗಾರರು, ತಂಬುಲಿಗರು ದಾನ ನೀಡಿದ್ದನ್ನು ಕ್ರಿಶ ೧೦೫೪ರ ಶಾಸನವು ವಿವರವಾಗಿ ವರ್ಣಿಸುತ್ತದೆ. ಹೀಗೆ ಎಲ್ಲ ಜಾತಿಯ ವೃತಿಯ ಜನನಗರದ ಒಂದು ದೇವಾಲಯಕ್ಕೆ ಒಂದಾಗಿ ದಾನ ನೀಡಿರುವುದು. ಜಾತಿಪಂಥ ಮತಗಳನ್ನು ಮೀರಿ ಸರ್ವ ಸಮಾಜದ ದೇವಾಲಯ ಮಠಗಳಾಗಿರುವುದು ಸ್ಪಷ್ಟವಾಗುತ್ತದೆ. ಕಾಳಾಮುಖ ಆಚಾರ್ಯರಿಗೆ ಸಂಗೀತ ಮತ್ತು ನೃತ್ಯಗಳು ವರ್ಜ್ಯವಲ್ಲ ಅವು ಅವರ ಯತಿತ್ವದ ಭಾಗವೇ ಆಗಿವೆ. ನೃತ್ಯ ಸಂಗೀತವೆಂದ ತಕ್ಷಣ ಅಶ್ಲೀಲ ಅಸಹ್ಯವೆಂಬ ಭಾವನೆ ಬ್ರಾಹ್ಮಣ್ಯದಲ್ಲಿ ಉಂಟು. ಆದರೆ ಸಂಗೀತ ನೃತ್ಯಗಳು ಜೀವನದ ಭಾಗವಾಗಿಯೋ ಕಾಣುತ್ತೇವೆ.[ಮನ್ವಾಚಾರ, ಕಲವೀರ.; ಲೇಖನ: ಅಬಲೂರು ಮತ್ತು ಕಾಳಾಮುಖ ಪರಂಪರೆ, ಗೌಡರ ಎಸ್.ಪಿ.(ಸಂ) ಕಣಜ, ಪುಟ. ೧೫] ವಾಮಶಕ್ತಿಯು ಎಲ್ಲೋಇರುವ ವೇಶ್ಯಾಗೇರಿಯನ್ನು ದೇವಾಲಯದ ಪ್ರಾಕಾರದಲ್ಲಿ ತಂದಿರುವುದು ಸಮಾಜದ ಎಲ್ಲರಿಗೂ ಸ್ಥಾನಮಾನ ನೀಡಿದ್ದನ್ನು ಎತ್ತಿತೋರಿಸುತ್ತದೆ.

ಹೊಯ್ಸಳರ ಕಾಲದ ಕುಶಲ ಕೆಲಸಗಾರರಲ್ಲಿ ಬಹಳಮಂದಿ ಶೈವ ಪಂಥೀಯರಾಗಿದ್ದರು ಸಾಕಷ್ಟು ಮಂದಿ ಕುಶಲ ಕೆಲಸಗಾರರು ಶೈವಪಂಥದ ಪ್ರಭಲಶಾಖೆಯಾದ ಈ ಕಾಳಾಮುಖ ಪಂಥಕ್ಕೆ ಸೇರಿದ್ದರು. ಬೇಲೂರಿನ ಪ್ರಸಿದ್ಧಶಿಲ್ಪಿ ದಾಸೋಜನ ಮಗ ಚಾವಣ (ಗದುಗಿನ ತ್ರಿಕೂಟೇಶ್ವರ ದೇವಸ್ಥಾನದ ಶಿಲ್ಪಿ) ನಾಗೋಜ (ಬಳ್ಳಿಗಾವೆಯ ಧರ್ಮೇಶ್ವರ ದೇವಸ್ಥಾನ) ಈ ಇಬ್ಬರೂ ಶಿಲ್ಪಿಗಳು ಕಾಳಾಮುಖ ಪಂಥಕ್ಕೆ ಸೇರಿದವರು ಎಂದು ಹೇಳಿರುವರು. ಈ ಕೇಂದ್ರಗಳು ಕಾಳಾಮುಖ ಪಂಥೀಯರ ಕೇಂದ್ರಗಳಾಗಿದ್ದವು[ಕೊಲಿಯರ ಕೆಲ್ಲೆಸನ್ ದಿ ಹೊಯ್ಸಳ ಆರ್ಟಿಸ್ಟದೇರ್ ಐಡಂಟಿಟಿ ಆಂಡ ಸ್ಟೈಲ್ ಪೇಜ್ ೬೧,೬೨] ಇದು ಕುಶಲಕರ್ಮಿಗಳು ಕಾಳಾಮುಖರಾಗಿರುವುದನ್ನು ತಿಳಿಸುತ್ತದೆ. ಹಾವೇರಿ ಜಿಲ್ಲೆಯಾದ್ಯಂತ ಇರುವ ಶಾಸನಗಳ ಕೊನೆಯಲ್ಲಿ ಶಿಲ್ಪಿಗಳ ಉಲ್ಲೇಖಗಳಲ್ಲಿ ಇವರನ್ನು ಕಾಣಬಹುದು.

ಕೆಲವು ಶಾಸನಗಳಲ್ಲಿ 'ರಾಸಿ'/ 'ರಾಶಿ',ಜೀಯ, 'ಎಕ್ಕೋಟಿ', 'ಪಂಡಿತ' ಎಂಬ ಉಪನಾಮಗಳನ್ನು ಹೊಂದಿರುವ ಹೆಸರುಗಳಿಂದ ಕೂಡಿದ ವ್ಯಕ್ತಿಗಳು ಶಿಲ್ಪಿಕಾಕರ್ಮವನ್ನು ಮಾಡಿದ್ದಾರೆ. ಉದಾ– 'ಸೋವರಾಸಿ' [ಎಕ ೧೫ ಚಿತ್ರದುರ್ಗ ೪೭ ಕ್ರಿಶ ೧೦೬೭] ಎನ್ನುವವನು ಪ್ರಾಣಿರೂಪದ ಅಕ್ಷರಗಳನ್ನು ಕೊರೆಯಬಲ್ಲವನೆಂದು ಒಂದುಶಾಸನವೂ, 'ತಯಿಜೀಯ' [ಕಇ ೪ ೭೬ ಸಂ ೩೪ ಕ್ರಿಶ ೧೧೧೯] ಎನ್ನುವವನು 'ದೊಡ್ಡಜೀಯ' [ಎಕ ೯ ಬೇಲೂರು ೫೦೮ ಕ್ರಿಶ ೧೫೫೬] ಎನ್ನುವವನು ಒಂದೊಂದು ಶಾಸನವನ್ನು ಮಾಡಿರುವುದರ ಬಗ್ಗೆ ಹೇಳಲಾಗಿದೆ. ಆದರೆ ಇವರನ್ನು ಕಾಳಾಮುಖರೆಂದು ಕರೆಯಲಾಗಿಲ್ಲ ಆದರೂ ಕಾಳಾಮುಖರಿಗೆ ಸಂಬಂಧಿಸಿದ ಬೇರೆ ಶಾಸನಗಳಲ್ಲಿ ಕಾಳಾಮುಖರ ಹೆಸರುಗಳ ಮೇಲೆ ಈ ಉಪನಾಮಗಳು ಹತ್ತಿರುವುದು ಸರ್ವವಿಧಿತ ಆದ್ದರಿಂದ ಈ ಉಪನಾಮಗಳನ್ನು ಹೊಂದಿರುವ ಈ ಶಿಲ್ಪಿಗಳನ್ನು ಕಾಳಾಮುಖ ವಂಶಕ್ಕೆ ಅಥವಾ ಮನೆತನಕ್ಕೆ ಸೇರಿದ ಕುಶಲ ಕೆಲಸಗಾರರು ಎಂದು ಹೇಳಬಹುದೆನ್ನಿಸುತ್ತದೆ.[ಕುಮಾರಸ್ವಾಮಿ ಕೆ ಎಸ್.; ಬೃಹತ್ ಕರ್ನಾಟಕದ ಶಿಲ್ಪಾಚಾರಿಯರ ಚರಿತೆ, ಪುಟ.೨೫೮] ಇವರ ಅಭಿಮತ ಸತ್ಯಕ್ಕೆ ಹತ್ತಿರವಾದುದು ಎನಿಸುತ್ತದೆ.

ಡಾ. ಎಸ್ ಕೆ ಜೋಷಿಯವರು ಪಾಂಚಾಲ ಪಂಡಿತರು ಕಾಳಾಮುಖ ಪಂಡಿತರಾಗಿ, ಸ್ಥಾನಪತಿಗಳಾಗಿ, ಸ್ಥಪತಿಗಳಾಗಿ ಸಮಾಜದಲ್ಲಿ ಪ್ರತಿಷ್ಠರಾದ ಬಗ್ಗೆ ಐತಿಹಾಸಿಕ ದಾಖಲೆಗಳು ಸಾಕಷ್ಟು ದೊರೆಯುತ್ತವೆ. [ಜೋಷಿ ಎಸ್ ಕೆ.; ಕಾಳಿಕಾಮಾತೆ

ಆರಾಧಕ ವಿಶ್ವಕರ್ಮಕರು 'ಸಂಯುಕ್ತ ಕರ್ನಾಟಕ' ಸಾಪ್ತಾಹಿಕ ಸೌರಭ ತಾ.೧೦-೪-೮೩]

ಶಾಂತನಿರಂಜನರ ಕೃತಿಯಲ್ಲಿ ಮೂರ್ಜಾವಿದೇವನು/ಚಿಕ್ಕೆಶ್ವರನು ಓಜರಿಗೆ, ಪಂಚಬ್ರಹ್ಮರಿಗೆ, ಪಂಚಾಳ ಕೆಲಸಗಾರರಿಗೆ ಗುರುವಾಗಿದ್ದನೆಂದು ಹೇಳಲಾಗಿದೆ. [ಬಸವಾರಾಧ್ಯ ಎನ್ (ಸಂ).; ಅಬ್ಬಲೂರು ಚರಿತೆ ೫-೫೧.] ಕಾಳಾಮುಖರು ವಾಸ್ತುಶಿಲ್ಪಿಗಳಾಗಿದ್ದರು ಇವರಲ್ಲಿ ಶಿಲ್ಪ ವಾಸ್ತುಶಾಸ್ತ್ರಗಳನ್ನು ಓದಿಕೊಂಡಿದ್ದರೆಂದು, ಶಿವಶಕ್ತಿ ಮತ್ತು ಮಹದೇವಜೀಯ ಎಂಬ ಕಾಳಾಮುಖರನ್ನು 'ಪ್ರತಿಮಾ ಲಕ್ಷಣಯುಕ್ತರೆಂದು, ವಿದಿತ ಪ್ರಾಸಾದಸಲ್ಲಕ್ಷಣಾನ್ವಿತರೆಂದು, ಶಾಸನದಲ್ಲಿ ವರ್ಣಿಸಿದ ಬಗೆ, ವಾಮಶಕ್ತಿಮುನಿ ಪ್ರತಿಮಾ ದೋಷಪೋಷಣ 'ಕುಂಡ ಮಂಡಲ ವಿಧಾನ' 'ಲಿಂಗ ಪ್ರತಿಷ್ಠಾ ಕ್ರಮಗಳನ್ನು ತಿಳಿದಿದ್ದನು. ಭುವನಕೋಶ ಎಂಬ ಶಿಲ್ಪಶಾಸ್ತ್ರ ಕೃತಿ ಓದಿಕೊಂಡಿದ್ದನು, ಭೂಬೇಧ ಪರೀಕ್ಷೆ, 'ದೇವನಿಹವಪ್ರಾಸಾದ' ಮೊದಲಾದ ವಿಚಾರ ತಿಳಿದವನಾಗಿದ್ದರ ಕುರಿತು ಉಲ್ಲೇಖಿಸಿರುವರು [ಕುಮಾರಸ್ವಾಮಿ ಎಸ್ ಕೆ.; ಬೃಹತ್ ಕರ್ನಾಟಕದ ಶಿಲ್ಪಾಚಾರಿಯರ ಚರಿತೆ, ಪುಟ. ೨೫೯]

ಕಾಳಾಮುಖ ಗುರುಗಳ ವಿದ್ವತ್ ಕುರಿತು ಸಾಕಷ್ಟು ಶಾಸನಗಳು ಮಾಹಿತಿ ಒದಗಿಸುತ್ತವೆ. ಕಲಕೇರಿ ಶಾಸನವು . . . .ಜಿತೇಂದ್ರಿಯರೆಂದು ಯೋಗ ಪಂಕರುಹದಿನೇಶರೆಂದು ಸಕಳಾಗಮಕೋವಿದರೆಂದು. . . . ಇನ್ತೆಸಿದ ಕಾಳಾಮುಖ ನೈಷ್ಟಿಕ ತಪೋಧನರ್ಗ್ಗವಲ್ಲಿಯ . . . .ಎಂದು ಉಲ್ಲೇಖಿಸಿದೆ. [ಎಸ್‌ಐಐ, ೨, ಶಾ.ಸಂ.೪೪] ಹರಳಹಳ್ಳಿಯ ಶಾಸನದಲ್ಲಿ ಇವರನ್ನು ಕುರಿತು "ಸಕಲ ಧರ್ಮ ಪ್ರತಿಳಾರುಂ ಸಕಳಬ್ರತನಿರತರಪ್ಪ ಶ್ರೀಮದ್ರಾಜಗುರು ಗೊಟ್ಟಗಡಿಯ ಸೋಮನಾಥ ದೇವರ ಸ್ಥಾನಾಚಾರ್ಯರು" ಎಂದು ವರ್ಣಿಸಿದೆ. [ಎಸ್‌ಐಐ, ೨೦, ಶಾ.ಸಂ.೧೮]

ಬಳ್ಳಿಗಾವೆಯ ದಾನಶಾಸನಗಳಲ್ಲಿ ಚಕ್ರವರ್ತಿಗಳೇ ನೇರವಾಗಿ ದಾನವನ್ನು ಕೊಟ್ಟಿರುವುದು ಇಲ್ಲಿ ಗಮನಿಸಬೇಕಾದ ಅಂಶ ಕಲ್ಯಾಣಿಚಾಲುಕ್ಯ ಚಕ್ರವರ್ತಿಗಳಾದ ಜಯಸಿಂಹ, ಜಗದೇಕಮಲ್ಲ, ಎರಡನೆಯ ಸೋಮೇಶ್ವರ, ಭುವನೈಕ್ಯಮಲ್ಲ, ಆರನೆಯ ವಿಕ್ರಮಾದಿತ್ಯ, ತ್ರಿಭುವನಮಲ್ಲ, ಮೂರನೆಯ ಸೋಮೇಶ್ವರ, ಕಳಚೂರಿ ದೊರೆಗಳಾದ ಬಿಜ್ಜಳ, ರಾಯಮುರಾರಿ ಸೋಯಿದೇವ, ಸಂಕಮ ಸೇವುಣರ ದೊರೆ ಸಿಂಘಣ, ಹೊಯ್ಸಳ ದೊರೆ ಎರಡನೆಯ ಬಲ್ಲಾಳ ಇವರ ದಾನಶಾಸನಗಳನ್ನು ಕಾಣುತ್ತೇವೆ.

ಅಲ್ಲದೇ ಮಹಾಮಂಡಲೇಶ್ವರ, ದಂಡನಾಯಕರು, ಶ್ರೀಮಂತವರ್ಗದವರೂ ದಾನನೀಡಿರುವುದನ್ನು ಶಾಸನಗಳಲ್ಲಿ ಕಾಣುತ್ತೇವೆ.

ಅಧ್ಯಾಯ : ೬

ಕಾಳಾಮುಖರ ಅಸ್ತಿತ್ವ

೬.೧ ಪ್ರಸ್ತುತ ಕಂಡು ಬರುವ ಕಾಳಾಮುಖರ ಪರಂಪರೆ.

೬.೨ ವೀರಮಾಹೇಶ್ವರ ಪರಂಪರೆ, ಪುರವಂತಿಕೆ.

ಅಧ್ಯಾಯ – ಆರು

ಕಾಳಾಮುಖರ ಅಸ್ತಿತ್ವ

೬.೧ ಪ್ರಸ್ತುತ ಕಂಡು ಬರುವ ಕಾಳಾಮುಖರ ಪರಂಪರೆ

ಕನ್ನಡ ನಾಡು ಕೆಲವು ಧರ್ಮಗಳಿಗೆ ಜನ್ಮ ಭೂಮಿಯೂ ಹಲವು ಧರ್ಮಗಳಿಗೆ ಆಶ್ರಯ ಸ್ಥಾನವೂ ಆಗಿದ್ದು, ಆ ಎಲ್ಲಾ ಧರ್ಮಗಳ ಏಳು ಬೀಳುಗಳನ್ನು ಕಂಡಿದೆ. ಆಯಾ ಕಾಲಕ್ಕನುಗುಣವಾಗಿ ಧರ್ಮಗಳು ಮುಖ್ಯವಾಹಿನಿಯಲ್ಲಿರುತ್ತವೆ. ಯಾವುದೇ ಧರ್ಮ ಮುಖ್ಯವಾಹಿನಿಗೆ ಬರಲು ಆರ್ಥಿಕ ಸಬಲವೇ ಪ್ರಮುಖವಾಗಿದೆ.ಅದರೊಂದಿಗೆ ಸಾಮಾಜಿಕ ಹಿಡಿತವನ್ನು ಸಾಧಿಸಲು ಯತ್ನಿಸುತ್ತದೆ. ಸಾಮಾಜಿಕ ಹಿಡಿತ ಸಾಧಿಸಲು ಆರ್ಥಿಕ ಮೂಲಗಳಾದ ಕೃಷಿ, ಕೈಗಾರಿಕೆ, ವ್ಯಾಪಾರ ಮುಂತಾದವುಗಳ ಮೇಲೆ ಹಿಡಿತ ಸಾಧಿಸಿಕೊಂಡು ಧರ್ಮ ಪ್ರಚಾರದೊಂದಿಗೆ ಪ್ರಭುದ್ಧಗೊಳಿಸುತ್ತದೆ. ಈ ಸಂದರ್ಭದಲ್ಲಿ ಸಂಘರ್ಷಗಳು, ಪರಧರ್ಮಸಹಿಷ್ಣುತೆ ಇತ್ಯಾದಿ ಸಂಭಾಷಣೆಗಳು ನಡೆಯುತ್ತವೆ. ಮತ್ತು ರಾಜ ಪ್ರಭುತ್ವದ ಆಶ್ರಯ ಲಭಿಸಿದರಂತೂ ಆರ್ಥಿಕ ಸಹಾಯದೊಂದಿಗೆ ಅನ್ಯಧರ್ಮಗಳ ಮೇಲೆ ದಾಳಿಗೂ ಅಂಜುವುದಿಲ್ಲ. ಇದರಿಂದ ಸಮಾಜದಲ್ಲಿ ಸಹಿಸಿಕೊಳ್ಳಲಾರದ ಪರಿಣಾಮವನ್ನು ಕಾಣಬಹುದು. ಅನೇಕ ವೇಳೆ ಬೌದ್ಧಿಕವಾದ ಸಂಘರ್ಷಗಳೂ ನಡೆದಿವೆ. ಜೊತೆಗೆ ದೈಹಿಕ ಸಂಘರ್ಷಗಳು ನಡೆದಿವೆ. ಇಂತಹ ಸಂದರ್ಭದಲ್ಲಿ ಧರ್ಮದ ಶ್ರೇಷ್ಠತೆಯನ್ನು ವ್ಯಕ್ತ ಪಡಿಸಲು ಅನೇಕ ಘಟನೆಗಳು ನಡೆದು ಬಂದಿರುವುದು. ಸಾಹಿತ್ಯ ಕೃತಿಗಳಲ್ಲಿ ಮತ್ತು ಶಾಸನಗಳಲ್ಲಿ ಕಂಡು ಬಂದಿದೆ. ಬೌದ್ಧ–ಜೈನ ಧರ್ಮವಿರಬಹುದು. ಬೌದ್ಧ–ಶೈವ, ಜೈನ–ಶೈವ, ಜೈನ– ವೈಷ್ಣವ, ಶೈವ–ವೈಷ್ಣವವಿರಬಹುದು. ಇವು ಇತಿಹಾಸದುದ್ದಕ್ಕೂ ನಡೆಯುತ್ತಾ ಬಂದಿವೆ. ಅದರಂತೆ ಮತಾಂತರಗಳು ಸಹಿತ. ಧರ್ಮ ಸಮಾನತೆ ಕಂಡು ಬರುವುದು ಅಪರೂಪವಾಗಿದೆ. ಅನೇಕ ರಾಜರು ಪರಧರ್ಮ ಸಹಿಷ್ಣುಗಳಾಗಿದ್ದರೆಂಬುದನ್ನು ಮರೆಯುವಂತಿಲ್ಲ. ಆದರೆ ದೇಗುಲಗಳ ಪರಿವರ್ತನೆ ಮೂರ್ತಿಗಳ ಬದಲಾವಣೆ ಇವು ಸಾಮಾಜಿಕಸ್ತರದಲ್ಲಿ ಸಂಘರ್ಷಗಳನ್ನು ಹುಟ್ಟು ಹಾಕಿರುವುದನ್ನು ಕಾಣುತ್ತೇವೆ. ಈ ಹಿನ್ನಲೆಯಲ್ಲಿ ಅನೇಕ ಬಸದಿಗಳು ದೇವಾಲಯಗಳಾಗಿರುವುದು ಕಂಡು ಬಂದಿವೆ. ಇವೆಲ್ಲವುಗಳ ಮಧ್ಯೆ ಐತಿಹ್ಯಗಳು ಮಹತ್ವದ ಪಾತ್ರವಹಿಸಿವೆ.

ಐತಿಹ್ಯವೆಂದರೆ ವ್ಯಕ್ತಿ, ಸ್ಥಳ ಅಥವಾ ಘಟನೆಯೊಂದನ್ನು ಕುರಿತಂತೆ ಸಾಂಪ್ರದಾಯಿಕ ಮೂಲವಸ್ತುಗಳೊಡನೆ ನಿಜಾಂಶವೊಂದರ ಮೇಲೆ ಆಧಾರಿತವಾಗಿದೆಯೆಂದು ಭಾವಿಸುವ ಕಥನವೇ ಆಗಿದೆ. ಚಾರಿತ್ರಿಕವೆಂದು ಸಾಮಾನ್ಯವಾಗಿ ಅಂಗಿಕರಿಸಿದ್ದು ಪರಂಪರಾಗತವಾದ ವಿಶೇಷ ಘಟನೆ ಇಲ್ಲಿನ ಸಂಗತಿಗಳನ್ನು ಇತಿಹಾಸದ ಸಂಗತಿಗಳಂತೆ ತಾಳೆ ನೋಡಲು ಆಗುವುದಿಲ್ಲವಾದರೂ ವಸ್ತು ಸಾಕಷ್ಟು ಮೂಲದ್ದಾಗಿರುತ್ತದೆ ಚಾರಿತ್ರಿಕ ಸಂಗತಿಯೊಂದು ಕ್ರಮೇಣ ಅಪೂರ್ವವೂ ಅದ್ಭುತವೂ ಆದ ಸನ್ನಿವೇಶಗಳನ್ನು ಒಳಗೊಳ್ಳುತ್ತ ತಲೆಮಾರುಗಳ ಮೂಲಕ ಹರಿದು ಬರುವಾಗ ಐತಿಹ್ಯ ಬಹುಶಃ ರೂಪುಗೊಳ್ಳುತ್ತದೆ. ಇದರಲ್ಲಿ ಚಾರಿತ್ರಿಕ ಅಂಶವೆಷ್ಟು, ಕಾಲ್ಪನಿಕ ಅಂಶ ಎಷ್ಟೆಂದು ಗೆರೆಯೆಳೆದು ತೋರಿಸಲು ಅಸಾಧ್ಯ. ಆದ್ದರಿಂದ ಇವು ಘಟನೆಗಳ ಪಳಿಯುಳಿಕೆಗಳಾಗುತ್ತವೆ. ಐತಿಹ್ಯಗಳು ಧಾರ್ಮಿಕ, ಪುಣ್ಯಕ್ಷೇತ್ರಗಳಲ್ಲಿ ಕಂಡುಬರುತ್ತವೆ. ಇವುಗಳನ್ನು ಆಸ್ತಿಕರು ಇಂದಿಗೂ ನಂಬಿರುವರು. ಧರ್ಮದ ಅಡಿಪಾಯವೇ ನಂಬಿಕೆ. ಇವು ನಾವು ಕಟ್ಟುವ ಇತಿಹಾಸಕ್ಕೆ ಪೂರಕವಾಗಿರುತ್ತವೆ ಹಾಗಾಗಿ ಇವುಗಳನ್ನು ಅಲಕ್ಷಿಸುವಂತಿಲ್ಲ. ವಿಶೇಷವಸ್ತುವೊಂದರ ವಿಶೇಷ ಗುಣವನ್ನು ಬಣ್ಣಿಸುವ ಐತಿಹ್ಯಗಳೂ ಇರುತ್ತವೆ ವಸ್ತು ಇರುವ ತನಕ ಅದಕ್ಕೆ ಸಂಬಂಧಿಸಿದ ಐತಿಹ್ಯ ಜೀವಂತವಿರುತ್ತದೆ. ಕಾರಣಾಂತರದಿಂದ ಕಣ್ಮರೆಯಾದರೆ ಐತಿಹ್ಯವೂ ಕಣ್ಮರೆಯಾಗುತ್ತದೆ ಕಾರಣ ಅದು ಇರುವಾಗಲೇ ಅಸ್ತಿತ್ವ ಕಂಡುಕೊಳ್ಳಬೇಕಾಗಿದೆ.

ಧರ್ಮದ ವ್ಯವಸ್ಥೆಯೂ ಅಳಿದರೆ ಅರಸನ ಅಸ್ತಿತ್ವವೇ ಅಲುಗಾಡುತ್ತಿತ್ತು ಅರಸ ಪ್ರಭುತ್ವಕ್ಕೆ ಮತ್ತೊಂದು ರೀತಿಯಲ್ಲಿ ಇಡೀ ರಾಜ್ಯಾಡಳಿತವೇ ಕುಸಿದು ಬೀಳುವ ಭಯ ಉಂಟಾಗುತ್ತಿತ್ತು. ಧಾರ್ಮಿಕ ವ್ಯವಸ್ಥೆಯು ಸಾಮಾಜಿಕ ಮತ್ತು ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಯನ್ನು ಹಿಡಿದಿಟ್ಟಿರುವುದು ಮುಖ್ಯ ಕಾರಣವಾಗಿದೆ. ಅರಸನು ತನ್ನ ಅಸ್ಥಿತ್ವವನ್ನು ಉಳಿಸಿಕೊಳ್ಳಲು, ಮುಂದುವರೆಸಲು ನಿರ್ದಿಷ್ಟ ಧರ್ಮಕ್ಕೆ ಬದ್ಧನಾಗಿ ಕಾರ್ಯ ನಿರ್ವಹಿಸುವುದು ಕಂಡು ಬಂದಿದೆ.

ತಾಳಿಕೋಟೆ ಶಾಸನ ಕ್ರಿ.ಶ ೧೧೮೪ರಲ್ಲಿ ಪರಿಯಳಿಗೆ ಅಣಿಲೆವಾಡ ಉಣಕಲ್ಲು ಸಂಪಗಾವಿ ಅಬ್ಬಲೂರು ಮಾರುಡಿಗೆ ಅಣಂಪೂರು ಕರಹಾಡ, ಕೆಂಬಾವಿ ಬಮ್ಮಕೂರು ಮೊದಲಾಗಿ ಅನನ್ತ ದೇಶಾನ್ತರದಲಿದಿರಾದ ಪರಸಮಯಿಗಳಂ ಪಡಲ್ವಡಿಸಿ ಲೋಕಮನಾಂಪಂಗೊಳ್ಸಿ ಬಸಿದಿಗಳಂ ಹೊಸೆದುಮುಕ್ಕಿ ಶಿವಲಿಂಗಸಿಂಹಾಸನಮಂ ಕಣ್ಗೊಳ್ಗಿಸಿ ಚಲಮಂ ಮೆರೆದು ಧೀರರೊಳು ನೆರೆದ ಸ್ವರ್ಗ ಮರ್ತ್ಯ

ಪಾತಾಳದೊಳನಂಗಾರಿಯಂ ಹೆಮ್ಮಯ್ಯಂ. . .(ಕ.ವಿ.ವಿ.ಶಾಸನ ಸಂಪುಟ ೧೦. ಶಾ.ಸಂ ೮೪)ಎಂದು ಸಾಲುಸಾಲು ಜೈನ ಬಸದಿಗಳಲ್ಲಿರುವ ಜಿನವಿಗ್ರಹಗಳನ್ನು ಹಾಳು ಮಾಡಿರುವುದನ್ನು ಪ್ರತಿಷ್ಠೆಯ ಕೆಲಸವೆಂಬಂತೆ ಹೆಮ್ಮೆಯಿಂದ ಶಾಸನಗಳಲ್ಲಿ ದಾಖಲಿಸಿದ್ದಾರೆ. ನಾಡಿನಲ್ಲಿರುವ ಪರಿಯಳಿಗೆ, ಅಣಲೊಡ, ಉಣುಕಲ್ಲು, ಸಂಪಗಾವಿ, ಅಬ್ಬಲೂರು, ಮಾರುಡಿಗೆ, ಅಣಂಪೂರು ಕರಹಾಡ, ಕೆಂಬವಿ, ಬಮ್ಮೊಕೂರು ಮೊದಲಾದ ಊರುಗಳಲ್ಲಿದ್ದ ಬಸದಿಗಳಲ್ಲಿನ ಜಿನಬಿಂಬಗಳನ್ನು ಕೆಡವಿ ಶಿವಲಿಂಗ ಪ್ರತಿಷ್ಠಾಪಿಸಿದ್ದನ್ನು ವಿವರಿಸುತ್ತದೆ. ಇದು ಅಬ್ಬಲೂರಿನ ಜಿನಬಿಂಬಗಳನ್ನು ಕೆಡವಿ ಶಿವಲಿಂಗ ಪ್ರತಿಷ್ಠಾಪಿಸಿದ್ದನ್ನು ವಿವರಿಸುತ್ತದೆ. ಇದು ಅಬ್ಬಲೂರಿನ ಜಿನಬಿಂಬ ಒಡೆದ ಬಗ್ಗೆ ಸೂಚಿಸುತ್ತದೆ. ಇದು ಪಣವೊಡ್ಡಿ ನಡೆದ ಶಿರಸ್ಸು ಪವಾಡವೆಂಬುದು ಶಾಸನ ಶಿಲ್ಪ ಸಮೇತ ಕಂಡು ಬರುತ್ತದೆ. ಈ ರೀತಿ ನಡೆದಿರುವ ಕಥೆಗಳು ಪುಲಿಗೆರೆಯ ಆದಯ್ಯನ ಪ್ರಸಂಗವನ್ನು ಗಮನಿಸಬಹುದು. ಆಗ ಪುಲಿಗೆರೆ ನಾಡಿನಲ್ಲಿ ೩೦೦ರಲ್ಲಿ ಏಳು ನೂರಕ್ಕೂ ಹೆಚ್ಚು ಬಸದಿಗಳಿದ್ದವೆಂದು ತಿಳಿದು ಬರುತ್ತದೆ. ಆದಯ್ಯನ ಜನನದ ವೇಳೆ ಜೈನಮತ ಉಚ್ರಾಯನ ಸ್ಥಿತಿಯಲ್ಲಿತ್ತು ಎಂದು ತಿಳಿದು ಬರುತ್ತದೆ. [ನಾಗಭೂಷಣ ಸಿ.; ಏಕಾಂತರಾಮಯ್ಯ ಮತ್ತು ಆದಯ್ಯ, ಒಂದು ತುಲನಾತ್ಮಕ ಅಧ್ಯಯನ, ಪುಟ.೧೦೧] ಇಲ್ಲಿ ಅಷ್ಟು ಬಸದಿಗಳಿರುವ ಪ್ರಸಂಗವೇನಿರಲಿಲ್ಲ ಏಕಾಂತರಾಯ್ಯನ ಪವಾಡ ಸನ್ನಿವೇಶದಲ್ಲಿ ಎನ್ನಬಹುದು.

ವೀರಶೈವ ಧರ್ಮದಲ್ಲೇ ಒಂದು ಸಮಾಜಮುಖಿಯಾದ ಪಂಥವಿದ್ದರೆ ಇನ್ನೊಂದಡೇ ಉಗ್ರ ಪಂಥದ ಏಕಾಂತ ರಾಮಯ್ಯನವರ ಶಿವಭಕ್ತಿಯ ಪಾರಮ್ಯವು ಇತ್ತು . ರಾಮಯ್ಯ ಮೂಲತಃ ಕಾಳಾಮುಖ ಮಠದ ಪರಂಪರೆಯವನು. ೧೨ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಬಹುಭಾಗ ಪ್ರಬಲರಾದ್ದವರು ಕಾಳಾಮುಖರು. ಆದರೂ ವೀರಶೈವ ಧರ್ಮದ ಒಂದು ಅನನ್ಯ ಪಂಥವಾಗಿ ಕಾಳಾಮುಖರು ಇದ್ದರು. [ಕೆಳಗಿನಮನಿ ಶಿವಾನಂದ.; ಏಕಾಂತರಾಮಯ್ಯ ಮತ್ತು ಶಿವಾಲಯ ಸಂಸ್ಕೃತಿ, ಕಮ್ಮಾರ ಲಿಂಗರಾಜ (ಸಂ).; ಸಂಸ್ಕೃತಿ ಪರಂಪರೆ, ಪುಟ.೧೯] ಇವರು ತಮ್ಮ ಲೇಖನದಲ್ಲಿ ಏಕಾಂತರಾಮಯ್ಯ–ಕಾಳಾಮುಖ ಪರಂಪರೆಯವನೆಂಬುದನ್ನು ತಿಳಿಸಿರುವರು.

ಸೋಮನಾಥನ ದಯದಿಂದ ಜನಿಸಿದ ಮಗನನ್ನು ರಾಮಯ್ಯನೆಂದು ಕರೆದರು ಸದಾ ಏಕಾಂತದಲ್ಲಿ ಧ್ಯಾನಸಕ್ತನಾಗಿ ಶಿವ ಸಾಧನೆಯಲ್ಲಿ ತನ್ಮಯನಾಗಿರುವ ರಾಮಯ್ಯನ ಹೆಸರಿನ ಹಿಂದೆ 'ಏಕಾಂತ' ಎಂಬ ಅನ್ವರ್ಥಕನಾಮ ಅಂಟಿಕೊಂಡಿತು.

ಹೀಗಾಗಿ ರಾಮಯ್ಯ ಸದಾ ಕಾಲ ಲಿಂಗ ಪೂಜೆ ಶಿವೋಪಾಸನೆಯಲ್ಲಿ ಮಗ್ನನಾಗಿರುತ್ತಿದ್ದನೆಂದು ತಿಳಿದು ಬರುತ್ತದೆ. ಕಲ್ಯಾಣ, ಶಿವಪುರ, ಪುಲಿಗೆರಿ ಬಳ್ಳಿಗಾವಿ, ಬನವಾಸಿ, ರೇವಣಸಿದ್ಧಗಿರಿ, ಮುತ್ತಗಿ, ಹಿರೇಜಂಬೂರುಗಳನ್ನು ಸಂದರ್ಶಿಸುತ್ತಾ ಅಬ್ಬಲೂರಿಗೆ ಬಂದು ನೆಲೆಸಿದನೆಂದು ತಿಳಿದು ಬರುತ್ತದೆ. [ಕೆಳಗಿನಮನಿ ಶಿವಾನಂದ.; ಏಕಾಂತರಾಮಯ್ಯ ಮತ್ತು ಶಿವಾಲಯ ಸಂಸ್ಕೃತಿ, ಕಮ್ಮಾರ ಲಿಂಗರಾಜ (ಸಂ).; ಸಂಸ್ಕೃತಿ ಪರಂಪರೆ, ಪುಟ. ೧೦] ಏಕಾಂತರಾಮಯ್ಯನು ಕಾಳಾಮುಖ ಶೈವ ಪರಂಪರೆಗೆ ಸಂಬಂಧಪಟ್ಟವನು ಎಂಬುದಕ್ಕೆ ಆಧಾರಗಳಿವೆ. ಪ್ರಾಚೀನ ಕಾಳಾಮುಖ ಯತಿಗಳಿಗೆ 'ಏಕಾಂತ ನಿವಾಸಿ' ಎಂಬ ವಿಶೇಷಣ ಇರುವುದನ್ನು ಆಂಧ್ರಪ್ರದೇಶದ ಆಲಂಪುರ, ಶ್ರೀಶೈಲ ಮುಂತಾದ ಶಾಸನಗಳಿಂದ ತಿಳಿದುಬರುತ್ತದೆ. ಕರ್ನೂಲ್ ಜಿಲ್ಲೆಯ ಸಾತಾನಿಕೊಟದ ಶಾಸನದಲ್ಲಿರುವ 'ಏಕಾಂತನಿವಾಸಿನ್ ಲೋಕಾಶೀಲಾಭಿಮಾನನಾದ ಗುರುಮಹೇಶ್ವರ ಕಾಳಾಮುಖ ಅಟ್ಟುವನ್' ಎಂಬ ಉಲ್ಲೇಖವಿದೆ. ಏಕಾಂತನಿವಾಸಿ ಎಂಬ ವ್ಯಕ್ತಿಯನ್ನು ಹೆಸರಿಸುವ ಕ್ರಿಶ ೯ನೆಯ ಶತಮಾನದ ಕನ್ನಡಲಿಪಿಯಲ್ಲಿರುವ ಎರಡು ಶಾಸನಗಳು ಆಲಂಪುರದಲ್ಲಿವೆ. [ಆಚಾರಿ ಮಂಜುಳಾ.; ಕಾಳಾಮುಖ ಪರಂಪರೆ ಮತ್ತು ಮೂರುಜಾವಿ ಪೀಠ ಸಾಂಸ್ಕೃತಿಕ ಅಧ್ಯಯನ, ಪಿಎಚ್.ಡಿ ಸಂಶೋಧನಾ ಗ್ರಂಥ, ಪುಟ.೧೬೨] ಇವರ ಪ್ರಕಾರ ರಾಮಯ್ಯನು ಕಾಳಾಮುಖನಾಗಿರುವ ಬಗ್ಗೆ ತಿಳಿಸುತ್ತಾರೆ ಏಕಾನ್ತ ಎಂದು ಅಬ್ಬಲೂರು ಶಾಸನದಲ್ಲಿ, ಅಬ್ಬಲೂರುಚರಿತ್ರೆ ಮುಂತಾದ ಏಕಾಂತರಾಮಯ್ಯನ ಕುರಿತಿರುವ ಕೃತಿಗಳಲ್ಲಿರುವುದು ಗೋಚರವಾಗುತ್ತದೆ.

ಬ್ರಹ್ಮೇಶ್ವರ ದೇವಾಲಯದಲ್ಲಿ ಪಣಕ್ಕೆ ಒಪ್ಪಿ ಇದಕ್ಕೆ ಪ್ರತಿಯಾಗಿ ಹುಲಿಗೆಯ ಹೊನ್ನಿತಂದೆಗಳು, ಪೈಚಿತಂದೆಗಳು ಬಾಗಿಯ ಬುಕದೇವಯ್ಯ, ಕಲ್ಲಿನಾಥ ಭೀಮಯ್ಯ ಮುಂತಾದ ವೀರ ಮಹೇಶ್ವರರ ಸಮುಖದಲ್ಲಿ ರಾಮಯ್ಯನು ತನ್ನ ಸ್ವಖಡ್ಗದಿಂದ 'ಚಕ್ಕನೆ ಹುಲ್ಲು ಕಟ್ಟನರಿವಂತೆ ದಿಂದಾಗಳು ತರದೀ ಶಾಂಘ್ರಿಯೊಳಿರೆ ಶಂಕರ ಗಣಕ್ಕನಂದಮಂ ಮಾಡಿದಂ' ಎಂದು ಶಾಸನ ವರ್ಣಿಸುತ್ತದೆ. ಹುಲಿಗೆರಿ–ಸೋಮನಾಥ, ಅಣ್ಣಿಗೇರಿ–ಅಮೃತನಾಥ, ಕೆಂಭಾವಿ–ಭೋಗನಾಥ, ಕಪ್ಪಡಿ–ಸಂಗಮೇಶ್ವರ, ಅವುಂದ–ನಾಗನಾಥ ಸೊನ್ನಲಿಗೆ ಸಿದ್ದರಾಮ, ಹಂಪೆ–ವಿರಾಪಾಕ್ಷ, ದೇವರುಗಳಲ್ಲಿ ಅರ್ಚನೆ ಮಾಡಿ ಆಶಿರ್ವಾದ ಪಡೆದು ಅಂತರವಳ್ಳಿಯ ಮಾರ್ಗವಾಗಿ ಬಂದು ಅಬ್ಬಲೂರು ಬ್ರಹ್ಮೇಶ್ವರನ ಮುಂದೆ ಇಳುಹಿ ಪೂಜೆ ಕೈಗೊಂಡು ಮರಳಿ ಶಿರಸ್ಸು ಪಡೆದನು.

ಏಕಾಂತ ರಾಮಯ್ಯನ ಪವಾಡ

ವೀರಶೈವ ಧರ್ಮದಲ್ಲಿ ಒಂದು ಸಮಾಜಮುಖಿಯಾದ ಪಂಥವಿದ್ದರೆ ಇನ್ನೊಂದು ಉಗ್ರ ಪಂಥದ ಏಕಾಂತರಾಮಯ್ಯನವರ ಶಿವಭಕ್ತಿಯ ಪಾರಮ್ಯವು ಇತ್ತು. ರಾಮಯ್ಯ ಮೂಲತಃ ಕಾಳಾಮುಖ ಮಠದ ಪರಂಪರೆಯವನು ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಬಹುಭಾಗ ಪ್ರಬಲರಾಗಿದ್ದವರು ಕಾಳಾಮುಖರು. ಆದರೂ ಶೈವ ಧರ್ಮದ ಒಂದು ಅನನ್ಯ ಪಂಥವಾಗಿ ಕಾಳಾಮುಖರು ಇದ್ದರು. ಡಾ.ಎಂಎಂಕಲ್ಬುರ್ಗಿಯವರು ಅಭಿಪ್ರಾಯ ಪಡುವಂತೆ ಹನ್ನೆರಡನೆಯ ಶತಮಾನದ ಆದಿ ಭಾಗದಲ್ಲಿ ಗುಲ್ಬರ್ಗ ಜಿಲ್ಲೆಯ ಭಾಗದಲ್ಲಿ ಅಭಿನವ ಪಾಶುಪತ ಅಥವಾ ಲಾಕುಳ ಹೊಸ ಸಮಯ ಎಂಬ ಪಂಥವೊಂದು ಲಕುಳೀಶ ಪಾಶುಪತನೇ ಆಗಿದ್ದನು. ಬಹುಶಃ ಇವರಲ್ಲೇ ಉಗ್ರಶಿವಭಕ್ತನ ರೂಪ ತಳೆದಿರಬಹುದು. ಅವರೆಲ್ಲ ವಚನಕಾರರ ಜೊತೆ ಸಂಬಂಧ ಹೊಂದಿರುವವೆಂದು ಕಾಳಮುಖದ ಹೊರಗೆ ವಿಭಿನ್ನ ಶೈವ ಪ್ರಬೇಧಗಳು ಬೆಳೆದಿದ್ದವು. [ಕೆಳಗಿನಮನಿ ಶಿವಾನಂದ.; ಏಕಾಂತರಾಮಯ್ಯ ಮತ್ತು ಶಿವಾಲಯ ಸಂಸ್ಕೃತಿ, ಕಮ್ಮಾರ ಲಿಂಗರಾಜ (ಸಂ).; ಸಂಸ್ಕೃತಿ ಪರಂಪರೆ, ಪುಟ.೧೯]

ಭೋಗಾವಿಯ ಒಡ್ಡಿನ ಕರೆಯ ದಂಡೆಯ ಮೇಲೆ ಕಲ್ಲೇಶ್ವರ ದೇವಸ್ಥಾನವಿದ್ದು. ಅದರ ಎದುರಿನ ಶಾಸನ ಸಂಪೂರ್ಣ ತೃಟಿತಗೊಂಡಿದ್ದು. ೧೯೭೦-೭೧ ರ ದಶಕದಲ್ಲಿ ಭೋಜರಾಜ ಪಾಟೀಲ ಹಾಗೂ ಡಾ. ಎಂ ಎಂ ಕಲ್ಬುರ್ಗಿಯವರು ಈ ಶಾಸನ ಸಂಶೋಧಿಸಿ ಅಬ್ಬಲೂರಿನಲ್ಲಿ ಜೈನರ ವಿರುದ್ಧ ಸಿಡಿದೆದ್ದು ಮೂಜುಜಾವಿದೇವನ ಸಹಕಾರದೊಂದಿಗೆ ಶಿರಸ್ಸು ಪವಾಡ ನಡೆಸಿದ್ದ ಏಕಾಂತರಾಮಯ್ಯನಿಗೆ ಸಂಬಂಧಿಸಿದ್ದು, ಏಕಾಂತರಾಮಯ್ಯ ಕ್ರಿಶ ೧೧೫೦-೬೦ ರ ಕಾಲದಲ್ಲಿದ್ದನು. ಅಗ ಈ ಗ್ರಾಮವನ್ನು ದತ್ತಿಯಾಗಿ ನೀಡಲಾಗಿತ್ತೆಂದು ಉಲ್ಲೇಖ ಬರುತ್ತದೆ ಎಂದಿದ್ದಾರೆ. ಶಾಸನ ನಿರ್ಮಿಸಿದವನು ನಾಳ್ಗವುಂಡ ಎಂಬ ಕುರಿತು ವಿವರಿಸಿದ್ದಾರೆ. [ಕಮ್ಮಾರ ಲಿಂಗರಾಜ.; ಉದಕದೊಳಗಣ ಪಾವಕ (ಮುದ್ರಣಹಂತದಪ್ರತಿ) ಪುಟ. ೭೩]

ಏಕಾಂತರಾಮಯ್ಯನನ್ನು ಬಸವಯುಗದ ವಚನಕಾರರು ಉಲ್ಲೇಖಿಸಿರುವುದು ಹಾಗೂ ಅಬ್ಬಲೂರು ಶಾಸನ ತಾಳಿಕೋಟಿ ಶಾಸನಗಳಲ್ಲಿ ರಾಮಯ್ಯನ 'ಜೀವನವೃತ್ತಾಂತದ ಪ್ರಸ್ತಾಪ ಇರುವುದರಿಂದ ಏಕಾಂತರಾಮಯ್ಯ ಕ್ರಿಶ ೧೧೨೦-೧೧೮೦ರವರೆಗೆ ಜೀವಿಸಿದ್ದನು ಎಂಬ ನಿಲುವನ್ನು ಸದ್ಯಕ್ಕೆ ತಿಳಿಯಹುದು. [ನಾಗಭೂಷಣ ಸಿ.; ಏಕಾಂತರಾಮಯ್ಯ ಮತ್ತು ಆದಯ್ಯ, ಪುಟ.೩೫]

ಕ್ರಿಶ ೧೧೮೪ರ ತಾಳಿಕೋಟೆ ಶಾಸನದಲ್ಲಿ ಪರಿಯಳಿಗೆ ಅಣಿಲೆವಾಡ, ಉಣಕಲ್ಲು, ಸಂಪಗಾವಿ, ಅಬ್ಬಲೂರು, ಮಾರುಡಿಗೆ, ಅಣಂಪುರ, ಕರಹಾಡ, ಕೆಂಬಾವಿ, ಬಮ್ಮುಕೂರ, ಮೊದಲಾಗಿ 'ಅನನ್ಯ ದೇಶದೇಶಾನ್ತರದಲಿದಿರಾದ ಪರಸಮಯಿಗಳ ಪಡಲ್ಪಡಿಸಿ ಲೋಕಮನಾಕಂಪಗೊಳ್ಸಿ ಬಸದಿಗಳನ್ನು ಹೊಸದು ಮುಕ್ತಿ ಶಿವಲಿಂಗ ಸಿಂಹಾಸನಮುಂ[ಕಂ]ಣ್ಗೊಳ್ಳಿ ಚಲಮಂ ಮೆರೆದು ಧೀರರೊಳು ನೆರೆದು ತೋರಿದ ಪುರಾತನ ನೂತನರೆನಿಸಿದ ಅಸಂಖ್ಯತ ಗಣಂಗಳ ಇತ್ಯಾದಿ ಉಲ್ಲೇಖವಿದೆ. [ಕಲ್ಬುರ್ಗಿ ಎಂ ಎಂ.; ಶಾಸನ ವ್ಯಾಸಂಗ- ಭಾಗ೨, ಪುಟ. ೭೪]

ಏಕಾಂತರಾಮಯ್ಯನ ಕುರಿತು ಏಕಾಂತದ-ರಾಮ [ಅಬ್ಬಲೂರು ಶಾಸನ]ಯ್ಯಂಗಳ್

ಏಕಾನ್ತದರಾಮಯಂಗಳ ಮಂಮ ರಾಮದೇವಭಟ್ಟ [ಇಸಿ.೭ ಶಿಕಾ ಬಂದಳಿಕೆ ೨೩೫]

ಏಕಾಂತದ ರಾಮಯ್ಯನ ಅಬ್ಬಲೂರಿನ ಶಾಸನದ ಪ್ರಕಾರ ಕಲಚೂರಿನ ದೊರೆ ಬಿಜ್ಜಳ, ಚಾಲುಕ್ಯ ದೊರೆ ಸೋಮೇಶ್ವರ, ಹಾನಗಲ್ಲಿನ ಕದಂಬಕಾಮದೇವರಿಂದ' ರಾಮಯ್ಯನು ದತ್ತಿ ಪಡೆದಿದ್ದರ ಬಗೆಗೆ ಉಲ್ಲೇಖವಿದೆ. ಕಾರಣ ಕಲಚೂರಿನ ಬಿಜ್ಜಳ ಕ್ರಿಶ ಸು.೧೧೬೨ ಚಾಲುಕ್ಯ ಸೋಮೇಶ್ವರ-ಕ್ರಿಶ ೧೧೮೨, ಕದಂಬ ಕಾಮದೇವ-ಕ್ರಿಶ ೧೧೮೯ ಇರುವುದರಿಂದ ಕ್ರಿಶ ೧೧೪೦ ರಿಂದ ೧೧೮೦ ರವರೆಗೆ ಇಷ್ಟು ಕಾಲವಿದ್ದನೆಂಬ ವಿಚಾರ ಮಾಡಬೇಕಿದೆ. ಕ್ರಿಶ ೧೧೪೦-೫೦ರ ನಡುವೆ ನಡೆದಿರಬೇಕು ಬನವಾಸಿ ಪ್ರಾಂತದ ಮಾಂಡಳಿಕನಾಗಿದ್ದನೆಂದು ಉಹಿಸಿದ್ದಾರೆ. [ನಾಗಭೂಷಣ ಸಿ.; ಏಕಾಂತರಾಮಯ್ಯ ಮತ್ತು ಆದಯ್ಯ, ಪುಟ. ೩೦]

*ಅಬ್ಬಲೂರು ಶಾಸನ ಕ್ರಿಶ ೧೨೦೦ [ಎಇಂ.ಸಂ ೫ ಪುಟ ೨೫೨-೨೬೦]

*ಅಬ್ಬಲೂರು ಸಚಿತ್ರ ಶಾಸನ ಕ್ರಿಶ ೧೨೦೦ [ಅದೇ, ಸಂಪುಟ ೧೯, ಪುಟ. ೧೪೧]

*ಕೆಂಪನಪುರ ಶಾಸನ ಕ್ರಿಶ ೧೫ನೇ ಶತಮಾನ [ಇಸಿ.ಸಂ, ೪ ಹೊಸ ಚಾಮರಾಜನಗರ,೧೪೪]

*ಭೋಗಾವಿ ಶಾಸನ ಸು. ೧೨ನೇ ಶತಮಾನ [ಎನುವಲ್ ರಿಪೋರ್ಟ ಆನ್ ಸೌತ್ ಇಂಡಿಯನ್ ಎಪಿಗ್ರಪಿ, ನಂ ೫೪೩]

ಏಕಾಂತರಾಮಯ್ಯನ ಪವಾಡ ಅಬಲೂರಿನ ಬ್ರಹ್ಮೇಶ್ವರ ದೇವಸ್ಥಾನದಲ್ಲಿ ಕ್ರಿಶ ೧೧೪೭ ಅಕ್ಟೋಬರ ೨೬ ರಂದು ಶಿರಸ್ಸು ಪವಾಡ(ತಲೆ ಮರುಜೋಡಣೆ) ನಡೆದಿತ್ತು, ಅಂದು ಖಗ್ರಾಸ್ ಸೂರ್ಯಗ್ರಹಣವು ಸಂಜೆ ೫ ಗಂಟೆಯಿಂದ ಒಂದುತಾಸು ಹನ್ನೆರಡು

ನಿಮಿಷ ಹಿಡಿದಿತ್ತು. ಎಂದು ಭೋಜರಾಜ ಪಾಟೀಲರು ಸ್ಪಷ್ಟಪಡಿಸಿದ್ದಾರೆ.[ಭೋಜರಾಜ ಪಾಟೀಲ.; ಲೇಖನ– ಪ್ರಜಾವಾಣಿ ದಿನಪತ್ರಿಕೆ ೧೦ ಮಾರ್ಚ ೨೦೧೭ ಪುಟ ೩] ಅವರು ನೆಹರು ತಾರಾಲಯದ ತಜ್ಞರ ಸಂಪರ್ಕದಿಂದ ಮಾಹಿತಿ ಪಡೆದಿರುವ ಬಗ್ಗೆ ತಿಳಿಸಿರುವರು. ಇದು ಶಿರಸ್ಸು ಪವಾಡದ ಘಟನೆಯ ಕಾಲದ ನಂತರ ದಾನನೀಡುವ ಸಂದರ್ಭದಲ್ಲಿ ಸೂರ್ಯಗ್ರಹಣದ ಉಲ್ಲೇಖಬರುತ್ತದೆ ಎಂದಿರುವುದು ಆಧಾರರಹಿತವಾದ ಹೇಳಿಕೆಯಾಗಿದೆ.

ಅಬಲೂರು ಚರಿತ್ರೆ ರಚಿಸಿದ ಶಾಂತ ನಿರಂಜನ ಅನ್ಯಮತೀಯ ಕವಿ ವೀರಶೈವನಲ್ಲದ ಕವಿ ಒಬ್ಬ ರಚಿಸಿರುವ ಸಾಂಗತ್ಯ ಕೃತಿ ಆಗಿರುವುದರಿಂದ ಅದೇ ಮತದ ಅನುಯಾಯಿಗಳಾದರೆ ಆ ಆಚಾರ್ಯನ ಸಂಬಂಧವಾಗಿ ಏನನ್ನಾದರೂ ಅತಿಶಯಿಸಿ ಹೇಳುವುದು ಸಹಜ. ಆದರೆ ಕವಿ ಅನ್ಯಮತಿಯನಾದ್ದರಿಂದ ಆ ಸಾಧ್ಯತೆ ಕಡಿಮೆ ಎಂದಿದ್ದಾರೆ. [ನಾಗಭೂಷಣ ಸಿ.; ಏಕಾಂತರಾಮಯ್ಯ ಮತ್ತು ಆದಯ್ಯ, ಪುಟ. ೪೧]

ಏಕಾಂತರಾಮಯ್ಯನ ಜನ್ಮಸ್ಥಳ ಶಾಸನದಂತೆ 'ಸೊಗಯಿಪುದುಳಂದೆಯೆಂಬುದು ನಗರಂ ಚೆಲವೆಸೆದು ನಾಡೆ.

ಅಬ್ಬಲೂರು ಚರಿತೆಯಲ್ಲಿ 'ಚಪ್ಪನ್ನ ದೇಶದೊಳುಳ್ಳ ಕರ್ನಾಟಕ ವೊಪ್ಪಿರೆ ವಾಯುವ್ಯ ದೆಸೆಯೊಳಿಪ್ಪುದು ಅಲದಿಯ ಪುರವೆಸೆದುದು. . . .ಎಂಬ ಹೇಳಿಕೆಗಳಿಂದ ಇಂದಿನ ಗುಲ್ಬರ್ಗಾ ಬಳಿ ಇರುವ ಆಳಂದವೆಂದು ಗುರುತಿಸಬಹುದು. ಅದು ಪ್ರಾಚೀನ ಕಾಲದಲ್ಲಿ ಕಲ್ಯಾಣದಷ್ಟೇ ಪ್ರಸಿದ್ಧಿ ಪಡೆದಿತ್ತು. 'ಅವತರಿಸಿರ್ದನಲ್ಲಿ ರಜತಾಳದಿಂ ಗಿರಿಜಾ ಸಮೇತ ಮುತ್ಸವದೊಳೆ ಸೋಮನಾಥನ' ಶಾಸನದಲ್ಲಿ–ಹೇಳಿದಂತೆ ಸೋಮೇಶ್ವರ ದೇವಸ್ಥಾನ ಅಳಂದೆಯಲ್ಲಿರುವುದು, ಪುಲಿಗೆರೆಯ ಸೋಮನಾಥ, ಮತ್ತು ಅಬ್ಬಲೂರು ಸೋಮನಾಥ ದೇವಾಲಯ [ಸೋಮೇಶ್ವರ] ಇವುಗಳನ್ನು ಗಮನಿಸಿದಾಗ ಇವನು ಸೋಮೇಶ್ವರನ ಭಕ್ತನಾಗಿರುವುದು ಕಂಡುಬರುತ್ತದೆ. ಶೈವ ಬ್ರಾಹ್ಮಣನಾಗಿದ್ದನೆಂದು ವೇದ ವೇದಾಂಗ . . . ದ್ವಿಜೋತ್ತಮನೆನಿಪ'ಂ ಇವನ ತಂದೆ ತಾಯಿ ಶೈವ ಬ್ರಾಹ್ಮಣರಾಗಿದ್ದಕ್ಕೆ 'ಬಂದಳಿಕೆ ಶಾಸನ' ಏಕ್ತಾನದ ರಾಮಯ್ಯಂಗಳಮಂಮ ರಾಮದೇವಭಟ್ಟರ ವೃತ್ತಿ ೧ [ಎಕ ೭ ಶಿಕಾ ೨೩೫]ತಂದೆ ಪುರುಷೋತ್ತಮ ಭಟ್ಟ ಮತ್ತು ಪದ್ಮಾಂಭಿಕೆ [ಸೀತಾದೇವಿ]

ಅಬ್ಬಲೂರು ಶಾಸನದಲ್ಲಿ 'ಮಹೇಶ್ವರಂ ದರಹಿಸಿತ ವದಾನಾರವಿಂದನಾಗಿ ವೀರಭದ್ರನಂ ನೀ ಮುನುಷ್ಯ ಲೋಕದೊಳ್ ನಿಂನಂಶದೊಳರ್ಬ್ಬನಂ ಪುಟ್ಟಿಸಿ ಪರಸಮಯಗಳಂ ನಿಯಾಮಿಸೆಂಬುದುಂ ವೀರಭದ್ರನುಂ ಪುರುಷೋತ್ತಮ ಭಟ್ಟಗಳ

ಸ್ವಪ್ನದೊಳ್ತಾಪಸರೂಪದಿಂ ಬಂದು ಪುತ್ರಂ ಪರಸಮಯಾನಿಯಮಕಂ ನಿಮಗೆ ಪುಟ್ಟುಗುಮೆಂದು' ಶಿವನು ಹಸನ್ಮುಖನಾಗಿ ವೀರಭದ್ರನಿಗೆ ಮನುಷ್ಯ ರೂಪದಲ್ಲಿ ನಿನ್ನ ಅಂಶದ ರೂಪದಲ್ಲಿ ಹುಟ್ಟಿಸಿ ಬೇರೆ ಧರ್ಮಗಳನ್ನು ನಿಯಮಿಸಬೇಕೆಂದು ಪುರುಷೋತ್ತಮಭಟ್ಟರಿಗೆ ಸ್ವಪ್ನದಲ್ಲಿ ಹೇಳಿರುವುದು.

'ಹುಲಿಗೆರೆಯ ಸೋಮನಾಥನಾರಾಧಿಸುತ್ತಮಿಪ್ಪುವುದುಮಾ ಪರಮೇಶ್ವರ ಪ್ರತ್ಯಕ್ಷವಾಗಿ' ಏಕಾಂತರಾಮಯ್ಯನು ಶೈವ ಕ್ಷೇತ್ರಗಳನ್ನು ಸಂದರ್ಶಿಸುತ್ತಾ ಪುಲಿಗೆರೆಗೆ ಬಂದು ಸೋಮನಾಥನನ್ನು ಆರಾಧಿಸುವ ಪರಮೇಶ್ವರ ಪ್ರತ್ಯಕ್ಷ ಬಂದಸನ್ನಿವೇಶವು. 'ಅಬ್ಬಲೂರು ವರ ಗ್ರಾಮಂ ಗತ್ವಾರಾಮ ಮಮಜ್ಞಯಾ ತತ್ರವಾಸಂ ಕುರುಸ್ವಸ್ಥಂ ಯಜಮಾಂ ಭಕ್ತಿಯೋಗತಃ ಜೈನ್ಯ ಸಹ ವಿವಾದಂಚ ಶಂಕಾಂ ಹಿತ್ವಾಕುರುಷ್ವಥಸ್ವ ಶಿರೋಪಿ ಪಣಂ ಕ್ರಿ[ಕೃ]ತ್ವಶಪುತ್ರತ್ವಂ ವಿಜಯೀಭವೆಂದು ಸೋಮನಾಥ ದೇವರ್ಚಿಸ್ಸಸಿದಡೇ' ಎಂದಿದೆ. ಶಿವ ಕ್ಷೇತ್ರಗಳನ್ನು ಶಿವಲಿಂಗನನ್ನು ನೋಡುವುದಾಗಿ ಬರುತ್ತಾನೆ, ಬಂದು ಅಬ್ಬಲೂರು ಹೊರವಲಯದಲ್ಲಿರುವ ಬ್ರಹ್ಮೇಶನ ಗುಡಿಗೆ ಕರೆ ತರುವನು.

ಒಂದು ಐತಿಹ್ಯದ ಪ್ರಕಾರ ಏಕಾಂತರಾಮಯ್ಯನು ಚಿನ್ನಮುಳಗುಂದದ ಗುಡ್ಡ ಹತ್ತಿ ಅಬ್ಬಲೂರ ಕಡೆಗೆ ಜೈನ ಬಸದಿಗಳನ್ನು ನೋಡಿದನೆಂಬ ಪ್ರತೀತಿ ಇದೆ. ಅಬ್ಬಲೂರು ಶಾಸನದಲ್ಲಿ ಜೈನರ ನಾಯಕ ಸಂಕಗೌಡನು ಜೈನರೊಂದಿಗೆ ರಾಮಯ್ಯನಿದ್ದ ಬ್ರಹ್ಮೇಶ್ವರ ದೇವಾಲಯದಲ್ಲಿಗೆ ಬಂದು ಜಿನನೆ ದೊಡ್ಡವನೆಂದು ವಾದ ಮಾಡುತ್ತಾ 'ಜಿನಪಾರಮ್ಯ'ವನ್ನು ಘೋಷಿಸಿದ ಕಾರಣವಾಗಿದೆ. ಹರಿಹರನ ರಗಳೆಯಲ್ಲಿ ಹರನತ್ತ ಕಾಲು ಮಾಡಿ ಮಲಗಿದ್ದನ್ನು ನೋಡಿ, ಬಸವ ಪುರಾಣದಲ್ಲಿ ಪಿನಾಕಿಭವನನೊರ್ಬ ಜೈನನು ಕೆರಹುಗಾಲಿನಿಂದ ಪ್ರವೇಶ ಮಾಡಿದ್ದು ಏಕಾಂತರಾಮಯ್ಯನು ವಿರೋದಿಸಲು ಕಾರಣವಾಗಿದೆ. ಜೈನರೆಲ್ಲ ಸೇರಿ ಏಕಾಂತರಾಮಯ್ಯನಿಗೆ ಇಲ್ಲಿ 'ವಾಸಿಗಳಾಗಿರಬೇಡವೀ ಗುಡಿಯೋಳು ದೋಷಬರ್ಪ್ಪುದು ನಿಮಗಿದು ಎಚ್ಚರ ಎನ್ನುತ್ತಾರೆ. ಪಣಕಟ್ಟಿದ್ದು ಶಾಸನದಲ್ಲಿ ಜೈನರು ನಿಮ್ಮಯ ಸಿರಮಂ ಜನಮರಿಯಲರಿದು ಕೊಟ್ಟಾತನೊಳಿಂಪಡೆ ನೀನೆ ಭಕ್ತನಾತನೇ ದೇವಂ' ಎಂದು ಓಲೆಬರೆದು ಕೊಡುತ್ತಾರೆ. ಅಬ್ಬಲೂರು ಚರಿತೆಯಲ್ಲಿ ಶಿವನು ಕನಸಿನಲ್ಲಿ ಬಂದು ಅಬ್ಬಲೂರಿಗೆ ಪಯಣಿಸಲು ಹೇಳುತ್ತಾನೆ ಬಸವಪುರಾಣದಲ್ಲಿ ಬಸವನ ಕೀರ್ತಿ ಎಲ್ಲಡೆ ಪಸರಿಸಲು ಒಸೆದು ನೋಡುವ ಆಕಾಂಕ್ಷೆಯಲ್ಲಿ ಶಿವ ಕ್ಷೇತ್ರಗಳನ್ನು ಸಂದಳಿಸುತ್ತಾ ಅಬ್ಬಲೂರಿಗೆ ಬರುತ್ತಾನೆ. ಒಬ್ಬನೆ [ಏಕಾಂಗಿ] ಅಬ್ಬಲೂರಿಗೆ

ಬಂದನೆಂದು ಕೃತಿಗಳಲ್ಲಿ ಉಲ್ಲೇಖಗಳಿವೆ. ಸಿದ್ದೇಶ್ವರ ಪುರಾಣದಲ್ಲಿ ಮಾತ್ರ ರಾಮಯ್ಯನನ್ನು ಅಗ್ಗಣಿಯ ಹೊನ್ನಯ್ಯ, ಅಗ್ಗಣಿಯ ದೇವರಸರುಗಳ ಜೊತೆ ಅಬ್ಬಲೂರಿಗೆ ಬಂದನೆಂಬ ವಿವರವಿದೆ. ಎಲ್ಲ ಜೈನರು ಸೇರಿ ಏಕಾಂತರಾಮಯ್ಯ ನೊಡನೆ ವಾದ-ವಿವಾದ ತೀವ್ರಗೊಂಡಾಗ ಶಿವಪಾರಮ್ಯಗಳ ಚರ್ಚೆ ನಡೆದು ಜೈನರು 'ನೀಂ ಮುನ್ನಿನ ಹಿತರರ ಹೇಳಲೇಕೆ ನಿನ್ನಯ ಶಿರಮಂ ಜನಮರಿಯಅರಿದುಕೊಟ್ಟಾತನೋಳಿಂ ಪಡೆ ನೀನೆ ಭಕ್ತನಾತನೇ ದೇವಂ' ಹಿಂದಿನ ಪೌರುಷದ ಮಾತನ್ನಾಡದಿರು ಎಂದು ಕೆಣಕಿ ಶಿವಶ್ರೇಷ್ಠನಾದರೆ ನಿನ್ನ ಶಿರವನ್ನು ಜನ ಅರಿಯುವ ಹಾಗೇ ಕತ್ತರಿಸಿಕೊಂಡು ಮರಳಿ ಪಡೆ ಎಂದಾಗ ಏಕಾಂತರಾಮ ಏಳು ದಿವಸಗಳವರೆಗೆ ಶೈವ ಕ್ಷೇತ್ರಗಳಲ್ಲಿ ಮೆರೆಯಿಸಿ ಲೋಕವರಿಯುವ ಹಾಗೇ ಮರಳಿ ಪಡೆದನು ನಂತರ ಸೊಕ್ಕಿದ ಬಾಳೆವನವನ್ನು ಕಾಡಾನೆ ದಾಳಿ ಮಾಡಿದ ರೀತಿ ಜಿನನ ತಲೆ ಮುರಿದು ಲಿಂಗ ಪ್ರತಿಷ್ಠಾಪಿಸಿದನೆಂದು ಮಾಹಿತಿ ಲಭ್ಯವಾಗುತ್ತದೆ. ಜೈನ ಧರ್ಮಿಯರಿಂದ ಜೈನಧರ್ಮದ ರಕ್ಷಣೆಗಾಗಿ ಹೋರಾಟ ನಡೆದಿರುವುದು ಕಂಡು ಬರುತ್ತದೆ.

ಏಕಾಂತರಾಮಯ್ಯನ ಶಿವಪಾರಮ್ಯದ ಶಿರಸ್ಸು ಪವಾಡದ ಕುರಿತು ಹಲವಾರು ಕೃತಿಗಳು ಬೇರೆ ಬೇರೆಯಾದ ಸ್ವರೂಪದ ಕಾರಣಗಳನ್ನು ನೀಡುತ್ತವೆ. ಇವೆಲ್ಲವನ್ನು ಗಮನಿಸಿದಾಗ ಯಾವುದು ನಿಖರತೆ ಸೂಚಿಸುವುದಿಲ್ಲ ಕಾಲ್ಪನಿಕ ಕಥೆ ಪಡೆದು ಜೈನರ ಜಿನಬಿಂಬಗಳನ್ನು ಒಡೆದು ಲಿಂಗವನ್ನು ಸ್ಥಾಪಿಸಿರುವುದನ್ನು ಅಲ್ಲಗಳೆಯುವಂತಿಲ್ಲ ಕಾರಣ ಅಲ್ಲಿರುವ ಚಿತ್ರಗಳೇ ಸಾಕ್ಷಿ. ಅಲ್ಲದೇ ಶಾಸನವೂ ದೇವಾಲಯದ ಒಳಗಡೆ ಪ್ರಮಾಣಿಸುತ್ತದೆ. ಇದು ಶೈವರು ಮತ್ತು ಜೈನರ ಮಧ್ಯವಿರುವ ಅಸಹಿಷ್ಣುತೆಯನ್ನು ಪ್ರಚುರಪಡಿಸುತ್ತದೆ. ೧೦-೧೧ನೇ ಶತಮಾನದ ನಂತರ ಜೈನರಿಗೆ ರಾಜಾಶ್ರಯ ಮತ್ತು ಆರ್ಥಿಕ ಕೊರತೆಯುಂಟಾಗಿದ್ದರಿಂದ ಆ ಧರ್ಮವು ಕ್ಷೀಣಿಸುತ್ತಿರಬೇಕು.

ಅಬ್ಬಲೂರು ಸೋಮೇಶ್ವರ ದೇವಾಲಯವನ್ನು ಏಕಾಂತರಾಮಯ್ಯ ಕಟ್ಟಿಸಿದನು ಎಂಬುದು ಶಾಸನಗಳಿಂದ ತಿಳಿದು ಬರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಆಗ ನೆಶ್ವಿಯ ಅಜ್ಜಗುರುಗಳೇ ಕಟ್ಟಿಸಿರುವ ಬಗ್ಗೆ ಐತಿಹ್ಯ ಇವತ್ತಿಗೂ ಜನಮಾನಸದಲ್ಲಿದೆ.

ಏಕಾಂತರಾಮಯ್ಯ ಹೇಗೆ ಶೈವ ಕ್ಷೇತ್ರಗಳನ್ನು ಸಂದರ್ಶಿಸಿದನು ಅದೇ ರೀತಿಯಲ್ಲಿಯೇ ಚಿಕ್ಕಮಾಗಡಿ ವಿಶ್ವಕರ್ಮ ವಂಶಸ್ಥರು ಚಲನಶೀಲತೆ ಹೊಂದಿರುವವರು. ಒಂದು ಪ್ರದೇಶದಲ್ಲಿ ನಿಲ್ಲುವವರಲ್ಲ ಆ ಗ್ರಾಮದ ವೀರಭದ್ರಪ್ಪ ಕಾಳಮ್ಮ ಸದ್ಭಕ್ತ ದಂಪತಿಗಳ ಕಥೆಯೊಂದು ರೂಪುಗೊಳ್ಳುತ್ತದೆ. ಇವರ ಮಗ ಶಿವರಾಯಪ್ಪ ತಮ್ಮ ಮನೆ

ದೇವರಾದ ರಟ್ಟೀಹಳ್ಳಿಯ ವೀರಭದ್ರನಿಗೆ ಅನುಪಮ ಭಕ್ತಿಯ ಸೇವೆ ಸಲ್ಲಿಸುತ್ತಿದ್ದರು. ತಂದೆ ತಾಯಿ ಮರಣಿಸಿದ ನಂತರ ಶಿವರಾಯಪ್ಪ ಅತಿಯಾದ ಭಕ್ತಿ ಪಾರಮ್ಯದಿಮದ ಪದೆ ಪದೆ ರಟ್ಟೀಹಳ್ಳಿಗೆ ಬಂದು ತನ್ನ ಭಕ್ತಿ ಸೇವೆ ಸಲ್ಲಿಸುತ್ತಿದ್ದನು. ಅವನ ಭಕ್ತಿಗೆ ಮೆಚ್ಚಿದ ವೀರೇಶನು ಶಿವರಾಯನ ಕನಸಿನಲ್ಲಿ ದರ್ಶನವಿತ್ತು ಮಗನೇ ನೀನು ಇಲ್ಲಿರುವುದು ಬೇಡ, ನೆಸ್ವಿಯೆಂಬ ಗ್ರಾಮದಲ್ಲಿ ನೆಲೆಸುವವನಾಗು ಅಲ್ಲಿ ನಿಮ್ಮ ವಂಶಜರಿಂದ ಮುಂದೆ ಪವಾಡಗಳು ನಡೆಯುತ್ತವೆ. ಎಂದಾಗ ಶಿವರಾಯಪ್ಪ ನೆಸ್ವಿಗೆ ಬಂದು ನೆಲೆಸಿದನೆಂದು ತಿಳಿದು ಬರುತ್ತದೆ.[ಕೋಗುಂಡಿ ನೀಲಕಂಠಪ್ಪ ನಿಂಗಪ್ಪ.; ನೇಸ್ವಿ ವೀರಭದ್ರೇಶ್ವರ ದೇವರ ಚರಿತ್ರೆ ಪುಟ.೧೯]

ಶೃಂಗೇರಿ ಮಠದ ಶಂಕರಾಚಾರ್ಯರು ನೆಶ್ವಿಗೆ ಆಗಮಿಸಿದಾಗ ಅವರನ್ನು ಶಿವರಾಯಪ್ಪ ಬೊಗಸೆ ತುಂಬ ಕರ್ಪೂರ ಹಚ್ಚಿಕೊಂಡು ಬೆಳಗಿ ಸ್ವಾಗತಿಸಿ ಭಕ್ತಿ ಪ್ರದರ್ಶಿಸಿದಾಗ ಮೆಚ್ಚಿ ಶಂಕರಾಚಾರ್ಯರು ಮಠದ ಹೊಲವನ್ನು ದಾನವಾಗಿ ಕೊಡಲು ಮುಂದಾದಾಗ ಶಿವರಾಯಪ್ಪ ಕೈ ಮುಗಿದು ವಿನಮ್ರವಾಗಿ ಗುರುಗಳೆ ನಮಗೆ ಹೊಲ ಬೇಡ ನಾವು ದೇವಾಲಯ ಕಟ್ಟಿಸಿ ಹಾಗೂ ಹೂವಿನ ಗಿಡಗಳನ್ನು ಸಾಕಲು ಊರ ಕಡೆಗಿರುವ ಹಿತ್ತಲು ಜಾಗ ಸಾಕು ಎಂದು ಅಷ್ಟನ್ನೇ ಪಡೆದುಕೊಂಡರೆಂಬುದು ಕಂಡು ಬಂದಿದೆ. ಆ ಜಾಗದಲ್ಲಿ ವೀರೇಶನಿಗೆ ದೇವಾಲಯ ಕಟ್ಟಿಸಿ ವಿಗ್ರಹ ಸ್ಥಾಪಿಸುವ ಅಪ್ಪಣೆ ಪಡೆಯಲು ರಟ್ಟೀಹಳ್ಳಿ ವೀರೇಶನ ಸನ್ನಿದಿಗೆ ಬಂದು ಅರ್ಚಿಸಿ ನಮಿಸಿದಾಗ ಪ್ರತ್ಯಕ್ಷನಾಗಿ 'ಮಗನೇ ನನಗೆ ಗುಡಿ ಬೇಡ ನಿಮ್ಮ ವಂಶ ಪಾರಂಪರ್ಯ ನಿಮ್ಮ ಮನೆಯಲ್ಲಿ ವಾಸವಾಗುವೆನು. ನಿನ್ನಿಂದ ಮೊದಲಾಗಿ ನನ್ನ ಸೇವೆ ಪಾತ್ರರಾದವರು ನನ್ನ ಪಡಪಿನ ವಾಣಿಯನ್ನು ನುಡಿಯುವವರಾಗಲಿ ಮತ್ತು ನೀನು ಕಟ್ಟಿಸಿರುವ ಆ ಗುಡಿಯಲ್ಲಿ ಲಿಂಗವನ್ನು ಸ್ಥಾಪಿಸು' ಎಂದು ಅಪ್ಪಣೆಯಿತ್ತಾಗ ಆ ರೀತಿಯಲ್ಲಿ ಮುಂದುವರೆದು ಪೂಜಾ ಕೈಂಕರ್ಯವನ್ನು ನಡೆಸುವವರಾದರು. ಇಲ್ಲಿಗೆ ಶೃಂಗೇರಿ ಮಠದ ಶಂಕರಾಚಾರ್ಯರು ಬಂದಿದ್ದರೆನ್ನುವುದು ಸಂದೇಹಾಸ್ಪದವಾಗಿದೆ. ಅವರು ಸ್ಥಳಿಯ ಕಬ್ಬಿಣಕಂತಿಮಠದವರಾಗಿರಬೇಕು.

ಅದೇ ವರ್ಷ ಶಿವರಾತ್ರಿಯಂದು ಶಿವಲಿಂಗಕ್ಕೆ ಅಭಿಷೇಕ ಮಾಡಲು ಶಿವರಾಯಪ್ಪನವರು ಮಗ ಬಾಲಕ ರುದ್ರಪ್ಪನನ್ನು ಕರೆದುಕೊಂಡು ಹೋದಾಗ ಪೂಜೆಯಲ್ಲ ಮುಗಿಸಿ ಮನೆಗೆ ಮರಳುವಾಗ ಒಂದು ಹಿಂಸ್ರಪಶು ಅವನನ್ನು ಕಚ್ಚಿಕೊಂಡು ಹೋಯಿತು. ಮಗ ಲಭಿಸಲಿಲ್ಲ ಇದು ವೀರೇಶನ ಲೀಲೆಯೆಂದು ಬಗೆದು

ಸಮಾಧಾನ ತಂದು ಕೊಂಡರು. ಶಿವರಾಯಪ್ಪ ಮರುದಿನ ರಟ್ಟೀಹಳ್ಳಿ ವೀರೇಶನ ಸನ್ನಿದಿಗೆ ಬಂದು ಕೈಮುಗಿದು ನಿಂತಾಗ ವೀರೇಶ ಮುಗುಳು ನಕ್ಕು 'ಮಗನೆ ನಾನೇ ನಿಮ್ಮ ಮನ ಪರೀಕ್ಷಿಸಲು ಮಾಡಿದ ಲೀಲೆ ಚಿಂತಿಸಬೇಡ ಮರೆಯಾದ ಮಗನೆ ಮುಂದೆ ನಿಮ್ಮ ಮಗನಾಗಿ ಜನಿಸಿ ಪವಾಡ ಪುರುಷನಾಗಿ ಪ್ರಸಿದ್ಧಿ ಪಡೆಯುವವನು' ಎಂದು ಸಮಾಧಾನಪಡಿಸಿ ಆಶೀರ್ವದಿಸಿದನು. ಮುಂದೆ ಶಿವರಾಯಪ್ಪನ ಮಡದಿ ಪಾರ್ವತಮ್ಮ ಗಂಡು ಮಗುವನ್ನು ಹೆತ್ತಳು ಆ ಮಗುವಿಗೆ ವೀರಬೊಮ್ಮಪ್ಪನೆಂದು ಹೆಸರನ್ನಿಟ್ಟರು. ಊರ ಹೊರಗಿರುವ ದೇವಾಲಯದ ಬಳಿ ಮಾಳಿಗೆ ಮನೆಯನ್ನು ಕಟ್ಟಿಸಿ ವೀರೇಶನನ್ನು ನೆಲೆಗೊಳಿಸಿದರು. ಮಗ ವೀರಬೊಮ್ಮಪ್ಪ ಪ್ರಾಯಕ್ಕೆ ಬರಲು ವೀರಮ್ಮ ಎಂಬ ಗೊಗ್ಗ ಗ್ರಾಮದ ಕನ್ನೆಯೊಂದಿಗೆ ಮದುವೆ ಮಾಡಿದರು ಮತ್ತು ಲಕ್ಕಪ್ಪನೆಂಬ ನಾಮವಿಟ್ಟು ಮಗನನ್ನು ಪಡೆದರು ಕೆಲ ಕಾಲದ ನಂತರ ಶಿವರಾಯಪ್ಪ ತಮ್ಮ ಅವಸಾನದ ಅರಿವಾಗಿ ನಾಳೆ ವೀರೇಶನ ಪಾದದಲ್ಲಿ ಲೀನವಾಗುತ್ತೇನೆ. ನಮ್ಮ ಮನೆಯ ವೀರೇಶನ ಪಾದದೆಡೆ ಸಮಾಧಿ ಮಾಡಿ ಕೃತಾರ್ಥನಾದನು. ಶಿವರಾಯಪ್ಪನವರಿಗೆ ಅಜ್ಜನವರೆಂದು ಕರೆಯುತ್ತಿದ್ದುದರಿಂದ ಅಲ್ಲಿಂದ ಈ ವಂಶಸ್ಥರಿಗೆ ಸೇವಾ ಕಾರ್ಯಕ್ಕೆ ನಿಯಮಿತವಾದವರಿಗೆ ಅಜ್ಜನವರೆಂದು ಕರೆಯುವ ರೂಢಿ ಇಂದಿಗೂ ಇದೆ.

ವೀರಬೊಮ್ಮಪ್ಪಜ್ಜ ತನ್ನ ಮಗ ಲಕ್ಕಪ್ಪ ಪ್ರಾಯಕ್ಕೆ ಬರಲು ಗೊಗ್ಗ ಗ್ರಾಮದ ರುದ್ರಮ್ಮ ಎಂಬುವಳ ಜೊತೆ ಮದುವೆ ಮಾಡಿದರು ತದನಂತರ ಅವಳು ಗಂಡು ಮಗುವಿಗೆ ಜನ್ಮವಿತ್ತಳು. ಆ ಮಗುವಿಗೆ ರುದ್ರಪ್ಪನೆಂದು ಹೆಸರಿಡಲಾಯಿತು. ಹೀಗೆ ಕಾಲ ಗತಿಸಿದಂತೆ ವೀರಬೊಮ್ಮಪ್ಪನವರಿಗೆ ಒಂದು ಅಭಿಪ್ಸೆ ಉಂಟಾಯಿತಂತೆ ಅದೇನೆಂದರೆ ತಮ್ಮ ಶಿರವರಿದು ರಟ್ಟೀಹಳ್ಳಿ ವೀರೇಶನಿಗೆ ನಿಲಾಂಜನ ಬೆಳಗಿ ಪ್ರತಿಶಿರ ಪಡೆಯಬೇಕೆಂದು ಸತಿ ವೀರಮ್ಮನಿಗೂ ತಿಳಿಸಿದಾಗ ಸಂತೋಷ ಪಟ್ಟು ಆಗಲಿ ಎಂದು ಸಹಮತಿಸಿದಳು. ಮರುದಿನವೇ ಇಬ್ಬರೂ ರಟ್ಟಿಹಳ್ಳಿಯ ಬಳಿ ಕುಮದ್ವತಿ ನದಿಯಲ್ಲಿ ಸ್ನಾನ ಮಾಡುವಾಗ ವೀರಮ್ಮನವರು ಸುರಗಿಯಿಂದ ತಮ್ಮ ಉದರ ಸೀಳಿ ಬತ್ತಿಗೆ ಬೇಕಾದ ಕರಳುಗಳನ್ನು ಕತ್ತರಿಸಿಕೊಂಡರು. ಹೆಗಲ ಮೇಲೆ ಹಾಕಿ ಒಣಗಿಸಿದರು ವೀರಬೊಮ್ಮಪ್ಪ ಉತ್ಸಾಹದಿಂದ ವೀರಗಾಸೆ [ಕಾಸಿಕಟ್ಟಿ] ಚಂದ್ರಾಯುಧ ಹಿಡಿದುಕೊಂಡು ವೀರೇಶನ ದೇವಾಲಯಕ್ಕೆ ಜನ ಬೆರಗಾಗುವ ಹಾಗೆ ಹೊರಟರು. ಇವರು ವೀರೇಶನಾಲಯಕ್ಕೆ ಬರುತ್ತಿದ್ದಂತೆ ಕದಗಳು ತಾವೇ ಮುಚ್ಚಿಕೊಂಡವು ಆಗ ವೀರಾವೇಶದಿಂದ ನೀನು ದಕ್ಷನ ಶಿರವರಿದು ಕುರಿದಲೆನಿರಿಸಿ ಸಲುಹಿದವನು, ನರಹರಿಯನ್ನು ಶರಭಾವತಾರದಿಂದ ಕೊಂದವನು, ಜ್ವಾಲಾಸಾರ ಪಂಚಮೇಡ್ರಾಸುರರನ್ನು ಕೊಂದು ದೇವತೆಗಳನ್ನು ಸಲುಹಿದ ನೀನು ಈ

ಕದಗಳನ್ನೇಕೆ ಮುಚ್ಚಿಕೊಂಡೆ ನಿನ್ನ ಭಕ್ತರ ಬಯಕೆಗಳನ್ನು ಈಡೇರಿಸುವುದಾಗದಿದ್ದರೆ ಬಿಡು ನಾನು ನನ್ನ ಸಂಕಲ್ಪದಿಂದ ಹಿಂದೆ ಸರಿಯುವವನಲ್ಲ ಎಂದು ಅರ್ಭಟಿಸಲು ಕದ ತೆರೆದವು. ಒಳಗೆ ನವರಂಗಕ್ಕೆ ಪ್ರವೇಶಿಸಲು ಕದ ಮುಚ್ಚಿಕೊಂಡವು ಇದನ್ನು ಕಂಡು ನೆರೆದವರು ಬೆರಗಾದರು.ಇವರ ಶಿರವರಿದುಕೊಳ್ಳುತ್ತಿರುವುದನ್ನು ಕಚೇರಿ ಅಧಿಕಾರಿಗಳುತಿಳಿದು ಅವರನ್ನು ಬಂಧಿಸಲು ಆದೇಶ ಮಾಡಿದಾಗ ಶಿಪಾಯಿಗಳು ಬಂದಾಗ ಕದ ಮುಚ್ಚಿದ್ದನ್ನು ಕಂಡು ನಿರುಪಾಯರಾದರು. ನವರಂಗದಲ್ಲಿದ್ದ ವೀರಬೊಮ್ಮಜ್ಜನವರು ವೀರೇಶನಿಗೆರಗಿ ಸ್ತುತಿಸಿ ಚಂದ್ರಾಯುಧದಿಂದ ಶಿರವರಿದುಕೊಂಡು ವೀರೇಶನಿಗೆ ಬೆಳಗಿ ಕೆಳಗಿಡಲು ಪ್ರತಿಶಿರ ಮೂಡಿತು. ಆಗ ಪ್ರತ್ಯಕ್ಷ ಕಂಡ ವೀರಮ್ಮ ವೀರೇಶನನ್ನು ಕೊಂಡಾಡಿ ಕರಳುಗಳನ್ನು ಉದರದಲ್ಲಿರಿಸಿಕೊಂಡು ವೀರೇಶನಿಗೆ ಎರಗಿದಳು ಸತಿಪತಿಗಳು ಮೊದಲಿನಂತಾದರು. ನೆರೆದವರೆಲ್ಲ ಹೊರಗೆ ಬಂದ ದಂಪತಿಗಳನ್ನು ನೋಡಿ ಕೊಂಡಾಡಿ ನಮಿಸಿದರು. ವಾದ್ಯ ವೈಭವದೊಂದಿಗೆ ನೇಸ್ವಿಗೆ ಕಳುಹಿಸಿ ಕೊಟ್ಟರು.

ಇತ್ತ ವೀರೇಶನಾಲಯದಲ್ಲಿ ವೀರಬೊಮ್ಮಪ್ಪನ ಶಿರವು ಮುಕುಟ ಧರಿಸಿದ ಸುಂದರ ಶಿಲೆಯ ಶಿರವಾಗಿರುವುದನ್ನು ಕಂಡು ಇದು ವೀರೇಶನ ಲೀಲೆಯ ಕುರುಹೆಂದು ಆ ಶಿಲಾ ರುಂಡವನ್ನು ವೀರೇಶನ ಸನ್ನಿಧಿಯಲ್ಲಿರಿಸಿ ಭಕ್ತಿಯಿಂದ ನಿತ್ಯವೂ ಪೂಜಿಸುವರಾದರು. ನೇಸ್ವಿಗೆ ಬಂದ ವೀರಬೊಮ್ಮಪ್ಪಜ್ಜನವರು ಲಿಂಗಾರ್ಪಿತವಾದ ಹಾಲು ಹಣ್ಣುಗಳನ್ನಷ್ಟೇ ಪ್ರಸಾದವಾಗಿ ಸ್ವೀಕರಿಸುತ್ತಾ ತಂದೆಯವರು ನಿಯಮಿಸಿದ ಮಾರ್ಗಶಿರ ಬಹುಳ ದ್ವಾದಶಿಯಂದು ವೀರೇಶನ ಕಾರ್ತಿಕೋತ್ಸವವನ್ನು ಗಣಾರಾಧನೆಯೊಡನೆ ಪ್ರತಿ ವರ್ಷ ನೆರೆವರಿಸುತ್ತಾ ಮುಂದುವರೆದರು. ನಂತರ ೧೨ ವರ್ಷಗಳ ತರುವಾಯ ವೀರೇಶನ ಪಾದ ಹೊಂದಿದರು. ಮಗನಾದ ಲಕ್ಕಪ್ಪನವರು ಸಮಾಧಿಯ ಶಿಲಾಮಂಟಪವನ್ನು ಆರಾಧಿಸುವವರಾದರು.

ಎನ್ ಜಿ ಬಣಕಾರವರು ಹೇಳಿದಂತೆ ಲಕ್ಕಪ್ಪಜ್ಜನವರು ವೀರೇಶನ ಸೇವಾ ಕಾರ್ಯಕರ್ತರಾಗಿ ಸೇವೆಯನ್ನು ಅವಿರತ ಸಲ್ಲಿಸಿ ರಟ್ಟೀಹಳ್ಳಿ ದೇವಾಲಯಕ್ಕೆ ಮುಂದಿನ ಮಂಟಪ ಕಟ್ಟಲು ಜೈನದೇವಾಲಯಗಳನ್ನು ಹಾಳುಮಾಡಿ ಬಂದಳಿಕೆಯಿಂದ ಕಲ್ಲು ತರಲು ಕಳಿಸಿರುವುದು, ದಾರಿಯಲ್ಲಿ ಹಿರೇಕೆರೂರು ಕೆರೆಯ ಬಳಿ ನಿಂತಾಗ ರೌದ್ರಾವತಾರತಾಳಿ ಲಕ್ಕಪ್ಪಜ್ಜನವರು ದುರ್ಗಾದೇವಿ ಗತಿಗೇಡಿಹಣ್ಣು ಕಾಯಿ ಬಯಸಿ ಗಾಡಿಗಳನ್ನು ನಿಲ್ಲಿಸಿರುವಳು, ಅದನ್ನು ಸಲ್ಲಿಸಿರಿ. ಬಿಡದಿದ್ದರೆ ಬಾರಿಕೋಲು ತರುವನೆಂದು

ಹೇಳಿ ಎಂದು ಕಳಿಸಿರುವುದು ನಂತರ ಸರಾಗವಾಗಿ ಕಾರ್ಯ ಸಾಗಿರುವುದು. ಅದು ಸುಂದರ ಗೋಪುರ ಹೊಂದಿ ಪಾರ್ವತಿ ಗುಡಿಯಾಗಿ ಇಂದಿಗೂ ಇದೆ. ಬಾವಿ ನಿರ್ಮಿಸಿ ನೀರು ಚಿಮ್ಮುವ ಹಾಗೇ ಮಾಡಿರುವುದು.

ನಂತರ ಲಕ್ಕಪ್ಪಜ್ಜನವರ ಮಗ ರುದ್ರಪ್ಪನಿಗೆ ಗವಿಯಪ್ಪ ಎಂಬ ಮಗನಿದ್ದನು. ಲಕ್ಕಪ್ಪಜ್ಜನವರ ಮನೆತನದ ಏಳಿಗೆ ಸಹಿಸದೇ ಇವರು ಹೇಳುವ ಒಡಪಿನ ಮಾತುಗಳು ಸುಳ್ಳಾಗುತ್ತವೆಂದು ಇವರನ್ನು ನಿಂದಿಸಿ ಮಾತನಾಡುವವರು ಸುದ್ದಿ ಕೇಳಿ, ಕೆರಳಿ ಕೋಪದಿಂದ ರೌದ್ರಾವತಾರವಾಗಿ ವೀರೇಶನ ಬಳಿ ಬಂದು 'ವೀರೇಶಾ ನೀನು ನುಡಿಸಿದಂತೆ ನುಡಿವ ಈ ನಾಲಿಗೆಯ ನುಡಿಗಳು ಸುಳ್ಳಾಗುವವಂತೆ ಆದ್ದರಿಂದ ಈ ನಾಲಿಗೆಯು ಬೇಡ' ಎಂದು ಹೇಳಿ ತಮ್ಮ ನಾಲಿಗೆಯನ್ನೇ ಕೊಯ್ದು ವೀರೇಶನೆದುರಿಗೆ ಇಡಲು ವೀರೇಶ ಪ್ರತ್ಯಕ್ಷನಾಗಿ ನಿಂದಿಸಿದ ಪಾಪಿಗಳು ಪ್ರಾಯಶ್ಚಿತ್ತ ಹೊಂದುವರು ನೀನು ಚಿಂತಿಸದೆ ನಾಲಿಗೆಯನ್ನು ಮೊದಲಿನಂತಿರಿಸಿಕೋ ಎಂದು ಅಪ್ಪಣೆಯನ್ನಿತ್ತು ಆಶೀರ್ವದಿಸಿ ಅದೃಶ್ಯನಾದನು. ಲಕ್ಕಪ್ಪನವರು ನಾಲಿಗೆಯನ್ನಿರಿಸಿಕೊಂಡಾಗ ಮೊದಲಿನಂತಾಯಿತು. ಈ ಪವಾಡದ ಬಗ್ಗೆ ಕೇಳಿದ ಜನರು ಅಜ್ಜನವರನ್ನು ಕೊಂಡಾಡಿದರು. ಕೆಲ ಕಾಲ ಕಳೆದ ನಂತರ ಅವರೂ ವೀರೇಶನ ಪಾದ ಸೇರಿದರು. ಅವರ ಮಗ ರುದ್ರಪ್ಪ ವಿಧಿ ವಿಧಾನ ನೆರವೇರಿಸಿ ಗಣಾರಾಧನೆ ಮಾಡಿದರು.

ಲಕ್ಕಪ್ಪಜ್ಜನವರ ನಂತರ ಅವರ ತಮ್ಮ ಶಿವರಾಯಪ್ಪ ವೀರೇಶನ ಸೇವಾ ಕೈಂಕರ್ಯ ಅತ್ಯಂತ ನಿಷ್ಠೆಯಿಂದ ಮಾಡಲಾರಂಭಿಸಿದರು. ದಿನನಿತ್ಯ ಬಾವಿಯಿಂದ ಮಡಿಬಟ್ಟೆ, ಮಡಿನೀರಿನಿಂದಲೇ ಲಿಂಗಾರ್ಚನೆ ಮಾಡುವವರಾಗಿದ್ದರು. ಒಂದುದಿನ ಇವರ ಲಿಂಗನಿಷ್ಠೆ ಪ್ರಚುರಪಡಿಸಲು ವಸ್ತ್ರದಲ್ಲಿ ರಟ್ಟೆಗೆ ಕಟ್ಟಿಕೊಂಡಿದ್ದ ಇಷ್ಟಲಿಂಗವು ತನ್ನಿಂದತಾನೇ ಸಡಿಲಗೊಂಡು ಬಾವಿಯ ನೀರಿನಲ್ಲಿ ಬೀಳಲು ನೋಡಿದ ಶಿವರಾಯ ಹಿಡಿದುಕೊಂಡು ತಮ್ಮ ಅಚಲವಾದ ನಿಷ್ಠೆ ಕಡಿಮೆಯಾಗಿರಬೇಕೆಂದು ಸಿಟ್ಟಿನಿಂದ ಇಷ್ಟಲಿಂಗಕ್ಕೆ ಹೀಗೆ ಹೇಳಿದನು – ನೀನು ನನ್ನನ್ನು ಬಿಟ್ಟು ಹೋಗದಂತೆ, ಹೋಗಲುಬಾರದಂತೆ ರಟ್ಟೆಯ ಒಳಗೆ ಬಂಧಿಸಿಟ್ಟರೆ ಲೇಸಾಗುವುದು, ಬಿಟ್ಟುಹೋಗಿ ನೀನು ಭಕ್ತರ ಕೂಡ ನಮ್ಮ ಬಗ್ಗೆ ದೂರಿಕೊಳ್ಳುವೆ, ಎಂದು ಊರ ಗೌಡರ ಪಂಚಾಯತರ ಎದುರಿಗೆ – ಥಟ್ಟನೆ ತಪ್ಪಿಸಿಕೊಂಡು ಹೋದ ಕಳ್ಳನಿಗೆ ಯಾವಶಿಕ್ಷೆ? ಎಂದಾಗ ಶಿವರಾಯಪ್ಪನವರು– ಕಳ್ಳನಿಗೆ ಬಂಧನವಾಗಬೇಕು ಎಂದರು. ನಂತರ ಕೈಯಲ್ಲಿರುವ ಸುರಗಿಯಿಂದ ತಮ್ಮ ಎಡರಟ್ಟೆಯನ್ನು ಸೀಳಿ ಅದರಲ್ಲಿರಿಸಿ ಶಿವರಾಯಪ್ಪನವರು – ನಿನಗೆ

ಇದೇ ಶಿಕ್ಷೆ. ಎಂದು ಪವಾಡದಿಂದ ಎಡರಟ್ಟೆಯನ್ನು ಬಟ್ಟೆಯಿಂದ ಸುತ್ತಿಕೊಂಡು ಪೂಜಿಸುವವರಾದರು.

ಇವರ ನಂತರ ರುದ್ರಪ್ಪನವರು ವೀರೇಶನ ಸೇವಾ ಕರ್ತೃವಾದರು ಇವರು ಚಿಕ್ಕವರಿರುವಾಗಲೇ ಅಗ್ನಿಕುಂಡರಚಿಸಿ ಕೆಂಡ ತುಳಿದಾಡುವ ಮತ್ತು ಜನರಿಂದ ಜಾಲಿಮುಳ್ಳು ಗುಡ್ಡಿಹಾಕಿಸಿ ಅದರ ಮೇಲೇರಿ ಆನಂದದಿಂದ ಕುಣಿದಾಡುವ, ಮತ್ತು ಒಡಪಿನ ರುದ್ರವಾಣಿ ನುಡಿಯುವವರಾಗಿದ್ದರು. ಅವರ ಮಗ ಗವಿಯಪ್ಪ ಆಕಸ್ಮಿಕ ಮರಣಹೊಂದಿದಾಗ ವೀರೇಶನ ಸನ್ನಿದಿಯಲ್ಲಿಟ್ಟು ಐದುದಿನದ ನಂತರ ಬದುಕಿಸಿದರು. ರಟ್ಟಿಹಳ್ಳಿಗೆ ರಥೋತ್ಸವಕ್ಕೆ ಎಕ್ಕದ ಎಲೆಗಳಿಂದ ತಯಾರಿಸಿದ ಬುಟ್ಟಿಯಲ್ಲಿ ಗುಗ್ಗಳ ಪುಟಮಾಡಿಕೊಂಡು ತಾವೇ ಹೊತ್ತುಕೊಂಡು ಸಾಗುವಾಗ ಕಿಡಿಗೇಡಿಗಳು ಹರಕೆಯೆಂದು ಹೆಚ್ಚು ಎಣ್ಣೆಯನ್ನು ಸುರುವಿದಾಗ ಅದು ಹೊತ್ತುಕೊಂಡ ರುದ್ರಪ್ಪಜ್ಜನವರ ಮೇಲೆಬಿದ್ದರೂ ಮೈ ಸುಡದಿರುವ ಸನ್ನಿವೇಶ. ಆದರೆ ಅವರ ಮೈಮೇಲಿನ ಎಣ್ಣೆಗೀರಿದವರ ಕೈ ಸಿಪ್ಪೆಸುಲಿದವು. ಆಗ ಊರಲ್ಲಿರುವ ಎಣ್ಣೆ ತೀರುವವರೆಗೂ ಹಾಕಿರೆಂದು ಪಟ್ಟುಹಿಡಿದಾಗ ಕಬ್ಬಿಣಕಂತಿಮಠದ ಮೂಜುಜಾವಿಸ್ವಾಮಿಗಳು ಬಂದು ಸಮಾಧಾನಪಡಿಸಿ ಗುಗ್ಗಳ ಮುಂದುವರೆಸಿರುವರು. ಆಗ ಅಪವಿತ್ರವಾಯಿತೆಂದು ಎಕ್ಕದ ಬುಟ್ಟಿ ತೆಗೆದು ಪಚ್ಚೆ ಕರ್ಪೂರ ಜಡೆಯ ಸಿಂಬಿಯ ಮೇಲಿಟ್ಟು ಜಯಕಾರ ಮಾಡಿದ ಸನ್ನಿವೇಶ. ಮೊದಲು ಅಂಗಾರದ ಪರಡಿಯಲ್ಲಿ ಗುಗ್ಗಳ ಪಟುವು ಮಾಡುತ್ತಿದ್ದರು. ಅಲ್ಲದೇ ಜೈನರನ್ನು ಶರಣಾಗತ ಮಾಡಿಕೊಂಡು ಅವರ ತಲೆಮೇಲೆ ಹೊರಸಿಕೊಂಡು ಹೋಗುವ ಬಗ್ಗೆ ತಿಳಿದುಬರುತ್ತದೆ. ಇದು ಜೈನರಮೇಲಿನ ದಬ್ಬಾಳಿಕೆ ಕೂಡ ಆಗಿತ್ತೆನ್ನಬಹುದು. ಅವರು ಅತ್ಯಂತ ಕಠೋರವಾದಿಗಳಾಗಿರುವುದು ಗೋಚರಿಸುತ್ತದೆ.

ರುದ್ರಪ್ಪಜ್ಜನವರ ಇನ್ನೊಂದು ಘಟನೆಯಲ್ಲಿ ಯುವಕ ಬಾವಿಯಲ್ಲಿ ನೀರು ತೆಗೆದುಕೊಳ್ಳಲಿಕ್ಕೆ ಪಾದರಕ್ಷೆ ಮೆಟ್ಟಿಕೊಂಡು ಇಳಿಯುವುದನ್ನು ಕಂಡು ಜೋಡುಮೆಟ್ಟಿಕೊಂಡು ನೀರಿಗೆ ಬರಬಾರದು ಎಂದು ಹೇಳಿದಾಗ ಅದನ್ನರಿಯದೆ ಮೂಢನು ಮನಬಂದಂತೆ ಮೂದಲಿಸಿ ಅವಮಾನ ಮಾಡಿದಾಗ ನೊಂದುಕೊಂಡ ರುದ್ರಪ್ಪಜ್ಜನು 'ಅವಮಾನವಾದಲ್ಲಿ ಅರಗಳಿಗೆ ಇರಬಾರದೆಂದುದು' ನಿರ್ಧರಿಸಿ ಯಾರಿಗೂ ತಿಳಿಸದೇ ಬ್ಯಾಡಗಿ ತಾಲೂಕು ಮಲ್ಲೂರಿಗೆ ಹೋಗಿದ್ದು ಅಲ್ಲಿಯ ಹಸಬಿಯವರ ಮನೆಯಲ್ಲಿ ನಡೆದ ವೃತ್ತಾಂತ ತಿಳಿಸಿದಾಗ ನೀವು ಮುಪ್ಪಿನವರೆಗೂ ಪೂಜಾ ಕೈಂಕರ್ಯದೊಂದಿಗೆ ಇಲ್ಲಿಯೇ ಇರುವಿರಂತೆ ಎಂದು ಹೇಳಿದಂತೆ ಹನ್ನೆರಡು

ವರ್ಷವಿದ್ದು ಕೊನೆಯುಸಿರೆಳೆದಾಗ ವೀರಭದ್ರ ದೇವಾಲಯದ ಎದುರಿಗಿದ್ದ ಬಯಲು ಜಾಗೆಯಲ್ಲಿ ಸಮಾಧಿ ಮಾಡಿದರು. ಗದ್ದುಗೆ ಕಟ್ಟಿಸಿ ಗಣಪರ್ವ ಮಾಡಿದರು. ನಾನು ಕ್ಷೇತ್ರ ಕಾರ್ಯಕ್ಕೆ ಹೋದಾಗ, ಇಂದಿಗೂ ನೆಸ್ವಿ ಅಜ್ಜನವರ ಗದ್ದುಗೆಯಿದು ಎಂದು ಹೇಳುವುದು ಕಂಡು ಬಂದಿದೆ.

ತರುವಾಯ ಗವಿಯಪ್ಪಜ್ಜನವರು ಸೇವಾಕೈಂಕರ್ಯಕ್ಕೆ ನಿಯಮಿತರಾದರು. ಮನೆದೇವರಾದ ರಟ್ಟೀಹಳ್ಳಿ ವೀರೇಶನಿಗೆ ಗುಗ್ಗಳ ಸೇವೆಗೆ ಅಪ್ಪಣೆ ಪಡೆಯಲಿಚ್ಚಿಸಿದಾಗ ಬೇಡವೆಂದರೂ ಗುಗ್ಗಳವನ್ನು ಪುಟ ಮಾಡಿಕೊಂಡು ಹೊರಟಾಗ ಗುಗ್ಗಳ ಕೊಡ & ಸಿಂಬಿ ಒಡೆದು ಹೋಳಾಗಿರುವುದು ಅಪರಾಧವಾಯಿಂತೆಂದು ಮರು ವರ್ಷ ಅಪ್ಪಣೆ ಪಡೆದು ಗುಗ್ಗಳ ಮಾಡಲು ನಿಶ್ಚಯಿಸಿದ್ದು ಯಶಸ್ವಿಗೊಳಿಸಿದರು. ಕಾಲಾನಂತರ ಸೇವಾಕೈಂಕರ್ಯ ಮುಂದುವರೆಯಿತು. ರುದ್ರವಾಣಿಗಳು ನಾಡಿನಲ್ಲಿ ಪ್ರಸಿದ್ಧಿ ಪಡೆದವು ಒಂದು ನೂರು ವರ್ಷ ಬದುಕಿದ ಅಜ್ಜನವರು ಮರಣ ಹೊಂದಿದರು ಅವರ ಗದ್ದುಗೆಯನ್ನೂ ಸ್ಥಾಪಿಸಲಾಯಿತು.

ತದನಂತರ ಲಕ್ಕಪ್ಪಜ್ಜನವರ ದ್ವಿತೀಯ ಪುತ್ರ ಶಿವರುದ್ರಪ್ಪನವರು ಇಷ್ಟಲಿಂಗ ಧರಿಸಿಕೊಂಡು ಸೇವಾಕಾರ್ಯಕರ್ತರಾದರು. ಬನ್ನಿಯ ಹಬ್ಬದ ಸನ್ನಿವೇಶದಲ್ಲಿ ಶಿವರುದ್ರಪ್ಪಜ್ಜನವರು ವೀರೇಶನ ಪ್ರೇರಣೆಯಿಂದ ದಿಗ್ಗನೆಎದ್ದು ವೀರಾವೇಶದಿಮದ ರುದ್ರವಾಣಿಯನ್ನು ನುಡಿಯಲು ಜನವೆಲ್ಲ ಬೆರಗಾದರು. ಇವರು ರಟ್ಟೀಹಳ್ಳಿಯ ರಥೋತ್ಸವದ ಸಂದರ್ಭದಲ್ಲಿ ಶಿರವರಿದುಕೊಂಡು ಮತ್ತೆ ಮೊದಲಿನಂತೆ ಇರಿಸಿಕೊಳ್ಳಬೇಕೆಂದು ಸಂಕಲ್ಪ ಮಾಡಿದರು. ಇದಕ್ಕೆ ಹಿರೇಕೆರೂರು ತಾಲೂಕಾ ಮಾಮಲೇದಾರರು ಒಪ್ಪದಿರುವಾಗ ಲಿಂಬಿ ಹಣ್ಣನ್ನು ತಂದು ಅದನ್ನು ಎರಡು ಹೋಳಾಗಿ ಮಾಡಿ ಹೋಳುಗಳನ್ನು ಕೈಯಲಿಟ್ಟು ಮುಚ್ಚಿಕೊಳ್ಳಲು ಹೇಳಿ ವೀರೇಶನಿಗೆ ಮಂಗಳಾರತಿ ಮಾಡಿ ಮಾಮಲೇದಾರರೇ ಈಗ ನೋಡಿ ನಿಮ್ಮ ಕೈಯಲ್ಲಿ ಹೇಗಿದೆ ಹೇಳಿ ಎಂದಾಗ ಹೋಳಿಲ್ಲದ ನಿಂಬೆ ಹಣ್ಣನ್ನು ಕಂಡು ಬೆರಗಾದರು. ಆಗ ನೀವು ಪವಾಡ ಪುರುಷರಿದ್ದೀರಿ ಆದರೆ ಇಂದಿನ ಕಲಿಗಾಲದಲ್ಲಿ ಪವಾಡ ಮಾಡಿ ತೋರಿಸುವುದರಿಂದ ಆಗುವುದಾದರೂ ಏನು?ಎಂದು ಶಿರಸ್ಸು ಪವಾಡವನ್ನು ನಿಲ್ಲಿಸಿದರು. ಗುಗ್ಗಳ ಸೇವೆಯನ್ನು ನಿರಂತರ ಮಾಡಿದರು. ಕಾಲಾನಂತರ ವೀರೇಶನ ಪಾದ ಹೊಂದಿದರು ಎಂಬ ಮಾಹಿತಿಯಿದೆ.

ತರುವಾಯ ವೀರಪ್ಪಜ್ಜನವರು ಪೂಜಾಕೈಂಕರ್ಯ ಮುಂದುವರೆಸಿದರು. ಇವರು ಒಂದು ಸಲ ಅಶ್ವೀಜ ಮಾಸದ ಚತುರ್ದಶಿಯಂದು ಪೂಜೆ ಮುಗಿಸಿ ಇರುವಾಗ

ಇದ್ದಕ್ಕಿದಂತೆ ವೀರೇಶನ ಪ್ರೇರಣೆಯಿಂದ ದಿಗ್ಗನೆ ಎಂದು ಕುಳಿತು ವೀರಾವೇಶದಿಂದ ಗರ್ಜಿಸುತ್ತಾ ರುದ್ರವಾಣಿ ನುಡಿದರು. ಆಗ ಜನವೆಲ್ಲ ಬೆರಗಾಗಿ ವೀರೇಶನ ಮಹಿಮೆ ಎಂದು ತಿಳಿದು ಉಡುಗೊರೆಯಿತ್ತು ಮೆರವಣಿಗೆ ಮಾಡಿದರು. ಮುಂದೆ ಅವರು ಕೇಳಲು ಬಂದವರಿಗೆ ರುದ್ರವಾಗಿ ನುಡಿಯುತ್ತಾ ಪೂಜಾಕೈಂಕರ್ಯದೊಂದಿಗೆ ಮುಂದುವರೆದು ವಯಸ್ಸಾದ ನಂತರ ದೇಹಾಲಸ್ಯದಿಂದ ದೈವಾದೀನರಾದರು ಇವರ ಸಮಾಧಿಯನ್ನು ವೀರಬೊಮ್ಮಪ್ಪಜ್ಜನವರ ಪಕ್ಕದಲ್ಲಿಯೇ ಮಾಡಿದರು.

ಇವರ ಆಚರಣೆಯಲ್ಲಿ ಅಜ್ಜಗುರುಗಳಾದಾಗ ಜನಿವಾರವನ್ನು ತೆಗೆದು ಲಿಂಗ ಧರಿಸುವುದು ಕಂಡು ಬರುತ್ತದೆ. ಕಾರ್ತಿಕ ಮಾರ್ಗಶಿರ ಮಾಸದಲ್ಲಿ ದಾನವನ್ನು ಪಡೆಯಲು ಊರುಗಳಿಗೆ ತೆರಳುವರು ದಾನಕೊಡುವವರು ಅಜ್ಜನವರಮನೆಗೆ ತಂದುಕೊಡುವ ಪದ್ಧತಿಯಿದೆ.

ವೀರಪ್ಪಜ್ಜನವರ ತರುವಾಯ ಇವರ ಮೂರನೆಯ ಪುತ್ರರಾದ ರುದ್ರಪ್ಪಜ್ಜನವರು ವೀರೇಶನ ಪ್ರೇರಣೆಯಿಂದ ಜಟೆಗಡ್ಡಗಳನ್ನು ಬಿಟ್ಟು ಲಿಂಗದೀಕ್ಷಿತರಾಗಿ ಪೂಜೆ ಪುನಸ್ಕಾರಗಳಲ್ಲಿ ನಿರತರಾಗಿದ್ದರು. ಒಂದು ಸಲ ಬನ್ನಿಹಬ್ಬದಲ್ಲಿ ಸಂಜೆ ವೀರಬೊಮ್ಮಪ್ಪಜ್ಜನವರ ಗದ್ದುಗೆ ಬಳಿ ಮೌನದಿಂದ ಕುಳಿತಿರುವುದನ್ನು ನೋಡಿದ ಜನ ಇವರ ಗೊಡವೆಗೆ ಬರಲಿಲ್ಲ ಅನಂತರ ವೀರಾವೇಶದಿಂದ ರುದ್ರವಾಣಿ ನುಡಿದಾಗ ಜನ ಬೆರಗಾದರು ಅಂದಿನಿಂದ ಇವರ ವೀರೇಶನ ಸೇವಾ ಕಾರ್ಯಕರ್ತರಾದರು ಇವರನ್ನು ರುದ್ರಪ್ಪಜ್ಜನವರೆಂದು ಎಲ್ಲರೂ ನಮಿಸಿದರು ಸನ್ಮಾನಿಸಿ ಮೆರವಣಿಗೆ ಮಾಡಿ ಕೇಳಲು ಬಂದವರಿಗೆ ರುದ್ರವಾಣಿಯ ಹೇಳುತ್ತ ಅದ್ದೂರಿಯಾಗಿ ಕಾರ್ತಿಕೋತ್ಸವ ನಡೆಸುತ್ತಾರೆ. ಇಂದಿಗೂ ನಿರಂತರವಾಗಿ ಈ ವಿಧಿ ವಿಧಾನಗಳು ಅವರ ಮನೆಯ ಒಳಗಡೆ ಇರುವ ವೀರಭದ್ರನ ಸನ್ನಿದಿಯಲ್ಲಿ ನಡೆಯುವುದನ್ನು ಕಾಣಬಹುದು.

ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನಲ್ಲಿ ಅಬ್ಬಲೂರು ಸೋಮೇಶ್ವರ ಮತ್ತು ರಟ್ಟೀಹಳ್ಳಿ ವೀರಭದ್ರೇಶ್ವರ ದೇವಸ್ಥಾನಗಳಲ್ಲಿರುವ ಎರಡು ಶಿರಸ್ಸು ಪವಾಡದ ಶಿಲ್ಪಗಳು ಐತಿಹಾಸಿಕ ಪೌರಾಣಿಕ ಮಹತ್ವ ಪಡೆದಿವೆ ಸುಮಾರು ೧೫-೧೬ ಕಿಲೋ ಮೀಟರ ಅಂತರದಲ್ಲಿರುವ ಈ ರೀತಿಯ ಪವಾಡ ಸಾದೃಶ್ಯವು ವಿಶಿಷ್ಟತೆಯನ್ನು ಪಡೆದಿವೆ.

ಅಬಲೂರಿನ ಏಕಾಂತರಾಮಯ್ಯ ಶಿರಸ್ಸು ಪವಾಡಕ್ಕೆ ಸಾಕ್ಷಿಯಾದರೆ ರಟ್ಟೀಹಳ್ಳಿಯಲ್ಲಿ ವೀರಭದ್ರ ದೇವಸ್ಥಾನದಲ್ಲಿರುವ ನೇಸ್ವಿಯ ವೀರಬೊಮ್ಮಪ್ಪಜ್ಜನವ ಶಿಲ್ಪ ಸಾಕ್ಷಿಯಾಗಿದೆ. ಇವೆರಡು ಘಟನೆಗಳ ನಡುವೆ ಅಂತರ ಸಂಬಂಧವಿರುವುದನ್ನು

ಕಾಣಬಹುದಾಗಿದೆ. ಏಕಾಂತರಾಮಯ್ಯ ಕಲ್ಬುರ್ಗಿಯ ಆಳಂದೆಯಿಂದ ಶೈವ ಕ್ಷೇತ್ರಗಳನ್ನು ಸಂದರ್ಶಿಸುತ್ತ ಅಬ್ಬಲೂರಿಗೆ ಮುಳಗುಂದದ ಮಾರ್ಗವಾಗಿ ಬಂದು ಬ್ರಹ್ಮೇಶ್ವರ ಗುಡಿ ಹೊಕ್ಕನು. ಏಕಾಂತರಾಮಯ್ಯನವರ ಶೈವಧರ್ಮದ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ಉದ್ದೇಶವಿದ್ದಿತು. ಅದಕ್ಕೆ ಸಂಬಂಧಿಸಿದಂತೆ ಅಲ್ಲಲ್ಲಿ ಜಿನಬಿಂಬ ಒಡೆದ ಘಟನೆಗಳು ಶಾಸನ ಮೊದಲಾದ ಕೃತಿಗಳಲ್ಲಿ ಉಲ್ಲೇಖವಾಗಿರುವುದನ್ನು ಗಮನಿಸಲಾಗಿದೆ. ಆದರೆ ನೆಸ್ವಿಯ ಪರಂಪರೆಯ ಉದ್ದೇಶವೇ ಭಿನ್ನ ಇಲ್ಲಿ ಶಿವನೇ ತಾನಾಗುವ ಸಂಸ್ಕಾರವಿದೆ. ಅಂದರೆ ಶಿವನನ್ನು ಒಲಿಸಿಕೊಳ್ಳುವುದಲ್ಲ ತಾನೇ ದೇವತ್ವಕ್ಕೇರುವುದಾಗಿದೆ.

ಈ ಎರಡು ಘಟನೆಗಳನ್ನು ಸಮೀಕರಿಸಿ ಚರ್ಚೆಗೊಳಪಡಿಸಿದಾಗ ಕೆಳಕಂಡ ಅಂಶಗಳು ಗೋಚರವಾಗುತ್ತವೆ.

* ಶಿರಸ್ಸು ಪವಾಡದ ಎರಡು ಘಟನೆಗಳು ಹತ್ತಿರದಲ್ಲಿಯೇ ನಡೆದಿದ್ದು ಸುಮಾರು ೧೬ ಕಿ.ಮೀ ಅಂತರದಲ್ಲಿ ನಡೆದಿವೆ.
* ಕೆಲವು ಮೂಲಗಳ ಪ್ರಕಾರ ಅಬ್ಬಲೂರು ಚರಿತೆಯಲ್ಲಿ ಶಿವನು ಕನಸಿನಲ್ಲಿ ಬಂದು ಅಬ್ಬಲೂರಿಗೆ ಪಯಣಿಸಲು ತಿಳಿಸುತ್ತಾನೆ ಎಂದಿದೆ.
* ಅದೇರೀತಿ ಚಿಕ್ಕ ಮಾಗಡಿಯ ಶಿವರಾಯಪ್ಪನಿಗೆ ಕನಸಿನಲ್ಲಿ ಬಂದು ನೆಸ್ವಿಗ್ರಾಮದಲ್ಲಿ ನೆಲೆಸುವವನಾಗು ಅಲ್ಲಿ ನಿಮ್ಮ ವಂಶಜರಿಂದ ಪವಾಡಗಳು ನಡೆಯುತ್ತವೆಂಬ ಮಾಹಿತಿಯಿದೆ.
* ಅಬ್ಬಲೂರು ಶಾಸನದಲ್ಲಿ ಪುಲಿಗೆರೆ ಸೋಮನಾಥನನ್ನು ಆರಾಧಿಸುವಾಗ ಪರಮೇಶ್ವರ ಪ್ರತ್ಯಕ್ಷನಾಗಿದ್ದ ಅಬ್ಬಲೂರಿಗೆ ಹೋಗಿ ನಿನ್ನ ಶಿರವನ್ನು ಪಣಕ್ಕಿಟ್ಟಾದರೂ ಶೈವ ಪಾರಮ್ಯ ಮೆರೆಸು ಎಂದಿರುವ ಬಗ್ಗೆ ವಿವರವಿದೆ.
* ನೆಸ್ವಿಯ ಚರಿತ್ರೆಯಲ್ಲಿ ದೇವಸ್ಥಾನ ಕಟ್ಟಲು ಸಂಕಲ್ಪ ಮಾಡಿಕೊಂಡು ಅಪ್ಪಣೆ ಪಡೆಯಲು ವೀರಭದ್ರ ದೇವರ ಬಳಿ ಹೋಗಿ ಸ್ತುತಿಸಿದಾಗ ಪ್ರತ್ಯಕ್ಷನಾಗಿ ನನಗೆ ಗುಡಿ ಬೇಡ ವಂಶಪಾರಂಪರ್ಯ ನಿಮ್ಮ ಮನೆಯಲ್ಲಿಯೇ ವಾಸವಾಗಿರುವೆನು ಎಂದು ನುಡಿದನೆಂದಿದೆ.
* ಸೋಮೇಶ್ವರ ದೇವಸ್ಥಾನದಲ್ಲಿ ಏಕಾಂತರಾಮಯ್ಯ ಜೈನರೊಡನೆ ಹೋರಾಟ ಮಾಡಿದ ಶಿರಸ್ಸು ಪವಾಡದ ಶಿಲ್ಪಗಳಿವೆ, ಶಾಸನಗಳಿವೆ.

* ರಟ್ಟೀಹಳ್ಳಿಯ ವೀರಭದ್ರೇಶ್ವರ ದೇವಸ್ಥಾನದಲ್ಲಿ ವೀರಬೊಮ್ಮಪ್ಪಜ್ಜನವರ ಶಿರಸ್ಸು ಪವಾಡದ ಪ್ರತೀಕವಾಗಿದೆ. ಶಿಲೆಯ ಶಿರಸ್ಸು ಇಂದಿಗೂ ಪೂಜೆಗೊಳ್ಳುತ್ತಾ ಮಹಿಮೆಯನ್ನು ಸಾರುತ್ತದೆ.

* ಅಬ್ಬಲೂರಿನ ಚರಿತೆ ಎಂಬ ಕೃತಿಯು ನಿರಂಜನ ಕವಿಯಿಂದ ರಚಿತವಾಗಿದೆ.

* ನೆಸ್ವಿ ವೀರಭದ್ರೇಶ್ವರ ಚರಿತೆ ಎಂಬ ಕೃತಿಯು ತುಮ್ಮಿನಕಟ್ಟಿಯ ಕೋಗುಂಡಿ ನೀಲಕಂಠಪ್ಪನವರು ರಚಿಸಿದ್ದಾರೆ.

* ಹರಹರನ ರಗಳೆ, ಬಸವೇಶ್ವರ ಪುರಾಣ, ಸಿದ್ದೇಶ್ವರ ಪುರಾಣ, ಭೈರವೇಶ್ವರ ಕಾವ್ಯದ ಕಥಾವಮಣಿ ಸೂತ್ರ ರತ್ನಾಕರ, ಅಬ್ಬಲೂರು ಚರಿತೆ, ಪಾಲ್ಕುರಿಕೆ ಸೋಮೇಶ್ವರ ಪುರಾಣ, ಬಸವರಾಜವಿಜಯ, ಕೃತಿಗಳಲ್ಲಿ ವಿಭಿನ್ನ ರೀತಿಯಲ್ಲಿ ಏಕಾಂತರಾಮಯ್ಯನ ಪವಾಡದ ಸನ್ನಿವೇಶಗಳನ್ನು ಚಿತ್ರಿಸುತ್ತವೆ.

* ಅದೇ ರೀತಿ ನೇಸ್ವಿ ವೀರಭದ್ರೇಶ್ವರ ಚರಿತೆಯಲ್ಲಿ ವಂಶ ಪಾರಂಪರ್ಯವಾಗಿ ಎಂಟು ಜನ ಅಜ್ಜನವರೆಂದು ವೀರಬೊಮ್ಮಪ್ಪಜ್ಜನವರ ನಿಲಾಂಜನ ಶಿರಸ್ಸು ಪವಾಡ, ಲಕ್ಕಪ್ಪಜ್ಜನವರ ನಾಲಿಗೆ ಪವಾಡ, ಶಿವರಾಯಪ್ಪಜ್ಜನವರ ರಟ್ಟೆಯ ಸೀಳಿ ಲಿಂಗ ಪ್ರತಿಷ್ಠೆಯ ಪವಾಡ, ರುದ್ರಪ್ಪಜ್ಜನವರ ಎಕ್ಕದೆಲೆಯ ಗುಗ್ಗಳಪವಾಡ, ಗವಿಯಪ್ಪಜ್ಜನವರ ರುದ್ರವಾಣಿ ಮೊಳಗಿಸಿದ ಪವಾಡ, ಶಿವರಾಯಪ್ಪಜ್ಜ, ಶಿವರುದ್ರಪ್ಪಜ್ಜ, ವೀರಪ್ಪಜ್ಜ, ರುದ್ರಪ್ಪಜ್ಜನವರು ಸಂಕಲ್ಪಿಸಿದ ವಿವಿಧ ರೀತಿಯ ಪವಾಡ ಮೆರೆದ, ರುದ್ರವಾಣಿ ನುಡಿದ ವಿವರಗಳು ಇಂದಿಗೂ ಜನಮಾನಸದಲ್ಲಿದೆ.

* ಆ ಕಾಲಕ್ಕೆ ಚಿಕ್ಕಮಾಗಡಿ ಶಾಸನದಲ್ಲಿ ಮೂಜುಜಾವಿದೇವರ ಉಲ್ಲೇಖವಿದೆ.

* ರಟ್ಟೀಹಳ್ಳಿಯ ನಾಲ್ಕು ಶಾಸನಗಳಲ್ಲಿ ಮೂಜುಜಾವಿದೇವರ ಉಲ್ಲೇಖ ಆ ಕಾಲದಲ್ಲಿಯೇ ಲಭಿಸುತ್ತವೆ.

* ಏಕಾಂತರಾಮಯ್ಯನು ಸಂಸಾರಿಯಾಗಿದ್ದು ಪವಾಡ ಕೈಂಕರ್ಯ ಮಾಡಿರುವುದು.

* ನೆಸ್ವಿ ಅಜ್ಜನವರೆಲ್ಲರೂ ಸಂಸಾರಿಗಳಾಗಿದ್ದು ಪವಾಡ ಸೇವಾ ಕೈಂಕರ್ಯ ನಡೆಸುತ್ತಾರೆ, ಯಾರಿಗೆ ಪೂಜಾ ಕೈಂಕರ್ಯ ಮುಂದುವರೆಸಬೇಕೆಂದು ರುದ್ರವಾಣಿ ನುಡಿದಾಗ ಮುಂದುವರೆಸಿದ್ದಿದೆ.

* ನೆಸ್ವಿಯ ವೀರಬೊಮ್ಮಜ್ಜನವರು ಸಿರಸ್ಸು ಪವಾಡಕ್ಕೆ ಬಳಸಿದ ಚಂದ್ರಾಯುಧ ಇನ್ನೂ ರಟ್ಟಿಹಳ್ಳಿಯ ವೀರಭದ್ರ ದೇವಸ್ಥಾನದಲ್ಲಿ ಪೂಜೆಗೊಳ್ಳುತ್ತಿದೆ.
* ಏಕಾಂತರಾಮಯ್ಯ ಬಳಸಿದ ಗಂಡುಗತ್ತರಿ [ಚಂದ್ರಾಯುಧ] ಯ ಬಗ್ಗೆ ಅಬ್ಬಲೂರು ಚರಿತದಲ್ಲಿ ಉಲ್ಲೇಖವಿದೆ.
* ದೇಗುಲಕ್ಕೆಂದು ಭಕ್ತ ಜನವು ಆದರದಿಂದ 'ಕೊಟ್ಟಡಂ ಹಾಗವನಾದಡಂ ಕಳದುಕೊಳ್ಳದೆ ಬೇಡದೆ ನಾಡೆ ದೈನದಿಂ ಪೋಗಿ ನೃಪಾಳರಂ ಶಿವನನುಗ್ರಹವಕ್ಷಯವಾಗೆ ಮಾಡಿದಂ ದೇಗುಲ.
* ನೆಸ್ವಿ ಪರಂಪರೆಯಲ್ಲಿ ದಾನ ಕೊಡುವ ಸಂಪ್ರದಾಯವಿದೆಯೇ ಹೊರತು ಪಡೆಯುವುದು ಅಷ್ಟಕ್ಕಷ್ಟೇ ಎಂಬುದು ಶಂಕರಾಚಾರ್ಯರ ಹೊಲ ಕೊಡುವ ಪ್ರಸಂಗ ನೆನಪಿಸುತ್ತದೆ. ಅಲ್ಲದೆ ರಥೋತ್ಸವ ಗುಗ್ಗಳದ ಸಂದರ್ಭದ ದಾಸೋಹದ ಸಮಯದಲ್ಲಿ ವಿಭೂತಿ, ವಸ್ತ್ರ, ಕಾಸು, ಫಲ ತಾಂಬೂಲಗಳನ್ನು ಜಂಗಮರಿಗೆ, ಭಕ್ತರೆಲ್ಲರಿಗೂ ಈ ಪರಂಪರೆಯ ಅಜ್ಜನವರು ದಾನ ಕೊಡುವ ಸಂಪ್ರದಾಯ ಇಂದಿಗೂ ಪ್ರಚಲಿತವಿರುವುದನ್ನು ಕಾಣುತ್ತೇವೆ.
* ತಮ್ಮ ಪರಂಪರೆಗೆ ಉಳವಿಗೆ ಅನುಕೂಲಕರವಾದ ಸಾಧ್ವಿ ಮನೆತನದಿಂದ ಕನ್ಯೆ ತರುವ ಸಂಬಂಧ ಬೆಳೆಸಲು ಹಲವಾರು ಬಾರಿ ಶಿಕಾರಿಪುರ ತಾಲೂಕು ಗೊಗ್ಗದಿಂದಲೇ ವೈವಾಹಿಕ ಸಂಬಂಧ ಬೆಳೆಸಿದ್ದು ಕಂಡು ಬರುತ್ತದೆ.
* ಏಕಾಂತರಾಮಯ್ಯ ಕಾಶಿಕಟ್ಟಿದ ಶಿಲ್ಪ ಅವನ ವೇಷವನ್ನು ತಿಳಿಸುತ್ತದೆ. ಅದೇ ರೀತಿ ನೆಸ್ವಿಯ ಮನೆಯನದವರೇ ಕಾಶಿಕಟ್ಟುವ ಸಂಪ್ರದಾಯ ಹೊಂದಿದ್ದರು. ಇಲ್ಲಿ ಮುಖಾಮುಖಿ ಸಾಮ್ಯತೆಯು ಗೋಚರವಾಗುತ್ತದೆ.
* ಇಲ್ಲಿಯ ಪರಂಪರೆಯ ಎಲ್ಲಾ ಸೇವಾಕರ್ತೃಗಳೇ ದೇವತ್ವಕ್ಕೆ ಸಾಗುವುದಾಗಿದೆ ಅವರನ್ನೆಲ್ಲ ದೇವರ ಸ್ವರೂಪವೆಂದೇ ಭಾವಿಸುವರು.

ಕಾಳಾಮುಖ ತೀವ್ರಗಾಮಿಗಳಲ್ಲಿ ರಾಮಯ್ಯನೆಂಬ ಉಗ್ರಶಿವಭಕ್ತನೊಬ್ಬ ಏಕಾಂಗಿಯಾಗಿ ಜೈನರ ವಿರುದ್ದ ಉಗ್ರವಾದ ಹೋರಾಟ ನಡೆಸುತ್ತಿದ್ದನು. ಅವನ ಉಗ್ರ ಹೋರಾಟವು ಕಳಚೂರ್ಯ ರಾಜನಿಗೆ ತಿಳಿದ ವಿಷಯವಾಗಿದ್ದರೂ ಬನವಾಸೆ ಪ್ರದೇಶದ ಕಾಳಾಮುಖಿರು ಅದಕ್ಕೆ ಪ್ರತ್ಯಕ್ಷ ಅನುಮತಿಯನ್ನು ನೀಡಿದಂತೆ ತೋರುವುದಿಲ್ಲ ಮತ್ತು

ರಾಮಯ್ಯನ ಜೈನ ವಿರೋಧಿ ಚಳುವಳಿಯನ್ನು ಕಾಳಾಮುಖರು ಖಂಡಿಸುವಂತೆಯೂ ಇರಲಿಲ್ಲ.

ಅಬ್ಬಲೂರಿನಲ್ಲಿ ವೀರಭಕ್ತಿಯನ್ನು ಪ್ರತಿಪಾದಿಸಿದ ಏಕಾಂತದ ರಾಮಯ್ಯನಿಗೂ ಹಾಗೂ ಬಸವಾದಿ ಕಲ್ಯಾಣ ಪ್ರತಿಪಾದಿತವಾದ ಹೊಸ ಶೈವ ಪಂಥಕ್ಕೂ (ನಂತರ ಹೊಸಶೈವವಾದ) ಯಾವ ಸಾಮಾನ್ಯ ಅಂಶಗಳು ಕಂಡುಬರುವುದಿಲ್ಲ. ಬಸವನ ಚಳುವಳಿ 'ವೀರ' ಎಂಬ ಪ್ರತ್ಯಯ ಸೇರಿದ್ದು ಅನಂತರದಲ್ಲಿ ಅದನ್ನು ವೈದಿಕರ ತತ್ವಗಳ ವಿರೋಧವಾಗಿ ಬಳಸಿಕೊಡಿದ್ದಾರೆಂದು ಎಸ್.ಶೆಟ್ಟರವರ ಅಭಿಮತ. ಕಾಳಾಮುಖರು ಈ ಉಗ್ರಶೈವರನ್ನು ಸಹಿಸಿಕೊಂಡಂತೆ ಈ (ಹೊಸ) ಶೈವರು ಪ್ರಾರಂಭಿಕ ಹಂತದಲ್ಲಿ ಸಹಿಸಿಕೊಳ್ಳಬೇಕಾಯಿತು.

ಎಸ್ ಶೆಟ್ಟರವರು ಹೊಸಶೈವರು ತಮ್ಮ ಹೊಸ ಸಂಪ್ರದಾಯವನ್ನು ದೃಢಗೊಳಿಸುವಲ್ಲಿ ತಮ್ಮ ಮಠಗಳ ಮೂಲಕ ಮಹತ್ವದ ಪಾತ್ರವಹಿಸಿದರು. ಹಾಗಾಗಿ ಪ್ರಾರಂಭದಲ್ಲಿ ಹೊಸಶೈವರು ದೇವಾಲಯಗಳನ್ನು ಕಟ್ಟುವುದರಲ್ಲಾಗಲಿ, ನಿರ್ವಹಿಸುವುದು, ದಾನ ದತ್ತಿ ನೀಡುವುದು, ಸ್ವೀಕರಿಸುವುದರಲ್ಲಿ ಆಸಕ್ತರಿಲ್ಲದ ಕಾರಣ ಕಾಳಾಮುಖರಂತೆ ದಾನಶಾಸನ ಬರೆಸುವ ಅವಕಾಶಗಳೇ ಇರಲಿಲ್ಲವೆಂದಿದ್ದಾರೆ. ಈ ಹೊಸ ಶೈವ ಸಂಪ್ರದಾಯದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡ ಕಾಳಾಮುಖರು ಉಗ್ರಭಕ್ತರಿಂದ ಅವನ ಸಭೆಯಲ್ಲೇ ಆತನ ಶಿರಚ್ಛೇದನವಾದದ್ದನ್ನು ಉಲ್ಲೇಖಿಸುತ್ತಾರೆ.

ಕಾಳಾಮುಖರಲ್ಲಿ ಶೈವ ಪಂಥದವರು ತಮ್ಮ ವೈರಿಗಳ ಮೇಲೆ ಎರಗಿ ನಾಶಮಾಡಲು ಹವಣಿಸುತ್ತಿದ್ದರು. ಈ ವೈರಿಗಳಲ್ಲಿ ಜೈನರು, ಚಾಲುಕ್ಯ ಕಳಚೂರ್ಯ ರಾಜ್ಯದಲ್ಲಿ ಅತ್ಯಂತ ಪ್ರಭಾವಿಗಳೂ, ಸ್ಥಿತಿವಂತರೂ ಹಾಗೂ ಪ್ರಭಲ ಅಲ್ಪಸಂಖ್ಯಾತರೂ ಆಗಿದ್ದರು. ಪ್ರಾರಂಭದಲ್ಲಿ ಕಾಳಾಮುಖರ ಈ ಪಂಥ ಜಿನಾಲಯಗಳ ಮೇಲೆ ತಮ್ಮ ಸಾಂಕೇತಿಕ ಅಧಿಕಾರ ಹೇರುವಷ್ಟಕ್ಕೆ ಸಂತೃಪ್ತರಾಗಿದ್ದರು. ಅನೇಕ ಜಿನಾಲಯಗಳು ಕಾಳಾಮುಖರಿಗೆ ತಮ್ಮ ಅಧೀನತೆ(ಪ್ರತಿಬದ್ಧ) ಯನ್ನು ಘೋಷಿಸಿಕೊಂಡಿರಬೇಕಾಗಿತ್ತು. ಇದು ಕಲಹಕ್ಕೆ ಎಡೆಮಾಡಿಕೊಟ್ಟಾಗ ಕಾಳಾಮುಖರು ಜೈನರನ್ನು ವಾದದಲ್ಲಿ ಸೋಲಿಸಿದ ನಂತರ ನೂರಾರು ಬಸದಿಗಳನ್ನು ಹಾಳುಮಾಡಿ ಪ್ರಾಬಲ್ಯ ಸ್ಥಾಪಿಸಿದರು. ಇವುಗಳಲ್ಲಿ ದೇವರ ದಾಸಿಮಯ್ಯನು ಕಲ್ಯಾಣದಲ್ಲಿ ಕ್ರಿಶ ೧೦೧೫ -೧೦೪೦ ರಲ್ಲಿ ನಡೆಸಿದ ಆಕ್ರಮಣ ಅಬ್ಬಲೂರಿನ ಏಕಂತರಾಮಯ್ಯನು ನಡೆಸಿದ ಆಕ್ರಮಗಳನ್ನು ವೈಭವೀಕರಿಸಲಾಗಿದೆ.

ಏಕಾಂತರಾಮಯ್ಯ ಹಾಗೂ ಈ ಕಾಳಾಮುಖ ಯತಿಗಳು ಒಳ್ಳೆಯ ಸೌಹಾರ್ದಪೂರ್ಣವಾದ ನಂಟುಗಳನ್ನು ಹೊಂದಿದ್ದರು ಎನ್ನಬಹುದಾಗಿದೆ. ಹೀಗೆ ಸ್ತುತಿಮಾಡುವ ಕಾಲಕ್ಕೆ ಏಕಾಂತದ ರಾಮಯ್ಯನೂ ಕೂಡ ಕಾಳಾಮುಖ ಸಂಪ್ರದಾಯದವನೇ ಆಗಿರುವ ಸಾಧ್ಯತೆಯೂ ಇದೆ. ಅವನೊಬ್ಬ ಯತಿಯೂ ಆಗಿದ್ದನು ಪುರಾಣದ ಹೇಳಿಕೆಯಂತೆ ಏಕಾಂತರಾಮಯ್ಯ ಬಸವನ ಕೀರ್ತಿಯನ್ನು ಆಲಿಸಿ ಅವನನ್ನು ಕಾಣಲೆಂದು ಕಲ್ಯಾಣಕ್ಕೆಹೋದನು ಅಂದರೆ ಏಕಾಂತರಾಮಯ್ಯನು ತುಂಬಾ ಸುವಿಖ್ಯಾತನಾದ ತರುವಾಯ ವೀರಶೈವನಾದನೆಂದು ಸೂಚಿತವಾಗುತ್ತದೆ ಎನ್ನುತ್ತಾರೆ ಲಾರೆಂಜರವರು [ಲಾರೆಂಜನ್ ಎನ್ ಡೆವಿಡ್.; ಕಾಪಾಲಿಕರು ಮತ್ತು ಕಾಳಾಮುಖರು, ಪುಟ. ೨೨೩]

ಏಕಾಂತರಾಮಯ್ಯನಿಂದ ಅಬ್ಬಲೂರಿನಲ್ಲಿ ನಡೆದ ಘಟನೆಯ ಸಾಧಕ-ಬಾಧಕಗಳನ್ನು ಬಹುಶಃ ಬಿಜ್ಜಳನು ಅರ್ಥಮಾಡಿಕೊಳ್ಳಲಿಲ್ಲ, ಜೈನರು ನ್ಯಾಯಕ್ಕಾಗಿ ಹಾಗೂ ತಮ್ಮ ರಕ್ಷಣೆಗೆ ಬಿಜ್ಜಳನಲ್ಲಿ ಹೋಗಿ ಮೊರೆಯಿಟ್ಟರು, ಆದರೆ ಬಿಜ್ಜಳ ಶೈವರಿಗೆ ಅವರಿಷ್ಟದಂತೆ ಮಾಡಲು ಬಿಟ್ಟನು ಆದರೆ ಈ ಭಂಡಧೈರ್ಯವನ್ನು ಪಡೆದ ಕಾಳಾಮುಖ ಶೈವರು ಇತರ ಪಂಥಗಳ ಮೇಲೊಂದೇ ಅಲ್ಲದೇ, ತಮ್ಮ ದಾರಿಗೆ ಅಡ್ಡವಾದ ಎಲ್ಲರ ವಿರುದ್ಧ ದಾಳಿ ನಡೆಸಿದರು ಅವರು ತಮ್ಮ ಕಾಳಾಮುಖ ಬೇರುಗಳನ್ನು ಕಿತ್ತುಕೊಂಡು ದಾಸಿಮಯ್ಯ, ರಾಮಯ್ಯ ಮುಂತಾದ ಮುಂದಾಳುಗಳನ್ನು ಅನುಸರಿಸಿ ಹೆಚ್ಚೆಚ್ಚು ವಿಜಯಶಾಲಿಗಳಾಗುತ್ತ ಕ್ರಮೇಣ ಹೊಸಶೈವ ಸಂಪ್ರದಾಯದಲ್ಲಿ ತಮ್ಮನ್ನು ಗುರುತಿಸಿಕೊಂಡರು.

ಮೂಋುಜಾವಿದೇವರ ಪರಂಪರೆಯು ಕಾಳಾಮುಖ ಪರಂಪರೆಯಂಬುದನ್ನು ಶಾಸನಗಳ ಮೂಲಕ ಅರಿಯಬಹುದು ಈ ಮೂರುಜಾವಿಪರಂಪರೆಯು ಇಂದಿಗೂ ಅಂತರವಳ್ಳಿ ಚಿಕ್ಕೇಶ್ವರ ಹೆಸರಿನಲ್ಲಿ ಮುಂದುವರೆದಿದ್ದು ಪರಂಪರೆಯ ಚಾಲನೆಯಲ್ಲಿ ವಿಶ್ವಕರ್ಮರಿರುವುದು ಕಂಡುಬರುತ್ತದೆ. ಅಂದರೆ ಈ ಗುರುಗಳು ರಾಜಗುರುಗಳಾಗಿ ರಾಜಮರ್ಯಾದೆಯನ್ನು ಪಡೆದಿರುವುದನ್ನು ಕೆಲವು ದಾಖಲೆಗಳ ಮೂಲಕ ಗುರುತಿಸಬಹುದು. ಇವರು ಕಾಳಾಮುಖ ಪರಂಪರೆಯವರು ಎಂದು ಗುರುತಿಸಲಾಗಿ ಆ ಪರಂಪರೆಯವರು ವಿಶ್ವಕರ್ಮರೇ ಎಂಬುದರಲ್ಲಿ ಸಂಶಯವಿಲ್ಲ. ಅಲ್ಪಸಂಖ್ಯಾತರಾದ ಇವರು ವೇದಅಧ್ಯಯನಿಗಳಾದ ಇವರು ಇಂದಿಗೂ ಪಂಚಾಂಗದ ಅನುಗುಣವಾಗಿ ಅನೇಕ ಪ್ರಕಾರದ ನಿಯಮಗಳನ್ನು ಪೂಜೆ ಪುನಸ್ಕಾರ ಆಚರಿಸುವವರು ಅಲ್ಲದೇ

ಗ್ರಾಮಗಳಲ್ಲಿ ನಡೆಯುವ ಅನೇಕ ಕಾರ್ಯಕ್ರಮಗಳಲ್ಲಿ ಇವರ ನೇತೃತ್ವವಿರುವುದು ಗೋಚರವಾಗುತ್ತದೆ. ವಿವಿಧ ಸಮಾಜದವರಿಗೂ ಧಾರ್ಮಿಕ ಮಾರ್ಗದರ್ಶಕರಾಗಿರುವುದು ಹಲವು ಕಡೆ ಕಂಡುಬರುತ್ತದೆ.

ಮೂಜುಜಾವಿದೇವನ ಕುರಿತು ಲಭಿಸುವ ಮೊಟ್ಟಮೊದಲ ಅತ್ಯಂತ ಪ್ರಾಚೀನ ಶಾಸನ ಕಲ್ಯಾಣಚಾಲುಕ್ಯ ಒಂದನೆ ಸೋಮೇಶ್ವರನ ಕಾಲಕ್ಕೆ ಸಂಬಂಧಿಸಿದ ಕ್ರಿಶ ೧೦೫೯ ಹಿರೇಮಾಗಳಗೇರಿ ತ್ರಿಕೂಟೇಶ್ವರ ದೇವರಸ್ಥಾನಪತಿ ಅರಿಯದೇವರ ಶಿಷ್ಯನ ಶಾಸನವಾಗಿದೆ. ನಂತರದ್ದು ಹಾವೇರಿ ಜಿಲ್ಲೆಯಲ್ಲಿ ಹಿರೇಕೆರೂರ ತಾಲೂಕಿನ ರಟ್ಟಿಹಳ್ಳಿಯ ಕಡಂಬೇಶ್ವರ ದೇವಾಲಯದ ಸ್ಥಾನಪತಿಯಾಗಿರುವ ಕ್ರಿಶ ೧೧೭೪ರ [ಕಇ. ೬ ಸಂ ೩೭] ಸೋವಿದೇವನ ಕಾಲದ ಕಾಳಾಮುಖ ಯತಿಗಳಪರಂಪರೆಯಲ್ಲಿ ಉಲ್ಲೇಖವಿರುವ ಶಾಸನವಾಗಿದೆ, ಇಲ್ಲಿ ಒಂಬತ್ತನೆಯ ಯತಿಯಾಗಿ ಕಂಡುಬಂದಿದ್ದಾರೆ. ಇತ್ತೀಚಿಗೆ ದೊರೆತ ಸು ಕ್ರಿಶ ೧೧೮೦ರ ಆಸುಪಾಸಿನ ಪಾಂಡ್ಯದೇವ ಮೂಜುಾವಿದೇವರ ಸಮ್ಮುಖದಲ್ಲಿ ಕಡಂಬೇಶ್ವರ ದೇವರಿಗೆ ರಂಗಭೋಗ, ಅಂಗಭೋಗಕ್ಕೆ ಗೋಗಾವಿಯನ್ನು ದತ್ತಿಕೊಟ್ಟ ಉಲ್ಲೇಖವಿರುವುದು. ಕ್ರಿಶ ೧೨೦೭ರ ಕಲಕೇರಿಯ ಎರಡನೆಬಲ್ಲಾಳನ ಶಾಸನದಲ್ಲಿ ಮೂಜುಜಾವಿದೇವರ ಉಲ್ಲೇಖವಿದೆ. ಕ್ರಿಶ ೧೨೩೭ರ [ಕಇ. ೬ ಸಂ ೪೨] ಯಾದವ ಸಿಂಘಣನ ಕಾಲದ ಕಡಂಬೇಶ್ವರದೇವಾಲಯದ ಮುಖಮಂಟಪದ ಕಂಬದ ಕೆಳಭಾಗದ ಶಾಸನದಲ್ಲಿ ಕರಣದ ಕಲ್ಲರಸನು ಮತ್ತು ಹಲವು ವ್ಯಾಪಾರಿಗಳು ಮಲ್ಲಿನಾಥ ದೇವರಿಗೆ ಮೂಜುಜಾವಿದೇವರ ಕಾಲಂಕರ್ಚಿ ಬಿಟ್ಟ ದಾನದ ಉಲ್ಲೇಖವಿದೆ. ಅದೇ ಕಂಬದ ಮೇಲ್ಭಾಗದ ಶಾಸನ [ಕ.ಇ. ೬ ಸಂ ೪೩] ಕ್ರಿಶ ೧೨೩೮ ರಲ್ಲಿ ಗುಬ್ಬಿಯ ಕಲ್ಲೆಯನಿಂದ ಕದಂಬೇಶ್ವರ ದೇವಾಲಯದ ಸ್ಥಾನಾಚಾರ್ಯ ಮೂಜುಜಾವಿದೇವರಿಗೆ ಸುಂಕದಾನ ಮಾಡಿದ ಉಲ್ಲೇಖವಿದೆ. ಅದೇ ದೇವಾಲಯದ ಮಧ್ಯಮಂಟಪದ ಯಾದವ ಸಿಂಘಣನ ಕಾಲದ ಕ್ರಿಶ ೧೨೩೮ರ [ಕಇ. ೬ ಸಂ ೪೪] ಶಾಸನವು ಹೊನ್ನಬೊಮ್ಮಿಸೆಟ್ಟಿಯು ಮಲ್ಲೇಶ್ವರ, ರಾಚೇಶ್ವರ ದೇವರಿಗಾಗಿ ಸ್ಥಾನಾಚಾರ್ಯ ರಾಜಗುರು ಮೂಜುಜಾವಿದೇವರಿಗೆ ದಾನನೀಡಿದ ಉಲ್ಲೇಖವಿದೆ. ಇಲ್ಲಿಯ ಕೇಶವದೇವಾಲಯದ ಹತ್ತಿವಿರುವ ವೀರಗಲ್ಲಿನಲ್ಲಿ ಮೂಜುಜಾವಿದೇವನು ಪುಲಿಗೆರೆಗೆ ಹೊಗುವಾಗ ಬಿಸಿಲಹಳ್ಳಿಯ ಬಳಿ ಮೇದರ ಪಾಂಡ್ಯ ಎಂಬುವನು ಹೋರಾಡಿ ಮರಣಿಸುತ್ತಾನೆ. [ಧಾ.ಜಿ.ಶಾ,ಸೂ,ಶಾ.ಸಂ ೨೧೧] ಇದೇ ತಾಲೂಕಿನ ಮೇದೂರ ಕ್ರಿಶ ೧೨೬೪ರ ಎರಡನೆ ನರಸಿಂಹನ ಕಾಲದ ಶಾಸನದಲ್ಲಿ 'ರಾಜಗುರು ಮೂಜುಜಾವುದ ದೇವ' ಎಂದು ಹೊಗಳಿದೆ. [ಕಇ. ೪ ಸಂ ೪೩] ಹಿರೇಕೇರೂರು ತಾಲೂಕಿನ

ಹಿರೇಮೊರಬದ ಕೆಂಚವ್ವನ ಕೆರೆ ತೂಬಿನ ೧೩ನೆಯ ಶತಮಾನದ ಶಾಸನದಲ್ಲಿ [ಧಾ.ಜಿ.ಶಾ.ಸೂಚಿ .ಶಾ.ಸಂ ೨೮೬] ಗುಬ್ಬಿಯ ಕಲ್ಲನು ಮಲ್ಲಿಕಾರ್ಜುನ ದೇವಾಲಯಕ್ಕಾಗಿ ಮೂಜುಜಾವಿ ದೇವರಿಗೆ ದಾನ ನೀಡಿದ ಉಲ್ಲೇಖವಿದೆ. ಇದೇ ತಾಲೂಕಿನ ಕಡೂರಿನ ಕ್ರಿಶ ೧೨೮೮ರ [ಧಾ.ಜಿ.ಶಾ.ಸೂಚಿ ಶಾ.ಸಂ ೬೫] ವೀರಗಲ್ಲು ಶಾಸನದಲ್ಲಿ ಶ್ರೀ ಕಡಂಬೇಶ್ವರ ದಿವ್ಯ ಪಾದ ಪದ್ಮಾರಾಧಕ ಮದ್ ರಾಜಗುರು ಮೂಜುಜಾವಿದೇವರ ಪಾದಾಗ್ರಪಾದ ಜೀವಿಕ ಕಡೂರ ಮೂಲಿಗ ಸೋಮೆಗೌಡನ ಮಗ ಬಾಚಿಗೌಡನು ಕಡವೂರಳಿವಿನಲ್ಲಿ ಹೋರಾಡಿ ಮಡಿದಾಗ ಆರಾಧ್ಯರು ಕಂಮ ೨೦ ಕೆಯ್ಯಂ ಕೊಟ್ಟ ಉಲ್ಲೇಖವಿದೆ. ಹಾನಗಲ್ಲು ತಾಲೂಕಿನ ಕಲಕೇರಿ ಸೋಮೇಶ್ವರ ದೇವಾಲಯದ ಕಂಬದ ೧೩ನೆಶತಮಾನದ ೨ನೆ ಬಲ್ಲಾಳನ ಶಾಸನದಲ್ಲಿ ಕಲಕೇರಿಯ ಸ್ವಯಂಭೂ ಸೋಮನಾಥ ಸ್ಥಾನಾಚಾರ್ಯ ಮೂಜುಜಾವಿದೇವನು ನಾಳ್ಪ್ರಭು ಚಲದಂಕರಾಮ ಹರಿಯಮಶೆಟ್ಟಿ ಮತ್ತು ಅವನ ಮಕ್ಕಳಾದ ವೀರಯಗೌಡ ಮತ್ತು ಎಕ್ಕಮಗೇದ ಭೂಮಿಯನ್ನು ದಾನ ಪಡೆದ ಉಲ್ಲೇಖವಿದೆ [ಎಸ್‌ಐಐ, ೨೦ ಸಂ ೩೩೨] ಹೀಗೆ ಹಾವೇರಿ ಜಿಲ್ಲೆಯಲ್ಲಿ ಮೂಜುಜಾವಿದೇವರ ಉಲ್ಲೇಖವಿರುವ ಶಾಸನಗಳು ಸುಮಾರು ಹನ್ನೊಂದು ಲಭಿಸಿರುವುದು ಕಾಳಾಮುಖರ ಪ್ರಾಭಲ್ಯತೆಯನ್ನು ಸಾರುತ್ತದೆ. ಅಂತರವಳ್ಳಿಯು ಮೂಜುಜಾವಿ ಪೀಠದ ಪ್ರಧಾನ ಮಠವು ಪ್ರಸಿದ್ಧಿ ಪಡೆದಿದ್ದರೂ ಶಾಸನಗಳು ಲಭ್ಯವಿಲ್ಲ. ಚಿಕ್ಕೇಶ ಯತಿಯ ಸುಂದರಶಿಲ್ಪವಿದೆ. ಈ ಪರಂಪರೆಗೆ ಸೇರಿದ ಸುಮಾರು ೩೨ ಶಾಖಾಮಠಗಳು ಇದರ ಅಧೀನಕ್ಕೆ ಒಳಪಟ್ಟಿರುವ ಬಗ್ಗೆ ಮತ್ತು ಇವರ ಆಚರಣೆಗಳು ಕಾಳಾಮುಖರ ಆಚರಣೆಗಳೆ ಆಗಿರುವುದು ಅಧ್ಯಯನದ ಮೂಲಕ ತಿಳಿದುಬರುತ್ತದೆ. ಇದು ಕಿಟ್ಟಗಾವಿ ಪರಂಪರೆಗೆ ಸಂಬಂಧಿಸಿದ್ದು ರಟ್ಟಿಹಳ್ಳಿಯಿಂದ ಯಾವಾಗ ಅಂತರವಳ್ಳಿಗೆ ಬಂದಿತೆಂಬುದು ಸ್ಪಷ್ಟವಾಗುವುದಿಲ್ಲ [ಆಚಾರಿ ಮಂಜುಳಾ.; ಕಾಳಾಮುಖ ಪರಂಪರೆ ಮತ್ತು ಮೂಜುಜಾವಿ ಪೀಠ ಸಾಂಸ್ಕೃತಿಕ ಅಧ್ಯಯನ] ಇದಕ್ಕೆ ಸಂಬಂಧಿಸಿದ ಮಾಹಿತಿ ಲಭಿಸಿರುವುದಿಲ್ಲ.

೬.೨ ವೀರಮಾಹೇಶ್ವರ ಪರಂಪರೆ, ಪುರವಂತಿಕೆ

ವೀರಭದ್ರ ಪರಂಪರೆ

ಕ್ರಿಶ ೧೨೦೦ರ ಅಬಲೂರು ಶಾಸನದಲ್ಲಿ ನಾರದನ ಕೋರಿಕೆಯಂತೆ ಪರಶಿವನು ವೀರಭದ್ರನನ್ನು ಪರಸಮಯವನ್ನು ನಿಯಂತ್ರಿಸಲು ಇಳೆಯಲ್ಲಿ ಜನ್ಮ ತಾಳಲು ಅವತಾರ ಆದೇಶಿಸಿರುವ ಕಥೆಯಿದೆ ಕಥೆಗಳ ರೀತ್ಯಾ ವೀರಭದ್ರನ ಉಗಮವು ಪರಶಿವನ ೧೨ನೇ

ಲೀಲೆಯಾಗಿದೆ [ನಾಗರಾಜ ಎಂ ಜಿ.; ಮಹಾವೀರಭದ್ರ ಸಂಪುಟ ೧ ಪುಟ.೧೮೮] ಆದಿವೀರಶೈವಕ್ಕೆ ಕಾರಣನಾದ ವೀರಭದ್ರನಿಗೂ ರುದ್ರದೇವನಿಗೂ ಬೇಧವಿಲ್ಲ ಎಂಬುದು ಸ್ಕಂದ ಪುರಾಣದ ಮಾತು [ಜ.ಚ.ನಿ ರುದ್ರ-ಭದ್ರರೇಣುಕ, ಪುಟ. ೩೭]

ಬ್ರಾಹ್ಮೀ, ಮಾಹೇಶ್ವರಿ, ವೈಷ್ಣವಿ, ವಾರಾಹೀ..ಮುಂತಾದ ಸಪ್ತಮಾತೃಕೆಯಾದ ರಕ್ಷಕನಾಗಿದ್ದ ಅರ್ಥಾತ್ ಸ್ತ್ರೀ ಸಮೂಹವನ್ನು ಗೌರವದಿಂದ ರಕ್ಷಿಸುತ್ತಿದ್ದ ಏಕಾಂತರಾಮಯ್ಯನಿಗೆ ವೀರಭದ್ರಾಂಶ ಎರೆಯುವ ಸಂದರ್ಭದ ಕೈಲಾಸದ ಮಹೇಶ್ವರ ಆಡುವ ಮಾತು 'ಮಹೇಶ್ವರಂ ದರಹಸಿತವದನಾರವಿಂದನಾಗಿ ವೀರಭದ್ರನಂ ನೀ ಮನುಷ್ಯ ಲೋಕದೊಳು ನಿಂನಂಶದೊಳೊಬ್ಬಳನಂ ಪುಟ್ಟಿಸಿ ಪರಸಮಯಂಗಳಂ ನಿಯಮಿಸೆಂಬುದಂ ವೀರಭದ್ರನುಂ ಪುರುಷೋತ್ತಮ ಭಟ್ಟಗೆಗ ಸ್ವಪ್ನಬೋಳ್ತಾಪಸಾರೂಪದಿಂ ಬಂದು ಪುತ್ರಂ ಪರಸಮಯ ನಿಯಮ ನಿಮಗೆ ಪುಟ್ಟಿಗೆಮೆಂ.....' ಎಂಬ ಕೇಶವರಾಜ ಚಮೂಪನ ವರ್ಣನೆ [ಅದೇ ಪುಟ ೩೩]ಕಂಡುಬರುತ್ತದೆ.

[ತ್ರೇತ್ರಾಯುಗದಲ್ಲಿ ಕುಂಭಜ ಋಷಿಯ ಕರುಣಿದಿಂದ ಯಿಭಿರು ಮಕ್ಕಳು ಪಡೆದನು ಯಿವರ ನಾಮಾ ಗುಂಡಯ್ಯ ಬ್ರಹ್ಮನೆಂಬ ಪೆಸರನಿಟ್ಟು]

ವೀರಭದ್ರ ಮನಃಸಂಯಮಿಯಾದ್ದರಿಂದ ಆತನನ್ನು ಪುರವಂತರು ತಮ್ಮ ವಡವುಗಳಲ್ಲಿ 'ಅಹಹಾರುದ್ರ ಅಹಹಾಸರ್ಪ' ಎಂದು ಸಂಭೋದಿಸುತ್ತಾರೆ. ಮನಃಕುಂಡಲಿನಿ ಯೋಗ ಸಾಧಕ ಸಿದ್ಧನಾದ್ದರಿಂದ ಆತನ ವಿಗ್ರಹಗಳಿಗೆ ಸಂಕೇತಗಳಾಗಿ ನಾಗಕಿರೀಟ, ನಾಗಾಸ್ತ್ರ ಇರುತ್ತವೆ.

ವೀರಭದ್ರನ ಶಿಲ್ಪವು ಸವದತ್ತಿಯ ಅಂಕನಾಥೇಶ್ವರ ಗುಡಿಯಲ್ಲಿ ಕಂಡು ಬರುತ್ತದೆ. ಅಲ್ಲಿ ನಾಗಕರ್ಣ ಕುಂಡಲ ಹೊಂದಿರುವ ವೀರಭದ್ರನ ವೀರಹಲಗೆಯೆ ಢಾಲು, ಇದು ಬಹುಶ! ನಾಥ ಸಂಪ್ರದಾಯವನ್ನು ಸರಿಸಿ ನಂತರ ಕಾಳಾಮುಖರಾಗಿ ಬಂದ ಬೌದ್ಧ ಸಿದ್ಧರಲ್ಲಿ ಶೈವ ಅವಧೂತರಾಗಿ ಬಂದವರನ್ನು ವೀರಶೈವರನ್ನಾಗಿಸಿದ ಸಂಕೇತವು ಅದಾಗಿರಬಹುದೇ? ಎಂದು ಜ.ಚ.ನಿಯವರು ಅನುಮಾನಿಸುತ್ತಾರೆ.

ಏಕಶಿಲಾ ಫಲಕದ ಮೇಲೆ ಸಾಲಾಗಿ ಹಾಗೂ ಪಾರ್ಶ್ವಗಳಲ್ಲಿ ಬಿಂಬಿಸಿರುವುದುಂಟು ಇದರಲ್ಲಿ ಗುರು ವೀರಭದ್ರ ಗಣೇಶ ವೀರಭದ್ರ ಸ್ಕಂಧವೀರಭದ್ರ ಯಾವುದೇ ಎರಡು ಜೋಡಿಗಳು ಮಾತ್ರ ಮಾತೃಕೆಯಾದ ಸಾಲಿನ ಮೊದಲು ಮತ್ತು ಕೊನೆಯಲ್ಲಿ ಅಥವಾ ಮೊದಲ ಮುಂಬದಿ, ಕೊನೆಯ ಮುಂಬದಿ ಪಾರ್ಶ್ವಗಳಿರುತ್ತವೆ.

ಮಾತೃಕೆಯರು ಸ್ಕಂದನ ಸಾಕುತಾಯಿಯರಾದ ಕಾರಣ ಅವರಲ್ಲಿ ಸ್ಕಂದನಿಗೆ ನೆಲೆ ಚಾಮುಂಡಿಯ ಕಾರಣ ಗಣೇಶನಿಗೆ ನೆಲೆ. ಬಹುಷ 'ಗುರು' ರುದ್ರನ ಸಂಕೇತವಾಗಿರಬೇಕು. [ಅದೇ ಪುಟ ೮೬]

ಹಾವೇರಿ ಜಿಲ್ಲೆಯಲ್ಲಿ ಕ್ರಿ.ಶ ೧೦೪೫ರ ಕೊಳೂರು ಶಾಸನದಲ್ಲಿ ಚಾಲುಕ್ಯ ತ್ರೈಲೋಕ್ಯಮಲ್ಲ ೧ನೇ ಸೋಮೇಶ್ವರನ 'ಶೌರ್ಯದ ವರ್ಣನೆಯಲ್ಲಿ ಅವನು ಶೌರ್ಯದಲ್ಲಿ ವೀರಭದ್ರನಿಗೆ ಸಮಾನ. ವೀರಭದ್ರದೇವರ ಉಲ್ಲೇಖ ಪ್ರಥಮ ಬಾರಿಗೆ ಇಲ್ಲಿ ಸ್ಪಷ್ಟವಾಗಿ ಕಂಡುಬಂದಿದೆ. [ನೇಗಿನಹಾಳ ಎಂ ಬಿ.; ನೇಗಿನಹಾಳ ಪ್ರಬಂಧಗಳು, ಪುಟ.೩೮೧] ಕ್ರಿ.ಶ ೪ನೇ ಶತಮಾನದಿಂದ ೧೨ ನೇ ಶತಮಾನದಲ್ಲಿಯೂ ವೀರಭದ್ರನ ಶೌರ್ಯ ಒಂದು ಮಾದರಿಯಾಗಿಯೇ ಮುಂದುವರೆದು ಬಂದಿರುವುದು ಕಂಡು ಬರುತ್ತದಲ್ಲದೇ ಪ್ರೇರಕಶಕ್ತಿಯಾಗಿರುವುದು ತಿಳಿಯುತ್ತದೆ.

ವೀರಗಾಸೆ ಪುರವಂತರು :

ಪುರ ಎಂದರೆ ಪ್ರವಾಹ ಹೊನಲು ಕೋಟೆ, ಪಟ್ಟಣ ಗುಗ್ಗಳ ಪಟ್ಟಣದ ವಿಸ್ತರಣ ಎಂಬ ಅರ್ಥಗಳಿವೆ. ಪುರಂತ ಎಂದರೆ ಪ್ರಾಚೀನ ಶಿವಶರಣ. ಮಠಮಾನ್ಯ ಹೊಂದಿದ ಸ್ಥಾನಿಕ ಜಂಗಮ. ಪುರವಂತ ಎಂದರೆ ಗುಗ್ಗಳದ ಉತ್ಸವ ಸಮಯದಲ್ಲಿ ಮಾಡುವ ವೀರಭದ್ರ ನೃತ್ಯ ಮಾಡುವವ ಎಂಬ ಅರ್ಥವು ನಿಘಂಟಿನಲ್ಲಿದೆ. ಪುರಂದರ ಎಂದರೆ ಶತ್ರುಗಳ ನಗರ ನಾಶಕ ಇಂದ್ರ ಎಂಬ ಅರ್ಥವನ್ನು ಅದು ನೀಡಿದೆ. ಆದರೆ 'ಪುರ' ಎಂಬುದಕ್ಕೆ 'ಗುಗ್ಗಳ' ಎಂಬ ಅರ್ಥ ನೀಡಿರುವುದು. ಪುರವಂತಿಕೆ 'ಗುಗ್ಗಳವಂತರು' ಎಂಬುದಾಗಿ 'ವೀರಗಾಸೆ' ಎಂದರೆ ವೀರಗೆಜ್ಜೆ ಹಾಕಿಕೊಂಡು ವೀರಭದ್ರನಂತೆ ನರ್ತಿಸುವುದು ಎಂಬ ಅರ್ಥ ನಿಘಂಟಿನಲ್ಲಿದೆ. [ಅದೇ ಪುಟ ೧೦೫]

ಪ್ರಾಚೀನ ಕಾಲದಲ್ಲಿ ಮಾಹೇಶ್ವರರ ಬಡಾವಣೆಗೆ 'ಪುರ' ವೆಂದು ಕರೆಯುತ್ತಿದ್ದರು. ಈ 'ಪುರ' ಬಡಾವಣೆಯಲ್ಲಿರುತ್ತಿದ್ದ ವೀರಭದ್ರನ ಆರಾಧಕರಾದ ವೀರಮಾಹೇಶ್ವರರ ಮುಂದುವರಿಕೆಯೇ ಇಂದಿನ ಉಗ್ರ ಆಚರಣೆಯ ಪುರವಂತರು [ಕಲಬುರ್ಗಿ,ಎಂ ಎಂ.; ಅಣ್ಣಿಗೇರಿ ತಲೆಬುರುಡೆ ಪುರಾಣ, ಶಿವರುದ್ರಮಹಾಸ್ವಾಮಿಗಳು (ಸಂ).; ಬಸವಪಥ ಪುಟ.೪೩] ಉಗ್ರ ಭಕ್ತರಲ್ಲಿ ಶಿವಸಂತೃಪ್ತಿಗಾಗಿ ಖಡ್ಗ, ಕೊಡಲಿ, ಕರಗಸ, ಗಂಡಗತ್ತರಿ ಬಳಸಿ ತಮ್ಮ ರುಂಡ ಅರ್ಪಿಸುವ ಆಚರಣೆಯೂ ಅಸ್ತಿತ್ವದಲ್ಲಿತ್ತೆಂದು ಹರಿಹರನ ಕೋವೂರು ಬೊಮ್ಮಯ್ಯನ ರಗಳೆಯಿಂದ ತಿಳಿದು ಬರುತ್ತದೆ. ಹರಿಹರನು ತನ್ನ ಕೋವೂರು ಬೊಮ್ಮಯ್ಯನ ರಗಳೆಯಲ್ಲಿ ಉಗ್ರಪಂಥದ ೩೦೦ ಜನ 'ವೀರಮಾಹೇಶ್ವರರು'

ಬಸದಿಗಳನ್ನು ನಾಶಮಾಡಿ ಅಂತ್ಯದಲ್ಲಿ ಶಿವನಿಗೆ ತಮ್ಮ ರುಂಡ ಅರ್ಪಿಸಿದುದನ್ನು ವರ್ಣಿಸಿರುವನು. [ಕಲಬುರ್ಗಿ ಎಂ ಎಂ (ಸಂ).; ಹರಿಹರನ ರಗಳೆಗಳು, ಪುಟ.೩೪೨]

ಮೊಳೆಯ ಹಾವುಗೆಗಳಂ ಮೆಟ್ಟಿ ದುಮ್ಮಿಕ್ಕುತಂ
ಕಳಿದವಂ ಮೀರಿ ಪದಖಂಡವಂ ಮಾಡುತಂ
ಕಡಿದ ಕಾಲೊಳಗೆ ನಾರಾಚವಂ ಬೆಟ್ಟುತಂ
ಅಡಿಗೆ ಮುಂದಡಿಯಿಟ್ಟು ಎತ್ತುತಂ ನಡೆವುತಂ
ಬಂದು ಶಿವಲಿಂಗಕ್ಕೆ ಮಜ್ಜನಕ್ಕೆರೆವುತಂ
ನಿಂದು ಕರುಳಂ ತೆಗೆದು ಕೊರೆಕೊರೆದು ತರಿವುತಂ
ಕರುಳಿಂದ ಪಿಂಡೆದಂಡೆಗಳನೊಲವಿಂ ಕಟ್ಟಿ
ಹರುಷದಿಂ ಹರನ ಪುರಹರನ ಸಿರಿಮುಡಿಗೊಟ್ಟಿ
ತಿರುಗಿದರ್ ವೀರರಾರುತ್ತ ಬೊಬ್ಬಿಡುತ್ತಲ್ಲಿ
ಸುರಗಿಯಿಂದಿರಿದುಕೊಳುತಂ ಕಿತ್ತು ಸೆಳೆಯುತಂ
ಪರಶುವಿಂಕಡಿದುಕೊಳುತಂ ಕೆಲಕ್ಕಿಕ್ಕುತಂ
ಎತ್ತಿದ ಕಠಾರಿಯಿಂದೊಪ್ಪಿ ನಲಿದುರ್ಬುತಂ
ಸುತ್ತಿ ಕರಗಸದಿಂದೆ ಕೊರೆದುಕೊಂಡಾಡುತಂ
ಸರಳಿಂದೆ ಹೊಸೆದುಕೊಳುತೆಣ್ದೆಸೆಗೆ ಮಸಗುತಂ
ಸುರಿವ ರಕ್ತಾಂಬುವಂ ಬಳಿದು ಮಿಗೆ ಚಲ್ಲುತಂ
ಇಟ್ಟಿಯಿಂದಿರಿದು ಚಕ್ರದೊಳಿಟ್ಟುಕೊಳುತಲ್ಲಿ
ಪಟ್ಟೆಹವನೊಳಗೆ ಪೊಗಿಸುತ್ತೆ ಕರವಾಳಲ್ಲಿ
ಅಮ್ಮಮ್ಮ ಕೂರಲಗಿಂ ಕೊಯ್ದು ಬಿಸುಡುತ್ತಲ್ಲಿ
ಚಿಮ್ಮುಟಗಳಿಂದಲಿರಿದಿರಿದು ಚಿಮ್ಮುತ್ತಲ್ಲಿ
ಚಿಟಿ ಚಿಟಿಲೆನಲು ಶಿರನರಂಗಳಂ ಪರಿವುತಂ

ಚಿಟಿಲೆನಲು ದೇಹದೆಲುಗಳನಂದು ಮುರಿವುತಂ

ಹೀಗೆ ವೀರಮಾಹೇಶ್ವರರು ಶಿರಸ್ಸು ಅರಿಯುವ ಆಚರಣೆಯನ್ನು ಮಾಡುತ್ತಿದ್ದರೆಂಬುದು ಗೋಚರಿಸಿತ್ತದೆ. ಇಂತಹ ಆಚರಣೆಗಳು ಆವರಗೊಳದ ವೀರಭದ್ರೇಶ್ವರ ದೇವಾಲಯದ ಎದುರು ಎರಡು ಗಂಡಗತ್ತರಿ ಕಂಬಗಳಿರುವುದು ಕಂಡುಬರುತ್ತದೆ ಇಂತಹ ಗಂಡಗತ್ತರಿ ಕಂಬದ ಮೂಲಕ ವೀರಭದ್ರನ ಮುಂದೆ ತಲೆ ಕತ್ತರಿಸಿಕೊಂಡ ಆನೆಗೊಂದಿ ವೀರಣಯ್ಯನೆಂಬ ಭಕ್ತನ ಉಲ್ಲೇಖ 'ಶಿವತತ್ವ ಚಿಂತಾಮಣಿ' ೩೮-೨೦೩

ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದ ಗರ್ಭಗುಡಿ ಎದುರಿನ ವೀರಶಿರೋಮಂಟಪದ ಕಂಬಗಳ ಮೇಲೆ ಆತ್ಮಬಲಿ ವೀರಭಕ್ತರ ಶಿಲ್ಪಗಳನ್ನು ಕೆತ್ತಿರುವುದು ಕಂಡುಬರುತ್ತದೆ. ಕೆಲವು ಆತ್ಮಬಲಿಯನ್ನಾಚರಿಸುವ ಉಗ್ರಭಕ್ತರಾದರೆ ನೇಸ್ವಿಯಂತ ಭಕ್ತರು ಪ್ರತಿಶಿರ ಪಡೆಯುವಂತ ಭಕ್ತರಾಗಿರುವ ಬಗ್ಗೆ ಐತಿಹ್ಯ ಲಭಿಸುತ್ತದೆ.

ಆರ್ಯರು ಇಂದ್ರನ ಸಹಾಯದಿಂದ ದಸ್ಯುಗಳ ಊರು, ಮನೆ ಮೊದಲಾದವುಗಳನ್ನು ದೋಚುತ್ತಿದ್ದರು ಇವನ್ನು ಉಳಿಸಲು ವೀರಭದ್ರನು ತನ್ನ ವೀರಗಣಗಳಲ್ಲಿ ಮತ್ತು ಮರುದ್ಗಣಗಳಲ್ಲಿ ಒಂದು ತಂಡವನ್ನು ನಿಯಮಿಸುವನು ಅವರೇ ಪುರವಂತರು. ಇವರು ಆರ್ಯರು ಕಿತ್ತುಕೊಂಡ ಊರುಗಳನ್ನು ಉಳಿಸಿಕೊಳ್ಳುವವರಾಗಿದ್ದರು. ಪುರಂದರ ಊರು ನಾಶ ಮಾಡುವವನಾದರೆ, ಪುರವಂತರು ಊರು ಕಟ್ಟುವವನಾಗಿದ್ದರೆಂದಾಗುತ್ತದೆ. ಊರುಳ್ಳವರು ಮನೆಯುಳ್ಳವರು ಪುರವಂತರು. ಇವರು ರುದ್ರ-ವೀರಭದ್ರ ಪರಂಪರೆಗೆ ಸೇರಿದವರಾಗಿದ್ದಾರೆ. ಪುರೋಹಿತರು ಯಜ್ಞಕುಂಡ ಪ್ರಿಯರಾದರೆ, ಪುರವಂತರು ಅಗ್ನಿಕುಂಡಪ್ರಿಯರಾಗಿದ್ದಾರೆ.

ವೀರಗಾಸೆ ಎನ್ನುವುದನ್ನು ವೀರ+ಗಾಸೆ, ಗಾಸೆ-ಕಚ್ಚೆ ಎಂದಾಗಬಹುದು ಕಚ್ಚೆ ವೀರರ ಸಂಕೇತ. ಹಾಗೂ ಕುಣಿತಕ್ಕೆ ಸಿದ್ಧವಾಗುವ ಸಂಕೇತವಾಗಿ ಬರುತ್ತದೆ. ಪುರವಂತಿಕೆ ಉತ್ತರ ಕರ್ನಾಟಕದಲ್ಲಿ ಪ್ರಚಲಿತ, ವೀರಗಾಸೆ ದಕ್ಷಿಣ ಕರ್ನಾಟಕದಲ್ಲಿ ಪ್ರಚಲಿತ ಎಂದು ಹೇಳುವುದುಂಟು. ನೆಶ್ವಿಯ ಅಜ್ಜಗುರುಗಳ ಸಂಪ್ರದಾಯದಲ್ಲಿ ಅಜ್ಜಗುರುಗಳು ಮಾತ್ರ ಕಾಸೆಕಟ್ಟುತ್ತಿದ್ದರು. ನಂತರ ಎಲ್ಲರೂ ಕಾಸೆ ಕಟ್ಟುವದನ್ನು ಕರಗತಮಾಡಿಕೊಂಡಿದ್ದಾರೆ. ಎಲ್ಲರೂ ಕಟ್ಟುವುದಕ್ಕೆ ಶಿವರುದ್ರಪ್ಪನವರು ಪ್ರೋತ್ಸಾಹ ನೀಡಿದರೆಂದು ತಿಳಿದು ಬರುತ್ತದೆ. ಈಗ ವಿವಿಧ ಲಿಂಗವಂತರೂ ಕಾಸೆ ಕಟ್ಟುವುದು ಕಂಡು ಬರುತ್ತದೆ. ಪುರವಂತರು ತಲೆಗೆ ಬಿಳಿಯ ಚೌಲಿ (ಚವರಿ), ಕಾವಿಅಂಗಿ, ಕಾವಿಕಾಸೆ, ಪಂಚೆ, ಕಿವಿ, ಕೊರಳು, ತೋಳು,

ಮುಂಗೈಗೆ ರುದ್ರಾಕ್ಷಿ, ಹಣೆ, ಹುಬ್ಬು, ಕಿವಿಗಳಿಗೆ ವಿಭೂತಿ, ತೋಳು, ಮುಂಗೈಗೆ ನಾಗಭರಣ, ಎದೆಯು ಮೇಲೆ ವೀರಭದ್ರ ಹಲಗೆ, ಸೊಂಟದಲ್ಲಿ ಚೌಲಿ ಸಹಿತವಾದ ಹಿತ್ತಾಳೆಯ ನರಸಿಂಹ ಮತ್ತು ದಕ್ಷ ಶಿರಗಳ ಧರಿಸಿರುವವರು. ಮೊಣಕಾಲಿಗೆ ಜಂಗು ಧರಿಸಿ ಬಲಗೈಯಲ್ಲಿ ಕತ್ತಿ ಎಡಗೈಯಲ್ಲಿ ವೀರಭದ್ರಹಲಗೆ ಹಿಡಿದಿರುತ್ತಾರೆ.

ಕಾವಿ ರೇಷ್ಮೆಧೋತ್ರ, ಚುಡೆದಾರ ಪೈಜಾಮ, ಕರಿಅಂಗಿ, ನಡಕಟ್ಟು ಅಂಚು ಅಲಂಕಾರಕ ಮೈಮೇಲಿನ ಗರೀಪವಸ್ತ್ರ, ಕಾವಿ, ರೇಷ್ಮೆರುಮಾಲು, ತೋಳಿಗೆ ಬೆಳ್ಳಿನಾಗರ, ಎದೆಗೆ ತೀರ್ಥಮುಖ ದರ್ಪಣ, ನಡುವಿಗೆ ನರಸಿಂಹ ಕೀರ್ತಿಮುಖ, ರುಂಡಮಾಲೆ, ಕೈಮಣಿ ಕಟ್ಟಿನ ಕೊರಳಿವೆ. ಭುಜಕ್ಕೆ ರುದ್ರಾಕ್ಷಿ, ಕಿವಿಗೂ ರುದ್ರಾಕ್ಷಿ ಧಾರಣೆ, ಪಕ್ಕಕ್ಕೆ ಸಣ್ಣ ಜೋಳಿಗೆ, ಹಣೆಗೆ ಮೈಗೆಲ್ಲಾ ವಿಭೂತಿ ಧರಿಸಿ ಖಡ್ಗ ಅಥವಾ ತ್ರಿಶೂಲ ಹಿಡಿದಿರುತ್ತಾರೆ. ಶಸ್ತ್ರಗಳನ್ನು ಹಿಡಿದು ಸಮಾಳ ಭೇರಿ ಸನಾದಿ ಮೇಳದ ಲಯಕ್ಕೆ ವೀರಾವೇಶದ ನಾಟ್ಯವಾಡುತ್ತಾ ರುದ್ರಾವತಾರದ ವಚನ ವಡಬುಗಳ ಉಗ್ಗಡಣೆ ಕಂಡುಬರುತ್ತದೆ, ವಡಬ ಅಗ್ನಿಯ ಸ್ವರೂಪವಲ್ಲದೇ ಶಬ್ದ ಹಾಗೂ ಘೋಷ ವೀರವತ್ತಾಗಿ ಉಗ್ಗಡಣೆಯಲ್ಲಿ ಕಂಡು ಬರುತ್ತದೆ.

ಗುಗ್ಗಳದ ಮೂಲವನ್ನು ಹೇಳುವಲ್ಲಿ ಪಂಚಮುಂಡ್ರಾಸುರ ವಧೆಯಾಗಲು ಅವನ ಪತ್ನಿಯ ಪ್ರಾರ್ಥನೆಯೆಂದೇ ವೀರಭದ್ರನು ಆ ಶರೀರದಿಂದ ಗುಗ್ಗಳದ ವಸ್ತುಗಳನ್ನು ಮಾಡಿಕೊಂಡವನೆಂಬ ಕಥೆ. ಆ ದೈತ್ಯನೇ ಶಿವನಲ್ಲಿ ಕ್ಷಮೆ ಕೋರಿ ಪ್ರಾರ್ಥಿಸಲು ಅವನ ತಲೆ ಬುರುಡೆಯನ್ನು ಗುಗ್ಗಳಕೊಡ, ಮೊಣಕೈಯನ್ನು ಕಟ್ಟಿಗೆ, ಕರಳುಗಳನ್ನು ಸಿಂಬೆ, ಮೈಬೆವರು ಕಣಕ, ರಕ್ತವೇ ಎಣ್ಣೆ, ಅಂಗೈ ಜಾಗಟಿ, ಮೊಣಕಾಲು ದೀವಟಿಗೆ, ಹೆಬ್ಬೆರಳು ಶಸ್ತ್ರ, ನಾಲಿಗೆಯು ಚಾಚು ಹೀಗೆಲ್ಲವಿದ್ದಾಗ ವೀರಭದ್ರನ ಉರಿಗಣ್ಣು ಹೊತ್ತಿತು ಎಂಬ ಕಥೆ ಇದೆ.

ಹೀಗೆ ಕಾಳಾಮುಖ ಪರಂಪರೆಯು ನೆಶ್ವಿ, ಅಂತರವಳ್ಳಿ, ಕದರಮಂಡಲಗಿ, ಮುಂತಾದ ಊರುಗಳಲ್ಲಿ ಹುಲ್ಲತ್ತಿ, ಹಿರೆಮತ್ತೂರು, ಆಲದಗೇರಿ, ಎಲವದಹಳ್ಳಿ, ಆಲದಕಟ್ಟಿ, ಬತ್ತಿಕೊಪ್ಪ, ಮುಂತಾದ ಊರುಗಳಲ್ಲಿರುವ ಪುರವಂತರಲ್ಲಿ, ಅವರ ತಂಡಗಳಲ್ಲಿ ಆಚರಿಸುವ ಆಚರಣೆಗಳು, ಪೂಜಾವಿಧಿ ವಿಧಾನಗಳು, ಪಂಚಾಂಗದ ನಿಯಮಗಳಪರಿಪಾಲನೆ, ಮುಂತಾದವುಗಳಲ್ಲದೆ ಕಾಳಾಮುಖರ ಉಗ್ರತೆಯನ್ನು ಪ್ರತಿಬಿಂಬಿಸುವ ನೃತ್ಯ ಮತ್ತು ವೀರಾವೇಶವು ಗೋಚರಿಸಿರುವುದು ಅವರ ಅಸ್ತಿತ್ವಕ್ಕೆ ಕನ್ನಡಿಯಾಗಿದೆ.

ಅಧ್ಯಾಯ ೭

ಸಮಾರೋಪ

ಅಧ್ಯಾಯ – ಏಳು

ಸಮಾರೋಪ

ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಅನೇಕ ಧರ್ಮಗಳು ಕಂಡುಬರುತ್ತವೆ. ಅವುಗಳಲ್ಲಿ ಹಿಂದೂಧರ್ಮದಲ್ಲಿರುವ ಶೈವವು ಹಲವು ಪಂಥಗಳನ್ನು ಹೊಂದಿದೆ. ಅವುಗಳಲ್ಲಿ ಪಾಶುಪತ, ಕಾಪಾಲಿಕ, ಕಾಳಾಮುಖ, ಹಾಗೂ ಶೈವ ಪಂಥಗಳು ಮಹತ್ವದ ಪಾತ್ರಹೊಂದಿವೆ. ಶಿವನ ಇಪ್ಪತ್ತೆಂಟನೆಯ ಅವತಾರ ಲಕುಲೀಶನೆಂದು ಪುರಾಣಗಳು ಹೇಳುತ್ತವೆ. ಲಕುಲೀಶನ ಆರಾಧಕರು ಕಾಳಾಮುಖರು ಮತ್ತು ಪಾಶುಪತರೆಂದು ತಿಳಿದುಬರುತ್ತದೆ. ಹಾವೇರಿ ಜಿಲ್ಲೆಯಲ್ಲಿ ಕಾಳಾಮುಖ ಪರಂಪರೆಯೇ ಬಹುಮುಖ್ಯವಾಗಿ ಕಂಡುಬರುತ್ತದೆ. ಪಾಶುಪತ ಕಾಣುವುದು ಒಂದೆರಡು ಕಡೆಮಾತ್ರ, ಕಾಳಾಮುಖಾಚಾರ್ಯರು ಲಾಕುಳಾಗಮ ಪರಿಣಿತರಾಗಿದ್ದು ವಿವಿಧ ಸ್ಥಳಗಳಲ್ಲಿ ಮಠಗಳನ್ನು ಸ್ಥಾಪಿಸಿಕೊಂಡು ಸಿದ್ಧ, ಸಾತ್ವಿಕ ಆಚರಣೆಗಳನ್ನು ಅನುಸರಿಸುತ್ತಿರುವುದು ಕಂಡು ಬಂದಿದೆ. ಅನೇಕ ಶಾಸನಗಳಲ್ಲಿ, ಐತಿಹ್ಯಗಳಲ್ಲಿ, ದೇವಾಲಯಗಳಲ್ಲಿ ಇವರ ಅಸ್ತಿತ್ವದ ಕುರುಹುಗಳು ಕಂಡುಬಂದಿವೆ. ಇವುಗಳ ಆಧಾರದಿಂದ ಬಳ್ಳಿಗಾವೆಯ ಪ್ರಭಾವಿತ ಹಾವೇರಿಯ ಪ್ರದೇಶದಲ್ಲಿರುವ ಕಾಳಾಮುಖರ ಸಂಸ್ಕೃತಿಯನ್ನು ರೂಪಿಸುವ ಪ್ರಯತ್ನವಾಗಿದೆ.

ಕಾಳಾಮುಖ ಸಂಪ್ರದಾಯವು ಒಂಬತ್ತರಿಂದ ಹದಿಮೂರನೆಯ ಶತಮಾನದ ನಡುವಿನ ಕಾಲಾವಧಿಯಲ್ಲಿ ಕರ್ನಾಟಕದಲ್ಲಿ ಪ್ರಮುಖ ಶಾಖೆಯಾಗಿತ್ತು. ಶೈವ ಕೇಂದ್ರವಾದ ಬಳ್ಳಿಗಾವೆ ಪ್ರಭಾವ ಹಾವೇರಿ ಜಿಲ್ಲೆಯಲ್ಲಾಗಿದೆ. ಕಲ್ಯಾಣಚಾಲುಕ್ಯ, ಕಲಚೂರ್‍ಯರ, ಯಾದವರ ಕಾಲಕ್ಕೆ ಈ ಕಾಳಾಮುಖ ಸಂಪ್ರದಾಯ ಪ್ರಭಲ ಧಾರ್ಮಿಕ ಶಕ್ತಿಯಾಗಿರುವುದು ಕಂಡುಬಂದಿದೆ. ಇವರು 'ರಾಜಗುರು' ಗಳೆನಿಸಿದ್ದರು. ಇವರು ಸಂಸ್ಕೃತ ವಿದ್ಯೆಯನ್ನು ಅರಿತ ಪಂಡಿತರಾಗಿದ್ದರೆಂದು ಶಾಸನಗಳ ಮೂಲಕ ಅರಿಯಲಾಗಿದೆ. ಶಕ್ತಿಪರಿಷೆಯು ಇಲ್ಲಿ ಪ್ರಬಲವಾಗಿರುವುದನ್ನು ಯತಿಗಳ ಪರಂಪರೆ ಮೂಲಕ ಗುರುತಿಸಲಾಗಿದೆ. ಕಿಟ್ಟಗಾವಿ ಸಂತತಿಯು ಪ್ರಮುಖವಾಗಿ ಕಂಡುಬಂದಿದೆ. ಕರ್ನಾಟಕದಲ್ಲಿಯೇ ಕಾಳಾಮುಖರು ಹೆಚ್ಚಿನ ಪ್ರಭಾವ ಬೀರಿದನಾಡು ಬಳ್ಳಿಗಾವೆ ಪರಿಸರದ ಪ್ರದೇಶಗಳು ಮತ್ತು ಬೆಳಗಾವಿ ಜಿಲ್ಲೆಯ ಪ್ರದೇಶಗಳು. ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ರಟ್ಟಿಹಳ್ಳಿ, ಅಬಲೂರು, ಕೋಡ, ನಿಡನೇಗಿಲು, ನೂಲಗೇರಿ, ಕಣವಿಸಿದ್ಧಗೇರಿ, ನಾಗವಂದ, ನೆಶ್ವಿ, ಸಾತೇನಹಳ್ಳಿ, ಅಣಜಿ, ರಾಣೆಬೆನ್ನೂರು, ಹರಳಹಳ್ಳಿ, ಅಸುಂಡಿ,

ಚೌಡದಾನಪುರ, ಅಂತರವಳ್ಳಿ, ಗಳಗನಾಥ, ತಿಳವಳ್ಳಿ, ಹಾನಗಲ್ಲು, ಬಾಳಂಬೀಡು, ಅರಳೇಶ್ವರ, ಕಲಕೇರಿ, ಹತ್ತಿಮತ್ತೂರು, ಮೋಟೆಬೆನ್ನೂರು, ಮುಂತಾದವುಗಳು. ಬ್ರಾಹ್ಮಣವರ್ಗದಿಂದ ಎಲ್ಲ ವರ್ಗದವರಿಗೂ ಅದರಲ್ಲೂ ಶೂದ್ರವರ್ಗಕ್ಕೆ ಶಿಕ್ಷಣ ವ್ಯವಸ್ಥೆ ತಂದಿರುವುದನ್ನು ಗುರುತಿಸಲಾಗಿದೆ. ತ್ರಿಕೂಟ ದೇವಾಲಯಗಳಲ್ಲಿ ವ್ಯಕ್ತಿಯ ಹೆಸರಿನ ಲಿಂಗಗಳ ಸ್ಥಾಪನೆ ಮಾಡಿರುವುದನ್ನು ಗುರುತಿಸಲಾಗಿದೆ.

ಕಾಳಾಮುಖರು ಶೈವಾಗಮದಲ್ಲಿ ಅತ್ಯಂತ ನಿಷ್ಣಾತರಾಗಿರುವುದನ್ನು ಶಾಸನಗಳ ಮೂಲಕ ಅರಿಯಲಾಗಿದೆ. ಕಾಳಾಮುಖರಲ್ಲಿ ನೈಷ್ಟಿಕರೂ ಇದ್ದರು, ಸಾಂಸಾರಿಕರೂ ಇರುವುದು ಕಂಡುಬರುವುದು. ವಿದ್ವತ್ತಿನಲ್ಲಿ ಮತ್ತು ತಪಸ್ಸಿನಲ್ಲಿ ಸಾಧಕರಾಗಿರುವುದು ಕಂಡುಬರುತ್ತದೆ. ಗುರುಶಿಷ್ಯ ಪರಂಪರೆ ಮುಂದುವರೆದು ತಮ್ಮ ವಂಶದವರೇ ಪರಂಪರೆಗೆ ವಾರಸದಾರರಾಗಿರುವುದು ಕಂಡುಬರುತ್ತದೆ. ಮಹಾರಾಜರು, ಮಹಾಮಂಡಲೇಶ್ವರರು, ಸಾಮಂತರು, ಅಧಿಕಾರಿಗಳು, ವ್ಯಾಪಾರಿವರ್ಗದವರು ಇವರನ್ನು ಪೂಜಿಸುವ ಮೂಲಕ ದೇವಾಲಯಗಳಿಗೆ, ಯತಿಗಳಿಗೆ, ದೀಪ, ಧೂಪ, ಅಂಗಭೋಗ, ರಂಗಭೋಗ, ಆಚ್ಛಾದನ, ಅಶನ, ಜೀರ್ಣೋದ್ಧಾರಕ್ಕೆ ದಾನ ನೀಡಿರುವುದನ್ನು ಶಾಸನಗಳು ತಿಳಿಸುತ್ತವೆ. ಅಲ್ಲದೆ ಕಾಳಾಮುಖ ಆಚಾರ್ಯರೇ ದೇವಾಲಯಗಳಿಗೆ ದಾನದತ್ತಿ ನೀಡಿದ್ದನ್ನು ಶಾಸನಗಳು ತಿಳಿಸುತ್ತವೆ. ಇವರು ರಾಜಾಶ್ರಯದಲ್ಲಿರುವುದು ಕಂಡುಬರುತ್ತದೆ. ದೇವಾಲಯಗಳ ಬದಿಯಲ್ಲಿ ಇವರ ಮಠಗಳು ಸಾಮಾನ್ಯವಾಗಿ ಕಂಡು ಬರುತ್ತಿದ್ದು ಪೂಜಾಕೈಂಕರ್ಯದೊಂದಿಗೆ ವಿದ್ಯಾಭ್ಯಾಸ ನಡೆಸುತ್ತಿದ್ದುದನ್ನು ಶಾಸನಗಳು ತಿಳಿಸುತ್ತವೆ. ಮಠಗಳಲ್ಲಿ ನಡೆಯುವ ವಿದ್ಯಾಭ್ಯಾಸ ಪರಂಪರೆಗೆ ಕಾಳಾಮುಖರು ಬುನಾದಿ ಹಾಕಿದ್ದಾರೆ. ಬಳ್ಳಿಗಾವೆಯಲ್ಲಿ ಅರವತ್ನಾಲ್ಕು ವಿದ್ಯೆಗಳನ್ನು ಕಲಿಸುತ್ತಿರುವ ಬಗ್ಗೆ ಶಾಸನಗಳಲ್ಲಿ ಉಲ್ಲೇಖಿತವಾಗಿರುವುದು ಇವರ ಅದ್ಭುತ ಕೊಡುಗೆಯಾಗಿದೆ, ಸ್ಥಾನಾಚಾರ್ಯರಾಗಿ ಕಾರ್ಯನಿರ್ವಹಿಸಿರುವುದು ಕಂಡುಬರುತ್ತದೆ.

ಸರಸ್ವತಿ ಆರಾಧನೆ ಮಾಡುತ್ತಿರುವ ಬಗ್ಗೆ ಸರಸ್ವತಿ ದೇವಾಲಯಗಳು ಸಾಕ್ಷಿಯಾಗಿವೆ. ವಿದ್ಯಾರ್ಥಿಗಳಿಗೆ ಊಟ ವಸತಿ ಮೊದಲಾದ ಅನುಕೂಲ ಮಾಡಿರುವುದು ಕಂಡುಬರುತ್ತದೆ. ರೋಗಿಗಳಿಗೆ, ಅನಾಥರಿಗೆ, ಅಂಗವಿಕಲರಿಗೆ, ಔಷದೋಪಚಾರದೊಂದಿಗೆ ಆಶ್ರಯದಾತರಾಗಿರುವುದು ಗೋಚರಿಸುತ್ತದೆ. ಅಲ್ಲದೇ ಸಂಗೀತ, ನೃತ್ಯ, ಯುದ್ಧಕಲೆಗಳನ್ನು ಕಲಿಸುವ ವ್ಯವಸ್ಥೆಯಿರುವುದು ತಿಳಿಯುತ್ತದೆ. ಇವರು ಮಹಿಷಾಸುರಮರ್ದಿನಿ, ಸಪ್ತಮಾತೃಕೆ, ಸೂರ್ಯದೇವ, ಭೈರವನ ಆರಾಧಕರಾಗಿದ್ದಾರೆ,

ಲಕುಲೀಶನ ಅನುಯಾಯಿಗಳೆಂಬುದು ಕಂಡು ಬರುತ್ತದೆ. ಅನೇಕ ಕಡೆ ಸೂರ್ಯನ ಸುಂದರಮೂರ್ತಿಗಳು ಲಭಿಸುತ್ತವೆ. ಕಿಟ್ಟಗಾವಿ ಸಂತತಿಯು ರಟ್ಟಿಹಳ್ಳಿಯಲ್ಲಿ ಪ್ರಸಿದ್ಧಿ ಪಡೆದಿತ್ತು, ಕಡಂಬೇಶ್ವರದ ಆರಾಧಕರಾದ ಮೂಜುಜಾವಿದೇವರು ವಿವಿಧ ದಾನಪಡೆದ ಉಲ್ಲೇಖ ದೊರೆಯುತ್ತದೆ. ಜಿಲ್ಲೆಯ ಹಿರೇಕೆರೂರು ತಾಲೂಕು ಅಣಜಿಯಲ್ಲಿ ಶಕ್ತಿಪರಿಷೆ ಉಲ್ಲೇಖಿತ ಮೊದಲ ಶಾಸನ ಲಭಿಸುತ್ತದೆ.

ಜಿಲ್ಲೆಯಲ್ಲಿ ಸುಮಾರು ೩೨೮ ಶೈವದೇವಾಲಯಗಳು, ಕಾಳಾಮುಖರಿಗೆ ಸಂಬಂಧಿಸಿದ ಸುಮಾರು ೮೬ ಶಾಸನಗಳು, ೮೫ ಕಾಳಾಮುಖ ಯತಿಗಳು, ೧೦೦ ಶಾಸನೋಕ್ತ ದೇವಾಲಯಗಳು, ೯೭ ಸಪ್ತಮಾತೃಕೆಶಿಲ್ಪಗಳು, ೧೩ ಸರಸ್ವತಿಶಿಲ್ಪ ಮತ್ತು ಕೆಲವು ಸರಸ್ವತಿ ದೇವಾಲಯಗಳು ಕಂಡು ಬರುತ್ತವೆ. ೧೩ ಸೂರ್ಯಶಿಲ್ಪಗಳು, ಹಾಗೂ ೩೭ ಭೈರವನ ವಿಗ್ರಹಗಳು ಲಭಿಸುತ್ತವೆ. ಕಲ್ಯಾಣಚಾಲುಕ್ಯರ ಕಾಲದ ಸುಮಾರು ೨೭೨ ದೇವಾಲಯಗಳು ಕಂಡುಬಂದಿವೆ.

ಹಾವೇರಿ ಜಿಲ್ಲಾ ಕಾಳಾಮುಖ ಪರಂಪರೆ ಸಾಂಸ್ಕೃತಿಕ ಅಧ್ಯಯನ ಎಂಬ ಅಧ್ಯಯನದ ಅಧ್ಯಾಯಗಳ ಸ್ವರೂಪವು ಪ್ರಮುಖವಾಗಿ ಪ್ರಬಂಧದ ರಚನೆಗೆ ಹೊಂದಿದ ಆಶಯಗಳ ವಿಶ್ಲೇಷಣೆ ಮತ್ತು ವಿಮರ್ಶೆ ಮಾಡುವುದಾಗಿದೆ. ಪ್ರಸ್ತುತ ಮಹಾಪ್ರಬಂಧವು ಏಳು ಅಧ್ಯಾಯಗಳನ್ನು ಒಳಗೊಂಡಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ, ಸ್ವರೂಪ ಮತ್ತು ಇದುವರೆಗಿನ ಅಧ್ಯಯನ ಹಾಗೂ ಜಿಲ್ಲೆಯ ಐತಿಹಾಸಿಕ ಮತ್ತು ಧಾರ್ಮಿಕ, ಸಾಂಸ್ಕೃತಿಕ ಹಿನ್ನೆಲೆ ಕುರಿತು ವಿಶ್ಲೇಷಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಶೈವ ಪರಂಪರೆಗೆ ಸಂಬಂಧಿಸಿದಂತೆ ಪಾಶುಪತ, ಕಾಪಾಲಿಕ, ಕಾಳಾಮುಖ, ಹಾಗೂ ಶೈವ ಪಂಥಗಳ ವಿಧಿವಿಧಾನ, ಮತ್ತು ಆಚರಣೆಗಳ ನಿಯಮಗಳನ್ನು ವಿವೇಚಿಸಲಾಗಿದೆ. ಎರಡೂ ಪಂಥಗಳು ಒಂದೇ ಇಬ್ಬರ ವ್ಯತ್ಯಾಸ ಅತ್ಯಲ್ಪ, ಕಾಳಾಮುಖವು ಪಾಶುಪತ ಸಿದ್ಧಾಂತದ ಕವಲು, ಶಾಸನಗಳಲ್ಲಿ ಎಲ್ಲೂ ಪಾಶುಪತ ಮತ್ತು ಕಾಳಾಮುಖ ಬೇರೆ ಎಂದು ಹೇಳಿಲ್ಲ ಎರಡರಲ್ಲೂ ಶಕ್ತಿ, ಪಂಡಿತ, ದೇವ, ಗೊರವರೆಂದು ಕರೆಯಲಾಗಿರುವುದನ್ನು ಗುರುತಿಸಲಾಗಿದೆ. ಕಾಳಾಮುಖ ಪದಕುರಿತು ನಿಯಮಗಳನ್ನು ತಪ್ಪದೇ ಆಚರಿಸುವವನು, ನಿಯಮಬದ್ಧನಾಗಿರುವವ, ಶಿವನನ್ನು ಅಗ್ನಿಯರೂಪದಲ್ಲಿ ನೋಡುವುದೆಂದು ಗುರುತಿಸಲಾಗಿದೆ. ಕಲಾಮುಖ

ಎಂಬುದನ್ನು ಚರ್ಚಿಸಲಾಗಿದೆ. ಕಾಳಾಮುಖ ಎಂದರೆ ಕಠೋರ, ಉಗ್ರ, ಅಗ್ನಿಮುಖ ಎಂಬರ್ಥವನ್ನು ಕಂಡುಕೊಳ್ಳಲಾಗಿದೆ. ನಕುಲೀಶನು ಈ ಪಂಥದಸ್ಥಾಪಕ.

ಪಾಶುಪತರು ಹಾವೇರಿ ಜಿಲ್ಲೆಯಲ್ಲಿ ಬಹಳ ಕಡಿಮೆ ಇರುವುದು ಗೋಚರಿಸುತ್ತದೆ. ಶಾಸನಗಳನ್ನಾಧರಿಸಿ ಹಿರೇಕೆರೂರು ತಾಲೂಕಿನ ಎಮ್ಮಿಗನೂರು, ರಾಣೇಬೆನ್ನೂರು ತಾಲೂಕಿನ ಅಸುಂಡಿ, ಕಲಕೇರಿ ಸೋಮೇಶ್ವರ ದೇವಸ್ಥಾನದಲ್ಲಿರುವ ಶಾಸನಗಳಲ್ಲಿ ಮಾತ್ರ ಕಂಡುಬರುತ್ತದೆ. ಲಾಕುಳಶೈವವು ಆಗಮಗಳಲ್ಲಿರುವುದನ್ನು ಗುರುತಿಸಲಾಗಿದೆ. ಲಾಕುಳಪದ ಶೈವ ಮತಕ್ಕೆ ಸಂಬಂಧಿಸಿದ್ದೆಂದು ಲಕುಲೀಶನ ವಿಗ್ರಹಗಳು ಇರುವುದನ್ನು ಕಂಡುಕೊಳ್ಳಲಾಗಿದೆ. ಕೈಯಲ್ಲಿ ಲಗುಡ(ದಂಡ) ಹಿಡಿದ ವಿಗ್ರಹಗಳು ಜಿಲ್ಲೆಯಲ್ಲಿ ಕಂಡು ಬಂದಿವೆ. ಲಾಕುಳ ಶೈವರಿಗೆ ಸೂರ್ಯನು ಒಂದುಅಂಗ. ಹಾಗಾಗಿ ಸೂರ್ಯಾರಾಧನೆ ಕಂಡುಬರುತ್ತದೆ. ಲಕುಲೇಶ್ವರ ಎಂಬ ಉಲ್ಲೇಖದ ಶಾಸನ ಮೇದೂರಿನಲ್ಲಿ ಕಂಡುಬಂದಿದೆ. ಕಾಪಾಲಿಕರಿಗೆ ಮಹಾವ್ರತಧಾರಿಗಳು, ಅಲ್ಲದೇ ಕಾಳಾಮುಖರು ಮತ್ತು ಪಾಶುಪತರಲ್ಲಿ ಕೆಲವರು ಮಹಾವ್ರತಿಗಳಾಗಿರುವುದು ಗೋಚರಿಸುತ್ತದೆ. ಶೈವಪರಂಪರೆಯಲ್ಲಿರುವ ವಿವಿಧ ಶೈವಗಳನ್ನು ಗುರುತಿಸಲಾಗಿದೆ. ಪ್ರಮುಖವಾಗಿ ಕಾಳಾಮುಖ, ಪಾಶುಪತ, ಕಾಪಾಲಿಕ ಪಂಥಗಳಿವೆ. ಶುದ್ಧಶೈವರು ಶಿಖೆ, ಯಜ್ಞೋಪವೀತ, ಇಷ್ಟಲಿಂಗ ರುದ್ರಾಕ್ಷ ಪಂಚಾಕ್ಷರಿಮಂತ್ರ ಹೊಂದಿರುವವರು ಇವರು ಸ್ಥಾವರಲಿಂಗ ಆರಾಧಕರೂ ಆಗಿರುವರು.

ಮಿಶ್ರಶೈವರು ಶಿವ, ವಿಷ್ಣು, ಬ್ರಹ್ಮ ಮೂವರನ್ನೂ ಪೂಜಿಸುತ್ತ ಗಣಪತಿ, ಷಣ್ಮುಖ ಬೇರೆಬೇರೆ ದೇವರನ್ನು ಪೂಜಿಸುವ ಇವರು ಕಾಳಾಮುಖರಾಗಿರುವುದು ಗೋಚರಿಸುತ್ತದೆ. ಕಾಶ್ಮೀರ ಶೈವರು ಕಾಶ್ಮೀರದಿಂದ ಬಂದವರಲ್ಲ ಅವರ ಪಾಂಡಿತ್ಯದರೀತಿ, ಪಾಂಡಿತ್ಯವನ್ನು ಪಡೆದವರೆಂದು, ಅದು ವಿದ್ವಾಂಸ ಎಂಬುದರ ಸಂಕೇತವಾಗಿ ಕಂಡುಕೊಳ್ಳಲಾಗಿದೆ. ಕೌಳರು ಶಕ್ತಿಯ ಉಪಾಸಕರು, ಶಾಕ್ತರು ಇವರು ಹಿರೇಕೆರೂರು ತಾಲೂಕಿನ ಸಾತೇನಹಳ್ಳಿ ಶಾಸನದಲ್ಲಿ ಉಲ್ಲೇಖಗೊಂಡಿರುವುದು ಗೋಚರಿಸುತ್ತದೆ. ಕೋಣವತ್ತಿ, ಚಿಕ್ಕೇರೂರಿನ ಬಳರಿದೇವತೆಯ ಆರಾಧಕರಾಗಿದ್ದು ವಾಮಾಚಾರಿಗಳು. ಭೋಗಾವಿಯ ಬಳಗೆರೆ ಬಳರಿಕೆರೆ ಇದು ಕೌಳರ ಆರಾಧನೆಯ ದೇವತೆಯ ಕೆರೆಯೆಂದು ಗುರುತಿಸಲಾಗಿದೆ. ಇಲ್ಲಿ ದೊರೆಯುವ ಆಧಾರಗಳಿಂದ ಸ್ಪಷ್ಟಗೊಳಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಶಕ್ತಿಪರಿಷೆ ಮತ್ತು ಸಿಂಹಪರಿಷೆಯ ಕುರಿತು ವಿಶ್ಲೇಷಿಸಲಾಗಿದೆ. ಶಕ್ತಿಪರಿಷೆಯು ಕರ್ನಾಟಕದಲ್ಲಿ ಹಾವೇರಿ ಜಿಲ್ಲೆಯೂ ಪ್ರಾಮುಖ್ಯತೆ

ಪಡೆದಿರುವುದನ್ನು ಕಂಡುಕೊಳ್ಳಲಾಗಿದೆ. ಶಕ್ತಿಪರಿಸೆಯ ಉಲ್ಲೇಖದ ಮೊದಲಶಾಸನ ಹಿರೇಕೆರೂರ ತಾಲೂಕಿನ ಅಣಜಿಯಲ್ಲಿರುವುದನ್ನು ಗುರುತಿಸಲಾಗಿದೆ. ಶಕ್ತಿಪರಿಷೆಯ ಶಾಖೆಗಳು ಮತ್ತು ಮೂವರುಕೋಣೆ ಸಂತತಿಗೆ ಸಂಬಂಧಿಸಿದ ಮಠಗಳು, ಶಾಸನಗಳಲ್ಲಿ ಶಕ್ತಿಪರಿಷೆಯ ಉಲ್ಲೇಖಗಳ ಮೂಲಕ ಕಂಡುಕೊಳ್ಳಲಾಗಿದೆ. ಹಾನಗಲ್ಲ ತಾಲೂಕು ಆಡೂರು, ರಾಣೆಬೆನ್ನೂರು ತಾಲೂಕು ಹರಳಹಳ್ಳಿಗಳಲ್ಲಿ ಈ ಸಂತತಿಯನ್ನು ಗುರುತಿಸಲಾಗಿದೆ. ಸಿಂಹಪರಿಶೆಯು ಈ ಭಾಗದಲ್ಲಿ ಅಲ್ಪವಾಗಿದ್ದು ಅಸುಂಡಿಯ ಶಾಸನದಲ್ಲಿ ಗುರುತಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಕಾಳಾಮುಖ ದೇವಾಲಯಗಳು ಹಾವೇರಿ ಜಿಲ್ಲೆಯಾದ್ಯಂತ ಗೋಚರಿಸುತ್ತವೆ. ದೇವಾಲಯ ಸಂಸ್ಕೃತಿಗೆ ಕಾಳಾಮುಖರ ಕೊಡುಗೆಗಳನ್ನು ವಿವೇಚಿಸಲಾಗಿದೆ. ದೇವಾಲಯಗಳ ಸ್ಥಾನಾಚಾರ್ಯರಾಗಿರುವ ಮತ್ತು ಅವರ ಪಾದವನ್ನು ತೊಳೆದು ಪೂಜಿಸಿ ದಾನ ನೀಡಿರುವುದನ್ನು ಶಾಸನಗಳ ಮೂಲಕ ಗುರುತಿಸಲಾಗಿದೆ. ಇವರು ನಿರ್ಮಿಸಿದ ತ್ರಿಕೂಟ ದೇವಾಲಯಗಳು, ಶಾಸನ ಉಲ್ಲೇಖಿತ ಕಾಳಾಮುಖ ಯತಿಗಳನ್ನು ಗುರುತಿಸಿ ಬಳ್ಳಿಗಾವೆ ಕೇದಾರಮಠಕ್ಕೆ ಪ್ರತಿಬದ್ಧವಾಗಿರುವುದು ಅನೇಕ ದತ್ತಿಗಳನ್ನು ಪಡೆದ ದೇವಾಲಯಗಳನ್ನು ಗುರುತಿಸಲಾಗಿದೆ. ಸೂರ್ಯಾರಾಧನೆ, ಸರಸ್ವತಿ, ಭೈರವ ಮುಂತಾದವುಗಳ ಕುರಿತು ವಿವರಿಸಲಾಗಿದೆ. ಜಿಲ್ಲೆಯ ಶಾಸನೋಕ್ತ ಕಾಳಾಮುಖರ ಸುಮಾರು ೮೫ ರಿಂದ ೯೦ ಯತಿಗಳನ್ನು ಗುರುತಿಸಿ ದಾನದತ್ತಿಗಳನ್ನು ವಿವೇಚಿಸಿ ಅವರ ಪರಂಪರೆಯನ್ನು ನೀಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಹಾವೇರಿ ಜಿಲ್ಲೆಯ ಕಾಳಾಮುಖ ಪರಂಪರೆಗೆ ಪ್ರಭಾವಿತವಾದ ನೆರೆಯ ಬಳ್ಳಿಗಾವೆ ಪರಿಸರದ ಕೋಡಿಮಠ, ಕೇದಾರನಾಥ ಮುಂತಾದ ದೇವಾಲಯಗಳ ಕುರಿತು ವಿವೇಚಿಸಿ ಬಳ್ಳಿಗಾವೆಯ ಸುಮಾರು ೨೨ಕ್ಕೂ ಹೆಚ್ಚು ಶಾಸನಗಳು ಕಾಳಾಮುಖರ ಪ್ರಸ್ತಾಪಮಾಡಿದ್ದು ಯತಿಪರಂಪರೆಯನ್ನು ಅವರ ಆಚರಣೆಯನ್ನು ಶಾಸನಗಳಲ್ಲಿ ಕಂಡುಕೊಳ್ಳಲಾಗಿದೆ. ಕೋಡಿಮಠದಲ್ಲಿ ವೇದ ಉಪನಿಷತ್ತು, ದರ್ಶನಗಳು, ಹದಿನೆಂಟು ಪುರಾಣಗಳ ಅಧ್ಯಯನ ನಡೆಯುತ್ತಿತ್ತು. ರೋಗಿಗಳಿಗೆ, ಅನಾಥರಿಗೆ, ಕಲಾವಿದರಿಗೆ, ಆಶ್ರಯದಾತರಾಗಿದ್ದನ್ನು ಗುರುತಿಸಲಾಗಿದೆ.

ಅಧ್ಯಾಯ ಆರರಲ್ಲಿ ಕಾಳಾಮುಖರು ಇಂದು ಅಸ್ತಿತ್ವ ಉಳಿಸಿಕೊಂಡಿರುವ ಬಗ್ಗೆ ಪರಿವರ್ತಿತವಾದ ಕುರಿತು ವಿಶ್ಲೇಷಿಸಲಾಗಿದೆ. ಏಕಾಂತರಾಮಯ್ಯನಂತಹ ಶೈವ ಉಗ್ರಭಕ್ತರನ್ನು ಕುರಿತು ವಿವರಿಸಿ. ಅವನ ಶಿರಸ್ಸು ಪವಾಡದ ಬಗ್ಗೆ ಚರ್ಚಿಸಲಾಗಿದೆ.

ಅದರಂತೆ ನೆಶ್ವಿಯಲ್ಲಿಯೂ ಪವಾಡಗಳು, ಶಿರಸ್ಸು ಪವಾಡಗಳನ್ನು ಕುರಿತು ಇಂದು ಕಂಡುಬರುವ ಕಾಳಾಮುಖ ಪರಂಪರೆ ಗುರುತಿಸಲು ಯತ್ನಿಸಿದ್ದೇನೆ. ಎರಡೂ ಪವಾಡಗಳಲ್ಲಿ ಸಾಮ್ಯತೆಯಿರುವುದನ್ನು ಗುರುತಿಸಲಾಗಿದೆ, ವೀರಮಹೇಶ್ವರ ಪರಂಪರೆ, ಪುರವಂತಿಕೆ, ಗುಗ್ಗಳದ ರೂಪಗಳನ್ನು ವಿವೇಚಿಸಲಾಗಿದೆ.

ಕೊನೆಯ ಅಧ್ಯಾಯ ಸಮಾರೋಪದಲ್ಲಿ ಮೇಲೆ ತಿಳಿಸಿದ ಎಲ್ಲ ವಿಷಯಗಳನ್ನು ಅವಲೋಕಿಸಿ ಒಟ್ಟಾರೆ ಅಭಿಪ್ರಾಯವನ್ನು ತಿಳಿಸಿದ್ದೇನೆ ಜೊತೆಗೆ ಅನುಬಂಧ, ಗ್ರಂಥಋಣ, ನಕಾಶೆಗಳು, ಛಾಯಾಚಿತ್ರಗಳನ್ನು ಒಳಗೊಂಡ ಮಾಹಿತಿಯನ್ನು ಹಾವೇರಿ ಜಿಲ್ಲೆಯಲ್ಲಿ ನೆರೆಯ ಬಳ್ಳಿಗಾವೆ ಪರಿಸರದಲ್ಲಿ ದೊರೆತಿರುವ ಶಾಸನಗಳು, ದೇವಾಲಯಗಳನ್ನು ಆಧರಿಸಿ ಸಂಪೂರ್ಣ ಮಾಹಿತಿ ಒಂದೆಡೆ ದಾಖಲಿಸಿ ಈ ಪ್ರಬಂಧ ಸಿದ್ಧಪಡಿಸಿ ಸಮಾರೋಪಿಸಲಾಗಿದೆ.

ಫಲಿತಗಳು

* ಕಾಳಾಮುಖರು ತ್ರಿಕೂಟ ತ್ರೈಪುರುಷದೇವಾಲಯದಲ್ಲಿ ಶಿವ, ವಿಷ್ಣು, ಸೂರ್ಯನ ಆರಾಧಕರಾಗಿದ್ದರು. ಮತ್ತು ಬ್ರಹ್ಮಲಿಂಗ, ಈಶ್ವರಲಿಂಗ, ವಿಷ್ಣು ರೂಪದ ಆರಾಧಕರಾಗಿದ್ದರಲ್ಲದೆ ಶಕ್ತಿಯ, ವೀರಭದ್ರನ, ಕಾಳಿಯ ಆರಾಧಕರಾಗಿವುದು ಕಂಡುಬರುತ್ತದೆ.
* ಇವರು ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ತಿಳಿದಿದೆ. ಇವರು ಸಮಾಜದ ಎಲ್ಲ ವರ್ಗದವರೊಡನೆ ಸಾಂಸ್ಕೃತಿಕ ಸೇತುವೆಯಾಗಿರುವುದು ಗೋಚರಿಸುತ್ತದೆ.
* ಜಿಲ್ಲೆಯ ಕಾಳಾಮುಖ ಪರಂಪರೆಯ ಯತಿಗಳಿಗೂ ರಾಜರು, ಮಾಂಡಲೀಕರು, ಸಾಮಂತರು ದಾನಧರ್ಮ ಮಾಡುವಲ್ಲಿ ಮಹತ್ವದ ಪಾತ್ರವಹಿಸಿರುವುದು ತಿಳಿದುಬರುತ್ತದೆ.
* ವೇದ, ಉಪನಿಷತ್ತುಗಳನ್ನು ಅಧ್ಯಯನಮಾಡಿ ಪಂಡಿತರಾಗಿರುವುದು ಗೋಚರಿಸುತ್ತದೆ. ಕೆಲವುಕಡೆಗಳಲ್ಲಿ ಇಂದಿನ ಆಚರಣೆಗಳಲ್ಲಿ ಸಂಪ್ರದಾಯಗಳಲ್ಲಿ ಕಾಳಾಮುಖರ ಪರಂಪರೆ ಅಸ್ತಿತ್ವದಲ್ಲಿರುವುದು ಕಂಡುಬರುವುದು.
* ಕಾಳಾಮುಖರೆಂದರೆ ಕಪ್ಪುಮುಖ, ಕಪ್ಪುಗೆರೆ ಹಾಕಿಕೊಂಡವರಲ್ಲ, ಕಠೋರವಾದ ನಿಯಮಗಳನ್ನು ತಪ್ಪದೇ ಆಚರಿಸುವವರು ಅಥವಾ ಚಾಚೂತಪ್ಪದೇ

ಮಾಡುವವರು ಅದರೆ ಅದು ಅವರನ್ನು ದೂಷಣೆಮಾಡುವ ಪದವಾಗಿ ಕಂಡು ಬರುತ್ತದೆ.

* ಬಳ್ಳಿಗಾವೆಯ ಕಾಳಾಮುಖ ಕೇಂದ್ರದ ಪ್ರಭಾವಿತ ಪ್ರದೇಶವಾದ ಹಾವೇರಿಜಿಲ್ಲೆಯಲ್ಲಿ ಅನೇಕ ಶೈವದೇವಾಲಯಗಳು ಬಳ್ಳಿಗಾವಿ ಪರಂಪರೆಗೆ ಪ್ರತಿಬದ್ಧವಾಗಿದ್ದವೆಂದು ತಿಳಿದುಬರುತ್ತದೆ. ಕಲ್ಲೇಶ್ವರ, ಕಲ್ಮೇಶ್ವರ ಎಂಬ ಹೆಸರಿನಲ್ಲಿರುವ ಮತ್ತು ಇಂದು ಅವು ನಶಿಸಿಹೋಗಿ ಕುರುಹುಗಳಾಗಿ ಗೋಚರಿಸುತ್ತವೆ.

* ಅಂಗದಮೇಲಿನ ಲಿಂಗಪೂಜೆ ಪ್ರಾಮುಖ್ಯತೆ ಪಡೆದ ೧೩ನೇ ಶತಮಾನದ ಘಟ್ಟದಲ್ಲಿ ದೇವಾಲಯ ಸಂಸ್ಕೃತಿಗೆ ಭಾರಿ ಹಿನ್ನಡೆಯಾಗಿ ಜೀರ್ಣಾವಸ್ಥೆಯಲ್ಲಿರುವುದು ಕಂಡು ಬಂದಿದೆ. ಇದಕ್ಕೆ ಸಾಕ್ಷಿಯಾಗಿ ಕಲ್ಮೇಶ್ವರ ದೇವಾಲಯಗಳು ಅಳಿವಿನ ಅಂಚಿನಲ್ಲಿವೆ.

* ಇಂದಿಗೂ ಕಾಳಾಮುಖ ಪರಂಪರೆಯ ಆಚರಣೆ ಮುಂದುವರೆಸಿಕೊಂಡು ಬಂದು ದೇವಾಲಯ ನಿರ್ಮಾಣ, ನಿರ್ವಹಣೆ ಜೊತೆಗೆ ದೇವತಾಕಾರ್ಯ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ನೆಶ್ವಿಅಜ್ಜನವರ ಪರಂಪರೆಯಲ್ಲಿ ಕಂಡುಬರುತ್ತದೆ. ಪಂಚಾಂಗ, ಮನೆಯವಾಸ್ತು, ದೇವಸ್ಥಾನ ನಿರ್ಮಾಣ ಮುಂತಾದವುಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಇವರ ಮಾರ್ಗಸೂಚಿಯಂತೆ ನಡೆಯುವುದು ಗೋಚರವಾಗಿದೆ.

* ಇವರು ಸಪ್ತಮಾತೃಕೆಯರ ಆರಾಧಕರಾಗಿರುವದರಿಂದ ಜಿಲ್ಲೆಯಲ್ಲಿ ಸುಮಾರು ೯೭ಕ್ಕೂ ಹೆಚ್ಚು ಶಿಲ್ಪಗಳು ಕಂಡುಬಂದಿವೆ. ಶಾಕ್ತಪಂಥದವರು ಶಕ್ತಿಯ ಆರಾಧಕರಾಗಿರುವ ಕಾಳಾಮುಖ ಪರಂಪರೆಯವರು ಶಕ್ತಿ ಮಹಿಷಾಸುರಮರ್ದಿನಿ, ಕಾರ್ತಿಕೇಯ, ಸಪ್ತಮಾತೃಕೆಯರು, ಗಣೇಶ ಮುಂತಾದವುಗಳ ಪೂಜಾಕೈಂಕರ್ಯ ನಡೆಸುತ್ತಿದ್ದಾರೆ.

* ಶಾಕ್ತರ ಕೌಳ ಪರಂಪರೆಯು ಸಾತೇನಹಳ್ಳಿ, ಕೋಣವತ್ತಿ, ಚಿಕ್ಕೇರೂರು, ಭೋಗಾವಿ ಪ್ರದೇಶದಲ್ಲಿದ್ದರೆಂದು ಅವರ ಆರಾಧನಾ ದೈವ ಬಳರಿದೇವತೆ ವಿಗ್ರಹ ಮತ್ತು ಬಳಗೆರೆ(ಬಳರಿಕೆರೆ) ಕಂಡು ಬಂದಿವೆ.

* ಕಿಟ್ಟಗಾವಿ ಸಂತತಿಯ ಕುರಿತು ಕಬ್ಬಿಣದ ಕೆಲಸಕ್ಕೆ ಸಂಬಂಧಿಸಿದಂತಹ ಗುಂಡಗಟ್ಟಿ, ಸಿರಗಂಬಿ, ಸತುವಿಗೆಹಳ್ಳಿ, ಮತ್ತು ಕಿಟ್ಟದಹಳ್ಳಿ ಎಂಬ ಗ್ರಾಮನಾಮಗಳು ಹಾಗೂ ಕಬ್ಬಿಣಕಂತಿಮಠ, ಬೂದಿಮಠಗಳು ರಟ್ಟೀಹಳ್ಳಿ ಪರಿಸರದಲ್ಲಿ ಕಂಡುಬರುತ್ತವೆ.

* ಈ ಪರಂಪರೆಯವರು ವೀರಭದ್ರನ ಆರಾಧಕರಾಗಿ ಪುರವಂತಿಕೆಯಲ್ಲಿ ಒಡವುಗಳನ್ನು ಹೇಳುತ್ತ ನೃತ್ಯ ಮಾಡುತ್ತ ಕಾಳಾಮುಖತ್ವವನ್ನು ಪ್ರತಿನಿಧಿಸುತ್ತಿರುವುದು ಗೋಚರವಾಗಿದೆ. ಇವರು ತಮ್ಮನ್ನು ತಾವು ಸಮರ್ಪಿಸಿಕೊಳ್ಳಲು ಸಿದ್ಧರಿರುವುದು ಕಂಡುಬಂದಿದೆ.

* ಜಿಲ್ಲೆಯ ಕೆಲವುಕಡೆ ಜೈನಬಸದಿಗಳು ಶೈವದೇವಾಲಯಗಳಾಗಿರುವುದು ನದಿಹರಳಹಳ್ಳಿ, ಹಾನಗಲ್ಲು, ಮಲ್ಲೂರು, ಕುಂಚೂರು, ಅಬಲೂರುಗಳಲ್ಲಿ ಗೋಚರಿಸಿರುವುದು ಧರ್ಮ ಸಂಘರ್ಷಕ್ಕೆ ಸಾಕ್ಷಿಭೂತವಾಗಿವೆ.

* ಈ ಅಧ್ಯಯನದ ಕ್ಷೇತ್ರ ಕಾರ್ಯದಲ್ಲಿ ಬ್ಯಾಡಗಿ ತಾಲೂಕು ಕುಮ್ಮೂರು, ರಾಣೆಬೆನ್ನೂರುತಾಲೂಕು ಹೂಲಿಹಳ್ಳಿ, ಹಿರೇಕೆರೂರು ತಾಲೂಕು ಆಲದಗೇರಿ, ಕೋಡ, ಲಿಂಗದೇವರಕೊಪ್ಪ, ರಟ್ಟಿಹಳ್ಳಿ, ಅಬಲೂರುಗಳಲ್ಲಿ ಹೊಸಶಾಸನಗಳನ್ನು ಪತ್ತೆ ಮಾಡಲಾಗಿದೆ. ಮೂಜುಜಾವಿದೇವರು ಮತ್ತು ಏಕಾಂತರಾಮಯ್ಯನಿಗೆ ಸಂಬಂಧಿಸಿದ ಪಾಠಅಪ್ರಕಟಿತ ಶಾಸನಗಳನ್ನು ಪ್ರಕಟಗೊಳಿಸಲಾಯಿತು.

ಈವರೆಗೆ ತಿಳಿಸಿದ ನನ್ನ ಸಂಶೋಧನೆಯ ಫಲಿತಗಳನ್ನು ಆಧರಿಸಿದ ಅಧ್ಯಾಯಗಳನ್ನು ಹೊರತುಪಡಿಸಿ, ಕಾಳಾಮುಖ ದೇವಾಲಯಗಳರಚನೆ, ಅವರ ಪರಂಪರೆಯನ್ನು ಕುರಿತು ಪ್ರತ್ಯೇಕ ಶೀರ್ಷಿಕೆಗಳೊಂದಿಗೆ ಸಂಶೋಧನಾಕಾರ್ಯ ಕೈಗೊಳ್ಳಬಹುದೆಂದು ತಿಳಿಯಪಡಿಸುತ್ತೇನೆ. ಇಡೀ ಅಧ್ಯಯನಕ್ಕೆ ಚರಿತ್ರೆ ಮತ್ತು ಇತಿಹಾಸ ಒಂದಕ್ಕೊಂದು ಪೂರಕವಾಗಿ ಜೀವಂತವಾಗಿರುವುದನ್ನು ತೋರಿಸಿಕೊಡಲು ಸಂಶೋಧನೆಯಲ್ಲಿ ಅನೇಕ ಅಂಶಗಳನ್ನು ಕೂಡಿಹಾಕಿ ಶ್ರಮವಹಿಸಿ ಕಂಡುಕೊಂಡಿದ್ದೇನೆ.

ಅನುಬಂಧ

ಅನುಬಂಧ

ಪರಾಮರ್ಶನ ಗ್ರಂಥಗಳು

ಶಾಸನ ಸಂಪುಟಗಳು

ಎಪಿಗ್ರಾಫಿಯಾ ಕರ್ನಾಟಿಕಾ.

ಎಪಿಗ್ರಾಫಿಯಾ ಇಂಡಿಕಾ.

ಇಂಡಿಯನ್ ಆಂಟಿಕ್ವೆರಿ.

ಕರ್ನಾಟಕ ಇನ್ಸ್‌ಕ್ರಿಪ್ಷನ್ಸ.

ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ.

ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟಗಳು.

ಎನುವಲ್ ರಿಪೋರ್ಟ ಆಫ್ ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ.

ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಧಾರವಾಡ ಜಿಲ್ಲೆ.

ಕನ್ನಡ

ಅಕ್ಕೂರಮಠ, ಷಣ್ಮುಖಯ್ಯ.; ವೀರಶೈವ ಸಂಹಿತೆ, ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ, ಬಾಳೆಹೊನ್ನೂರು, ೨೦೦೮.

ಆದಿದೇವಾನಂದ.; ಪತಂಜಲಿ ಯೋಗದರ್ಶನ, ಶ್ರೀರಾಮಕೃಷ್ಣಾಶ್ರಮ, ಮೈಸೂರು, ೧೯೮೫.

ಕಡಪಟ್ಟಿ, ಎನ್‌ಎಮ್.; ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ, ೨೦೦೮.

ಕಪಟರಾಳ, ಕೃಷ್ಣರಾಯರು.; ಕರ್ನಾಟಕ ಲಾಕುಳ ಶೈವರ ಇತಿಹಾಸ, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ ೧೯೫೫.

ಕಮ್ಮಾರ, ಚಾಮರಾಜ, ಕೋಣತಿ, ಕರೇಗೌಡ (ಸಂ).; ರಟ್ಟಿಪಳ್ಳಿ, ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು, ಹಿರೇಕೆರೂರು, ೨೦೧೧.

ಕಮ್ಮಾರ, ಲಿಂಗರಾಜ (ಸಂ).; ಸಂಸ್ಕೃತಿ ಪರಂಪರೆ, ಜಿಲ್ಲಾಕನ್ನಡ ಸಾಹಿತ್ಯ ಪರಿಷತ್ತು ಹಾವೇರಿ, ೨೦೧೦.

,, : ಉದಕದೊಳಗಣ ಪಾವಕ, (ಮುದ್ರಣಹಂತ) ಹಳ್ಳೂರು ಪ್ರಕಾಶನ, ಬೆಂಗಳೂರು, ೨೦೧೭.

ಕಲಬುರ್ಗಿ, ಎಂ ಎಂ.; ಶಾಸನ ವ್ಯಾಸಂಗ– ಭಾಗ ೧ ಮತ್ತು ೨ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೫.

,, : ಧಾರವಾಡ ಜಿಲ್ಲಾ ಶಾಸನಸೂಚಿ, ಕ.ವಿ.ವಿ ಧಾರವಾಡ, ೧೯೭೫.

,, : ಶಾಸನಗಳಲ್ಲಿ ಶಿವಶರಣರು, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೭೮.

,, : ಮಾರ್ಗ, ಸಂಪುಟಗಳು, ಸ್ವಪ್ನಾಬುಕಹೌಸ್ ಬೆಂಗಳೂರು, ೨೦೦೭.

,, : ಹರಿಹರನ ರಗಳೆಗಳು,(ಸಂ) ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧.

ಕಾಮತ್ ಸೂರ್ಯನಾಥ (ಸಂ).; ಧಾರವಾಡ ಜಿಲ್ಲಾ ಗ್ಯಾಸೆಟಿಯರ್, ಪರಿಷ್ಕೃತ ಆವೃತ್ತಿ ಬೆಂಗಳೂರು, ೧೯೯೫.

,, : ಧಾರವಾಡ ಜಿಲ್ಲಾ ಗ್ಯಾಸೆಟಿಯರ್,ಬೆಂಗಳೂರು, ೧೯೯೮.

ಕುಮಾರಸ್ವಾಮಿ ಕೆ ಎಸ್.; ಬೃಹತ್ ಕರ್ನಾಟಕದ ಶಿಲ್ಪಾಚಾರಿಯರ ಚರಿತೆ, ಕಣ್ವ ಪ್ರಕಾಶನ ಬೆಂಗಳೂರು, ೨೦೧೩.

ಕುಮಾರ ಪಿ ಎಸ್.; ರಾಣೆಬೆನ್ನೂರು ತಾಲೂಕು ದರ್ಶನ, ಐಬಿಎಚ್ ಪ್ರಕಾಶನ ಬೆಂಗಳೂರು,೧೯೮೬.

ಕುಲ್ಕರ್ಣಿ, ಡಿ ಜಿ.; ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಧಾರವಾಡ, ೨೦೦೮.

ಕುಲ್ಕರ್ಣಿ, ಸತೀಶ.; ಹಾವೇರಿ ತಾಲೂಕು ದರ್ಶನ, ಐಬಿಎಚ್ ಪ್ರಕಾಶನ ಬೆಂಗಳೂರು, ೧೯೮೬.

,, : (ಸಂ)ಕದಂಬ, ಹಾವೇರಿ ಜಿಲ್ಲಾ ನಾಲ್ಕನೆಯ ಸಾಹಿತ್ಯ ಸಮ್ಮೇಳನ, ೨೦೦೯.

ಕೋಗುಂಡಿ, ನೀಲಕಂಠಪ್ಪ ನಿಂಗಪ್ಪ.; ನೇಸ್ವಿ ವೀರಭದ್ರೇಶ್ವರ ದೇವರ ಚರಿತ್ರೆ, ಬಸವರಾಜ ಎನ್ ಬಣಕಾರ ನ್ಯಾಯವಾದಿಗಳು ಹಿರೇಕೆರೂರು, ೨೦೦೦.

ಗೋಪಾಲರಾವ್ ಎಚ್ ಎಸ್.; ಕಲ್ಯಾಣ ಚಾಲುಕ್ಯ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು, ೧೯೯೩.

ಗೋಗಿ, ಹನುಮಾಕ್ಷಿ.; ಅನುಶಾಸನ, ಮಹಿಳಾ ಸಾಹಿತ್ಯಿಕಾ, ನವನಗರ ಹುಬ್ಬಳ್ಳಿ, ೨೦೦೨.

ಗೌಡರ, ಎಸ್ ಪಿ (ಸಂ).; ಕಣಜ, ಸ್ಮರಣ ಸಂಚಿಕೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಿರೇಕೆರೂರು, ೨೦೧೪.

ಚನ್ನೇಶ, ಬಿ ಜಿ (ಸಂ).; ಕಪ್ಪರ, ಸ್ಮರಣ ಸಂಚಿಕೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಿರೇಕೆರೂರು, ೨೦೦೮.

ಚಿದಾನಂದಮೂರ್ತಿ ಎಂ; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ
ಬುಕ್ ಹೌಸ ಬೆಂಗಳೂರು, ೨೦೧೧.

" : ಬಸವಣ್ಣನವರು, ಸ್ವಪ್ನ ಬುಕ್ ಹೌಸ್ ಬೆಂಗಳೂರು,
೨೦೦೩.

ಜ ಚ ನಿ.; ರುದ್ರ-ಭದ್ರರೇಣುಕ,; ಶ್ರೀನಿಡುಮಾಮಿಡಿ ನಿವಾಸ, ಬೆಂಗಳೂರು, ೧೯೮೫.

ಜೋಶಿ, ಶಂ ಬಾ .; ಸಾಂಸ್ಕೃತಿಕ ಮೂಲದಲ್ಲಿನ ತಾತ್ವಿಕ ಚಿಂತನೆಗಳು, ೧೯೮೮.

ತೆಲಗಾವಿ, ಲಕ್ಷ್ಮಣ (ಸಂ).; ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು, ಚಿತ್ರದುರ್ಗ, ೧೯೯೫.

ದೊಡ್ಮನಿ, ಎಸ್ ಮನೋಹರ.; ಮೂರುಜಾವಿದೇವರ ಪರಂಪರೆ, ಕನ್ನಡ ವಿಶ್ವವಿದ್ಯಾಲಯ ಹಂಪಿ. ಮಂಟಪಮಾಲೆ, ೨೦೧೨.

ನಾಗಭೂಷಣ ಸಿ.; ಏಕಾಂತರಾಮಯ್ಯ ಮತ್ತು ಆದಯ್ಯ ಒಂದು ತುಲನಾತ್ಮಕ ಅಧ್ಯಯನ, ಬಸವ ಸಮಿತಿ ಬೆಂಗಳೂರು, ೨೦೦೫.

ನಾಗರಾಜ ಎಂ ಜಿ.; ಮಹಾವೀರಭದ್ರ, ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ, ಬಾಳೆಹೊನ್ನೂರು, ೨೦೧೦.

ನಾಗಯ್ಯ ಜೆ ಎಂ.; ಕಲಕೇರಿ, ಶ್ರೀ ಬಸವೇಶ್ವರ ಜೀರ್ಣೋದ್ಧಾರ ಟ್ರಸ್ಟ್, ಕಲಕೇರಿ, ೧೯೯೫.

ನೇಗಿನಹಾಳ, ಎಂ ಬಿ.; ನೇಗಿನಹಾಳ ಪ್ರಬಂಧಗಳು, ಕನ್ನಡವಿಶ್ವವಿದ್ಯಾಲಯ ಹಂಪಿ, ೧೯೯೯.

ನಂದಿಮಠ, ಎಸ್ ಸಿ.; ಕರ್ನಾಟಕ ಧರ್ಮಗಳು, ವಿಶ್ವ ಕನ್ನಡ ಸಮ್ಮೇಳನ, ಸಾಹಿತ್ಯಮಾಲೆ, ೧೯೮೩.

ಪಾಟೀಲ ಭೋಜರಾಜ ; ಹಿರೇಕೆರೂರ ತಾಲೂಕಾ ದರ್ಶನ, ಐಬಿಎಚ್ ಪ್ರಕಾಶನ ಬೆಂಗಳೂರು,೧೯೮೭.

„ : ನಾಗರಖಂಡ ೭೦ ಒಂದು ಅಧ್ಯಯನ, ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರ, ೧೯೯೫.

„ : ಹಿರೇಕೆರೂರು ತಾಲೂಕು ಗ್ರಾಮನಾಮ ಅಧ್ಯಯನ, ಶಿವಯೋಗಿ ಸಿದ್ಧಲಿಂಗ ಪ್ರಕಾಶನ ಹಂಸಭಾವಿ, ೨೦೧೨.

„ : (ಸಂ) ಕರ್ನಾಟಕ ಗ್ರಾಮ ಚರಿತ್ರೆ ಕೋಶ, ಹಾವೇರಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ೨೦೧೫.

ಪಾವಟೆ ಚೆನ್ನಕ್ಕ .; ಬಂಕಾಪುರ ಶೋಧ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೦.

ಫಿಲಿಯೊಜಾ ವಸುಂಧರಾ.; ಕರ್ನಾಟಕದಲ್ಲಿ ಲಾಕುಳಶೈವ ಜಕ್ಕಣಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೨೦೦೩.

„ : ಧಾರವಾಡ ಜಿಲ್ಲೆಯ ಕಾಳಾಮುಖ ಮತ್ತು ಪಾಶುಪತ ದೇವಾಲಯಗಳು (ಅನು) ಹನುಮಾಕ್ಷಿ ಗೋಗಿ.; ಕರ್ನಾಟಕ ಅನುವಾದ ಸಾಹಿತ್ಯ ಅಕಾಡಮಿ, ಬೆಂಗಳೂರು, ೨೦೦೭.

ಬಡಿಗೇರ ವಾಸುದೇವ.; ಹಾನುಗಲ್ಲು, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೮.

ಬಸವಾರಾಧ್ಯ ಎನ್ (ಸಂ).; ಅಬ್ಬಲೂರು ಚರಿತೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೩.

ಬಿಡೆ, ಶ್ರೀಪಾದ ರಘುನಾಥ.; ವಾಲ್ಮೀಕಿ ರಾಮಾಯಣ ಶಾಪ ಮತ್ತು ವರ, (ಅನು) ವಿರುಪಾಕ್ಷ ಕುಲ್ಕರ್ಣಿ, ಗೀತಾಬುಕ್‌ಹೌಸ್, ಮೈಸೂರು, ೨೦೦೧.

ಭಟ್ಟಾಚಾರ್ಯ, ಹರಿದಾಸ (ಸಂ).; ಯುಗಯಾತ್ರಿ ಭಾರತೀಯ ಸಂಸ್ಕೃತಿ, ನಾಲ್ಕನೆಯ ಸಂಪುಟ ಮೈಸೂರು ವಿ.ವಿ, ೧೯೮೮.

ಮಹದೇವ ಸಿ, ಸಿ ಎನ್ ವಾಸುದೇವನ್, ರಮೇಶ ನಾಯ್ಕ.; ಕರ್ನಾಟಕ ದೇವಾಲಯ ಕೋಶ, ಹಾವೇರಿ ಜಿಲ್ಲೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೯.

ಮಂಜುನಾಥ ನೀಲಾ.; ಬಳ್ಳಿಗಾವೆ, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಬೆಂಗಳೂರು, ೨೦೧೦.

ಲಾರೆಂಜನ್ ಎನ್ ಡೆವಿಡ್ (ಅನು).; ವಿರೂಪಾಕ್ಷ ಕುಲ್ಕರ್ಣಿ, ಕಾಪಾಲಿಕರು ಮತ್ತು ಕಾಳಾಮುಖರು, ಕಣ್ಮರೆಯಾದ ಎರಡು ಶೈವ ಸಂಪ್ರದಾಯಗಳು, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೫.

ವಸಂತಕುಮಾರ ಬಿ ವಿ.; ಶಿಕಾರಿಪುರ ತಾಲೂಕಿನ ಸಾಂಸ್ಕೃತಿಕ ಸಂಕಥನ, ನೇಕಾರ ಪ್ರಕಾಶನ ಸೊರಬ, ೨೦೦೯.

ವೆಂಕಟಾಚಲಶಾಸ್ತ್ರಿ ಟಿ ವಿ, ರಾಘವೇಂದ್ರರಾವ್ ಕೆ (ಸಂ).; ಸಮಯಪರೀಕ್ಷೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯.

ಶಿವತಾರಕ್ ಕೆ ಬಿ.; ಕರ್ನಾಟಕದ ಪುರಾತತ್ವ ನೆಲೆಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೧.

ಶೆಟ್ಟರ ಎಸ್.; ಹಳಗನ್ನಡ ಲಿಪಿ ಲಿಪಿಕಾರ ಲಿಪಿ ವ್ಯವಸಾಯ, ಅಭಿನವ ಪ್ರಕಾಶನ, ಬೆಂಗಳೂರು, ೨೦೧೪.

ಹನುಮಂತರಾವ್ ಜಿ.; ಪಾಶುಪತ ಆಗಮಗಳು, ಡಿ.ವಿ.ಕೆ ಮೂರ್ತಿ, ಮೈಸೂರು, ೨೦೦೪.

ಹಿರೇಮಠ ಎಸ್ ಎಸ್.; ಪಾಶುಪತ ದರ್ಶನ, ಸಮತಾ ಪ್ರಕಾಶನ, ಹರಪನಹಳ್ಳಿ, ೨೦೦೩.

" : ಕಾಳಾಮುಖದರ್ಶನ, ಸಮತಾಪ್ರಕಾಶನ ಹರಪನಹಳ್ಳಿ, ೨೦೦೪.

" : ಲಾಕುಳದರ್ಶನ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೦೬.

ಹಿರೇಮಠ, ಚನ್ನಬಸವಯ್ಯ.; ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೪.

ಹುಲಗಣ್ಣನವರ, ಮಲ್ಲಿಕಾರ್ಜುನ.; ಹಾನಗಲ್ಲು ತಾಲೂಕು ದರ್ಶನ, ಐಬಿಎಚ್ ಪ್ರಕಾಶನ ಬೆಂಗಳೂರು, ೧೯೮೫.

ಹೆಗಡೆ, ರಾಜಾರಾಮ್.; ಲೌಕಿಕ ಅಲೌಕಿಕ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ೨೦೦೧.

ಹೊನ್ನುಸಿದ್ಧಾರ್ಥ ಸಿ ಬಿ.; (ಸಂ) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು.ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು.೨೦೧೪

ಇಂಗ್ಲೀಷ

ಅಪ್ಪಾದೊರೈ ಎ.; Economic Conditiones in southarn india , ಮದ್ರಾಸ, ೧೯೩೬.

ಆಚಾರ್ಯ ಪಿ ಕೆ.; Hindu architecture in India and abroad, ಜೆ.ಕೆ.ಪಬ್ಲಿಕೇಶನ್ ಹೌಸ್, ಭೂಪಾಲ, ೧೯೭೯.

ಕೃಷ್ಣಶಾಸ್ತ್ರಿ ಎಚ್.; South Indian images of Gods and Goddess, ಏಷಿಯನ್ ಎಜುಕೇಶನ್ ಸರ್ವಿಸಸ್, ನ್ಯೂಡೆಲ್ಲಿ, ೧೯೮೬.

ಕೊಲಿಯರ ಕೆಲ್ಲೆಸನ್.; The Hoyasal artist there identity and style, ಮೈಸೂರು, ೧೯೯೦.

ಗೋಪಾಲ ಬಾ ರಾ.; Chalukyas of kalyana and kalchuries, ಧಾರವಾಡ, ೧೯೮೧.

ಗೋಪಾಲ ಬಿ ಆರ್.; Korpus of Kadamba inscription volume I, ಕದಂಬ ಇನ್ಸಿಟ್ಯೂಟ ಆಪ್ ಕಲ್ಚರಲ್ ಸ್ಟಡೀಸ್ ಶಿರಶಿ, ನಂ ೩೧, ೧೯೮೪

ಗೋಪಿನಾಥರಾವ್ ಟಿ ಎ.; Elements of Hindu iconography , ಸಂ.೧ ನ್ಯೂಡೆಲ್ಲಿ, ೧೯೮೫.

ದಾಸಗುಪ್ತ ಎಸ್ ಎನ್.; A History of indian Philosophy, ವಿ.ಪಿ.೨

Shri Basveshvar A Kamrotion vol , ಗವರ್ನಮೆಂಟ್ ಆಫ್ ಮೈಸೂರು, ಬೆಂಗಳೂರು, ೧೯೬೭.

ಪರ್ಸಿಬ್ರೌನ.; Indian architecture (BuddhistanHindu),ಡಿ,ಬಿ,ತರೆಪೊರೆವಾ ಬೊಂಬೆ, ೧೯೭೧,

ಭಟ್ಟಾಚಾರ್ಯ, ಬಿ ಸಿ.; Indian images the Bhramaynic Iconography , ನ್ಯೂಡೆಲ್ಲಿ, ೧೯೭೮.

ಮಹಲಿಂಗಂ ಟಿ ವಿ.; The Pashupatas in South India ,ಜರನಲ್ ಆಫ್ ಇಂಡಿಯನ್ ಹಿಸ್ಟರಿ ವ್ಯಾಲುಂ-೨೭, ೧೯೪೯.

ಮಿಶ್ರಾ ಒ ಪಿ.; Iconography of thesaptamatrukas,ಆಗಮಕಲಾಪ್ರಕಾಶನ, ಡೆಲ್ಲಿ, ೧೯೮೯.

ರಾಘವೇಂದ್ರ ವಿ.; South indian temples, ಕ್ವಾ.ಜ.ಎಂ.ಎಸ್.ಸಂ೨೩

ಲಲಿತಾ ಪ್ರಸಾದ ಪಾಂಡೆ.; Sun warship in ancient india, ಎನಸೈಕ್ಲೊಪಿಡಿಯಾ ಬ್ರಿಟಾನಿಕಾ, ೧೯೭೧.

ಲಾರೆಂಜನ್ ಡಿ ಎನ್.; Kapalikas and kalamukhas, Two Losts' aivite Sects, ಮೋತಿಲಾಲ್ ಬನಾರಸಿದಾಸ್, ಡೆಲ್ಲಿ, ೧೯೭೨.

ವೆಂಕಟರಮಣಯ್ಯ ಎನ್.; An essay on the origin of the south india temples ಎಜ್ಯುಕೇಶನಲ್ ಸರ್ವಿಸಸ್, ನ್ಯೂಡೆಲ್ಲಿ, ೧೯೮೫.

ಸ್ವಾಮಿ ಹರ್ಷಾನಂದ.; Hindu Gods and Goddesses , ರಾಮಕೃಷ್ಣಾಶ್ರಮ, ಮೈಸೂರ, ೧೯೮೨.

ಅಪ್ರಕಟಿತ ಪಿಎಚ್.ಡಿ ಪ್ರಬಂಧಗಳು

ಆಚಾರಿ, ಮಂಜುಳಾ.; ಕಾಳಾಮುಖ ಪರಂಪರೆ ಮತ್ತು ಮೂರುಜಾವಿ ಪೀಠ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೫.

ನವಲಗುಂದ, ಗುರುರಾಜ.; ಕನ್ನಡ ಶಾಸನಗಳಲ್ಲಿ ಧಾರ್ಮಿಕ ಸಂಘರ್ಷ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೪.

ಪೂಜಾರ, ವಿ ಜಿ.; ಹಾನಗಲ್ಲು ಕದಂಬರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೨೦೧೫.

ಯಲ್ಲಣ್ಣ ಕೆ.; ಹಾವೇರಿ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೩.

ಅಪ್ರಕಟಿತ ಎಂಫಿಲ್. ಪ್ರಬಂಧಗಳು

ಅರಿಶಿಣಗುಪ್ಪೆ, ಬಸವರಾಜ. ; ತಿಳುವಳ್ಳಿ ಪ್ರದೇಶದ ದೇವಾಲಯಗಳು ಒಂದು ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೮.

ಕರಿಬಸವಯ್ಯ ಆರ್.; ಹಿರೇಕೆರೂರು ಪ್ರದೇಶದ ಮೂರ್ತಿ ಶಿಲ್ಪ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೯೮.

ಪಾಟೀಲ, ಮಂಜುನಾಥ ಎಚ್.; ರಾಣೇಬೆನ್ನೂರ ತಾಲೂಕು ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೬.

ಪಾಟೀಲ, ವಿನೋದಾ.; ಪಾನಂಗಲ್ಲಯ್ಯೂರು ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.೧೯೯೬.

ನವಲಗುಂದ, ಗುರುರಾಜ.; ಶಿಗ್ಗಾವಿ ತಾಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿ.ವಿ ಹಂಪಿ, ೨೦೦೮.

ನಾಯಕ, ರಮೇಶ .; ಹಾವೇರಿ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೭.

ಸಾಲಿಮಠ, ಸುರೇಶ.; ಹಿರೇಕೆರೂರು ಮತ್ತು ಅದರ ಸುತ್ತಮುತ್ತಲಿನ ಶಾಸನಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೬.

ಸೊಟ್ಟಮ್ಮನವರ, ವಿ ಜಿ.; ರಾಣೇಬೆನ್ನೂರು ಪ್ರದೇಶದ ದೇವಾಲಯಗಳು ಒಂದು ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೮.

ಪತ್ರಿಕೆಗಳು

ಇತಿಹಾಸ ದರ್ಶನ

ಕನ್ನಡ ಅಧ್ಯಯನ

ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ

ಕರ್ನಾಟಕ ಭಾರತಿ

ಪ್ರಬುದ್ಧ ಕರ್ನಾಟಕ

ಬಸವಪಥ

ಶಾಸನ ಅಧ್ಯಯನ

ಸಾಧನೆ

ಸಂಯುಕ್ತ ಕರ್ನಾಟಕ

ಡೆಕ್ಕನ್ ಹೆರಾಲ್ಡ್

ಪ್ರಜಾವಾಣಿ

ಹಾವೇರಿ ಜಿಲ್ಲೆಯ ಶಾಸನೋಕ್ತ ಕಾಳಾಮುಖ ಪರಂಪರೆ

ಕ್ರ.ಸಂ	ಊರು	ದೇವಸ್ಥಾನ	ಕಾಲ	ಅರಸ	ವಂಶ	ದಾನ ನೀಡಿದವರು	ಯತಿಗಳು	ಶಾಸನಗಳು
೧	ಅಣಜಿ	ಕೆರೆಯ ಏರಿ	ಸು.೮೮೦-೯೧೪	ಕೃಷ್ಣ ೨	ರಾಷ್ಟ್ರಕೂಟ	ಅಯಪಗಾವುಂಡ	ಶಸ್ತಿ ಪರಿಸೆ (ಉಲ್ಲೇಖ)	ಕಇ. ಸಂ ೬ ನಂ-೩ ಪು ೪-೫
೨	ಖಂಡಿಬಾಗೂರು	ದುರುಗಮ್ಮಗುಡಿ ಹತ್ತಿರ	೯೨೪	ಇಂದ್ರ ೩	ರಾಷ್ಟ್ರಕೂಟ	ಸಂಕಗಾವುಣ್ಡ	ಸೋಮರಾಸಿ ಭಟಾರಕ	ಕಇ. ಸಂ ೬ ನಂ-೪ ಪು ೫-೬
೩	ಕಣವಿ ಶಿದ್ಧಗೇರಿ	ಶಿದ್ಧೇಶ್ವರ	೧೧ ಶತ	ಜಯಸಿಂಹ ೨	ಕಲ್ಯಾಣ ಚಾಲುಕ್ಯರು	ಬೀರದೇವ	ರಾಮಶಕ್ತಿದೇವರು	ಕಇ. ಸಂ ೬ ನಂ-೭ ಪು ೧೧
೪	ಕುಳೇನೂರು	ಕಲ್ಮೇಶ್ವರ	೧೦೨೮	ಜಯಸಿಂಹ ೨	ಕಲ್ಯಾಣ ಚಾಲುಕ್ಯರು	ಇರಿವಬೆಡಂಗ ಕುಮುದರಾಜ	ಸೋಮಕರಸಿ ಜೀಯ	ಎಸ್‌ಐಐ, ೧೮ ಸಂ - ೪೭ ಎ.ಇ ಸಂ ೧೫ ೩೯
೫	ಬೆಳವತ್ತಿ	ಕೋಗಳೇಶ್ವರ	೧೦೪೭	ಸೋಮೇಶ್ವರ ೧	ಕಲ್ಯಾಣ ಚಾಲುಕ್ಯರು	ಮಯೂರವರ್ಮ	ದೇವರಾಸಿಪಂಡಿತ	ಧಾರವಾಡಜಿಲ್ಲಾ ಶಾಸನಸೂಚಿ ಪು-೬೫
೬	ಮಲ್ಲೂರು	ರಿ.ಸ.ನಂ - ೧೮೦	೧೦೪೮	ಸೋಮೇಶ್ವರ ೧	ಕಲ್ಯಾಣ ಚಾಲುಕ್ಯರು	ಚಾವುಂಡರಾಯರ ಜೋಮರಸ	ತ್ರಿಭುವನಸಿಂಗಿ ಜೀಯ	ಎಸ್‌ಐಐ, ೧೮ ಸಂ - ೬೦ ಪು- ೪೬ - ೪೯

೭	ಮೋಟೆಬೆನ್ನೂರು	ಮಲ್ಲಿಕಾರ್ಜುನ	೧೦೫೧	ಸೋಮೇಶ್ವರ ೧	ಕಲ್ಯಾಣ ಚಾಲುಕ್ಯರು	ಚಾವುಂಡರಾಯರ	ಲೋಕಾಭರಣ ಪಂಡಿತ (ಕಾಳಮುಖ)	ಎಸ್‌ಐಐ, ೧೮ ನಂ ೬೨ ಪು ೫೦ – ೫೨
೮	ಕಲಕೇರಿ	ಬಸವಣ್ಣ ದೇವಸ್ಥಾನ	೧೦೫೫	ಸೋಮೇಶ್ವರ ೧	ಕಲ್ಯಾಣ ಚಾಲುಕ್ಯರು	ಬರ್ಮಯ್ಯ ಗಾವುಂಡ	ಪಸುಪತಿದೇವರ	ಎಸ್‌ಐಐ, ೨೦ ಸಂ – ೩೫
೯	ಬಂಕಾಪುರ	ಸರಕಾರಿ ಫಾರ್ಮ	೧೦೬೨	ಸೋಮೇಶ್ವರ ೧	ಕಲ್ಯಾಣ ಚಾಲುಕ್ಯರು	ಭುವನೈಕ್ಯಮಲ್ಲ ದೇವರು	ವರುಣಶಿವ ಪಂಡಿತ ದೇವರು	ಎಸ್.ಐ.ಐ. ೧೮ ನಂ – ೬೬ ಪು– ೫೬ – ೫೭
೧೦	ಬೆಳವತ್ತಿ	ಗೋಕುಳೇಶ್ವರ	೧೦೬೭	ಸೋಮೇಶ್ವರ ೧	ಕಲ್ಯಾಣ ಚಾಲುಕ್ಯರು	ಲಕ್ಷ್ಮರಸ	ಸೋಮೇಶ್ವರಪಂಡಿತ	ಧಾರವಾಡಜಿಲ್ಲಾ ಶಾಸನಸೂಚಿ ಪು– ೬೫
೧೧	ದೇವಗಿರಿ	ಈಶ್ವರ ಗೋಡೆ		ಸೋಮೇಶ್ವರ ೧	ಕಲ್ಯಾಣ ಚಾಲುಕ್ಯರು	ಶಿವರಾಜ ಗುರು ದೇವ	ತ್ರಿಭುವನಸಿಂಗಿಪಂಡಿತ	ಎಸ್‌ಐಐ, ೧೮ ನಂ – ೭೨ ಪು– ೬೭ – ೬೮
೧೨	ಕಲಕೇರಿ	ಸೋಮೇಶ್ವರ	೧೦೭೧	ಸೋಮೇಶ್ವರ ೨	ಕಲ್ಯಾಣ ಚಾಲುಕ್ಯರು	ಮೂಳಲಾದೇವಿ	ದೇವಸಿಂಗಿದೇವರು	ಎಸ್‌ಐಐ, ೨೦ ನಂ – ೪೯
೧೩	ಕಾಗಿನೆಲೆ	ಸೋಮೇಶ್ವರ	೧೦೭೨	ಸೋಮೇಶ್ವರ ೨	ಕಲ್ಯಾಣ ಚಾಲುಕ್ಯರು	ಜಕ್ಕಗಾವುಂಡ	ಸದ್ಯೋಜಾತ ಪಂಡಿತರು	ಎಸ್‌ಐಐ, ೧೮ ನಂ– ೭೬ ಪು ೭೧ – ೭೩

೧೪	ಮತ್ತಿಹಳ್ಳಿ	ಸೋಮೇಶ್ವರ	೧೦೭೩	ಸೋಮೇಶ್ವರ ೨	ಕಲ್ಯಾಣ ಚಾಲುಕ್ಯರು	ಉದಯಾದಿತ್ಯ	ಚೆಲ್ಲಪಜೀಯರು	ಕಇ. ಸಂ ೬ ನಂ- ೧೨ ಪು ೨೮
೧೫	ಅಸುಂಡಿ	ಕಲ್ಲೇಶ್ವರ	೧೦೭೪	ಸೋಮೇಶ್ವರ ೨	ಕಲ್ಯಾಣ ಚಾಲುಕ್ಯರು	ಬೀರಗಾವುಣ್ಣ	ಸೋವರಾಸಿ ಪಂಡಿತರು	ಎಸ್‌ಐಐ, ೧೮ ನಂ - ೭೮ ಪು೭೪ - ೭೫
೧೬	ದೇವಗಿರಿ	ಮಲ್ಲಿಕಾರ್ಜುನ 'ದೇವಸ್ಥಾನ	೧೦೭೫	ಸೋಮೇಶ್ವರ ೨	ಕಲ್ಯಾಣ ಚಾಲುಕ್ಯರು	ಉದಯಾದಿತ್ಯ ಕಲಿಯಮ್ಮರಸ ಜಿಮೂತವಾಹನ	ಗಂಗರಾಸಿ ಪಂಡಿತರು	ಎಸ್‌ಐಐ, ೧೮ ನಂ ೮೧ ಪು ೭೯ (ಎ.ಇಂ. ಸಂ ೧೯ ಪು ೧೮೫)
೧೭	ಕಲಕೇರಿ	ಸೋಮೇಶ್ವರ	೧೦೮೮	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ವಾಸುದೇವ ಮಲ್ಲಯ್ಯ	-	ಎಸ್‌ಐಐ, ೨೦ ನಂ -೬೦
೧೮	ಉಕ್ಕುಂದ (ಒರ್ಕುಂದ)	-	೧೦೮೮	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ದಾಸಗಾವುಂಡ	ಅಭಿಮಾನಿಸಿಂಗಿ ಪಂಡಿತ	ಎಸ್‌ಐಐ, ೧೮ ನಂ ೯೩ ಪು- ೯೭
೧೯	ಮಲ್ಲೂರು	ರಿ.ಸ. ನಂ - ೧೮೦	೧೧೯೨	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	೮ ಗಾವುಂಡರು	ಮಲ್ಲಿಕಾರ್ಜುನ ಪಂಡಿತ	ಎಸ್‌ಐಐ, ೧೮ ನಂ ೯೮ ಪು೧೦೫ - ೧೦೬
೨೦	ಬಂಕಾಪುರ	ಬಲಗಂಬ ನಗರೇಶ್ವರ ದೇವಸ್ಥಾನ	೧೧೯೩	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ಡಾಕರಸ	ಚಂದ್ರಭೂಷಣದೇವ	ಎಸ್‌ಐಐ, ೧೮ ನಂ ೯೯ ಪು ೧೦೭ - ೧೦೮

೨೧	ದೇವಗಿರಿ	ಗಿರೇಗುಡ್ಡ	೧೧೦೨	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ತಮ್ಮುಗೆ	ತ್ರಿಭುವನಸಿಂಗ ಪಂಡಿತ	ಎಸ್ಐಐ, ೧೮ ನಂ- ೧೦೫ ಪು ೧೧೪ – ೧೧೬
೨೨	ಅಬ್ಬಲೂರು	ಬ್ರಹ್ಮೇಶ್ವರ ದೇವಸ್ಥಾನದ ಹೊರಗೆ	೧೧೦೧, ೧೧೦೪	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ಬಮ್ಮಗಾವುಂಡ	ಸೋಮೇಶ್ವರ ಪಂಡಿತ	ಎಇಂ. ಸಂ ೫ ಎ &ಬಿ
೨೩	ಮೇದೂರು	ಈಶ್ವರದೇವಸ್ಥಾನ	೧೧೧೩	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ಗೋವಿಂದರಸ	ಲಕುಳೀಶ್ವರ ಪಂಡಿತ	ಕಇ. ಸಂ ೪ ನಂ- ೩೯
೨೪	ಅಗಡಿ	ಬಸವಣ್ಣ	೧೧೧೬	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ಎರಕಗಾವುಂಡ	ವರೇಶ್ವರ ಪಂಡಿತ	ಎಸ್ಐಐ, ೧೮ ನಂ ೧೧೩ ಪು ೧೩೦ – ೧೩೩
೨೫	ಚಿಕ್ಕೇರೂರ	ಗ್ರಾಮೇಶ್ವರ	೧೧೧೮	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ಆಯಿಸೆಟ್ಟಿ	ಕಲ್ಯಾಣಶಕ್ತಿ	ಇಸಿ,೮. ನಂ ೩೨೫
೨೬	ಹಾನಗಲ್ಲ	ಮೋಟಬಾವಿ ಕೋಟೆ	೧೧೧೯	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ತೈಲಪದೇವರು	ಶ್ರೀದೇವರಾಸಿ ಪಂಡಿತರು	ಕಇ.ಸಂ ೫ ನಂ- ೧೮ ಪು ೬೨-೬೫
೨೭	ಹಾನಗಲ್ಲ	ಅಡ್ಡೇರ ಹಿತ್ತಲ ಕೋಟೆ	೧೧೧೯	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ತೈಲಪದೇವರು	ತ್ರಿಭುವನಶಕ್ತಿ ಪಂಡಿತರು	ಕಇ.ಸಂ ೫ನಂ೯೫ ಪು ೨೯೨-೨೯೪

೨೮	ಹಾನಗಲ್ಲ	ಕ್ರಿಷ್ಣಭಟ ಉಡುಗಣಿ ಮನೆ ಹತ್ತಿರ	೧೧೨೦	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ತೈಲಪದೇವ	..ಣಶಕ್ತಿಪಂಡಿತರು	ಕಇ.ಸಂ ೫ ನಂ-೫೩ ಪು ೨೧೩-೧೪
೨೯	ನಾಗವಂದ	ಶಿದ್ಧೇಶ್ವರ	೧೧೨೦	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	–	ಬೀಚಿಗನ ಗುರು ನಾಗರಾಸಿ ಪಂಡಿತರು	ಕಇ.ಸಂ ೬ನಂ-೧೯ ಪು ೪೫
೩೦	ಹಾನಗಲ್ಲ	ಹನುಮಂತದೇವಸ್ಥಾನ	೧೧೨೧	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ತೈಲಪದೇವರು	. . . . ಪಂಡಿತರ್ಗೆ	ಕಇ.ಸಂ ೫ ನಂ-೧೯ ಪು ೬೫-೬೮
೩೧	ಕಾಗಿನೆಲೆ	ವೀರಭದ್ರೇಶ್ವರ (ಮುಂದಿನಗೋಡೆ)	೧೧೨೧	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ಬಮ್ಮಗಾವುಂಡ ಚೀಲಗಾವುಂಡ	ಲೋಕಾಭರಣ ಪಂಡಿತ ಕಾಳೇಶ್ವರ	ಎಸ್‌ಐಐ, ೧೮ ನಂ ೧೧೭ ಪು ೧೩೬ – ೧೪೧
೩೨	ದೇವಗಿರಿ	ಬಸವಣ್ಣ	೧೧೨೧	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ಹೆರ್ಮಾಡಿಯರಸ ಜಿಮೂತವಾಹನ (ಖಚಕ)	ತ್ರಿಭುವನಸಿಂಗಿ ಪಂಡಿತ	ಎಸ್‌ಐಐ, ೧೮ ನಂ ೧೧೯ (ಎ.ಇಂ ಸಂ ೧೯ ಪು ೧೯೧)
೩೩	ಕಾಗಿನೆಲೆ	ಕಲ್ಲೇಶ್ವರ	೧೧೨೨	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ಕಾಳಗಾವುಂಡ	ಶಿವ ಶಕ್ತಿ ಪಂಡಿತರು	ಎಸ್‌ಐಐ, ೧೮ ನಂ೧೨೦ ಪು ೧೪೪ – ೧೪೭
೩೪	ಬಂಕಾಪುರ	ಎಡಗಡೆಕಂಬ ನಗರೇಶ್ವರ ದೇವಸ್ಥಾನ	೧೧೨೨	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ಹೊಲ್ಲಿಗಾವುಂಡ	ಚಂದ್ರಭೂಷಣ ನಾಗರೇಶ್ವರ ಪಂಡಿತ ದೇವರು	ಎಸ್.ಐ.ಐ ೧೮ ನಂ ೧೨೨ ಪು ೧೪೮ – ೧೫೦

೩೫	ನೆಗಳೂರು	ಸಿದ್ಧೇಶ್ವರ	೧೧೨೩	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ಮಲ್ಲರಸ ಸೋಮರಸ ಉದಯಾದಿತ್ಯ	ಜ್ಞಾನ ಶಕ್ತಿ ಪಂಡಿತರು(ಕಾಳಮುಖಸಿದ್ಧಾಂತ ದೇವರು)	ಎಸ್.ಐ.ಐ ೧೮ ನಂ ೧೨೩ ಪು ೧೫೦ – ೧೫೧
೩೬	ಬಾಳಂಬೀಡು	ಬಾಲದೇವರಗುಡಿ	೧೧೨೩	ತ್ರಿಭುವನಮಲ್ಲ	ಕಲ್ಯಾಣ ಚಾಲುಕ್ಯರು	ಬಮ್ಮಗಾವುಂಡ	ವಿಮಳಶಕ್ತಿಪಂಡಿತದೇವರು	ಎಸ್ಐಐ, ೨೦ ನಂ –೮೪ ಪು–೧೦೫–೧೦೮
೩೭	ಮತ್ತಿಹಳ್ಳಿ	ಸೋಮೇಶ್ವರ ದೇವಾಲಯ		ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ತಂಬರಸ, ಕಾವರಸ	ಸೋಮೇಶ್ವರ ಪಂಡಿತ	ಕಇ.ಸಂ ೪ ನ–೨೨ ಪು ೪೯–೫೨
೩೮	ಹೊನ್ನತ್ತಿ	ರಾಮಲಿಂಗ	೧೧೨೪	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ಜೋಮದೇವ ಮಲ್ಲಿದೇವ	ಬ್ರಹ್ಮರಾಶಿ ಜೀಯ	ಎಸ್ಐಐ, ೧೮ ನಂ– ೧೨೪ ಪು ೧೫೧ – ೧೫೪
೩೯	ಬಾಳೂರು	ಡಿಸ್ಪೆಟೆಡ್ ದೇವಸ್ಥಾನ	೧೧೨೫	ವಿಕ್ರಮಾದಿತ್ಯ ೬	ಕಲ್ಯಾಣ ಚಾಲುಕ್ಯರು	ಕಾಳಗಾವುಂಡ	ಕಾಳಯ್ಯಜೀಯ	ಕಇ.ಸಂ ೫ ನಂ–೨೦ ಪು ೭೧–೭೪
೪೦	ಅಸುಂಡಿ	ಕಲ್ಲೇಶ್ವರ	೧೧೨೭	ಸೋಮೇಶ್ವರ ೩	ಕಲ್ಯಾಣ ಚಾಲುಕ್ಯರು	ಬಮ್ಮುಗಾವುಂಡ	ಸಿಂಗಪರಿಷೆಯ ಮಠದಾಚಾಯ ಸೋಮೇಶ್ವರ ಪಂಡಿತ ಪುತ್ರ ಬ್ರಹ್ಮಸಿಂಗಿ ಪಂಡಿತದೇವ	ಎಸ್ಐಐ, ೧೮ ಸಂ ೧೩೩ ಪು ೧೬೫ – ೧೬೯

೪೧	ನಾಗವಂದ	ಸಿದ್ಧೇಶ್ವರ ದೇವಸ್ಥಾನ	೧೧೨೮	ಸೋಮೇಶ್ವರ ೩	ಕಲ್ಯಾಣ ಚಾಲುಕ್ಯರು	–	–	–
೪೨	ಬನ್ನಿಕೊಪ್ಪ (ಶಿಗ್ಗಾಂವ)	ಭೀಮದೇವರು	೧೧೩೦	ಸೋಮೇಶ್ವರ ೩	ಕಲ್ಯಾಣ ಚಾಲುಕ್ಯರು	ಹೊಲಕೇಶಿದೇವ	ಅಮಿತರಾಸಿ ಪಂಡಿತರು	ಎಸ್‌ಐಐ, ೧೮ ನಂ ೧೩೫ ಪು ೧೭೧ – ೧೭೨
೪೩	ಹಾವೇರಿ	ಪುರದ ಸಿದ್ಧೇಶ್ವರ	೧೧೩೦	ಸೋಮೇಶ್ವರ ೩	ಕಲ್ಯಾಣ ಚಾಲುಕ್ಯರು	ತೈಲಪ್ಪದೇವ		ಎಸ್.ಐ.ಐ ೧೮ ನಂ – ೧೪೨ ಪು– ೧೮೪ – ೧೮೬
೪೪	ಅಬ್ಬಲೂರು	ಬ್ರಹ್ಮೇಶ್ವರ ದೇವಸ್ಥಾನ	೧೧೩೦	ಸೋಮೇಶ್ವರ ೩	ಕಲ್ಯಾಣ ಚಾಲುಕ್ಯರು	ಬಮ್ಮಗಾವುಂಡ	ಜ್ಞಾನಶಕ್ತಿ	ಎ.ಇಂ.ಸಂ ೫ – ಸಿ
೪೫	ಅಸುಂಡಿ	ಕಲ್ಲೇಶ್ವರ	೧೧೪೩	ಜಗದೇಕಮಲ್ಲ ೨	ಕಲ್ಯಾಣ ಚಾಲುಕ್ಯರು	ಚಾವಗಾವುಂಡ	ಬ್ರಹ್ಮಸಿಂಗಿ ಪಂಡಿತರು	ಎಸ್.ಐ.ಐ ೧೮ ನಂ– ೧೪೭ ಪು ೧೮೯ – ೧೯೦
೪೬	ಚಿಕ್ಕಕೊಣತಿ	ಕರಿಯವ್ವನ ಗುಡಿ	೧೧೪೩	ಜಗದೇಕಮಲ್ಲ ೨	ಕಲ್ಯಾಣ ಚಾಲುಕ್ಯರು	ಕೋಣಂಗೇರಿ ಐನೂರ್ವರು	ಕಲ್ಯಾಣಶಕ್ತಿ	ಕ.ಇ.ಸಂ ೪ ನ–೨೮ ಪು–೬೧–೬೩
೪೭	ಅಬ್ಬಲೂರು	ಬ್ರಹ್ಮೇಶ್ವರ ದೇವಸ್ಥಾನ	೧೧೪೪	ಜಗದೇಕಮಲ್ಲ ೨	ಕಲ್ಯಾಣ ಚಾಲುಕ್ಯರು	ಮಲ್ಲಿಬಾವರಸ	ಜ್ಞಾನಶಕ್ತಿದೇವ	ಎ.ಇಂ.ಸಂ ೫ – ಸಿ

೪೮	ಮಾಕನೂರ	ಮಾರ್ಕಂಡೇಶ್ವರ	೧೧೪೪	ಜಗದೇಕಮಲ್ಲ ೨	ಕಲ್ಯಾಣ ಚಾಲುಕ್ಯರು	ಬೋಪ್ಪಗಾವುಂಡ	ಬ್ರಹ್ಮಸಿಂಗಿ ಪಂಡಿತರು	ಎಸ್‌ಐಐ, ೧೮ ನಂ ೧೪೯ ಪು ೧೯೨ – ೧೯೫
೪೯	ಹಂಸಭಾವಿ	ಕಲ್ಲೇಶ್ವರ ದೇವಸ್ಥಾನ	೧೧೪೪	ಜಗದೇಕಮಲ್ಲ ೨	ಕಲ್ಯಾಣ ಚಾಲುಕ್ಯರು	ಕೇತಗಾವುಂಡ	ಧರ್ಮರಾಸಿ	ಕ.ಇ.ಸಂ ೪ ನ–೨೨
೫೦	ಬಾಳೆಹಳ್ಳಿ	ಪಾಟೀಲರ ಮನೆ ಹಿತ್ತಿಲು	೧೧೪೫	ಜಗದೇಕಮಲ್ಲ ೨	ಕಲ್ಯಾಣ ಚಾಲುಕ್ಯರು	ಗಡಿಯಂಕ ಮಲ್ಲಶೆಟ್ಟಿ	ರುದ್ರಶಕ್ತಿ	–
೫೧	ಹಂಸಭಾವಿ	ವೀರಗಲ್ಲು	೧೧೫೭	ಸೋಮೇಶ್ವರ	ಕಲ್ಯಾಣ ಚಾಲುಕ್ಯರು	ಬಾಗಗಾವುಂಡ	ಕೇದಾರೇಶ್ವರ ಪಂಡಿತ	ಕಇ.ಸಂ ೪ ನ–೩೩
೫೨	ದೇವಿಹೊಸೂರು	–	–	–	ಕಲ್ಯಾಣ ಚಾಲುಕ್ಯರು	–	ಬಳ್ಳಿಗಾವೆಯ ಉಲ್ಲೇಖ	ಎಸ್‌ಐಐ, ೧೮ ನಂ ೧೫೨ –೧೫೩
೫೩	ಅಗಡಿ	–	–	ಜಗದೇಕಮಲ್ಲ ೨	ಕಲ್ಯಾಣ ಚಾಲುಕ್ಯರು	ಬಾಚ'ಗಾವುಂಡ	ಅಮಿತರಾಶಿ ಜೀಯರ ಪುತ್ರ ಮಾರೆಯನಾಯಕ	ಎಸ್.ಐ.ಐ ೧೮ ನಂ ೧೫೪ ಪು ೨೦೬ – ೨೦೮
೫೪	ದೇವಗಿರಿ	ಎಲ್ಲಮ್ಮದೇವರು	೧೧೬೦	ಬಿಜ್ಜಳ	ಕಲಚೂರ್ಯರ ೧	ಮಾಚಿದೇವರಸ	ರಾಮಸಿಂಗ ಪಂಡಿತ	ಎಸ್‌ಐಐ, ೧೮ ನಂ ೧೭೭ ಪು ೨೩೭ – ೨೩೯

೫೫	ಗುತ್ತಲ	ಚನ್ನಕೇಶವ ದೇವಸ್ಥಾನ	೧೧೬೨	ವಿಕ್ರಮಾದಿತ್ಯ ೧	ಗುತ್'ರು	ಕೇತಿಶೆಟ್ಟಿ	ಸೋಮೇಶ್ವರ ಪಂಡಿತ	ಎಸ್ಐಐ, ೧೮ ನಂ-೨೯೩ ಪು ೩೭೬-೩೭೮
೫೬	ನಿಡನೇಗಿಲು	ಮಲ್ಲಿಕಾರ್ಜುನ	೧೧೬೫	ಬಿಜ್ಜಳ	ಕಲಚೂರ್ಯರು	ನರಸಿಯಬ್ಬೆಯ ಮಗ	ವಾಮಶಕ್ತಿ	ಕಇ.ಸಂ ೪ ನ-೧೩
೫೭	ಬೊಮ್ಮನಕಟ್ಟಿ (ಹಾವೇರಿ)	–	–	ಸೋಮೇಶ್ವರ ಯಾದವ	ಯಾದವ	ವಿಕ್ರಮಾದಿತ್ಯ ದೇವ	ಶ್ರೀಮದ್ರಾಜಗುರು ಕಲ್ಯಾಣ ದೇವರು	ಎಸ್ಐಐ, ೧೮ ನಂ೧೬೪ ಪು ೨೨೬ – ೨೨೭
೫೮	ದೇವಗಿರಿ	ಎಲ್ಲಮ್ಮ ದೇವಸ್ಥಾನ	೧೦೬೫	ರಾಜಾದಿತ್ಯ	ಖಚರು	ರಾಜಾದಿತ್ಯ	ಗಂಗರಾಸಿ ಮುನಿಪ	ಎಸ್ಐಐ, ೧೮ ನಂ೩೩೪ ಪು ೪೨೯-೪೩೦
೫೯	ಸಂಗೂರು	ವೀರಭದ್ರ ದೇವರು	೧೧೬೭	ಬಿಜ್ಜಳ	ಚೋಳ	ಬಮ್ಮರಸರು	ಬ್ರಹ್ಮರಿಸಿಪಂಡಿತ	ಎಸ್ಐಐ, ೧೮ ನಂ ೧೭೯
೬೦	ಕೋಣನತಂಬಿಗೆ	ವರದಾನದಿ ದಂಡೆ	೧೦೭೩	–	–	ಸಂಕಗಾವುಣ್ಡ	ಶ್ರೀಮತ್ ಚಂದ್ರಾಭರಣ	ಎಸ್.ಐ.ಐ ೧೮ ನಂ೩೩೬ ಪು- ೪೩೧-೪೩೪
೬೧	ರಟ್ಟಿಹಳ್ಳಿ	ಕದಂಬೇಶ್ವರ ದೇವಸ್ಥಾನದ ಒಳಗೆ	೧೧೭೪	ಸೋವಿದೇವ	ಕಲಚೂರ್ಯರು	ಕುಮಾರ ಚೌಂಡರಸ	ಲಕುಳೀಶ	ಕಇ.ಸಂ ೪ ನಂ೩೭

೬೨	ಬಂಕಾಪುರ	ಗೌರ್ನಮೆಂಟ್ ಪಾರಂ ಆಫೀಸ್	೧೧೭೮	ಕೀರ್ತಿದೇವ ೨	ಯಾದವ	ಕೀರ್ತಿದೇವರಸ	ವಿಮಳಶಕ್ತಿ	ಎಸ್‌ಐಐ, ೧೮ ನಂ೨೯೦ ಪು ೩೭೧ – ೩೭೩
೬೩	ಬಂಕಾಪುರ	ಗೌರ್ನಮೆಂಟ್ ಪಾರಂ ಆಫೀಸ್	–	ಕೀರ್ತಿದೇವ ೨	ಯಾದವ	–	ಶಿವಶಕ್ತಿ ಪಂಡಿತ	ಎಸ್‌ಐಐ, ೧೮ ನಂ೨೯೧ ಪು– ೩೭೩ – ೩೭೫
೬೪	ಹಿರೇಕಬ್ಬಾರ	ಕಲ್ಲೇಶ್ವರ	೧೧೭೬	ಸೋಯಿದೇವ	ಗುತ್ತರು	ಕಲಿಯಮ ಗೌವುಂಡ	ರುದ್ರಾಶಕ್ತಿ ಪಂಡಿತ	ಕಇ.ಸಂ ೪ ನಂ ೩೮
೬೫	ಕೆಂಗೊಂಡ	ಕಲ್ಲೇಶ್ವರ	೧೧೭೭	ಜೋಯಿದೇವ	ಗುತ್ತರು	ಚತ್ರ	ಧರ್ಮರಾಸಿ ಪಂಡಿತ	ಎಸ್‌ಐಐ, ೧೮ ನಂ೨೯೩ ಕ-೩೭೮– ೩೭೯
೬೬	ಮೈದೂರು (ರಾಣೇಬೆನ್ನೂರು)	ಕಲ್ಲೇಶ್ವರ ದೇವಸ್ಥಾನ	೧೧೮೨	ಅಹವಮಲ್ಲ	ಕಲಚೂರ್ಯರು	ಕಾಮಗಾವುಂಡ	ಚಂದ್ರಮೌಳಿ ಪಂಡಿತ	ಎಸ್‌ಐಐ, ೧೮ ನಂ ೧೯೦ ಪು ೨೬೨ – ೨೬೪
೬೭	ಹೂಲಿಹಳ್ಳಿ	ರಾಮಲಿಂಗ ದೇವಸ್ಥಾನ	೧೧೮೨	ಅಹವಮಲ್ಲ	ಕಲಚೂರ್ಯರು	ಕೇತಗಾವುಂಡ	ಕಲ್ಯಾಣಶಕ್ತಿ ಪಂಡಿತ	ಎಸ್‌ಐಐ, ೧೮ ನಂ ೧೯೧ ಪು ೨೬೪
೬೮	ಗುಡ್ಡದಅನ್ವೇರಿ	ಕಲ್ಲೇಶ್ವರ ದೇವಸ್ಥಾನದ ಎದುರು	೧೧೮೩	ಅಹವಮಲ್ಲ	ಕಲಚೂರ್ಯರು	ಜೋಯಿದೇವರಸ	ಸೋಮಶ್ವರ ಪಂಡಿತ	ಎಸ್‌ಐಐ, ೧೮ ನಂ೧೯೨ ಪು ೨೬೭ – ೨೭೧

೧೯	ಹುಲ್ಲತ್ತಿ	ಕಲ್ಲೇಶ್ವರ ದೇವರು	೧೧೮೬	ಸೋಮೇಶ್ವರ	ಗುತ್ತ	ಕಾಳಗಾವುಂಡ	ಈಶ್ವರ ಪಂಡಿತ	ಎಸ್ಐಐ, ೧೮ ನಂ೧೬೩ ಪು ೨೨೪ – ೨೨೬
೨೦	ಹೊನ್ನತ್ತಿ	ರಾಮಲಿಂಗೇಶ್ವರ	೧೧೮೨	ಜೋಯಿದೇವ	ಗುತ್ತರು	ಜೋಯಿದೇವ	ತ್ರಿಲೋಚನದೇವರು	ಎಸ್ಐಐ, ೧೮ ನಂ ೨೯೫ ಪು- ೩೭೯-೩೮೪
೨೧	ಹರಳಹಳ್ಳಿ	ಹೊನ್ನಪ್ಪ ಬ್ಯಾಡಗಿಮನೆ	೧೧೮೮	ವಿಕ್ರಮಾದಿತ್ಯ ೨	ಗುತ್ತರು	ಮಾಚರಸ	ಕಲ್ಯಾಣಶಕ್ತಿ ಪಂಡಿತ	ಎಸ್ಐಐ, ೧೮ ನಂ೨೯೫ ಪು- ೩೭೯-೩೮೪
೨೨	ಹರಳಹಳ್ಳಿ	ಹೊನ್ನಪ್ಪ ಬ್ಯಾಡಗಿಮನೆ	೧೧೮೮	ವಿಕ್ರಮಾದಿತ್ಯ ೨	ಗುತ್ತರು	ವಿಕ್ರಮಾದಿತ್ಯ	ಕಲ್ಯಾಣಶಕ್ತಿ ಪಂಡಿತ	ಎಸ್ಐಐ, ೧೮ ನಂ೨೯೬ ಪು- ೩೮೪-೩೯೩
೨೩	ಗುತ್ತಲ	ಸರ್ವನಂ ೬೬೪	೧೧೮೯	ವಿಕ್ರಮಾದಿತ್ಯ ೨	ಗುತ್ತರು	ವಿಕ್ರಮಾದಿತ್ಯ	ಕಲ್ಯಾಣಶಕ್ತಿ ಪಂಡಿತ	ಎಸ್ಐಐ, ೧೮ ನಂ೨೯೭ ಪು- ೩೯೩-೩೯೮
೨೪	ಚೌಡದಾನಪುರ	ಮುಕ್ತೇಶ್ವರ ದೇವಸ್ಥಾನ	೧೧೯೨	ವಿಕ್ರಮಾದಿತ್ಯ ೨	ಗುತ್ತರು	ವಿಕ್ರಮಾದಿತ್ಯ	ಮುಕ್ತಜೀಯರು	ಎಸ್.ಐ.ಐ ೧೮ ಪು- ೩೯೯-೩೯೯
೨೫	ಅಬ್ಬಲೂರು	ಹೊಂಡದ ಮೇಲೆ ಸೋಮೇಶ್ವರ	೧೨೦೦	ವೀರಬಲ್ಲಾಳ	ಕಲ್ಯಾಣ ಚಾಲುಕ್ಯ	–	ಏಕಾಂತರಾಮಯ್ಯ	ಎ.ಇಂ.ಸಂ -೫ ಪು ೨೪೫-೨೮೨

೭೬	ಸಾತೇನಹಳ್ಳಿ	ಹರಿಹರೇಶ್ವರ ದೇವಸ್ಥಾನ	೧೨೦೪	ವೀರಬಲ್ಲಾಳ	ಹೊಯ್ಸಳ	ವೆಣ್ಣಿಲಶೆಟ್ಟಿಕವ್ವೆ	ಪಿನಾಕಪಾಣಿ,ಶಿವರಾಶಿ, ಅಮೃತರಾಸಿ,ಹರಶಕ್ತಿ	ಕಇ.ಸಂ ೪ ನಂ-೧
೭೭	ಹರಳಹಳ್ಳಿ	ವೀರಗಲ್ಲು ನದಿದಂಡೆ	೧೨೦೬	–	–	ದ'ಪ್ರವೇಶ್ವರ ದೇವರು	ಕಲ್ಯಾಣಶಕ್ತಿ ದೇವರು	ಎಸ್‌ಐಐ, ೧೮ ನಂ೩೭೬ ಪು- ೪೫೭-೪೫೮
೭೮	ಕಲಕೇರಿ	ಸೋಮೇಶ್ವರ ದೇವಾಲಯ ಕಂಬ	೧೨೦೬	ಬಲ್ಲಾಳ ೨	ಹೊಯ್ಸಳ	ಹರಿಯಮ್ಮ ಸೆಟ್ಟಿಯರು	ಮೂರುಜಾವಿದೇವರು	ಎಸ್‌ಐಐ, ೨೦ ನಂ ೨೨೮
೭೯	ಹರಳಹಳ್ಳಿ	ಹೊನ್ನಪ್ಪ ಬ್ಯಾಡಗಿಮನೆ	೧೨೧೩	ವಿಕ್ರಮಾದಿತ್ಯ ೨	ಗುತ್ತರು	ವಿಕ್'ಮಾದಿತ್ಯ	ರಾಜಗುರು ತ್ರಿಲೋಚನ ಪಂಡಿತ	ಎಸ್.ಐ.ಐ ೧೮ ನಂ೩೦೦ ಪು- ೪೦೩-೪೦೭
೮೦	ಕಲಕೇರಿ	ಸೋಮೇಶ್ವರ ದೇವಾಲಯ ಕಂಬ	೧೩ನೆ ಶತ	ಬಲ್ಲಾಳ ೨	ಹೊಯ್ಸಳ	ವಿಕ್ಕಮಗೇದನು	ಮೂರುಜಾವಿದೇವರು	ಎಸ್‌ಐಐ, ೨೦ ನಂ ೩೩೨
೮೧	ಹಾವೇರಿ	ಪುರಸಿದ್ಧೇಶ್ವರ ದಕ್ಷಿಣಗೋಡೆ	೧೨೨೭	ಸಿಂಹಣ	ಯಾದವ	–	ಜ್ಞಾನರಾಶಿದೇವರು	ಎಸ್‌ಐಐ, ೧೮ ನಂ- ೨೦೬ ಪು ೨೮೫ – ೨೮೬
೮೨	ಹಾವೇರಿ	ಪುರಸಿದ್ದೇಶ್ವರ ನವರಂಗ ತೊಲೆ	೧೨೨೮	ಸಿಂಹಣ	ಯಾದವ	ದೆಚ್ಚಿಶೆಟ್ಟಿ ಮಾಯಿಸೆಟ್ಟಿ	ಶ್ರೀಮದ್ರಾರಾಜಗುರು ಜ್ಞಾನರಾಶಿ ದೇವರು	ಎಸ್‌ಐಐ, ೧೮ ನಂ೨೦೭ ಪು- ೨೮೬

೮೩	ತಿಳವಳ್ಳಿ	ಸಾವಂತೇಶ್ವರ	೧೨೩೮	ಸಿಂಘಣ	ಯಾದವ	ಬೋಯಿದೇವ	ವಿದ್ಯಾಭರಣದೇವರು	ಕಇ.ಸಂ ೫ ನಂ೪೨ ಪು-೧೬೩-೧೭೯
೮೪	ರಟ್ಟಿಹಳ್ಳಿ	ಕದಂಬೇಶ್ವರ ದೇವಸ್ಥಾನದ ಕಂಬ	೧೨೩೭	ಸಿಂಘಣ	ಯಾದವ	ಕರಣದಕಲ್ಲರಸ	ಮೂರುಜಾವಿದೇವರು	ಕಇ.ಸಂ ೬ ನಂ-೪೨
೮೫	ರಟ್ಟಿಹಳ್ಳಿ	ಕದಂಬೇಶ್ವರ ದೇವಸ್ಥಾನದ ಕಂಬ	೧೨೩೮	ಸಿಂಘಣ	ಯಾದವ	ಗುಬ್ಬಿಯಕಲ್ಲೆಯ	ಮೂರುಜಾವಿದೇವರು	ಕಇ.ಸಂ ೬ ನಂ-೪೩
೮೬	ರಟ್ಟಿಹಳ್ಳಿ	ಕದಂಬೇಶ್ವರ ದೇವಸ್ಥಾನದ ಒಳಗಿನ ಶಾಸನ	೧೨೩೮	ಸಿಂಘಣ	ಯಾದವ	ಹೊನ್ನಬೊಮ್ಮಿಶೆಟ್ಟಿ	ಮೂರುಜಾವಿದೇವರು	ಕಇ.ಸಂ ೬ ನಂ-೪೪೪
೮೭	ಬಾಳಂಬೀಡು	ಬಾಲದೇವರಗುಡಿ	–	–	–	–	–	–

ಹಾವೇರಿ ಜಿಲ್ಲೆಯ ಸಪ್ತಮಾತೃಕೆ ವಿಗ್ರಹಗಳಿರುವ ಕಾಳಾಮುಖದೇವಾಲಯಗಳು ಬ್ಯಾಡಗಿ ತಾಲೂಕು

ಕ್ರ.ಸಂ	ಊರು	ದೇವಸ್ಥಾನ	ಕಾಲ– ಶತಮಾನ	ಶೈಲಿ	ಇತರೆ ವಿಗ್ರಹಗಳು
೧	ಕದರಮಂಡಲಗಿ	ನೀಲಕಂಠೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	–೮
೨	ಕಾಗಿನೆಲೆ	ವೀರಭದ್ರ	೧೧ ೧೨	ಕಲ್ಯಾಣ ಚಾಲುಕ್ಯ	ಗಣಪತಿ
೩	ಘಾಳಪೂಜಿ	ರಾಮಲಿಂಗೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	
೪	ಬೆಳಕೇರಿ	ಕಲ್ಲೇಶ್ವರ	೧೨ ೧೩	ಕಲ್ಯಾಣ ಚಾಲುಕ್ಯ	ಜಟಾಮುಕುಟ ಗಣಪತಿ ಶಿವ
೫	ಮತ್ತೂರ	ಕಲ್ಲೇಶ್ವರ	೧೨ ೧೨	ಕಲ್ಯಾಣ ಚಾಲುಕ್ಯ	
೬	ಶಿಡೆನೂರು	ವೀರಭದ್ರ	೧೩	ಕಲ್ಯಾಣ ಚಾಲುಕ್ಯ	ಗಣಪತಿ
೭	ಹಳೆಕುಮ್ಮೂರು	ರಾಮಲಿಂಗೇಶ್ವರ	೧೨ ೧೩	ಕಲ್ಯಾಣ ಚಾಲುಕ್ಯ	ಸರಸ್ವತಿ
೮	ಹಿರೇಹಳ್ಳಿ	ರಾಮಲಿಂಗೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ವಿಷ್ಣು, ಗಣಪತಿ, ಕಾರ್ತಿಕೇಯ
೯	ಚಿಕ್ಕಬಾಸೂರು	ರಾಮಲಿಂಗೇಶ್ವರ		ಕಲ್ಯಾಣ ಚಾಲುಕ್ಯ	

ಹಾವೇರಿ ಜಿಲ್ಲೆಯ ಸಪ್ತಮಾತೃಕೆ ವಿಗ್ರಹಗಳಿರುವ ಕಾಳಾಮುಖದೇವಾಲಯಗಳು ರಾಣೇಬೆನ್ನೂರ ತಾಲೂಕು

೧	ಅಂತರವಳ್ಳಿ	ಈಶ್ವರಗುಡಿ	೧೨ ೧೩	ಕಲ್ಯಾಣ ಚಾಲುಕ್ಯ	ಭೈರವಿ,ಭೈರವ
೨	ಅಸುಂಡಿ	ಕಲ್ಮೇಶ್ವರ	೧೧	ಕಲ್ಯಾಣ ಚಾಲುಕ್ಯ	ಭೈರವ
೩	ಉಕ್ಕುಂದ	ಕಲ್ಮೇಶ್ವರ	೧೧	ಕಲ್ಯಾಣ ಚಾಲುಕ್ಯ	ಸರಸ್ವತಿ, ಸೂರ್ಯ ವಿಷ್ಣು
೪	ಕರೂರ	ಕಲ್ಮೇಶ್ವರ	೧೨	ಕಲ್ಯಾಣ ಚಾಲುಕ್ಯ	ಗಣಪತಿ, ಕಾರ್ತಿಕೇಯ
೫	ಗುಡ್ಡದ ಆನ್ವೇರಿ	ಕಲ್ಮೇಶ್ವರ	೧೨	ಕಲ್ಯಾಣ ಚಾಲುಕ್ಯ	ಗಣಪತಿ, ಮಹಿಷಮರ್ದಿನಿ
೬	ಚೌಡದಾನಪುರ	ಮುಕ್ತೇಶ್ವರ	೧೨	ಕಲ್ಯಾಣ ಚಾಲುಕ್ಯ	ಗಣೇಶ, ಸೂರ್ಯ, ಭೈರವಿ
೭	ಜೋಯಿಸರಹರಳಳ್ಳಿ	ಕಲ್ಮೇಶ್ವರ	೧೨ ೧೩	ಕಲ್ಯಾಣ ಚಾಲುಕ್ಯ	ಸೂರ್ಯ, ಮಹಿಷಮರ್ದಿನಿ
೮	ನದಿಹರಳಳ್ಳಿ	ಕಲ್ಲಪ್ಪ	೯ ೧೦	ರಾಷ್ಟ್ರಕೂಟ	ವಿಷ್ಣು
೯	ನಂದಿಹಳ್ಳಿ	ಕಲ್ಮೇಶ್ವರ	ಆಧುನಿಕ	–	ಭೈರವಿ,ಭೈರವ, ಸೂರ್ಯ
೧೦	ನಿಟ್ಟೂರು	ಕಲ್ಮೇಶ್ವರ	–	–	ಮಹಿಷಮರ್ದಿನಿ
೧೧	ಮುದೇನೂರು	ಮುಚ್ಚಂಡೇಶ್ವರ	–	–	ಭೈರವ, ವಿಷ್ಣು ಮಹಿಷಮರ್ದಿನಿ
೧೨	ರಾಣೇಬೇನ್ನೂರ	ಕಲ್ಮೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ವಿಷ್ಣು, ಗಣಪತಿ, ಉಮಾಮಹೇಶ್ವರ
೧೩	ರಾಣೇಬೇನ್ನೂರ	ಸಿದ್ದೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ವಿಷ್ಣು, ಗಣಪತಿ,

೧೪	ಹಿರೆಬಿದರಿ	ಕಲ್ಮೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	–
೧೫	ಹಿರೇಮಾಗನೂರು	ಕಲ್ಮೇಶ್ವರ	೯ ೧೦	ರಾಷ್ಟ್ರಕೂಟ	ಭೈರವ
೧೬	ಹೀಲದಹಳ್ಳಿ	ಕಲ್ಮೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ವಿಷ್ಣು,
೧೭	ಹೂಲಿಹಳ್ಳಿ	ಕಲ್ಮೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ಗಣಪತಿ, ಮಹಿಷಮರ್ದಿನಿ,ಸರಸ್ವತಿ
೧೮	ಹೊನ್ನತ್ತಿ	ಈಶ್ವರಗುಡಿ	೧೧ ೧೨		ವಿಷ್ಣು, ಆದಿತ್ಯ
೧೯	ಬೆನಕನಕೊಂಡ	ಕಲ್ಮೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ಗಣಪತಿ, ಮಹಿಷಮರ್ದಿನಿ,
೨೦	ಬಿಲ್ಲಹಳ್ಳಿ	ಕಲ್ಮೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ಸೂರ್ಯ, ಉಮಾಮಹೇಶ್ವರ, ವೀರಭದ್ರ

ಹಾವೇರಿ ಜಿಲ್ಲೆಯ ಸಪ್ತಮಾತೃಕೆ ವಿಗ್ರಹಗಳಿರುವ ಕಾಳಾಮುಖದೇವಾಲಯಗಳು ಹಾವೇರಿ ತಾಲೂಕು

೧	ಕನವಳ್ಳಿ	ಭೋಗೇಶ್ವರ	೧೨	ಕಲ್ಯಾಣ ಚಾಲುಕ್ಯ	–
೨	ಕಬ್ಬೂರು	ಕಲ್ಮೇಶ್ವರ	೧೧ ೧೨		–
೩	ಕರ್ಜಗಿ	ಗೊಬ್ಬಿವೀರಭದ್ರದೇವ	೧೨ ೧೩	ಕಲ್ಯಾಣ ಚಾಲುಕ್ಯ	–
೪	ಕಾಟೇನಹಳ್ಳಿ	ಕಲ್ಲಪ್ಪ	೧೬ ೧೭	ವಿಜಯನಗರ	ವಿಷ್ಣು
೫	ಕುಳೇನೂರು	ಕಲ್ಮೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	–

೬	ನೀರಲಗಿ	ಕಲ್ಮೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	–
೭	ಸಂಗೂರು	ಪರಮೇಶ್ವರ	೯ ೧೦	ರಾಷ್ಟ್ರಕೂಟ	–
೮	ಹಾವನೂರು	ಕಲ್ಮೇಶ್ವರ	೧೨	ಕಲ್ಯಾಣ ಚಾಲುಕ್ಯ	–
೯	ಹಾವೇರಿ	ಸಿದ್ದೇಶ್ವರ	೧೨	ಕಲ್ಯಾಣ ಚಾಲುಕ್ಯ	ಸೂರ್ಯ, ಕಾರ್ತಿಕೇಯ, ಗಣಪತಿ,ವಿಷ್ಣು
೧೦	ಹೊಮ್ಮರಡಿ	ವೀರಭದ್ರ ಕಾಳಮ್ಮ	೧೧ ೧೨	ಕಲ್ಯಾಣ ಚಾಲುಕ್ಯ	ಸೂರ್ಯ
೧೧	ಕನವಳ್ಳಿ	ಭೋಗೇಶ್ವರ	೧೩	ಕಲ್ಯಾಣ ಚಾಲುಕ್ಯ	–
೧೨	ಕಬ್ಬೂರು	ಕಲ್ಮೇಶ್ವರ	೧೨ ೧೨	–	–

ಹಾವೇರಿ ಜಿಲ್ಲೆಯ ಸಪ್ತಮಾತೃಕೆ ವಿಗ್ರಹಗಳಿರುವ ಕಾಳಾಮುಖದೇವಾಲಯಗಳು ಹಿರೇಕೆರೂರ ತಾಲೂಕು

೧	ಅಬ್ಬಲೂರು	ಬ್ರಹ್ಮಲಿಂಗೇಶ್ವರ	೧೨	ಕಲ್ಯಾಣ ಚಾಲುಕ್ಯ	ಸರಸ್ವತಿ, ಸೂರ್ಯ ವಿಷ್ಣು ಕಾರ್ತಿಕೇಯ
೨	ಅಬ್ಬಲೂರು	ಸೋಮೇಶ್ವರ	೧೨	ಕಲ್ಯಾಣ ಚಾಲುಕ್ಯ	ವೀರಭದ್ರ
೩	ಆಲದಗೇರಿ	ಈಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	–

೪	ಇಂಗಳಗೊಂದಿ	ಕಲ್ಲೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	–
೫	ಕಚವಿ	ಈಶ್ವರ	೧೨ ೧೩	ಕಲ್ಯಾಣ ಚಾಲುಕ್ಯ	–
೬	ಕುಡುಪಲಿ	ಕಲ್ಲೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	–
೭	ಚಿಕ್ಕೇರೂರ	ವಿಶ್ವನಾಥ	ಆಧುನಿಕ	ಕಲ್ಯಾಣ ಚಾಲುಕ್ಯ	ವಿಷ್ಣು
೮	ಜಾವಳ್ಳಿ	ಕಲ್ಲೇಶ್ವರ	ಆಧುನಿಕ	ಕಲ್ಯಾಣ ಚಾಲುಕ್ಯ	–
೯	ನಾಗವಂದ	ಸಿದ್ದೇಶ್ವರ	೧೧ ೧೨	ಹೊಯ್ಸಳ	ಸೂರ್ಯ, ವಿಷ್ಣು ಉಮಾಮಹೇಶ್ವರ
೧೦	ನೂಲಗೇರಿ	ಕಲ್ಲೇಶ್ವರ	೯ ೧೦	ರಾಷ್ಟ್ರಕೂಟ	–
೧೧	ಮತ್ತಿಹಳ್ಳಿ	ಸೋಮೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ಗಣಪತಿ, ಸೂರ್ಯ ವಿಷ್ಣು
೧೨	ಮಡ್ಲೂರ	ಮೂಕೇಶ್ವರ	೧೨	ಕಲ್ಯಾಣ ಚಾಲುಕ್ಯ	ವಿಷ್ಣು, ಕಾರ್ತಿಕೇಯ, ಉಮಾಮಹೇಶ್ವರ.
೧೩	ಮೇದೂರು	ಸಣ್ಣಬಸವೇಶ್ವರ	೯ ೧೦	ರಾಷ್ಟ್ರಕೂಟ	ಸರಸ್ವತಿ, ಸೂರ್ಯ,ಭೈರವ
೧೪	ಮೇದೂರು	ಬಸವಣ್ಣ	೧೦ ೧೧	ಕಲ್ಯಾಣ ಚಾಲುಕ್ಯ	ಸೂರ್ಯ,
೧೫	ರಟ್ಟಿಹಳ್ಳಿ	ಕದಂಬೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ಭೈರವ
೧೬	ಸಾತೇನಹಳ್ಳಿ	ಈಶ್ವರ	೧೨	ಕಲ್ಯಾಣ ಚಾಲುಕ್ಯ	ಗಣಪತಿ, ಮಹಿಷಮರ್ದಿನಿ, ಸೂರ್ಯ
೧೭	ಸಾತೇನಹಳ್ಳಿ	ಸೋಮೇಶ್ವರ	೧೨	ಕಲ್ಯಾಣ ಚಾಲುಕ್ಯ	ಸೂರ್ಯ, ಮಹಿಷಮರ್ದಿನಿ, ಕಾರ್ತಿಕೇಯ

೧೮	ಹಂಸಭಾವಿ	ಕಲ್ಲೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ಗಣೇಶ, ಭೈರವಿ
೧೯	ಹಳ್ಳೂರ	ಲಕ್ಷ್ಮೀರಂಗನಾಥ	ವಿಜಯನಗರ	ವಿಜಯನಗರೋತ್ತರ	–
೨೦	ಹುಲ್ಲತ್ತಿ	ಈಶ್ವರ	ವಿಜಯನಗರ	ವಿಜಯನಗರೋತ್ತರ	–
೨೧	ಹಿರೇಕೆರೂರ	ಗವೇಶ್ವರ	–	–	ಗಣಪತಿ

ಹಾವೇರಿ ಜಿಲ್ಲೆಯ ಸಪ್ತಮಾತೃಕೆ ವಿಗ್ರಹಗಳಿರುವ ಕಾಳಾಮುಖದೇವಾಲಯಗಳು ಶಿಗ್ಗಾವ ತಾಲೂಕು

೧	ಕಬನೂರು	ಕಲ್ಲೇಶ್ವರ	ಆಧುನಿಕ		ವಿಷ್ಣು
೨	ಬನ್ನೂರ	ಕಲ್ಲೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ವಿಷ್ಣು
೩	ಮಡ್ಲಿ	ಕಲ್ಲೇಶ್ವರ	೧೨	ಕಲ್ಯಾಣ ಚಾಲುಕ್ಯ	ನಾರಾಯಣ, ಮಹಿಷಮರ್ದಿನಿ
೪	ಸಿಗ್ಗಾವಿ	ಕಲ್ಲೇಶ್ವರ	೧೧ ೧೨		ಗಣಪತಿ, ಉಮಾಮಹೇಶ್ವರ
೫	ಹುಲಸೋಗಿ	ಈಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ಗಣಪತಿ, ಉಮಾಮಹೇಶ್ವರ, ನಾರಾಯಣ

ಹಾವೇರಿ ಜಿಲ್ಲೆಯ ಸಪ್ತಮಾತೃಕೆ ವಿಗ್ರಹಗಳಿರುವ ಕಾಳಾಮುಖದೇವಾಲಯಗಳು ಸವಣೂರು ತಾಲೂಕು

೧	ಚಿಲ್ಲೂರಬಡ್ನಿ	ಕಲ್ಲಪ್ಪ	೧೧	ಕಲ್ಯಾಣ ಚಾಲುಕ್ಯ	–
೨	ನಾಯಿಕೆರೂರ	ಈಶ್ವರ	೧೨ ೧೩	ಕಲ್ಯಾಣ ಚಾಲುಕ್ಯ	ಸರಸ್ವತಿ,ವೀರಭದ್ರ
೩	ಮೆಳ್ಳಗಟ್ಟಿ	ಶಿವ	–	–	–
೪	ಸವೂರ	ಬಸವೇಶ್ವರ	೯ ೧೦	ರಾಷ್ಟ್ರಕೂಟ	ಬ್ರಹ್ಮ, ವಿಷ್ಣು
೫	ಹಿರೆಮುಗದೂರು	ದುರುಗಮ್ಮ	೧೯ ೨೦	–	–

ಹಾವೇರಿ ಜಿಲ್ಲೆಯ ಸಪ್ತಮಾತೃಕೆ ವಿಗ್ರಹಗಳಿರುವ ಕಾಳಾಮುಖದೇವಾಲಯಗಳು ಹಾನಗಲ್ಲ ತಾಲೂಕು

೧	ಅಕ್ಕಿಆಲೂರು	ಕಲ್ಲೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	–
೨	ಅರಳೇಶ್ವರ	ಕದಂಬೇಶ್ವರ	೧೧	ಕಲ್ಯಾಣ ಚಾಲುಕ್ಯ	ಗಣಪತಿ, ಸರಸ್ವತಿ
೩	ಕಲಕೇರಿ	ಬಸವೇಶ್ವರ	೧೨ ೧೩	ಕಲ್ಯಾಣ ಚಾಲುಕ್ಯ	ಸರಸ್ವತಿ, ಸೂರ್ಯ
೪	ಚಿಕ್ಕಣಗಿ	ಈಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ಭೈರವ, ವಿಷ್ಣು ಮಹಿಷಮರ್ದಿನಿಸರಸ್ವತಿ,ವಿರಭದ್ರ
೫	ಚಿಕ್ಕೇರಿಹೊಸಳ್ಳಿ	ಕಲ್ಲಪ್ಪ	೧೨	ಕಲ್ಯಾಣ ಚಾಲುಕ್ಯ	–


೬	ತಿಳವಳ್ಳಿ	ಶಾಂತೇಶ್ವರ	೧೨ ೧೩	ಕಲ್ಯಾಣ ಚಾಲುಕ್ಯ	ಭೈರವ, ಮಹಿಷಮರ್ದಿನಿ
೭	ತಿಳವಳ್ಳಿ	ಚುರ್ಚಿಮಠ	–	–	–
೮	ನಿಡಸಂಗಿ	ಈಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ಭೈರವಿ, ವಿಷ್ಣು, ಸೂರ್ಯ
೯	ಬಾಳಂಬೀಡ	ರಾಮೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	–
೧೦	ಬಾಳಂಬೀಡ	ಬ್ರಹ್ಮೇಶ್ವರ	–	–	–
೧೧	ಬಾಳೆಹಳ್ಳಿ	ಸಿದ್ಧೇಶ್ವರ	೧೨	–	ವಿಷ್ಣು ಮಹಿಷಮರ್ದಿನಿ, ಸೂರ್ಯ
೧೨	ಮಂತಗಿ	ಈಶ್ವರ	ಆಧುನಿಕ	–	ಗಣಪತಿ, ಸೂರ್ಯ
೧೩	ಮಲ್ಲಿಗಾರ	ಕಲ್ಲಪ್ಪನಗುಡಿ	೯ ೧೦	ರಾಷ್ಟ್ರಕೂಟ	–
೧೪	ಯಳವಟ್ಟಿ	ರಾಮೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ಗಣಪತಿ, ಮಹಿಷಮರ್ದಿನಿ, ಸೂರ್ಯ ಭೈರವ
೧೫	ಶ್ಯಾಡಗುಪ್ಪಿ	ಕಲ್ಲೇಶ್ವರ	೧೨ ೧೩	ಕಲ್ಯಾಣ ಚಾಲುಕ್ಯ	–
೧೬	ಶೇಷಗಿರಿ	ರಾಮಲಿಂಗೇಶ್ವರ	೧೨ ೧೩	ಕಲ್ಯಾಣ ಚಾಲುಕ್ಯ	ಭೈರವ, ವಿಷ್ಣು, ಗಣಪತಿ, ಸರಸ್ವತಿ, ಸೂರ್ಯ
೧೭	ಶಿರಗೋಡ	ವೀರಭದ್ರ	೧೨	ಕಲ್ಯಾಣ ಚಾಲುಕ್ಯ	ವಿಷ್ಣು ಮಹಿಷಮರ್ದಿನಿ,
೧೮	ಸಮ್ಮಸಗಿ	ಈಶ್ವರ	೧೨	ಕಲ್ಯಾಣ ಚಾಲುಕ್ಯ	ವಿಷ್ಣು, ಕಾರ್ತಿಕೇಯ
೧೯	ಸಾಂವಸಗಿ	ಕಲ್ಲೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ವಿಷ್ಣು ಮಹಿಷಮರ್ದಿನಿ,ವೀರಭದ್ರ

೨೦	ಹರನಗಿರಿ	ಕಲ್ಲೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	–
೨೧	ಹರವಿ	ಕಲ್ಲೇಶ್ವರ	೧೨	ಕಲ್ಯಾಣ ಚಾಲುಕ್ಯ	ವಿಷ್ಣು
೨೨	ಹಳೆಗೆಜ್ಜೆಹಳ್ಳಿ	ಈಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	–
೨೩	ಹಾವಣಗಿ	ಕಲ್ಲೇಶ್ವರ	೧೧ ೧೨	ಕಲ್ಯಾಣ ಚಾಲುಕ್ಯ	ವಿಷ್ಣು, ಗಣಪತಿ, ಸೂರ್ಯ
೨೪	ಹಾನಗಲ್ಲು	ಬಿಲ್ಲೇಶ್ವರ	೧೨	ಕಲ್ಯಾಣ ಚಾಲುಕ್ಯ	–
೨೫	ಹಿರೇಬಾಸೂರು	ಶಿವ	೧೨	ಕಲ್ಯಾಣ ಚಾಲುಕ್ಯ	ವಿಷ್ಣು ಮಹಿಷಮರ್ದಿನಿ,
೨೬	ಹಿರೆಹುಲ್ಲಾಳ	ಕಲ್ಲೇಶ್ವರ	೧೨ ೧೩	ಕಲ್ಯಾಣ ಚಾಲುಕ್ಯ	ವಿಷ್ಣು, ಕಾರ್ತಿಕೇಯ
೨೭	ಹಿರೆಹುಲ್ಲಾಳ	ಕಲ್ಲೇಶ್ವರ	೧೨ ೧೩	ಕಲ್ಯಾಣ ಚಾಲುಕ್ಯ	–

ಹಾವೇರಿ ಜಿಲ್ಲೆಯ ಕಾಳಾಮುಖ ಪರಂಪರೆಯ ಮೂರುಜಾವಿದೇವರ ಶಾಸನಗಳು

ಅ ನಂ	ತಾಲೂಕು	ಸ್ಥಳ	ಕಾಲ	ಅರಸ	ಉಲ್ಲೇಖ
೧	ಹಿರೇಕೆರೂರು	ರಟ್ಟಿಹಳ್ಳಿ	ಕ್ರಿ.ಶ ೧೧೭೪	ಸೋವಿದೇವ	ಕ.ಇ ೬ನಂ ೩೭
೨	ಹಿರೇಕೆರೂರು	ರಟ್ಟಿಹಳ್ಳಿ	೧೧೮೦	ಸೋವಿದೇವ	ಹೊಸ
೩	ಹಾನಗಲ್ಲ	ಕಲಕೇರಿ	೧೨೦೬	ಎರಡನೆ ಬಲ್ಲಾಳ	ಸೌ.ಐ.ಐ ೨೦ ನಂ ೨೨೮
೪	ಹಿರೇಕೆರೂರು	ರಟ್ಟಿಹಳ್ಳಿ	೧೨೩೭	ಸಿಂಘಣ	ಕ.ಇ ೬ನಂ ೪೨
೫	ಹಿರೇಕೆರೂರು	ರಟ್ಟಿಹಳ್ಳಿ	೧೨೩೮	ಸಿಂಘಣ	ಕ.ಇ ೬ ನಂ ೪೪
೬	ಹಿರೇಕೆರೂರು	ರಟ್ಟಿಹಳ್ಳಿ	೧೨೩೮	ಸಿಂಘಣ	ಕ.ಇ ೬ನಂ ೪೩
೭	ಹಿರೇಕೆರೂರು	ಕಡೂರು	೧೨೮೮	ಸೋಮೇಶ್ವರ ೨	ಧಾ.ಜಿ.ಶಾ ಸೂ ಸಂ ೬೫
೮	ಹಾನಗಲ್ಲ	ಕಲಕೇರಿ	೧೩ ಶತ		ಸೌ.ಐ.ಐ ೨೦ ನಂ ೩೩೨
೯	ಹಿರೇಕೆರೂರು	ಹಿರೇಮೊರಬ	೧೩ ಶತ		ಧಾ.ಜಿ.ಶಾ ಸೂ ಸಂ ೨೮೬


ಛಾಯಾಚಿತ್ರಗಳು



ಅಬಲೂರು ಬ್ರಹ್ಮೇಶ್ವರ ದೇವಾಲಯದ ಒಳಗಡೆಯ ಶಾಸನ



ಭೋಗಾವಿಯಲ್ಲಿರುವ ಏಕಾಂತರಾಮಯ್ಯನ ಶಾಸನದ ಮೇಲ್ಭಾಗ



ಏಕಾಂತರಾಮಯ್ಯನ ಕುರಿತಿರುವ ಅಸ್ಪಷ್ಟ ಶಾಸನ



ಅಬಲೂರು ಸೋಮೇಶ್ವರದೇವಾಲಯದ ಏಕಾಂತರಾಮಯ್ಯನ ಶಿರಸ್ಸು ಪವಾಡದ ಶಾಸನಶಿಲ್ಪ




ಯೆಕಾಂತದ ರಾಮಯ್ಯ ಲಿಂಗ ಪ್ರತಿಷ್ಠಾಪಿಸಿದ ಭಿತ್ತಿ ಶಿಲ್ಪ (೧)



ಯೆಕಾಂತದ ರಾಮಯ್ಯ ಲಿಂಗ ಪ್ರತಿಷ್ಠಾಪಿಸಿದ ಭಿತ್ತಿ ಶಿಲ್ಪ (೨)



ಯೆಕಾಂತದ ರಾಮಯ್ಯಂಗಳು ಜಿನನೊಡೆದು ಲಿಂಗಪ್ರತಿಷ್ಠೆಯಂ ಮಾಡಿದ ಠಾವು (ಶಾಸನಶಿಲ್ಪ)




ಶ್ರೀಮದ್ ಯೆಕಾಂತದ ರಾಮಯ್ಯಂಗೆ ಸಂಕಗಾವುಂಡನು ಓಲೆಯಂ ಕುಡುವ ಠಾವು



ಏಕಾಂತದರಾಮಯ್ಯ ಲಿಂಗ ಪ್ರತಿಷ್ಠಾಪಿಸಿದ ಶಾವು



ರಟ್ಟೀಹಳ್ಳಿಯ ಕೇಶವದೇವಾಲಯದ ಬಳಿಯ ಮೂಜುಜಾವಿದೇವ ಉಲ್ಲೇಖಿತ ವೀರಗಲ್ಲು



ಬಳ್ಳಿಗಾವೆಯ ಕೇದಾರೇಶ್ವರ ಗೋಪುರದಲ್ಲಿರುವ ಧ್ಯಾನಾಸಕ್ತ ಕಾಳಾಮುಖ ಯತಿ



ಬಳ್ಳಿಗಾವೆಯ ತ್ರಿಪುರಾಂತಕ ದೇವಾಲಯದ ಸ್ಥಂಭದಲ್ಲಿರುವ ಕಾಳಾಮುಖಶಿಲ್ಪ



ರಟ್ಟಹಳ್ಳಿಯ ಕದಂಬೇಶ್ವರ ದೇವಸ್ಥಾನದ ಗೋಪುರದಲ್ಲಿರುವ ಲಕುಲೀಶನ ಶಿಲ್ಪ



ಗವಿಯಪ್ಪಜ್ಜನವರು




ಶಿವರಾಯಪ್ಪಜ್ಜನವರು



ವೀರಪ್ಪಜ್ಜನವರು




ಸೂರ್ಯಶಿಲ್ಪ ಬಳ್ಳಿಗಾವಿ




ಸೂರ್ಯನಕುದುರೆಯ ಸುಂದರಶಿಲ್ಪ ಕಲಕೇರಿ



ಹೊಳಿಸಾಲು ದುರುಗಮ್ಮ ದೇವಸ್ಥಾನದ ಬಳಿ ಸೂರ್ಯಸ್ಥಂಭ ರಟ್ಟೀಹಳ್ಳಿ



ಅಬಲೂರು ಬ್ರಹ್ಮೇಶ್ವರ ದೇವಾಲಯದ ಸೂರ್ಯದೇವ ಶಿಲ್ಪ



ಗಳಗನಾಥದ ಗಳಗೇಶ್ವರ ದೇವಾಲಯದ ಸೂರ್ಯದೇವ ಶಿಲ್ಪ




ಬಳ್ಳಿಗಾವೆಯ ತ್ರಿಪುರಾಂತಕ ದೇವಸ್ಥಾನದಲ್ಲಿರುವ ಸರಸ್ವತಿಶಿಲ್ಪ



ಸರಸ್ವತಿಶಿಲ್ಪ ಬಳ್ಳಿಗಾವೆ



ಕಲಕೇರಿ ಸೂರ್ಯನಾರಾಯಣ ದೇವಸ್ಥಾನದಲ್ಲಿರುವ ಸರಸ್ವತಿ



ಅರಳೇಶ್ವರ ದೇವಾಲಯದಲ್ಲಿರುವ ಸರಸ್ವತಿ ಶಿಲ್ಪ



ಸಪ್ತಮಾತೃಕೆ ಶಿಲ್ಪ ಕೇದಾರೇಶ್ವರ ದೇವಸ್ಥಾನ ಬಳ್ಳಿಗಾವೆ



ಸಪ್ತಮಾತೃಕೆಯರ ಶಿಲ್ಪ ಬಳ್ಳಿಗಾವೆ



ಸಪ್ತಮಾತೃಕೆಯರ ಶಿಲ್ಪ ಜೊಯಿಸರಹರಳಹಳ್ಳಿ



ಅಬ್ಬಲೂರಿನ ಬ್ರಹ್ಮೇಶ್ವರ ದೇವಸ್ಥಾನದ ಸಪ್ತಮಾತೃಕೆ ಶಿಲ್ಪ



ಕೋಡದಲ್ಲಿರುವ ಎಡಕ್ಕೆ ವೀಣಾಧರ ವೀರಬಧ್ರ ಬಲಕ್ಕೆ ಗಣೇಶನಿರುವ ಸಪ್ತಮಾತೃಕ ಫಲಕ.



ರಟ್ಟಿಹಳ್ಳಿಯ ಕದಂಬೇಶ್ವರ ದೇವಸ್ಥಾನದ ಗೋಪುರದ ಭೈರವನ ಶಿಲ್ಪಗಳು



ರಟ್ಟೀಹಳ್ಳಿಯ ವೀರಭದ್ರೇಶ್ವರ ದೇವಾಲಯದ ಪಾರ್ಶ್ವ ನೋಟ



ರಟ್ಟೀಹಳ್ಳಿಯ ಕದಂಬೇಶ್ವರ ದೇವಾಲಯ



ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯ



ಅಬ್ಬಲೂರಿನ ಸೋಮೇಶ್ವರ ದೇವಾಲಯ



ಸರಸ್ವತಿ ಮಂಟಪ ಅಬಲೂರ



ಕಲಕೇರಿ ಸೋಮೇಶ್ವರ ದೇವಸ್ಥಾನ



ಸಾತೇನಹಳ್ಳಿಯ ಹರಿಹರೇಶ್ವರ ದೇವಾಲಯ



ಗಳಗನಾಥದ ಗಳಗೇಶ್ವರ ದೇವಾಲಯ



ಕಲಕೇರಿಯ ದೇವಸ್ಥಾನ ಪ್ರಾಂಗಣದ ಶಾಸನ, ವೀರಗಲ್ಲುಗಳು



ಅಲಂಕೃತ ಸರಸ್ವತಿ ಅಬಲೂರು



ಅಬಲೂರು ಕಾಳಾಮುಖ ಜಡೆಮುನಿಶಿಲ್ಪ



ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯದ ಕಾರ್ತಿಕೇಯ ಶಿಲ್ಪ




ನೆಶ್ವಿ ಅಜ್ಜನವರ ಗದ್ದುಗೆ ಮಲ್ಲೂರು ವೀರಭದ್ರೇಶ್ವರ ದೇವಸ್ಥಾನದ ಎದುರು




ಮಲ್ಲೂರು ವೀರಭದ್ರೇಶ್ವರ ಮೂರ್ತಿಯ ಸಿಂಹಪೀಠ



ನೆಶ್ವಿಯ ಅಲಂಕೃತ ವೀರಭದ್ರಸ್ವಾಮಿ



ರಟ್ಟಿಹಳ್ಳಿಯ ವೀರಭದ್ರೇಶ್ವರ ದೇವಾಲಯದಲ್ಲಿರುವ ವೀರಬೊಮ್ಮಯ್ಯನ ಶಿರಸ್ಸು



ವೀರಬೊಮ್ಮಯ್ಯನ ಶಿರಸ್ಸಿ ಹಿಂಭಾಗದ ಜಡೆ ಕಟ್ಟಿರುವ ಶಿಲ್ಪ



ಸರಪಣಿಯೊಂದಿಗಿರುವ ಚಿತ್ರ



ರಟ್ಟೀಹಳ್ಳಿ ವೀರಭದ್ರೇಶ್ವರ ದೇವಾಲಯದ ಚಂದ್ರಾಯುಧ





ಹಿಂದೆ ಬಳಕೆಯಲ್ಲಿದ್ದ ಲೋಹದ ಗುಗ್ಗಳಕೊಡ (ಅಂಗಾರ ಪರಡಿ)



ನೆಸ್ಪಿಯಲ್ಲಿರುವ ಗುಗ್ಗಳ ಕೊಡದಂತಿರುವ ಪ್ರಾಚೀನಕಾಲದ ಕರ್ಪೂರ ಪಾತ್ರೆ



ಗುಗ್ಗಳ ಕೊಡವನ್ನು ಭತ್ತದಹುಲ್ಲಿನಿಂದ ಹೆಣೆಯುತ್ತಿರುವುದು



ನೆಶ್ವಿ ರುದ್ರಪ್ಪಜ್ಜನವರು ಜಂಗಮರಿಗೆ ದಾನಕೊಡುತ್ತಿರುವುದು



ಬತ್ತದ ಹುಲ್ಲಿನಿಂದ ಗುಗ್ಗಳಕೊಡ ಮಾಡುತ್ತಿರುವುದು



ಗುಗ್ಗಳಕೊಡ ಪಟುವಿಗೆ ಸಿದ್ಧವಾಗಿರುವುದು



ಗುಗ್ಗಳ ಪಟುಗೊಳಿಸಲು ಸಿದ್ಧರಾಗಿರುವ ರುದ್ರಪ್ಪಜ್ಜನವರ



ಪ್ರಚಲಿತವಿರುವ ಗುಗ್ಗಳ ಪಟುವುಗೊಂಡು ಉರಿಯುತ್ತಿರುವುದು (೧)



ಪ್ರಚಲಿತವಿರುವ ಗುಗ್ಗಳ ಪಟುವುಗೊಂಡು ಉರಿಯುತ್ತಿರುವುದು (೨)